ಮಾನವಿಕ ಕರ್ಣಾಟಕ

ಸಂಪುಟ ೬ ಸಂಚಿಕೆ ೩

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೬

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೬ ಸಂಚಿಕೆ ೩

೨೩

ನೇ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೬

MANAVIKA KARNATAKA, Kannada quarterly of the University of Mysore. Volume 6, Number 3, May 1976. Edited by Dr. B. R. Gopal and Dr. B. S. Srikantaradhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಈ ಸಂಚಿಕೆಯ ಲೇಖನದಾರರು

ಶ್ರೀಯುತರಾದ

1	ಡಾ॥ ಎಸ್. ಎಸ್. ರಾಘವಾಚಾರ್	ನಿವೃತ್ತ ಪ್ರಾಧ್ಯಾಪಕರು, ತತ್ತ್ವಶಾಸ್ತ್ರವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು--6
2	ಡಾ॥ ಕೆ. ರಾಮಕೃಷ್ಣರಾವ್,	ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ತತ್ತ್ವ ಶಾಸ್ತ್ರವಿಭಾಗ, ಮಾನಸಗಂಗೋತ್ರಿ ಮೈಸೂರು--6
3	ಕೆ. ಜಿ. ವಸಂತಮಾಧವ,	ಇತಿಹಾಸ ಅಧ್ಯಾಪಕರು, ವಿಜಯ ಕಾಲೇಜು, ಮುಲ್ಕಿ (ದ. ಕ.)
4	ಡಾ॥ ಬಾ. ರಾ. ಗೋಪಾಲ್,	ಶಾಸನತಜ್ಞ, ಕನ್ನಡ ಅಧ್ಯಯನ ಸಂಸ್ಥೆ, ಮಾನವಿಕ ಕರ್ಣಾಟಕದ ಸಂಪಾದಕರಲ್ಲೊಬ್ಬರು, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು--6
5	ಪಿ. ಎನ್. ಶ್ರೀನಿವಾಸಾಚಾರಿ,	ಸಂಶೋಧನ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು--6
6	ಕೆ. ಎನ್. ಸದಾಶಿವಯ್ಯ,	ಶಿಕ್ಷಣದ ಅಧ್ಯಾಪಕರು, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು--6
7	ಡಿ. ಎಸ್. ಜಯಪ್ಪಗೌಡ,	ಸಹಾಯಕ ಭಾಷಾಂತರಕಾರರು, ಪಠ್ಯ ಪುಸ್ತಕ ಮತ್ತು ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-6
8	ಪಿ. ಆರ್. ತಿಪ್ಪೇಸ್ವಾಮಿ,	ಕ್ಯೂರೇಟರ್, ಜಾನಪದ ವಸ್ತುಸಂಗ್ರಹಾಲಯ ಕನ್ನಡ ಅಧ್ಯಯನಸಂಸ್ಥೆ
9	ಎಂ. ನಂಜಮ್ಮಣ್ಣಿ,	ರೀಡರ್, ಸಮಾಜವಿಜ್ಞಾನ ವಿಭಾಗ, ಮಹಾರಾಣಿ ಕಾಲೇಜು, ಮೈಸೂರು
10	ಟಿ. ರಾಘವೇಂದ್ರರಾವ್,	ಅಧ್ಯಾಪಕರು, ಮನಶ್ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು--6
11	ಸಿ. ಕೆ. ರೇಣುಕಾರ್ಯ,	ಅಧ್ಯಾಪಕರು, ಅರ್ಥಶಾಸ್ತ್ರವಿಭಾಗ, ಮಾನಸ ಗಂಗೋತ್ರಿ. ಮೈಸೂರು--6



ಮಹಾಮಹೋಪಾಧ್ಯಾಯ, ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ್ಯ

ಎಸ್. ಎಸ್. ರಾಘವಾಚಾರ್

ಮಹಾಮಹೋಪಾಧ್ಯಾಯ, ಪಂಡಿತರತ್ನಂ

ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು

ಹತ್ತೊಂಬತ್ತನೇ ಶತಮಾನದ ಅಂತ್ಯ ಪಾದದಲ್ಲಿ ಆರ್ಥಿಕ ದೃಷ್ಟಿಯಿಂದ, ಉನ್ನತ ಅಧಿಕಾರ ಪ್ರಾಪ್ತಿಗೆ ಹಾಗೂ ಪ್ರಾಪಂಚಿಕ ಪ್ರತಿಷ್ಠೆಗೆ ಕಲಿಯಬೇಕಾದ ವಿದ್ಯೆ ಇಂಗ್ಲಿಷ್ ಮುಖಾಂತರ ಬರುತ್ತಿದ್ದ ಆಧುನಿಕ ವಿದ್ಯೆಯಾಗಿದ್ದಿತು. ಸಂಸ್ಕೃತ ಕಲಿಯುತ್ತಿದ್ದ ವಿದ್ಯಾರ್ಥಿಗಳಿಗೆ ಸೌಕರ್ಯ ಕಡಿಮೆ. ಅವರು ಎಷ್ಟೇ ಉನ್ನತ ವಿದ್ವಾಂಸರಾದರೂ ಪಡೆಯಬಹುದಾದ ಸ್ಥಾನಮಾನಗಳು ವಿಶೇಷ ಆಕರ್ಷಕವಾಗಿರಲಿಲ್ಲ. ಸನಾತನ ವಿದ್ಯೆಯನ್ನು ಕಲಿಯುವ ವಿದ್ಯಾರ್ಥಿಗಳಿಗೆ ಪ್ರಾರಂಭದಲ್ಲಿಯೇ ವೈರಾಗ್ಯನಿಷ್ಠೆಯಲ್ಲಿ ಶಿಕ್ಷಣವಾಗ ಬೇಕಾಗಿದ್ದಿತು. ವಿದ್ಯೆಯೇನೋ ಅನೂಚಾನ ಸಂಪ್ರದಾಯದ ಪ್ರಕಾರ ಕಠಿಣವೇ ಆಗಿದ್ದಿತು.ಹೀಗಿದ್ದರೂ ಹಳೆಯ ವಿದ್ಯೆಯಲ್ಲಿ ನಿಷ್ಠರಾಗಿ, ಅದನ್ನು ತಮ್ಮ ಸಾಧನೆಯಿಂದ ಉತ್ಸಾಹವಾಗಿ ಮುಂದುವರಿಸುತ್ತಿದ್ದ ಮಹಾವ್ಯಕ್ತಿಗಳಿರುತ್ತಿದ್ದರು.

ಅಂತಹವರಿಗೆ ಹಳೆಯ ಮೈಸೂರಿನಲ್ಲಿ ವಿಶಿಷ್ಟ ಅನುಕೂಲಗಳಿದ್ದುವು. ಬಹಳ ಪ್ರಾಜ್ಞರಾದ ಪ್ರಾಧ್ಯಾಪಕರಿಂದ ಶೋಭಿತವಾದ, ರಾಜಾಶ್ರಯದಿಂದ ಪೋಷಿತವಾದ ಸಂಸ್ಕೃತ ಪಾಠಶಾಲೆಯಿತ್ತು. ಇದು ಭಾರತದಲ್ಲೆಲ್ಲಾ ಖ್ಯಾತಿಗಳಿಸಿದ್ದ ವಿದ್ಯಾಕೇಂದ್ರವಾಗಿತ್ತು. ಇಲ್ಲಿ ವಿದ್ಯಾರ್ಥಿಗಳಿಗೆ ಸ್ವಲ್ಪ ವೇತನವೂ ಸಿಗುತ್ತಿತ್ತು. ಅರಮನೆಯ ಅಧೀನದಲ್ಲಿದ್ದ ದೇವಾಲಯಗಳಲ್ಲಿ ಮತ್ತು ಬೇರೆ ಬೇರೆ ಸಂಪ್ರದಾಯಗಳ ಮಠಗಳಲ್ಲಿ, ವಿದ್ಯಾಪಕ್ಷಪಾತಿಗಳಾದ ಉದಾರ ಐಶ್ವರ್ಯವಂತರ ಮನೆಗಳಲ್ಲಿ ಅಶನ–ವಸತಿಗಳ ಸೌಕರ್ಯ ಸಿಕ್ಕುತ್ತಿತ್ತು. ವಿದ್ವತ್ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಮತ್ತು ದ್ರವ್ಯ ಪಾರಿತೋಷಕಗಳೊಡನೆ ವಿದ್ವತ್ಪದವಿ ಸಿಗುತ್ತಿತ್ತು. ಹಾಗೆ ಮುಂದೆ ಬಂದ ವಿದ್ಯಾರ್ಥಿಗಳಿಗೆ ಉಪಾಧ್ಯಾಯ ವೃತ್ತಿ ಅಥವಾ ಮಠಗಳಲ್ಲಿ ಆಶ್ರಯ ವೃತ್ತಿ ಸಿಕ್ಕುತ್ತಿತ್ತು. ಹೆಚ್ಚಿನ ಅಂತಸ್ತಿನವರಿಗೆ ಅರಮನೆಯಲ್ಲಿ 'ಆಸ್ಥಾನ ವಿದ್ವಾನ್' ಎಂಬ ಸ್ಥಾನ ಸಿಗುತ್ತಿತ್ತು. ಇದರಿಂದ ಆ ಕಾಲದ ಜೀವನಕ್ಕೆ ಹೆಚ್ಚು ಕಡಿಮೆ ಸಾಕಾಗುತ್ತಿದ್ದ ವೇತನವೂ, ಕಾಲಕಾಲಕ್ಕೆ ಆರ್ಥಿಕ ನೆರವೂ ಒದಗುತ್ತಿತ್ತು. ಅದಕ್ಕೋಸ್ಕರವೇ ಕಲ್ಪಿತವಾಗಿದ್ದ ಅಗ್ರಹಾರಗಳಲ್ಲಿ ನಿವೇಶನಗಳೂ ದೊರೆಯುವ ಸಂಭವವಿತ್ತು. ಶೃಂಗೇರಿ ಮಠ, ಪರಕಾಲ ಮತ್ತು ಉತ್ತರಾದಿ ಮಠಗಳ ಸ್ವಾಮಿಗಳು ವಿಶಿಷ್ಟ ಪಂಡಿತರುಗಳ ಯೋಗಕ್ಷೇಮ ಗಳನ್ನು ನೋಡಿಕೊಳ್ಳುತ್ತಿದ್ದರು. ವಿದ್ವದ್ಗೋಷ್ಠಿಗಳಲ್ಲಿ ಮತ್ತು ಮಹಾರಾಜರ ಸನ್ನಿಧಿಯಲ್ಲಿ ಉಜ್ವಲ ವಾಗಿ ಬೆಳಗಿದ ವಿದ್ವಾಂಸರು ಪೂಜ್ಯತೆಯನ್ನು ಗಳಿಸುತ್ತಿದ್ದುದಲ್ಲದೆ ಅವರ ಆರ್ಥಿಕ ಸ್ಥಿತಿಯೂ ಉತ್ತಮವಾಗಹತ್ತಿತ್ತು. ಕೇಂದ್ರ ಸರ್ಕಾರ ಉನ್ನತ ಪಂಡಿತರಿಗೆ 'ಮಹಾ ವಿದ್ವಾನ್' ಮತ್ತು ಇನ್ನೂ ಹೆಚ್ಚಿನ 'ಮಹಾಮಹೋಪಾಧ್ಯಾಯ' ಎಂಬ ಬಿರುದುಗಳನ್ನು ಕೊಡುತ್ತಿತ್ತು. ಮೈಸೂರು ಮಹಾರಾಜರು ಅತ್ಯಂತ ಶ್ರೇಷ್ಠ ವಿದ್ವಾಂಸರಿಗೆ 'ಪಂಡಿತರತ್ನಂ' ಎಂಬ ಅತ್ಯಂತ ಉನ್ನತ ಬಿರುದನ್ನು ಕೊಟ್ಟು ರಾಜಾ-ಸ್ಥಾನಕ್ಕೆ ಅಲಂಕಾರಪ್ರಾಯರೆಂದು ಅವರನ್ನು ಗೌರವಿಸುತ್ತಿದ್ದರು. ಹೀಗೆ ಪಂಡಿತ ಜೀವನದಲ್ಲಿಯೂ

ಯತ್ಕಿಂಚಿತ್ ಸಂಪತ್ತು ಮತ್ತು ವಿಶೇಷ ಪುರಸ್ಕಾರ ಸಿಗುತ್ತಿತ್ತು. ಈ ರೀತಿಯಲ್ಲಿ ಅಗ್ರಸ್ಥಾನಕ್ಕೆ ಏರಿದ ಪಂಡಿತಶ್ರೇಷ್ಠರಲ್ಲಿ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರೂ ಒಬ್ಬರು.

೨

ಶಾಖೋಪಶಾಖೆಯಾಗಿ ಬೆಳೆದಿದ್ದ ಸಂಸ್ಕೃತ ವಿದ್ಯೆಯ ಪ್ರಥಮ ಭಾಗ ವೇದ. ಇದರ ಋಗ್ವೇದ ಯಜುರ್ವೇದ, ಸಾಮವೇದಗಳನ್ನು ಚಾಚೂ ತಪ್ಪದೆ ವಾಚೋವಿಧೇಯ ಮಾಡಿಕೊಳ್ಳುವುದೇ ಒಂದು ಪ್ರಧಾನ ವಿದ್ಯಾಶಾಖೆ. ಇದಕ್ಕೆ ಸೇರಿದಂತೆ ವೇದಭಾಷ್ಯವೂ ಸಹಾಯಕ. ಆದರೆ ಈ ಶಾಖೆಯ ಪ್ರಧಾನಾಂಶ ವೇದವನ್ನು ಅನೂಚಾನವಾಗಿ ಬಂದಂತೆ ಕಂಠಪಾಠ ಮಾಡುವುದು. ವೇದಾಂಗಗಳಾದ ಜ್ಯೋತಿಷ ಮತ್ತು ಧರ್ಮಶಾಸ್ತ್ರಗಳು ಪೃಥಕ್ ವಿಭಾಗಗಳು. ಸಂಸ್ಕೃತ ವಿದ್ಯೆಗೆ ಸಾಮಾನ್ಯ ತಳಹದಿ ಸಾಹಿತ್ಯ ಮತ್ತು ವ್ಯಾಕರಣ. ಇವಿಲ್ಲದಿದ್ದರೆ ಯಾವ ಶಾಸ್ತ್ರವನ್ನೂ ಅಭ್ಯಾಸಮಾಡಲಾಗುವುದಿಲ್ಲ. ವಿಶೇಷವಾಗಿ ಸಾಹಿತ್ಯ ಮೀಮಾಂಸೆ, ಅಲಂಕಾರಶಾಸ್ತ್ರಗಳ ಅಧ್ಯಯನಕ್ಕೆ, ವ್ಯಾಕರಣದ ಮೇಲೆ ಸಮಗ್ರವಾಗಿ ಪ್ರಭುತ್ವವಿರಬೇಕಾಗುತ್ತಿತ್ತು. ತತ್ವಶಾಸ್ತ್ರ ಅಥವಾ ದರ್ಶನಕ್ಕೆ ದಾರಿ ತರ್ಕಶಾಸ್ತ್ರ. ಆದುದರಿಂದ ಅದರ ಸಾಮಾನ್ಯ ಅಧ್ಯಯನ ಅವಶ್ಯಕವಾಗಿತ್ತು. ಅಷ್ಟರಲ್ಲೇ ಸಂತುಷ್ಟರಾಗದೆ, ತರ್ಕ ಶಾಸ್ತ್ರದಲ್ಲಿಯೇ ಪರಿಣತರಾಗಬೇಕಾದರೆ, ಪ್ರಾಚೀನ ನ್ಯಾಯ ಮತ್ತು ನವೀನ ನ್ಯಾಯವೆಂಬ ವಿಪುಲ ವಾದ ವಿಚಾರಾತ್ಮಕ ವಿಷಯಗಳ ವ್ಯಾಸಂಗವನ್ನು ಮಾಡಬೇಕಾಗಿತ್ತು. ಕಠಿಣತೆಯ ದೃಷ್ಟಿಯಿಂದ ವ್ಯಾಕರಣ ಮತ್ತು ನವೀನ ನ್ಯಾಯಕ್ಕೆ ವಿಶೇಷ ಪ್ರತಿಷ್ಠೆ ಬಂದಿತ್ತು. ದರ್ಶನಗಳಲ್ಲಿ, ಸಾಂಖ್ಯಯೋಗ, ಪೂರ್ವಮೀಮಾಂಸೆ ಮತ್ತು ಜೈನ ದರ್ಶನ ಇವಕ್ಕೆ ಸ್ವತಂತ್ರಸ್ಥಾನಗಳಿದ್ದುವು. ಧರ್ಮಶಾಸ್ತ್ರದಂತೆ ಸುಲಭವಾದ ಮತ್ತೊಂದು ವಿಭಾಗ ಪುರಾಣ. ದೇವಾಲಯಗಳಿಗೆ ಸಂಬಂಧಪಟ್ಟ ಶಾಸ್ತ್ರವೆಂದರೆ, ಆಗಮಶಾಸ್ತ್ರ. ಇದರಲ್ಲಿ ಶೈವಾಗಮ ಮತ್ತು ವೈಷ್ಣವಾಗಮಗಳು ಭಿನ್ನಪಂಥಗಳು. ವೈಷ್ಣವಾಗಮದಲ್ಲಿ ವೈಖಾನಸ ಮತ್ತು ಪಾಂಚರಾತ್ರಾಗಮಗಳೆಂದು ಎರಡು ಶಾಖೆ. ವೇದಾಂತವೆಂದು ಸಾಮಾನ್ಯ ನಿರ್ದೇಶನ ವಿರುವ ದರ್ಶನದಲ್ಲಿ ವಸ್ತುತಃ ಮೂರು ಶಾಖೆಗಳು: ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳು. ಇವುಗಳ ಅಧ್ಯಯನಗಳಲ್ಲಿ ಉಪನಿಷದ್ಭಾಷ್ಯಗಳು, ಗೀತಾಭಾಷ್ಯಗಳು, ಬ್ರಹ್ಮಸೂತ್ರಭಾಷ್ಯಗಳು, ಹಾಗೆಯೇ ಪ್ರಕರಣ ಗ್ರಂಥಗಳು ಮತ್ತು ವಾದಗ್ರಂಥಗಳು ಇವನ್ನು ಅಳವಡಿಸಿಕೊಳ್ಳಬೇಕಾಗಿತ್ತು. ಈ ವಿದ್ಯಾ ವಿಭಾಗಗಳಲ್ಲಿ ಒಂದೊಂದರಲ್ಲಿ ಪರಿಣತಿಯನ್ನು ಪಡೆಯುವುದೇ ಕಷ್ಟಸಾಧ್ಯವಾಗಿತ್ತು. ಆದ್ದರಿಂದ ಇವುಗಳೆಲ್ಲದರಲ್ಲೂ ಪ್ರಭುತ್ವ ಗಳಿಸುವುದು ಅಸಾಮಾನ್ಯ ವಿದ್ವತ್ತು ಎಂದು ಹೇಳಬೇಕಾಗಿಲ್ಲ. ವೇದಾಂತದಲ್ಲಿ ಒಂದು ವಿಶೇಷಾಂಶವಿತ್ತು. ಇದರಲ್ಲಿ ಸ್ವಸಂಪ್ರದಾಯದ ಅಭಿನಿವೇಶಕ್ಕೆ ಅವಕಾಶವಿತ್ತು. ಸ್ಮಾರ್ತರು ಅದ್ವೈತವನ್ನೂ, ಮಾಧ್ವರು ದ್ವೈತವನ್ನೂ, ಶ್ರೀವೈಷ್ಣವರು ವಿಶಿಷ್ಟಾದ್ವೈತವನ್ನೂ ವಿಶೇಷ ಮಮತೆಯಿಂದ ಅಧ್ಯಯನ ಮಾಡುವುದು ಸರಿಯೇ. ಆದರೆ ಇದರಿಂದ ದೃಷ್ಟಿಸಂಕೋಚವು ಪ್ರಾಪ್ತವಾಗಿ ಸ್ವಮತಪ್ರೇಮದಿಂದ ಅನ್ಯ ವೇದಾಂತ ಪ್ರಸ್ಥಾನಗಳಲ್ಲಿ ದ್ವೇಷಾಸಹನೆಗಳು ಬರುವುದು ವಿಷಾದಕರ. ಇದು ಸಾಮಾನ್ಯ ಪರಿಸ್ಥಿತಿಯಾಗಿತ್ತು. ತಮ್ಮ ತಮ್ಮ ವೇದಾಂತದ ಅಧ್ಯಯನ ಮಾಡಿ, ಬೇರೆ ವೇದಾಂತ ಸಂಪ್ರದಾಯಗಳಲ್ಲೂ ಆಸಕ್ತಿ ಮತ್ತು ಗೌರವದಿಂದ ಪ್ರವೇಶ ಮಾಡುವ ವೇದಾಂತಿಗಳು ವಿರಳ. ಎಲ್ಲ ಶಾಸ್ತ್ರಗಳಲ್ಲೂ ಪ್ರಭುತ್ವವನ್ನು ಗಳಿಸಿ, ವೇದಾಂತ ಸಂಪ್ರದಾಯಗಳಲ್ಲೆಲ್ಲಾ ಸಮವಾಗಿ ಪ್ರವೇಶಗಳಿಸಿದ್ದ ಕೆಲವೇ ಕೆಲವು ಪಂಡಿತಶ್ರೇಷ್ಠರಲ್ಲಿ ಪಂಡಿತರತ್ನಂ ಲಕ್ಷ್ಮೀಪುರಂರವರು ಒಬ್ಬರು. ಇವರ ಗ್ರಂಥಗಳ ಸಮೀಕ್ಷೆಯಿಂದ ಇದು ಸ್ಪಷ್ಟಪಡುವುದು. ಮೇಲೆ ಹೇಳಿದ ವಿದ್ಯಾ ವಿಭಾಗಗಳಲ್ಲದೆ ಬೌದ್ಧದರ್ಶನದಲ್ಲಿಯೂ ಅಗಾಧ ಪರಿಶೋಧನೆ ನಡೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

೩

ಸುಮಾರು ೧೯೩೨ನೆಯ ವರ್ಷದಲ್ಲಿ ನಾನು ಇವರನ್ನು ಮೊದಲ ಬಾರಿ ಕಂಡಾಗ ಇವರಿಗೆ ಮಧ್ಯಮ ವಯಸ್ಸು. ಉನ್ನತ ಮತ್ತು ಪುಷ್ಟದೇಹ, ಶುಭ್ರವಾದ ಆರ್ಯವರ್ಣ, ಸ್ಫುರದ್ರೂಪ. ವಯಸ್ಸಿನ ಪರಿಣಾಮ ಸ್ವಲ್ಪವೂ ಕಾಣದ ತೇಜಃಪುಂಜವಾದ ವಿಶಾಲ ಮುಖ. ವಯಸ್ಸಿನ ಪರಿಣಾಮ

'ಸಮಂ ಕಾಯ ಶಿರೋಗ್ರೀವಂ' ಎಂದು ಗೀತೆ ಹೇಳುವಂತೆ ಸ್ವಲ್ಪವೂ ಬಗ್ಗದ,ಆಲಸ್ಯವಿಲ್ಲದ ಸ್ಥಿತಿಗತಿಗಳು. ರಾಜಗಮನ. ಮಂದವೂ. ಉದ್ರಿಕ್ತವೂ ಅಲ್ಲದ ನಡೆನುಡಿಗಳು. ಆಡಂಬರವಿಲ್ಲದ ವೇಷಭೂಷಣ. ಗೌರವ ಭಾವವನ್ನು ಸ್ವಭಾವತಃ ಪ್ರಚೋದಿಸುವ ವ್ಯಕ್ತಿತ್ವ. ಜೀವನವನ್ನು ಆತ್ಮತೃಪ್ತಿ ಬರುವಂತೆ ನಡೆಸಿದ, ನಡೆಸುತ್ತಿರುವ ಋಜುಜೀವಿಯ ಭಂಗಿ. ಸಾತ್ವಿಕ ಬುದ್ಧಿಯ ಸಫಲ ಪ್ರವೃತ್ತಿಯಲ್ಲಿ ನಿರತವಾದರೆ ಬರುವ ಉದಾತ್ತ ಭಾವ.

ಮೇಲುಕೋಟೆಯಲ್ಲಿ ರಾಮಾನುಜಾಚಾರ್ಯರ ಜಯಂತಿಯ ಸಂದರ್ಭದಲ್ಲಿ ಒಂದು ವಿದ್ವದ್ಗೋಷ್ಠಿಯ ಸಮಾರೋಪ ಭಾಷಣ. ವಿಶಿಷ್ಟಾದ್ವೈತವನ್ನಾಗಲಿ. ಶ್ರೀವೈಷ್ಣವ ಸಂಪ್ರದಾಯವನ್ನಾಗಲಿ ಕುರಿತು ಭಾಷಣ ನಡೆಯಲಿಲ್ಲ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಪ್ರಜಾಪತಿಯು ಅಸುರ, ಮಾನವ, ಸುರರನ್ನು ಕುರಿತು ಮೂರು ಸಾರಿ 'ದ' ಎಂದು ಹೇಳಿದ 'ದಯಾ. ದಾನ ಮತ್ತು ದಮ' ಎಂಬ ಮೂಲ ಧಾರ್ಮಿಕ ತತ್ವಗಳ ವಿಶ್ಲೇಷಣೆ ನಡೆಯಿತು. ಸರ್ವಧರ್ಮಗೋಷ್ಠಿಗೂ ಅನ್ವಯಿಸುವ ತತ್ವಬೋಧನೆ ನಡೆಯಿತು. ದಯಾಮಯ ರಾಮಾನುಜರ ಹೃದಯಕ್ಕೆ ಸಲ್ಲುವ ನೀತಿಸಾರವನ್ನು ಹೇಳಿದಂತಾಗಲಿಲ್ಲವೆ?

ಮೈಸೂರು ವಿಶ್ವವಿದ್ಯಾಲಯದಲ್ಲಿ ಉನ್ನತ ಸಂಸ್ಕೃತ ವಿಭಾಗದಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ದರ್ಶನದ ಉದ್ಗ್ರಂಥಗಳ ಪ್ರವಚನಕ್ಕೆ ಆಹ್ವಾನಿತರಾಗಿದ್ದರು. ಉದಯನಾಚಾರ್ಯರ ಬಹು ಪ್ರೌಢವೂ ವಿಚಾರಪೂರ್ಣವೂ ಆದ 'ನ್ಯಾಯ ಕುಸುಮಾಂಜಲಿ'ಯನ್ನು ಸರಳವಾಗಿ ವಿದ್ಯಾರ್ಥಿಗಳಿಗೆ ಪ್ರತಿಪಾದನೆ ಮಾಡುತ್ತಿದ್ದರು. ಕಠಿಣ ಗ್ರಂಥದಲ್ಲಿ ಭೀತಿ ಹೊಂದಿದ್ದವರಿಗೆ ಸುಗಮವಾಗಿ ಸಾರಗ್ರಹಣವಾಯಿತು. ಅಪಾರವಾದ ಶಿಷ್ಯಭಕ್ತಿ ಗಳಿಸಿದರು.

ಶ್ರೀ ರಾಮಕೃಷ್ಣಾಶ್ರಮದಲ್ಲಿ ಉನ್ನತ ವಿದ್ಯಾಭಿಲಾಷಿಗಳಾದ ಸ್ವಾಮಿಗಳಿಗೆ ಮಹಾರಾಜರ ಪ್ರೋತ್ಸಾಹದಿಂದ ಒಂದು ತತ್ವಶಾಸ್ತ್ರದ ಅಧ್ಯಯನ ಸಂಸ್ಥೆ ನಡೆಯುತ್ತಿತ್ತು. ಅಲ್ಲಿ ಪಂಡಿತರು 'ಶ್ರೀಭಾಷ್ಯ' ಪ್ರವಚನ ನಡೆಸುತ್ತಿದ್ದರು. ಗ್ರಂಥಾವಲೋಕನವಿಲ್ಲದೆ ಪಂಕ್ತಿಗಳನ್ನು ಹೇಳುತ್ತಾ, ಸರಳವೂ. ಗಂಭೀರವೂ, ಅರ್ಥಪೂರ್ಣವೂ ಆದ ಉಪನ್ಯಾಸ ಸಂಸ್ಕೃತದಲ್ಲಿ ನಡೆಯುತ್ತಿತ್ತು. ವಿಶಿಷ್ಟಾದ್ವೈತ ಒಂದಲ್ಲದೆ, ಅದ್ವೈತ ದರ್ಶನದ ಮರ್ಮಸ್ಥಾನಗಳೂ ವಿಶದವಾಗುತ್ತಿದ್ದವು. ಸ್ವಾಮಿಗಳ ಪ್ರೀತಿ ಮತ್ತು ಗೌರವಗಳು ಚಿರಸ್ಥಾಯಿಯಾಗಿ ಲಬ್ಧವಾಯಿತು. ಶ್ರೀಭಾಷ್ಯದಂತಹ ಉದ್ಗ್ರಂಥವು ಅದಕ್ಕೆ ತಕ್ಕಂತಹ ರೀತಿಯಲ್ಲಿ ಮುಂದಿಡಲ್ಪಟ್ಟಿತು. ಗಂಭೀರವಾದ ಚರ್ಚೆಗಳೂ ನಡೆದವು.

ನಂಜನಗೂಡಿನಲ್ಲಿ ಇದೇ ಸಮಯದಲ್ಲಿ ಒಂದು 'ಸರ್ವಧರ್ಮ' ಸಮ್ಮೇಳನ ನಡೆಯಿತು. ಇದರಲ್ಲಿ ಬೇರೆ ಬೇರೆ ಮತಗಳ ಉನ್ನತ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರೆಲ್ಲಾ ತಮ್ಮ ಸಂಪ್ರದಾಯಗಳ ವೈಶಿಷ್ಟ್ಯವನ್ನು ಆದರ ಮತ್ತು ಆಗ್ರಹದಿಂದ ನಿರೂಪಿಸಿದರು. ಶ್ರೀ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಹಿಂದೂಧರ್ಮದ ಪ್ರತಿನಿಧಿಯಾಗಿದ್ದರೂ, ಧರ್ಮಪ್ರಜ್ಞೆಗೆ ಮೂಲವಾದ, ಸರ್ವಧರ್ಮಗಳಿಗೂ ಅನ್ವಯಿಸುವ ಕೇಂದ್ರ ತತ್ವಗಳನ್ನು ವಿಮರ್ಶಿಸಿದರು. ಹಿಂದೂಧರ್ಮದ ಆಧಿಕ್ಯವನ್ನು ಎತ್ತಿ ಹಿಡಿಯದೇ ಹೋದದ್ದು ಆಗ್ರಹಯುಕ್ತರಾದ ಹಿಂದೂಧರ್ಮನಿಷ್ಠರಿಗೆ ನಿರಾಶೆಯನ್ನೇ ತಂದಿತು. ಆದರೆ ಆಚಾರ್ಯರ ಭಾವವೇ ಬೇರೆ. ಸರ್ವಧರ್ಮಗಳ ತಳಹದಿಯನ್ನು ಶೋಧಿಸಿ, ಸ್ಥಿರೀಕರಿಸಿದರೆ, ಹಿಂದೂ ಧರ್ಮಕ್ಕೆ ಚ್ಯುತಿ ಇಲ್ಲ. ಹೀಗೆ ಮಾಡುವುದೇ ಅದರ ವೈಶಿಷ್ಟ್ಯ ಎಂದು ಮಾಡಿದ ಉಪನ್ಯಾಸ ವಿಚಾರಪರರಿಗೆ ಭವ್ಯವೇ ಆಗಿತ್ತು.

ಹೀಗೆ ನಾಲ್ಕು ಸಂದರ್ಭಗಳಲ್ಲಿ ಲೇಖಕನಿಗೆ ಆಚಾರ್ಯರ ದೂರ ಪರಿಚಯವಾಯಿತು. ಇವರನ್ನು ಸಮೀಪಿಸಬೇಕು. ಇವರಲ್ಲಿ ಹೆಚ್ಚು ಸಂಪರ್ಕವನ್ನು ಬೆಳೆಸಿಕೊಳ್ಳಬೇಕೆಂದು ಸ್ವಾಭಾವಿಕವಾಗಿಯೇ ಶ್ರದ್ಧೆ ಮತ್ತು ತ್ವರೆ ಉಂಟಾಯಿತು. ಹಾಗೆ ಮಾಡುವುದು ವಿಶೇಷ ಶ್ರಮವೇನಾಗಲಿಲ್ಲ. ಆಚಾರ್ಯರು ನಿಗರ್ವಿಗಳು, ಸುಲಭವಾಗಿ ಪ್ರಾಪ್ಯರಾಗಿದ್ದರು. ತಮ್ಮ ಮಹತ್ವವನ್ನು ದೂರ ಇಟ್ಟು. ಸಣ್ಣವರಲ್ಲಿಯೂ ಪ್ರೀತಿವಿಶ್ವಾಸವನ್ನು, ಔದಾರ್ಯವನ್ನು ಹೊಂದುವ ಸ್ವಭಾವ ಅವರದು. ಅಲ್ಪ ಜಿಜ್ಞಾಸುಗಳಿಗೂ ವಿಶೇಷ ಆದರ ತೋರಿಸಿ, ಅವರನ್ನು ಬಹುವಚನದಲ್ಲಿ ಸಂಬೋಧಿಸುತ್ತಾ, ಆತಿಥ್ಯಮಾಡುವುದು

ಅವರ ದೊಡ್ಡತನವೆಂದು ಅರ್ಥವಾಯಿತು. ತಮ್ಮ ಕಾಲವನ್ನೂ, ಗ್ರಂಥಾವಲೋಕನ, ಗ್ರಂಥನಿರ್ಮಾಣ ಕಾರ್ಯವನ್ನೂ ಮರೆತು, ಅಂತಹವರಿಗೆ ಅನವಶ್ಯಕವಾದ ಬೆಲೆಯನ್ನು ಕೊಡುತ್ತಿದ್ದರು. ಸ್ವಲ್ಪ ಮಾತಿನಲ್ಲಿಯೇ ಅಧಿಕ ಪ್ರಕಾಶವನ್ನು ನೀಡುವ ತಮ್ಮ ಸಾಮರ್ಥ್ಯದಿಂದ ಪ್ರಶ್ನೆ ಮಾಡುವವನಿಗೆ ಕೃತಾರ್ಥತೆಯನ್ನು ಒದಗಿಸುತ್ತಿದ್ದರು. ಈ ನಿಕಟ ಸಂಬಂಧ ಬಂದದ್ದು ಒಂದು ಅತಿಶಯವಾದ ಧನ್ಯತೆ

೪

ಬೆಂಗಳೂರಿನಿಂದ ಮದರಾಸಿಗೆ ಹೋಗುವ ರೈಲುಮಾರ್ಗದಲ್ಲಿನ 'ಕುಪ್ಪಂ' ಎನ್ನುವ ಊರಿನ ಸಮೀಪದಲ್ಲಿ ಲಕ್ಷ್ಮೀಪುರಂ ಎಂಬ ಗ್ರಾಮದಲ್ಲಿ ಆಚಾರಕ್ಕೆ ಮತ್ತು ವಿದ್ವತ್ತಿಗೆ ಪ್ರಸಿದ್ಧವಾದ 'ಚಕ್ರವರ್ತಿ' ಎಂಬ ಮನೆತನದ ನಿಷ್ಠಾವಂತ ಶ್ರೀವೈಷ್ಣವ ಕುಟುಂಬದಲ್ಲಿ ಶ್ರೀನಿವಾಸಾಚಾರ್ಯರು ಜನಿಸಿದರು. ತಂದೆ ಬೇಗ ತೀರಿಕೊಂಡರು. ತಾಯಿ ಮತ್ತು ಸಹೋದರಿಯರೊಡನೆ ಸಂಸ್ಕೃತ ವಿದ್ಯೆಗೆ ಪ್ರಸಿದ್ಧವಾಗಿದ್ದ ಮೈಸೂರಿಗೆ ಬಂದು ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಥಿಯಾದರು. ಕುಟುಂಬಭರಣ ಅಷ್ಟು ಸುಖಕರವಾಗಿರಲಿಲ್ಲ. ಆದರೆ ವಿದ್ಯೆ ಮಾತ್ರ ಸಮಂಜಸವಾಗಿ ನಡೆಯಿತು. ಪ್ರತಿಭೆ ಮತ್ತು ನಿಷ್ಠೆಯಿಂದ ವಿದ್ಯಾರ್ಜನೆ ಆಶ್ಚರ್ಯಕರವಾದ ಪ್ರಗತಿಯ ಪಥದಲ್ಲಿ ಸಾಗಿತು. ತರ್ಕಶಾಸ್ತ್ರದಲ್ಲಿ ಉಜ್ವಲ ಪಂಡಿತರಾದ ಪಂಡಿತರತ್ನಂ ಕಸ್ತೂರಿ ರಂಗಾಚಾರ್ಯರ ಶಿಷ್ಯತ್ವ ಪ್ರಾಪ್ತವಾಯಿತು. ಗುರುವಿಗೆ ಸರಿಯಾದ ಶಿಷ್ಯರಾದರು. ವಿದ್ಯಾಪ್ರಪಂಚದಲ್ಲಿ ಪ್ರೌಢಸ್ಥಾನಕ್ಕೆ ಬಂದರು. ಕಾಲಕ್ರಮೇಣ ಆರ್ಥಿಕಸ್ಥಿತಿ ಸುಗಮವಾಗುತ್ತಾ ಬಂದಿತು. ಪ್ರಾಚ್ಯಪುಸ್ತಕ ಭಂಡಾರದಲ್ಲಿ ಸಂಶೋಧನೆ ಮತ್ತು ಗ್ರಂಥಸಂಪಾದನೆಯ ಉದ್ಯೋಗ ಸಿಕ್ಕಿತು. ಅಪಾರ ವ್ಯಾಸಂಗಕ್ಕೆ ಅವಕಾಶವಾಯಿತು. ಪ್ರಶಸ್ತವಾದ ಕೆಲವು ಗ್ರಂಥಗಳನ್ನು ಸಂಪಾದಿಸಿದರು. ಶ್ರೀಕಂಠಭಾಷ್ಯ, ಗೌತಮ ಧರ್ಮಸೂತ್ರ, ಕಾವ್ಯಪ್ರಕಾಶ ಮುಂತಾದ ಇವು ಈಗಲೂ ಆದರ್ಶವಾದ ಪ್ರಕಟಣೆಗಳು. ಸಂಸ್ಕೃತ ಪಾಠಶಾಲೆಯಲ್ಲಿ ಪ್ರಾಧ್ಯಾಪಕ ಸ್ಥಾನ ದೊರೆಯಿತು. ಹಾಗೆಯೇ ಪಾಠಶಾಲೆಯ ಮಾಸ ಪತ್ರಿಕೆಯ ನೇತೃತ್ವ ಬಂದಿತು. ಭಾರತ ಸರ್ಕಾರ 'ಮಹಾಮಹೋಪಾಧ್ಯಾಯ' ಎಂಬ ಬಿರುದನ್ನೂ, ಮಹಾರಾಜರ ಆಸ್ಥಾನ 'ಪಂಡಿತರತ್ನಂ' ಎಂಬ ಬಿರುದನ್ನೂ ಕೊಟ್ಟವು. ಅರಮನೆಯ ಧರ್ಮಾಧಿಕಾರಿಗಳಾದರು. ಜ್ಯೋತಿಷದ ಅದ್ವಿತೀಯ ಪಂಡಿತರಾದ ನರಸಿಂಹ ಜ್ಯೋತಿಷ್ಯರಂತಹ ಉನ್ನತ ಮಟ್ಟದ ವಿದ್ವಾಂಸರು ಆತ್ಮೀಯ ಮಿತ್ರರಾದರು. ಅಸಂಖ್ಯಾತ ವಿದ್ಯಾರ್ಥಿಗಳು ಪಂಡಿತರಿಂದ ಪಾಠಶಾಲೆಯಲ್ಲಿ ಮತ್ತು ಹೊರಗೆ ವಿದ್ಯಾರ್ಜನೆ ಮಾಡಿದರು. ಆಚಾರ್ಯರು ಉತ್ತಮ ವಿದ್ಯಾರ್ಥಿಗಳಿಗೆ ಬುದ್ಧಿವಿಕಾಸವನ್ನು ವಿಶೇಷವಾಗಿ ನೀಡಿದಂತೆ ಮಂದ ವಿದ್ಯಾರ್ಥಿಗಳನ್ನೂ ಸಾಕಷ್ಟು ಮುಂದೆ ತರುತ್ತಿದ್ದರು.

ಇವರು ಮುಟ್ಟದ ಶಾಸ್ತ್ರವಿರಲಿಲ್ಲ; ಮುಟ್ಟಿದ್ದನ್ನು ಆಳವಾಗಿ ವಿಮರ್ಶೆಮಾಡಿ ನವೀನ ಬೆಳಕನ್ನು ಹೊರಗೆಡಹುತ್ತಿದ್ದರು. ಜೀವನದಲ್ಲಿ ನಿರ್ಲಿಪ್ತತೆ ಬಂದದ್ದರಿಂದ, ಯಾವ ಉದ್ವೇಗ ಮತ್ತು ದುರಾಸೆ ಇಲ್ಲದೆ, ಸತತ ಸರಸ್ವತೀ ಸೇವೆ ಮಾಡುತ್ತಿದ್ದರು. ಅವಿಚ್ಛಿನ್ನವಾದ ವಿಚಾರ ಜೀವನ ನಡೆಯುತ್ತಿತ್ತು. ಪ್ರವಚನಗಳು, ಉಪನ್ಯಾಸಗಳು, ವಿದ್ವದ್ಗೋಷ್ಠಿಯಲ್ಲಿ ಚರ್ಚೆ ಮತ್ತು ಪುಂಖಾನುಪುಂಖವಾಗಿ ಗ್ರಂಥ ರಚನೆ ಇವು ಸುಮಾರು ಅರ್ಧ ಶತಮಾನ ನಡೆಯಿತು. ಶ್ರೀನಿವಾಸಾಚಾರ್ಯರ ಬಾಹ್ಯ-ಲೌಕಿಕ ಜೀವನದಲ್ಲಿ ಅದ್ಭುತ ಘಟನೆಗಳಿರಲಿಲ್ಲ. ಆದರೆ ಅವರ ಆಂತರಿಕ ಪ್ರಪಂಚದಲ್ಲಿ ದೇವಗಂಗೆಯ ಪ್ರವಾಹ ಸತತವಾಗಿ, ಅವ್ಯಾಹತವಾಗಿ ನಡೆಯುತ್ತಿತ್ತು. ಇವರದು ಸರ್ವತೋಮುಖವಾದ ದರ್ಶನ ಪ್ರವಾಹ. ಸಂಕುಚಿತವಾದ ಮತೀಯ ವಾದ-ವಿವಾದಗಳಿಗೆ ಸ್ವಲ್ಪವೂ ಆಶ್ರಯ ಕೊಡದ ವೈಚಾರಿಕ ಗ್ರಂಥರಾಶಿಯೇ ನಿರ್ಮಾಣವಾಯಿತು. ಬೌದ್ಧಿಕ ತೀಕ್ಷ್ಣತೆ ಎಷ್ಟಿದ್ದರೂ ಆಚಾರ್ಯರ ಹೃದಯ ಮೃದುಮಧುರವಾದದ್ದು. ಮಾನವೀಯತೆಯ ಮೂರ್ತಿಯಾಗಿದ್ದರು. ನೂರಾರು ವಿದ್ವಾಂಸರ ಪ್ರತಿಭೆಯನ್ನು ವಿಕಾಸಗೊಳಿಸಿ ಅವರನ್ನು ಮುಂದೆ ತಂದರು. ಲಕ್ಷ್ಮೀಪುರಂರವರ ಶಿಷ್ಯರೆಂದರೆ, ಗಣ್ಯತೆಯ ಮುದ್ರೆ ಬಿದ್ದಂತೆ. ಹೀಗೆಯೇ ಅನೇಕ ಕುಟುಂಬಗಳಿಗೆ ಆಶ್ರಯ ನೀಡಿ ಮುಂದೆ ತಂದರು. ಆದರ್ಶ ದಾರ್ಶನಿಕರು ಮತ್ತು ಪ್ರಮಾಣ ಪುರುಷರಾದಂತೆ, ಅನೇಕರಿಗೆ ಆಶ್ರಯದಾತರಾದ ಆರ್ದ್ರಹೃದಯರೂ ಆಗಿದ್ದರು. ಮತಾಂಧತೆಯಿಲ್ಲದ ವೇದಾಂತಿಯಾಗಿದ್ದರಿಂದ, ನವೀನ ರೀತಿಯ ತತ್ತ್ವಾನ್ವೇಷಕರಿಗೆ ಜ್ಞಾನದ ಆಕರರಾಗಿದ್ದರು. ಡಾ. ರಾಧಾಕೃಷ್ಣನ್ ಮತ್ತು ಪ್ರೊ. ಹಿರಿಯಣ್ಣ ಇವರುಗಳು ಇವರಲ್ಲಿ ದೀರ್ಘಕಾಲ

ದರ್ಶನಾಭ್ಯಾಸ ಮಾಡಿದರು. ರಾಮಕೃಷ್ಣ ಮಿಷನ್ನಿನ ಸ್ವಾಮಿ ಮಾಧವಾನಂದರು ಇವರಲ್ಲಿ ಶಂಕರರ ಬೃಹದಾರಣ್ಯಕ ಭಾಷ್ಯದ ಕೆಲವು ಸಂದಿಗ್ಧ ಘಟ್ಟಗಳ ವಿವರಣೆ ತೆಗೆದುಕೊಂಡು ತಮ್ಮ ಪ್ರಸಿದ್ಧವಾದ ಇಂಗ್ಲಿ ಅನುವಾದವನ್ನು ರಚಿಸಿದರು. ಇವರು ಅಕ್ಷರಶಃ ಪಂಡಿತರತ್ನರೇ ಆಗಿದ್ದರು. ೧೯೩೮ರಲ್ಲಿ ವಿದ್ವತ್ ಪ್ರಪಂಚವನ್ನು ಮತ್ತು ವಿಸ್ತಾರವಾದ ಶಿಷ್ಯವರ್ಗವನ್ನು ತೀವ್ರಶೋಕದಲ್ಲಿ ಮುಳುಗಿಸಿ ದಿವಂಗತರಾದರು. ಅಸಾಧಾರಣವಾದ ಜ್ಯೋತಿ ಅದೃಶ್ಯವಾಯಿತು. ವಿಶ್ವವಿಖ್ಯಾತರಾದ ಪ್ರೊ. ಹಿರಿಯಣ್ಣನವರು ಸ್ವಂತ ಅನಾರೋಗ್ಯವನ್ನು ಲಕ್ಷಿಸದೆ ಅಂತಿಮ ಸಂಸ್ಕಾರದ ಯಾತ್ರೆಯಲ್ಲಿ ಭಾಗವಹಿಸಿದ್ದರು.

೫

ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರ ಗ್ರಂಥಗಳ ಪ್ರಧಾನ ಭಾಷೆ ಸಂಸ್ಕೃತ. ಪಾಂಡಿತ್ಯದ ದೃಷ್ಟಿಯಿಂದ ನೋಡಿದರೆ ಇವರ ಲಾಲಿತ್ಯ ಆಶ್ಚರ್ಯಕರವಾಗಿದ್ದಿತು. ಪ್ರಮಾಣಗಳ ಸಮಗ್ರ ಪರಿಶೀಲನೆ ಇವರ ಪಾಂಡಿತ್ಯದ ಲಕ್ಷಣ. ಇದರಿಂದ ಹೊರಬರುವ ನಿರ್ಣಯಗಳು ಕೇವಲ ಚರ್ವಿತಚರ್ವಣವಾಗಿರದೆ, ಹೊಸಬೆಳಕನ್ನು ಚೆಲ್ಲುವ ವಿಮರ್ಶಾತ್ಮಕವಾದ ಸ್ವತಂತ್ರ ಸಮಾಲೋಚನೆಯ ಫಲವಾಗಿರುತ್ತಿತ್ತು. ತತ್ತ್ವನಿಷ್ಠೆ ಇದ್ದ ಇವರು ಕಲಹ ಪ್ರಿಯ ವಿತಂಡಕ್ಕೆ ಎಂದೂ ವಶವಾಗಿರಲಿಲ್ಲ. ರಚನಾತ್ಮಕವಾದ, ಸಮನ್ವಯ ಸಾಧಿಸುವ ಸಿದ್ಧಾಂತಗಳನ್ನು ಮುಂದಿಡುತ್ತಿದ್ದರು. ಈ ಸಮನ್ವಯ ದೃಷ್ಟಿ ದೀರ್ಘ ಮತ್ತು ತೀಕ್ಷ್ಣ ಪರೀಕ್ಷೆಯಿಂದ ಬರುತ್ತಿದ್ದುದರಿಂದ ಕೇವಲ ಸದಭಿನಿವೇಶ ಮಾತ್ರವಲ್ಲದೆ, ತಾತ್ತ್ವಿಕತೆಯ ಚರಮಸಾಧನೆಯಾಗಿರುತ್ತಿತ್ತು. ತಮಿಳು ಭಾಷೆಯಲ್ಲೂ ವಿಶೇಷ ಪ್ರಭುತ್ವವಿದ್ದುದರಿಂದ ಅದರಲ್ಲೂ ಕೆಲವು ಬರಹಗಳುಂಟು. ತಮಿಳು ಮೂಲವನ್ನವಲಂಬಿಸಿ ಸಂಸ್ಕೃತದಲ್ಲಿ ವೇದಾಂತದೇಶಿಕರ ಮಹದ್ಗ್ರಂಥಗಳ ಸಂಗ್ರಹವನ್ನೂ ಮಾಡಿದ್ದಾರೆ. ಕನ್ನಡದಲ್ಲಿ ತತ್ತ್ವಪ್ರಚಾರವಾಗಬೇಕೆಂಬ ವಾದದ ಪ್ರಾಬಲ್ಯ ಬಂದಾಗ ಆ ಭಾಷೆಯಲ್ಲಿಯೂ–ಅಂದರೆ, ಸಂಸ್ಕೃತ ಪಾಂಡಿತ್ಯದ ಪ್ರಭಾವದ್ಯೋತಕವಾದ ಕನ್ನಡ ಭಾಷೆಯಲ್ಲಿ–ಕೆಲವು ಸಾರಭೂತವಾದ ಗ್ರಂಥಗಳನ್ನು ಬರೆದಿದ್ದಾರೆ. ಪಂಡಿತರತ್ನಂರವರ ಜೀವ ಅವರ ಗ್ರಂಥಗಳಲ್ಲಿ. ಅವುಗಳ ಸ್ಥೂಲ ಪರಿಚಯದಿಂದ ಅವರ ಅಂತರಂಗ ಜೀವನವನ್ನು ಚಿತ್ರಿಸಬಹುದು.

೧. ನಮ್ಮ ವಿದ್ಯೆಗಳಲ್ಲಿ ವೇದಕ್ಕೆ ಪ್ರಥಮ ಸ್ಥಾನ. ಅದರಲ್ಲಿ ಋಗ್ವೇದ ಮೂಲಭೂತವಾದದ್ದು. ವೇದದ ಅಂತಿಮ ನಿರ್ಣಯವಿರುವುದು ಉಪನಿಷತ್ತುಗಳಲ್ಲಿ. ಋಗ್ವೇದಕ್ಕೆ ಸೇರಿದ ಉಪನಿಷತ್ತು 'ಐತರೇಯ' ಉಪನಿಷತ್ತು. ಇದಕ್ಕೆ ಪ್ರಾಚೀನ ಭಾಷ್ಯಕಾರರ ಶೈಲಿಯಲ್ಲಿ ಸಾರವತ್ತಾದ ಭಾಷ್ಯವನ್ನು ಲಕ್ಷ್ಮೀಪುರಂರವರು ರಚಿಸಿದಾರೆ. ಇದು ವಿಶೇಷ ಪ್ರಚಾರವಾಗದಿರುವುದು ವಿಷಾದಕರ.

೨. ಪವಿತ್ರವಾದ ಗ್ರಂಥಗಳ ವಿಮರ್ಶೆ ಮತ್ತು ತಾತ್ಪರ್ಯ ನಿರ್ಣಯಕ್ಕೆ 'ಮೀಮಾಂಸೆ' ಎಂದು ಪರಿಭಾಷೆ. ವೇದದಲ್ಲಿ ಮುಖ್ಯವಾಗಿ ಪ್ರತಿಪಾದಿತವಾಗುವ ಪ್ರಮೇಯ ಧರ್ಮ ಮತ್ತು ಪರತತ್ತ್ವವಾದ ಬ್ರಹ್ಮ. ಧರ್ಮದ ಸಂಬಂಧದಲ್ಲಿ ವೇದವನ್ನು ವಿಚಾರಮಾಡುವ ಶಾಸ್ತ್ರಕ್ಕೆ ಪೂರ್ವಮೀಮಾಂಸೆ ಎಂದೂ, ಬ್ರಹ್ಮವನ್ನು ಕುರಿತ ವಿಚಾರಕ್ಕೆ ಉತ್ತರಮೀಮಾಂಸೆ ಅಥವಾ ವೇದಾಂತ ಎಂದೂ ಹೆಸರಾಯಿತು. ಈ ಪೂರ್ವ ಮೀಮಾಂಸೆಯನ್ನು ಸೂತ್ರರೂಪದಲ್ಲಿ ರಚಿಸಿದವರು ಭಗವಾನ್ ಜೈಮಿನಿ. ಇದರ ಮೇಲೆ ಗಂಭೀರವಾದ ಭಾಷ್ಯವನ್ನು ರಚಿಸಿದವರು ಶಬರಸ್ವಾಮಿ. ಈ ಭಾಷ್ಯಕ್ಕೆ ಕುಮಾರಿಲರು ಮತ್ತು ಪ್ರಭಾಕರ ಮಿಶ್ರರು ವಿಸ್ತಾರವಾಗಿ ವ್ಯಾಖ್ಯಾನ ಮಾಡಿದ್ದಾರೆ. ಪ್ರಾರಂಭದಲ್ಲಿ ಪೂರ್ವಮೀಮಾಂಸಾ ಸೂತ್ರ ಮತ್ತು ಭಾಷ್ಯಗಳಲ್ಲಿ ವೇದಪ್ರಾಮಾಣ್ಯ ಮತ್ತು ಆತ್ಮಸ್ವರೂಪವೇ ಮೊದಲಾದ ದಾರ್ಶನಿಕ ಅಂಶಗಳನ್ನು ಕುರಿತ ಪ್ರತಿಪಾದನೆ ಇದೆ. ವ್ಯಾಖ್ಯಾನಗಳಲ್ಲಿನ ಸಾರವನ್ನೂ ಅಳವಡಿಸಿಕೊಂಡು, ಈ ಭಾಗದ ಭಾಷ್ಯಕ್ಕೆ ಲಕ್ಷ್ಮೀಪುರಂರವರು 'ಮೀಮಾಂಸಾ ಭಾಷ್ಯ ಭೂಷಣಂ' ಎಂಬ ವಿವರಣೆಯನ್ನು ಬರೆದಿದಾರೆ. ಮೀಮಾಂಸೆಯ ತರ್ಕಮಯ ಗ್ರಂಥಗಳಲ್ಲಿ ದಾರಿಕಾಣದ ಜಿಜ್ಞಾಸುಗಳಿಗೆ ಇದು ದಾರಿ ದೀಪವಾಗಿದೆ. ಶೈಲಿಯ ಮನೋಹರತೆಯೂ ಇಲ್ಲಿ ಸ್ಪಷ್ಟವಾಗುತ್ತದೆ. ಶಬರರ ಭಾವ ಸಮ್ಯಕ್ ನಿರೂಪಣೆಯನ್ನು ಹೊಂದುತ್ತದೆ.

೩. ಬಾಣಭಟ್ಟನ ಗದ್ಯಕಾವ್ಯ ಕಾದಂಬರೀ. ಬಹಳ ಉನ್ನತ ಪ್ರತಿಭೆಯ, ಪ್ರೌಢಿಮೆಯ ಸೃಷ್ಟಿ. ಇದರ ಮೂಲ ಕಥಾಗತಿಯು ಜಟಿಲವಾಗಿ, ರಸಾಸ್ವಾದಕ್ಕೆ ಅಡ್ಡಿಯಾಗಿದೆ. ಅಂತಲೇ ಲಿಷ್ಯಚಿತ್ರಿಯಾದ

ಪಂಡಿತರು ಕಥೆಯನ್ನು ಸುಲಭಮಾಡಿ ಜಟಿಲತೆಯನ್ನು ನಿವಾರಣೆ ಮಾಡಿ ಉಪಕಾರ ಮಾಡಿದ್ದಾರೆ. ಕಾವ್ಯತತ್ತ್ವದ ನಿರೂಪಣೆಯಲ್ಲಿ 'ಧ್ವನಿವಾದ' ಎಂಬುದು ಕೇಂದ್ರ ಪ್ರಸ್ಥಾನ. ಆನಂದವರ್ಧನಾಚಾರ್ಯ ಇದರ ಸ್ಥಾಪಕ. ಇವರ 'ಧ್ವನ್ಯಾಲೋಕ'ದಲ್ಲಿ ಧ್ವನಿಯ ಸ್ವರೂಪ ಮತ್ತು ಅದರ ಪ್ರಭೇದಗಳನ್ನು ಖಚಿತಗೊಳಿಸಲಾಗಿದೆ. ಇಲ್ಲಿಯೂ ಬುದ್ಧಿಭ್ರಮಣೆಗೆ ಅವಕಾಶವುಂಟು. ಇಲ್ಲೂ ಜಟಿಲತೆಯನ್ನು ನಿವಾರಿಸಿ ಧ್ವನಿ ಪ್ರಭೇಧಗಳ ಸ್ಪಷ್ಟ ವಿವೇಚನೆಯನ್ನು ಆಚಾರ್ಯರು ಮಾಡಿದರು. ಕಾವ್ಯ ವ್ಯಾಸಂಗಕ್ಕೆ ಅತ್ಯಂತ ಉಪಯುಕ್ತವಾದ ತೀರ್ಮಾನಗಳು ಈ ಎರಡು ಲೇಖನಗಳಲ್ಲಿ ಅನುಗ್ರಹೀತವಾಗಿವೆ.

೪. ಜ್ಯೋತಿಶಾಸ್ತ್ರದಲ್ಲಿ 'ಉಪರಾಗ'ವೆಂದರೆ ಗ್ರಹಣ. ಶಾಸ್ತ್ರಕಾರರ ಸಿದ್ಧಾಂತಗಳಲ್ಲಿ ಇದಕ್ಕೆ ಸಂಬಂಧಪಟ್ಟಂತಹ ಕೆಲವು ಸಮಸ್ಯೆಗಳು ಕಂಡುಬರುತ್ತವೆ. ಇವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಪಂಡಿತರತ್ನಂರವರು 'ಉಪರಾಗ ಮೀಮಾಂಸೆ' ಎಂಬ ಒಂದು ಪ್ರಬಂಧವನ್ನು ರಚಿಸಿದರು. ಪಂಚಾಂಗ ಕರ್ತೃಗಳು ತಮ್ಮ ಅನೂಚಾನ ಪದ್ಧತಿಗೆ ಇದು ವಿರುದ್ಧವಾಗಿದೆಯೆಂದು ವಿಶೇಷ ವಾದಗಳನ್ನು ಮಾಡಿದರು. ಆದರೂ ಮುಖ್ಯಾಂಶಗಳ ವಿಮರ್ಶೆಗೆ ಈ ಪ್ರಬಂಧ ನಿಮಿತ್ತವಾಗಿ. ಆಚಾರ್ಯರ ಸ್ವತಂತ್ರ ಪ್ರಜ್ಞೆಗೆ ಸಾಕ್ಷೀಭೂತವಾಯಿತು. ಸಂಪ್ರದಾಯದ ಪುನರ್ವಿಮರ್ಶೆಗೆ ಪ್ರಚೋದಕವಾಯಿತು.

೫. ಧರ್ಮಶಾಸ್ತ್ರದಲ್ಲಿ ಆಚಾರ್ಯರಿಗೆ ಆಳವಾದ ಪ್ರವೇಶವಿದ್ದುದಕ್ಕೆ ಅವರ ಮೂಲಭೂತವಾದ ಸೂತ್ರಗಳ ಸಂಪಾದನೆಯೇ ಸಾಕ್ಷಿ. ಧರ್ಮಶಾಸ್ತ್ರಗಳು ಸಮಾಜದ ಸುಧಾರಣೆಗೆ ಪ್ರತಿಬಂಧಕಗಳೆಂಬ ಭಾವ ಸಾಮಾನ್ಯವಾಗಿದೆ. ಸ್ತ್ರೀಯರಿಗೂ ಉಪನಯನ ಹಾಗೂ ವೇದವಿದ್ಯಾಧಿಕಾರ ನೀಡುವ ಸಂಸ್ಕಾರಗಳಿಗೆ ಅವಕಾಶವಿದೆ ಎಂದು ಹಾರೀತಾದಿ ಸ್ಮೃತಿಗಳು ವಿಧಿಸುವುದನ್ನು ಮುಂದಿಟ್ಟು ಆಚಾರ್ಯರು ಸ್ಮೃತಿ ಸಂಪ್ರದಾಯಗಳ ಉದಾರತೆಯನ್ನು ಪ್ರಮಾಣೀಕರಿಸಿದರು. ಅನೇಕ ಕೌಮಾರ ಬ್ರಹ್ಮಚಾರಿಣಿಯರು ಬ್ರಹ್ಮವಾದಿನಿಗಳಾಗಿದ್ದರೆಂಬುದಕ್ಕೆ ಧರ್ಮಶಾಸ್ತ್ರಗಳಲ್ಲೇ ಪ್ರಮಾಣಗಳುಂಟು. ವ್ಯಾಕರಣಶಾಸ್ತ್ರಕಾರರಾದ ಪಾಣಿನಿ ಮೊದಲಾದವರು 'ಉಪಾಧ್ಯಾಯಾ. ಮತ್ತು ಉಪಾಧ್ಯಾಯೀ'. 'ಆಚಾರ್ಯಾ ಮತ್ತು ಆಚಾರ್ಯಾಣೀ' ಎಂಬ ಪದಗಳಿಗೆ ಅರ್ಥ ವಿಭಾಗ ಮಾಡುವಾಗ ಉಪಾಧ್ಯಾಯಾ. ಆಚಾರ್ಯಾ ಎಂದರೆ ಸ್ವಯಂ ಉಪದೇಶಕರೆಂದು ನಿಷ್ಕರ್ಷಿಸುತ್ತಾರೆ. ಉಪಾಧ್ಯಾಯೀ ಮತ್ತು ಆಚಾರ್ಯಾಣೀ ಅಂದರೆ ಮಾತ್ರ ಉಪಾಧ್ಯಾಯ ಪತ್ನಿ. ಆಚಾರ್ಯ ಪತ್ನಿ ಎಂದು ಅರ್ಥ. ಜಾತಿ ವ್ಯವಸ್ಥೆಯ ವಿಷಯದಲ್ಲೂ ಆಚಾರ್ಯರು ನಮ್ಮ ಮೂಲ ಶಾಸ್ತ್ರಕಾರರನ್ನು ಖಂಡನೆಗಳಿಂದ ಮುಕ್ತರಾಗಿಸಿದ್ದಾರೆ. ಇವರ ಅಪೂರ್ವ ಸಂಶೋಧನೆ ಇನ್ನೂ ಪ್ರಸಿದ್ಧವಾಗಿ ಪ್ರಚಾರವಾದರೆ. ವರ್ಣಾಶ್ರಮ ವ್ಯವಸ್ಥೆಯ ವಿಷಯದಲ್ಲಿರುವ ಉದ್ವೇಗಯುಕ್ತ ಪ್ರದ್ವೇಷ ಶಮನವಾಗುವುದಕ್ಕೆ ಅವಕಾಶವಾಗುತ್ತದೆ. ಧರ್ಮಶಾಸ್ತ್ರಗಳಲ್ಲಿ ಭಾವ ಸಂಕೋಚವಿಲ್ಲ: ಸಮಾಜದಲ್ಲಿ ಮೇಲು–ಕೀಳು ಎಂಬ ಕಲ್ಪನೆಯೇ ಇಲ್ಲವೆಂದಲ್ಲ. ಅವುಗಳೊಡನೆ ಅಷ್ಟೇ ಸ್ಫುಟವಾಗಿ. ಸಮಾಜದ ಏಕತ್ವ. ಮತ್ತು ವ್ಯಕ್ತಿಗಳ ಸಮತ್ವವನ್ನು ವಿಧಿಸುವ ಉದಾತ್ತ ಮತ್ತು ಉದಾರ ತತ್ತ್ವಗಳೂ ಇವೆ. ಸಮಾಜದ ಸುಧಾರಕರು ಸ್ಫೂರ್ತಿಯುತ ಪ್ರಗತಿಗೆ ಮೊದೆದಾಡುವುದಕ್ಕೆ ಆಧಾರವಾಗುವ ಧಾರ್ಮಿಕ ನೀತಿಗಳೂ ಇವೆ. ಆಗಂತುಕವಾದ ಸಂಕೋಚ–ವೈಷಮ್ಯಗಳನ್ನು ಬಿಟ್ಟು ವಿಕಾಸಾತ್ಮಕ ಸಮತಾವಾದವನ್ನು ಅನುಷ್ಠಾನಕ್ಕೆ ತಂದರೆ ಸನಾತನ ಧರ್ಮಕ್ಕೆ. ಧರ್ಮಶಾಸ್ತ್ರಗಳ ತಾತ್ಪರ್ಯಕ್ಕೆ ವಿರೋಧವಾದಂತೆ ಅಲ್ಲ. ಹಿಂದುವೂ ಮಾನವೀಯತೆಯ ಉಚ್ಚಧ್ಯೇಯವನ್ನು ಸಾಧಿಸಬಹುದು: ಹಾಗೆ ಮಾಡಿದರೆ ನಮ್ಮ ಶಾಸ್ತ್ರಕಾರರ ಅಂತರಂಗ ಬೋಧನೆಯ ಕಾರ್ಯರೂಪ ಅನುಸರಣೆಯೇ ಎಂದು ಸಿದ್ಧಾಂತ.

ಗಾಂಧೀಯುಗದಲ್ಲಿ ಹರಿಜನರ ಸಮಸ್ಯೆ ದೊಡ್ಡದಾಯಿತು. ಅವರಿಗೆ ದೇವಾಲಯಗಳ ಪ್ರವೇಶ ಶಾಸ್ತ್ರ ವಿರುದ್ಧವೇ? ಎಂಬ ಕಟು ಪ್ರಶ್ನೆ ಒದಗಿತು. ಈ ಪ್ರಶ್ನೆಯನ್ನು ಕೂಲಂಕಷವಾಗಿ ಶಾಸ್ತ್ರ ಪ್ರಮಾಣಗಳ ಮೂಲಕ ಪಂಡಿತರತ್ನಂರವರು ಚರ್ಚಿಸಿ 'ಅಸ್ಪೃಶ್ಯತಾ ವಿಚಾರಃ' ಎಂಬ ಪ್ರಬಂಧವನ್ನು ಬರೆದರು. ಇದು ವಿಷ್ಟು ಶಾಸ್ತ್ರೀಯವೋ ಅಷ್ಟೇ ಪುರೋಗಾಮಿಯಾಗಿತ್ತು. ಪ್ರಚಲಿತ ಸಂಪ್ರದಾಯ ಶರಣರಿಗೆ ತೀರ ಅಸಮಾಧಾನವಾಯಿತು. ಆಚಾರ್ಯರು ಧೀರರು. ಆಗಮಶಾಸ್ತ್ರದ ಅಪಾರ ಪಾಂಡಿತ್ಯವನ್ನು

ಉಪಯೋಗಿಸಿಕೊಂಡು, ವೇದಾಂತದೇಶಿಕರು ಉದಾಹರಿಸಿರುವ ಪ್ರಾಚೀನ ಪ್ರಮಾಣವನ್ನು ಅನು ಮೋದಿಸಿದರು.

ವಿಷ್ಣುಸ್ಥಾನ ಸಮೀಪಸ್ಥಾನ್ ವಿಷ್ಣುಸೇವಾರ್ಥಮಾಗತಾನ್।
ಶ್ವಪಚಾನ್ ಪತಿತಾನ್ವಾಪಿ ಸ್ಪೃಷ್ಟ್ವಾನ ಸ್ನಾನಮಾಚರೇತ್।
ಉತ್ಸವೇ ವಾಸುದೇವಸ್ಯ ವಯಃ ಸ್ನಾತಿ ಸ್ಪರ್ಶಶಂಕಯಾ।
ಸ್ವರ್ಗಸ್ಥಾಃ ಪಿತರಸ್ತಸ್ಯ ಪತಂತಿ ನರಕೇ ಕ್ಷಣಾತ್।
(ವರಾಹ ಪುರಾಣ–೪೫–ಅಧ್ಯಾಯ)

೬. ಸಾಧಾರಣವಾಗಿ ವೈದಿಕ ಮಾರ್ಗದಲ್ಲಿ ದರ್ಶನಾಭ್ಯಾಸ ಮಾಡುವ ಪಂಡಿತರಿಗೆ ನಾಸ್ತಿಕ ಪಂಥಗಳ ಪರಿಶ್ರಮ ಕಡಿಮೆ. ಖಂಡನೆಗೋಸ್ಕರ ತಮ್ಮ ಪೂರ್ವಾಚಾರ್ಯರು ಎಷ್ಟು ಸಂಗ್ರಹ ಮಾಡು ವರೋ ಅಷ್ಟು ಮಾತ್ರ ಅನಿವಾರ್ಯವಾಗಿ ತಿಳಿದುಬರುತ್ತದೆ. ಇದು ತೃಪ್ತಿಕರ ಪರಿಸ್ಥಿತಿಯಲ್ಲ. ನಾಸ್ತಿಕ ದರ್ಶನಗಳಲ್ಲಿ. ಅಂದರೆ ಚಾರ್ವಾಕ. ಬೌದ್ಧ ಮತ್ತು ಜೈನ ದರ್ಶನಗಳಲ್ಲಿ ಅನೇಕ ಗುಣಾಂಶಗಳಿವೆ; ಹಾಗೆಯೇ ಅವುಗಳ ವಿಚಾರಸರಣಿಯೂ ಉತ್ತಮ ತಾರ್ಕಿಕ ಮಾರ್ಗವನ್ನು ಅನುಸರಿಸಿದೆ. ಇವುಗಳಲ್ಲಿ ಪರಿಶ್ರಮ ಮತ್ತು ಶಿಕ್ಷಣ ಅಗತ್ಯವೆಂದು ಪಂಡಿತರತ್ನಂರವರು ಮನಗಂಡರು. ಮಾಧವಾಚಾರ್ಯರ 'ಸರ್ವದರ್ಶನ ಸಂಗ್ರಹದಲ್ಲಿ' ಈ ಮತಗಳು ಅತ್ಯಂತ ಪ್ರಾಮಾಣಿಕವಾಗಿ ಮತ್ತು ಸಮಗ್ರವಾಗಿ ಸಂಗ್ರಹೀತವಾಗಿದೆ. ಇವರ ಪರಿಚಯವಾದರೂ ಸಾಮಾನ್ಯರಿಗೆ ಅವಶ್ಯಕವೆಂದು ಶ್ರೀನಿವಾಸಾಚಾರ್ಯರು ಈ ಮೂರು ಅಧ್ಯಾಯಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಉಪಯುಕ್ತವೂ. ಅಗತ್ಯವೂ ಆದ ಟಿಪ್ಪಣಿಗಳನ್ನು ಒದಗಿಸಿ ಪ್ರಕಟಿಸಿದರು. ನಾಸ್ತಿಕ ದರ್ಶನಗಳಲ್ಲಿ, ಅದರಲ್ಲೂ ವಿಶೇಷವಾಗಿ ಬೌದ್ಧ ದರ್ಶನಗಳಲ್ಲಿ, ಆಚಾರ್ಯರಿಗೆ ಪಕ್ಷಪಾತವೋ ಎನ್ನುವಷ್ಟು ಗಾಢ ಪ್ರವೇಶವಿತ್ತು. ಇದು ಅವರ ಬೃಹದ್ಗ್ರಂಥ ಗಳಿಗೆ ಅತ್ಯಂತ ಸಹಾಯಕವಾಯಿತು.

೭. ಇವರು ರಾಮಾನುಜರ ವೈಷ್ಣವ ಪಂಥಕ್ಕೂ ಅಪಾರವಾದ ಸೇವೆಯನ್ನು ಸಲ್ಲಿಸಿದರು. 'ಪ್ರಪತ್ತಿ' ಎನ್ನುವುದು ಈ ಪಂಥದ ವಿಶೇಷ ತತ್ತ್ವ. ಅದನ್ನು ವಿಪುಲವಾಗಿ ವಿವರಿಸಿ ವೇದಾಂತದೇಶಿಕರು ತಮ್ಮ ತಾತ್ತ್ವಿಕ ಜೀವನದ ಕೊನೆಯ ಫಲವೇ ಎಂದು ಹೇಳಬಹುದಾದ 'ಶ್ರೀಮದ್ರಹಸ್ಯಸಾರ' ಎಂಬ ದ್ರಾವಿಡ ಗ್ರಂಥವನ್ನು ಬರೆದಿದ್ದಾರೆ. ಇದು ಪರಬ್ರಹ್ಮನ ಸ್ವರೂಪದಂತೆ ಅಜ್ಞಾನಿಗಳಿಗೂ ಅರ್ಥ ವಾಗುತ್ತದೆ, ಪಂಡಿತೋತ್ತಮರಿಗೂ ಅಭೇದ್ಯವಾದ ವ್ಯೂಹವಾಗಿದೆ. ಇದರಲ್ಲಿ ಇಲ್ಲದ ವಿಷಯವಿಲ್ಲ. ಇರುವದೆಲ್ಲಾ ಸುಂದರ–ಭವ್ಯರೂಪದಲ್ಲಿ ಪ್ರತಿಪಾದಿತವಾಗಿದೆ. ಇದನ್ನು ಪಂಡಿತರತ್ನಂ ಶ್ರೀನಿವಾಸಾ ಚಾರ್ಯರು ಸರಳವಾದ ಸಂಸ್ಕೃತದಲ್ಲಿ ಅನುವಾದ ರೂಪದಲ್ಲಿ ಸಂಗ್ರಹ ಮಾಡಿದ್ದಾರೆ. ಪಂಡಿತರು ಸಾಮಾನ್ಯ ಶಾಸ್ತ್ರವಿಶಾರದರು. ಅನ್ಯದರ್ಶನ ಪೋಷಕರು ಎಂಬ ಅಪಪ್ರಥೆಗೆ ಅವಕಾಶವೇ ಇಲ್ಲ. ಶ್ರೀವೈಷ್ಣವ ಧರ್ಮದ ಮೂಲಸ್ವರೂಪ ಇಲ್ಲಿ ಹೃದಯಂಗಮ ರೀತಿಯಲ್ಲಿ ನಿರೂಪಿತವಾಗಿದೆ.

೮. ವಿಶಿಷ್ಟಾದ್ವೈತದಲ್ಲೆಲ್ಲಾ ಅತ್ಯಂತ ಮೂಲಭೂತರಾದ ಆಚಾರ್ಯರು ರಾಮಾನುಜಾಚಾರ್ಯರು. ಅವರ ಗ್ರಂಥಗಳಲ್ಲೆಲ್ಲಾ ಮಕುಟಪ್ರಾಯವಾದದ್ದು ಶ್ರೀಭಾಷ್ಯ. ದರ್ಶನ ನಿಂತಿರುವುದು ಇದರ ಮೇಲೆ. ಇದು ಬ್ರಹ್ಮಸೂತ್ರಗಳ ಮೇಲೆ ಆಚಾರ್ಯರು ಬರೆದ ವಿಸ್ತಾರವಾದ ವಿವರಣ. ಇದರಲ್ಲಿ ಮೊದಲಿನ ನಾಲ್ಕು ಸೂತ್ರಗಳ ಮೇಲಿನ ಭಾಷ್ಯಕ್ಕೆ ವಿಶೇಷ ಮಹತ್ತ್ವವನ್ನು ಕೊಡಲಾಗಿದೆ. ಈ ಚತುಸ್ಸೂತ್ರೀ ಭಾಗದಲ್ಲಿ ವಿಶಿಷ್ಟಾದ್ವೈತದ ಪ್ರಧಾನ ತತ್ತ್ವಗಳೆಲ್ಲಾ ವಿಚಾರಪೂರ್ವಕವಾಗಿ ಸ್ಥಾಪಿಸಲ್ಪಟ್ಟಿವೆ. ಈ ಕೇಂದ್ರ ಗ್ರಂಥದ. ಕೇಂದ್ರಭಾಗಕ್ಕೆ ಪಂಡಿತರತ್ನಂ ಶ್ರೀನಿವಾಸಾಚಾರ್ಯರು 'ಶ್ರೀಭಾಷ್ಯ ಭೂಷಣಂ' ಎಂಬ ಹೆಸರಿನಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಶ್ರೀಭಾಷ್ಯಕ್ಕೆ ಶ್ರುತಪ್ರಕಾಶಿಕೆ ಮತ್ತು ತತ್ತ್ವಟೀಕೆ ಎಂಬ ಪ್ರಮಾಣತಮವಾದ ಹಿಂದಿನ ವ್ಯಾಖ್ಯಾನಗಳಿದ್ದುವು. ಅವುಗಳ ಸಾರವನ್ನು ಸಂಗ್ರಹಮಾಡಲಾಗಿದೆ. ಹಾಗೆಯೇ ಹೊಸ ಆಕ್ಷೇಪಗಳಿಗೆ ಸಮಾಧಾನ ಹೇಳಲಾಗಿದೆ. ತಮ್ಮ ಅದ್ವಿತೀಯ ದರ್ಶನಾಂತರ ಜ್ಞಾನವನ್ನು ಉಪಯೋಗಿಸಿಕೊಂಡು. ಶ್ರೀಭಾಷ್ಯದ ವೈಶಾಲ್ಯವನ್ನು ಪಂಡಿತರತ್ನಂರವರು ಪ್ರಕಾಶ

ಪಡಿಸಿದ್ದಾರೆ. ಇದು ಶ್ರೀಭಾಷ್ಯದ ಸಿದ್ಧಾಂತಕ್ಕೆ ಮಾಡಿದ ಶಾಶ್ವತವಾದ ಸೇವೆ. ಯಥಾರ್ಥವಾಗಿ ಭೂಷಣ.

೯. ಸರ್ವದರ್ಶನಗಳ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇವರು ಮೂರು ಗ್ರಂಥಗಳನ್ನು ಬರೆದರು. ಮೊದಲನೆಯದು ಪದ್ಯರೂಪವಾದ ಆರು ನೂರಕ್ಕೂ ಹೆಚ್ಚಿನ ಪುಟಗಳುಳ್ಳ 'ಮಾನಮೇಯ ರಹಸ್ಯ ಶ್ಲೋಕವಾರ್ತಿಕ'. ಇದರ ಉದ್ದೇಶ ಸರ್ವದರ್ಶನಗಳ ತಾತ್ತ್ವಿಕ ಆಲೋಚನೆಗಳ ಸಮಗ್ರ ನಿರೂಪಣೆ. ಹಿಂದೆ ಬಂದ ಯಾವ ಸರ್ವದರ್ಶನ ಸಮೀಕ್ಷೆಯೂ ಇದಕ್ಕೆ ಹೋಲಲಾರದು. ಭಾರತೀಯ ದರ್ಶನ ಪ್ರಪಂಚವನ್ನೆಲ್ಲಾ ವಿಚಿತ್ರವಾಗಿ ಪ್ರತಿಬಿಂಬಿಸುವ ಕನ್ನಡಿ. ಇದರಲ್ಲಿ ಯಾವ ಅಭಿನಿವೇಶವೂ ಇಲ್ಲದೆ ಸಾಮಂಜಸ್ಯ ಮತ್ತು ಪೂರ್ಣತೆಗೆ ಪ್ರಾಧಾನ್ಯ ಕೊಡುವ ನಿರೂಪಣೆ ಇದೆ. ಇದರ ವಸ್ತು ವಿನ್ಯಾಸವನ್ನು ತಿಳಿದರೆ ಗ್ರಂಥಶರೀರವನ್ನು ಅರಿಯಲು ನೆರವಾಗುತ್ತದೆ. ಮೊದಲಿನಲ್ಲಿ ಎಲ್ಲ ದರ್ಶನಗಳ ಸ್ಥೂಲ ಸಂಗ್ರಹ ಮಾಡಲಾಗಿದೆ. ಇದೇ ಒಂದು ಸ್ವತಂತ್ರ ಗ್ರಂಥವಾಗಿ ಪ್ರಕಟವಾಗಬಹುದಾಗಿತ್ತು. ದರ್ಶನಗಳಲ್ಲಿ ಬರುವ ಮುಖ್ಯ ವಿಭಾಗಗಳೆಂದರೆ ಪ್ರಮಾಣ, ತತ್ತ್ವ, ಪುರುಷಾರ್ಥ ಮತ್ತು ಸಾಧನ. ಇವುಗಳನ್ನು ಕುರಿತ ವಿಮರ್ಶಾತ್ಮಕ ಪ್ರತಿಪಾದನೆ. ಮುಂದೆ ಕ್ರಮವಾಗಿ ಈ ವಿಷಯಗಳ ಮೇಲೆ ಎಲ್ಲ ದರ್ಶನಗಳ ಅಭಿಪ್ರಾಯಗಳನ್ನು ಮತ್ತು ವಾದಗಳನ್ನು ಕ್ರೋಢೀಕರಿಸಲಾಗಿದೆ. ಇಲ್ಲಿ ಆಯಾ ದರ್ಶನಗಳ ಮೂಲ ಸ್ಥಾಪಕರ ಮಾತನ್ನೇ ಸಾಧ್ಯವಾದಷ್ಟು ಬಳಸಲಾಗಿದೆ. ಅವರವರ ಪ್ರಮಾಣ ವಾಕ್ಯಗಳನ್ನು ಸ್ಪಷ್ಟವಾಗಿ ನಮೂದಿಸಿ ಆಕರಗಳನ್ನು ಸೂಚಿಸಲಾಗಿದೆ. ಸರ್ವದರ್ಶನಗಳಲ್ಲಿನ ಮುಂದಿನ ಸಂಶೋಧನೆಗಳಿಗೂ ಇಲ್ಲಿ ಚೌಕಟ್ಟನ್ನು ಕಲ್ಪಿಸಲಾಗಿದೆ. ಇದು ಅಪೂರ್ವ ಸೃಷ್ಟಿ. ಪದ್ಯಗಳ ಲಲಿತ ಪ್ರವಾಹ ಆಶ್ಚರ್ಯಕಾರಕವಾಗಿದೆ. ಇದರ ಪ್ರಭಾವವನ್ನು, ಇದು ಸಾಧಿಸುವ ತತ್ತ್ವ ನಿಷ್ಕರ್ಷವನ್ನು ಇಂದಿಗೂ ಹಳೆಯ ಕಾಲದ ಪಂಡಿತರಾಗಲಿ, ಆಧುನಿಕ ಸಂಶೋಧಕರಾಗಲಿ ಸರಿಯಾಗಿ ಅರ್ಥಮಾಡಿಕೊಂಡಿಲ್ಲ.

೧೦. ದರ್ಶನಗಳು ವಿಚಿತ್ರವಾಗಿ ರೂಪಪರ್ಯವಸಾನವನ್ನು ಹೊಂದಿದ ಮೇಲೆ ಅವುಗಳ ಸ್ವರೂಪ ನಿರೂಪಣೆ ಮಾಡುವ ಗ್ರಂಥ 'ಮಾನಮೇಯ ರಹಸ್ಯ ಶ್ಲೋಕವಾರ್ತಿಕ'. ಅವುಗಳ ಉಗಮ ಹೇಗೆ, ಹೇಗೆ ಬೆಳೆದುವು, ಬೇರೆ ಬೇರೆ ವಾದಗಳನ್ನು ಕ್ರಮೇಣ ಯಾವ ಕಾರಣದಿಂದ ಹೇಗೆ ಬೆಳೆಸಿದುವು ಎನ್ನುವುದು ಅದರಲ್ಲಿ ಸ್ಪಷ್ಟವಾಗುವುದಿಲ್ಲ. ಅವುಗಳ ಪರಸ್ಪರ ಘರ್ಷಣೆಗಳೂ, ಘರ್ಷಣೆಗಳ ಫಲಿತಾಂಶಗಳೂ ಅರಿವಾಗುವುದಿಲ್ಲ. ಈ ದರ್ಶನಗಳ ಉದಯ ಮತ್ತು ವೃದ್ಧಿಯನ್ನು ಚಿತ್ರಿಸುವ ಗ್ರಂಥ 'ದರ್ಶನೋದಯ.' ಇದು ಗದ್ಯ ಗ್ರಂಥ. ಇದರ ರಚನೆಯಾಗುತ್ತಿರುವಾಗಲೇ ಪ್ರಕೃತ ಲೇಖಕನಿಗೆ ಆಚಾರ್ಯರ ಸಂಪರ್ಕ ಭಾಗ್ಯ ಒದಗಿದ್ದು. ದರ್ಶನಗಳ ಸಾಮಾನ್ಯವಾದ ಆಸಕ್ತಿ ಮಾನವನ ಕಲ್ಯಾಣದಲ್ಲಿ ಅವನ ಶಾಂತ್ಯಾದಿ ಆತ್ಮಗುಣಗಳ ಪ್ರಬೋಧ ಮತ್ತು ಪುಷ್ಟಿಯಲ್ಲಿ. ಮಹಾಭಾರತ 'ಶಮಾರ್ಥಂ ಸರ್ವಶಾಸ್ತ್ರಾಣಿ' ಎನ್ನುವುದು ಅಕ್ಷರಶಃ ಸತ್ಯ. ದರ್ಶನಗಳ ವೈಲಕ್ಷಣ್ಯ ಮತ್ತು ವಿಭಿನ್ನತೆಯಿಂದ ಈ ಧಾರ್ಮಿಕ ಸಾಮರಸ್ಯ ಚ್ಯುತಿಯಾಗುವುದಿಲ್ಲ, ಆಗಬಾರದು. ಈ ಮಂಗಳಕಾರಕ ತಳಹದಿಯ ಮೇಲೆ ವಿಚಾರ ಪಂಥಗಳು ಬೆಳೆದುವು. ಈ ಬೆಳವಣಿಗೆ ಆಚಾರ್ಯರ ದೃಷ್ಟಿಯಲ್ಲಿ ಒಂದು ಕ್ರಮವನ್ನು ಅನುಸರಿಸಿದೆ. ಪ್ರಥಮ ದಾರ್ಶನಿಕರು ಸಾಂಖ್ಯರು ಮತ್ತು ಬೌದ್ಧರು. ಇವರ ಪಕ್ಷಗಳು ಪರಸ್ಪರವಾಗಿ ಎಲ್ಲ ಪ್ರಮೇಯಗಳಲ್ಲೂ ಅತ್ಯಂತ ವಿರುದ್ಧ. ಈ ಘರ್ಷಣೆಯಲ್ಲೇ ಅವು ವಿಕಾಸವನ್ನು ಹೊಂದಿದುವು. ಈ ಪರಸ್ಪರ ವಿಪರೀತ ಪಂಥಗಳ ಪರಿಗ್ರಾಹ್ಯಾಂಶಗಳನ್ನು ಅಂತರ್ಗತ ಮಾಡಿಕೊಂಡು ಸಂಕುಚಿತ ಭಾವಗಳನ್ನು ಬಿಟ್ಟು ಮಿಕ್ಕೆಲ್ಲಾ ದರ್ಶನಗಳು ತಮ್ಮ ತಮ್ಮ ವಿಶಿಷ್ಟ ರೀತಿಯಲ್ಲಿ ಮಧ್ಯಸ್ಥ ದೃಷ್ಟಿಗಳನ್ನು ರೂಪಿಸಿಕೊಂಡವು. ಇದು ದರ್ಶನೋದಯದ ವ್ಯಾಪಕವಾದ ಸೂತ್ರ. ಇದು ಗ್ರಹೀತವಾದೊಡನೆ ಎಲ್ಲ ದರ್ಶನಗಳೂ ತಮ್ಮ ತಮ್ಮ ಸಹಜ ಸ್ಥಾನದಲ್ಲಿ ಬೆಳಗುತ್ತದೆ. ಸಂಕುಚಿತ ಪಕ್ಷಗಳ ಉಗ್ರ ವೈಪರೀತ್ಯವನ್ನು ತ್ಯಜಿಸಿ ಅವುಗಳನ್ನು ವಿಶಾಲ ತಳಹದಿಯ ಮೇಲೆ ಸಮನ್ವಯಗೊಳಿಸುವುದು ದರ್ಶನ ಪ್ರಜ್ಞೆಯ ಪ್ರಗತಿಯ ಮಾರ್ಗವೆಂದು ಆಚಾರ್ಯರು ಹೊಸದೃಷ್ಟಿಯನ್ನು ಮುಂದಿಟ್ಟರು. ಈ ಪ್ರಸಂಗದಲ್ಲಿ 'ಕಾರ್ಯಕಾರಣಭಾವ' ಮತ್ತು 'ಅಭಾವ' ಇವುಗಳ ಆಳವಾದ ಪರಿಶೀಲನೆ ಮಾಡಲಾಗಿದೆ. (ಅದ್ವೈತದ ಪ್ರಧಾನ ತತ್ತ್ವಗಳನ್ನು ಬೆಳವಣಿಗೆ ದೃಷ್ಟಿಯಿಂದ ನಿರೂಪಿಸಲಾಗಿದೆ.) ಉದಾಹರಣೆಗೆ, 'ವಿವರ್ತ', 'ಅಧ್ಯಾಸ,'

'ಮಾಯೆ', ಮತ್ತು 'ಅನಿರ್ವಚನೀಯ' ಈ ಕಲ್ಪನೆಗಳ ಮಾರ್ಮಿಕ ವಿಶ್ಲೇಷಣೆ ನಡೆದಿದೆ. ಅದ್ವೈತದಲ್ಲಿ ಬೌದ್ಧಮತದ ಸಾಂಕರ್ಯವಿದೆ ಎಂದು ಬಹಳ ಕಾಲದಿಂದಲೂ ಆರೋಪಣೆ ಇದೆ. ಇದನ್ನು ಪ್ರಬಲ ಪ್ರಮಾಣಗಳ ಆಧಾರದ ಮೇಲೆ ನಿರಾಕರಣೆ ಮಾಡಲಾಗಿದೆ. ಹಾಗೆಯೇ ಶಂಕರಾಚಾರ್ಯರು ಭಾಗವತ ಧರ್ಮಕ್ಕೆ ಹೊರಗಾದವರು ಎಂಬುವ ತಪ್ಪು ಅಭಿಪ್ರಾಯವನ್ನು ತೆಗೆದು ಹಾಕಿ ಅವರಲ್ಲಿರುವ ಭಾಗವತಾಂಶಗಳನ್ನು ಸ್ಫುಟವಾಗಿ ನಿರ್ದೇಶಿಸಲಾಗಿದೆ. ಈಚಿನ ಬೌದ್ಧ ಸಿದ್ಧಾಂತದ ಪ್ರತಿಪಾದನೆಯಲ್ಲಿ 'ಶೂನ್ಯ'ವೆಂದರೆ 'ಅಭಾವ'ವಲ್ಲ; ಅದೂ ಕಲ್ಪನೆ ಮತ್ತು ಅನುಭವಕ್ಕೆ ಮೀರಿದ ಭಾವರೂಪ ವಸ್ತುವೇ ಎನ್ನುವ ವಾದ ತಲೆದೋರಿದೆ. ಇದು ಬೌದ್ಧ ಸಿದ್ಧಾಂತದ ಸಂಕುಚಿತ ಅಧ್ಯಯನದಿಂದ ಬಂದ ಭ್ರಾಂತಿ ಎಂದು ಆಚಾರ್ಯರು ಪ್ರಮಾಣ ಪುರಸ್ಸರವಾಗಿ ವಾದಿಸಿದ್ದಾರೆ. ಪೂರ್ವ ಮೀಮಾಂಸೆ 'ನಿರೀಶ್ವರ' ವಾದವಲ್ಲ; ಅದು ಸೇಶ್ವರವಾದದಲ್ಲಿ ಪರ್ಯವಸಾನವಾಗುತ್ತದೆಂದು ತೋರಿಸುತ್ತಾರೆ. ಶೈವದರ್ಶನದ ಸಮಗ್ರ ನಿರೂಪಣೆ ಇದೆ; ಅದರ ವ್ಯಾಪ್ತಿ ಮತ್ತು ವೈಶಿಷ್ಟ್ಯಗಳನ್ನು ಚಿತ್ರಿತೋರಿಸಲಾಗಿದೆ. ಆಗಮಗಳ ಮೂಲ ಭಾವಗಳನ್ನು ಸುಂದರವಾಗಿ ಚಿತ್ರಿಸಲಾಗಿದೆ. ಹೀಗೆ ಸರ್ವತೋಮುಖವಾಗಿ, ಉದಯ ಮತ್ತು ಅಭಿವೃದ್ಧಿ ದೃಷ್ಟಿಕೋಣವನ್ನು ಅವಲಂಬಿಸಿ ದರ್ಶನಗಳ ಅಂತರಂಗವನ್ನು ಪ್ರಕಾಶಪಡಿಸಲಾಗಿದೆ. ಇದು ಅಪೂರ್ವವಾದ ಸಂಶೋಧನೆಯ ವಿಪಾಕ. ಈ ಗ್ರಂಥವನ್ನು ಅಭಿನಂದನಾತ್ಮಕವಾದ ರಾಧಾ ಕೃಷ್ಣನ್‌ರವರ ಮುನ್ನುಡಿಯೊಡನೆ ೧೯೬೬ರಲ್ಲಿ ಪ್ರಕಟಿಸಲಾಯಿತು. ಇದರಲ್ಲಿ ಹತ್ತು ಪ್ರಕರಣಗಳಿವೆ ಮತ್ತು ಪುಟ ಸಂಖ್ಯೆ ೫೨೨. ಗ್ರಂಥದ ಉಪಯೋಗವನ್ನು ಚೂರುಚೂರಾಗಿ ಅಲ್ಲೊಬ್ಬರು, ಇಲ್ಲೊಬ್ಬರು, ಪೊಂದಿರಬಹುದು. ಇದರ ಗಹನ ವಿಚಾರಕ್ಕೆ ಪೂರ್ಣ ಪ್ರವೇಶ ಮಾಡಿದ ವಿದ್ವಾಂಸರು ಇಲ್ಲವೆಂದೇ ಹೇಳಬೇಕಾಗಿದೆ.

೧೧. ಪಂಡಿತರತ್ನಂ ಶ್ರೀನಿವಾಸಾಚಾರ್ಯರ ಕನ್ನಡ ಸಂಸ್ಕೃತ ಪಂಡಿತರ ಕನ್ನಡ. ಶೈಲಿಯಲ್ಲಿ ಶಾಸ್ತ್ರೀಯ ಪರಿಭಾಷೆಯ ಬಳಕೆ ಅಧಿಕ. ವಾಕ್ಯಗಳೂ ಸಂಸ್ಕೃತ ವಾಕ್ಯಗಳ ಅನುವಾದದಂತಿವೆ. ಆದರೂ 'ಮೀಮಾಂಸಾ ರಹಸ್ಯ ಶ್ಲೋಕವಾರ್ತಿಕ' ಮತ್ತು 'ದರ್ಶನೋದಯ' ಇವುಗಳಲ್ಲಿ ಸಾಧಿಸಿದ ವಿಸ್ತಾರವಾದ ದರ್ಶನಗಳ ನಿರೂಪಣೆಯನ್ನು ಸಂಕ್ಷೇಪವಾಗಿ–ಕನ್ನಡದಲ್ಲಿ ಮೈಸೂರು ವಿಶ್ವವಿದ್ಯಾಲಯ ಪ್ರೊ. ಬಿ.ಎಂ. ಶ್ರೀಕಂಠಯ್ಯನವರ ನೇತೃತ್ವದಲ್ಲಿ ಪ್ರಕಟಿಸಿದ ಗ್ರಂಥಮಾಲೆಯಲ್ಲಿ–. 'ಹಿಂದೂದರ್ಶನಸಾರ'ವೆಂಬ ಹೆಸರಿನ ಗ್ರಂಥದಲ್ಲಿ ಕೊಡಲಾಗಿದೆ. ಸಂಕ್ಷಿಪ್ತವಾಗಿದ್ದಂತೆ ಇದು ತೀರ ಸಾರಭೂತವಾದ ದರ್ಶನ ಚರಿತ್ರೆ. ಇದರ ಪ್ರಕಟಣೆ ೧೯೪೦ರಲ್ಲಿ. ಗ್ರಂಥಕರ್ತೃಗಳು ಅಷ್ಟರಲ್ಲಿ ಕಣ್ಮರೆಯಾಗಿದ್ದರು. ಅದರ ಪರಿಷ್ಕರಣ ಅದಕ್ಕೆ ಸಿಕ್ಕಲಿಲ್ಲ. ಆದರೂ ಅವರ ವಿಚಾರ ವೈಶಿಷ್ಟ್ಯ ಮತ್ತು ವಸ್ತು ಬಾಹುಳ್ಯವನ್ನು ಇದರಲ್ಲೂ ಕಾಣಬಹುದು. ಸಂಶೋಧಕರಿಗೆ ಮಾರ್ಗದರ್ಶನ ಮಾಡುವ ಆಕರ ಗ್ರಂಥ ಇದು. ಇದನ್ನು ಸುಲಭ ಶೈಲಿ, ವಸ್ತುಸಾಂಪ್ರತೆಯನ್ನು ಕಡಿಮೆ ಮಾಡಿದರೆ ಇದೂ ದರ್ಶನಾಧ್ಯಾಪಕರ ಕೈಪಿಡಿಯಾಗಬಹುದು.

ಇವು ಪಂಡಿತರ ಕೆಲವು ಪ್ರಧಾನವಾದ ಗ್ರಂಥಗಳು. ಈ ಪರಿಚಯ ಅವರು ಮಾಡಿದ ವಿಚಾರ ದಾನದ ಹೊರ ಎಲ್ಲೆಯನ್ನು ರೇಖಿಸುತ್ತದೆ. ಅದರ ಆಳವನ್ನು ಅಧ್ಯಯನದಿಂದ ಅರಿಯಬೇಕು.

೬

ವಿಶಾಲ ಪಾಂಡಿತ್ಯ, ಅದರಿಂದ ಕುಂಠಿತವಾಗದ ಸ್ವತಂತ್ರ ಪ್ರಜ್ಞೆ, ತತ್ತ್ವನಿಷ್ಠೆ, ಪಾಕ್ಷಿಕ ಅಭಿನಿವೇಶವಿಲ್ಲದ ದೃಷ್ಟಿವಿಕಾಸ, ಸರ್ವ ಪಂಥಗಳಲ್ಲೂ ಗುಣಾಂಶವನ್ನು ಗ್ರಹಿಸುವ ಬೌದ್ಧಿಕ ಔದಾರ್ಯ, ಬಹುಮುಖವಾದ ವಿಚಾರಸರಣಿಯನ್ನು ಸಮನ್ವಯಗೊಳಿಸುವ ದರ್ಶನಸಾಮರ್ಥ್ಯ, ಸಂಕೋಚ ಮತ್ತು ದೌರ್ಬಲ್ಯವಿಲ್ಲದ ಆತ್ಮಬುದ್ಧಿ ಪ್ರಕಾಶ, ಮೃದು ಮಧುರವಾದ ಹೃದಯ, ಅನುಗ್ರಹಪೂರ್ಣವಾದ ನಡೆ–ನುಡಿ, ಅಹಂಕಾರ ದುರಾಸೆಗಳಿಂದ ಬಂಧಿತವಲ್ಲದ ಶುದ್ಧ ಜೀವನ, ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರದು. ಇವರು ಸುಮಾರು ಅರ್ಧ ಶತಮಾನ ಸಂಸ್ಕೃತ ವಿದ್ಯೆ ಮತ್ತು ದರ್ಶನ ಪ್ರಪಂಚದಲ್ಲಿ ತಮ್ಮ ತೇಜಸ್ಸನ್ನು ಬೆಳಗಿಸಿದರು. ಗಂಭೀರವೂ, ವಿಶಾಲವೂ ಆದ ಧಾರಕ, ಪೋಷಕ ಮತ್ತು ಭೋಗ್ಯ ಕೃತಿರತ್ನಗಳನ್ನು ಅವರು ಸರಸ್ವತಿಯಲ್ಲಿ ಬಿಟ್ಟುಹೋಗಿದ್ದಾರೆ. ಅವುಗಳ ಸ್ಪರ್ಶಕ್ಕೆ ಬೇಕಾದ ಎತ್ತರಕ್ಕೆ ನಾವು ಏರಬೇಕು. ಅದು ನಮ್ಮ ಉತ್ಥಾನಕ್ಕೆ ನೆರವಾಗಬಲ್ಲುದು.

ಸಾಮರಸ್ಯ

ಎಲ್ಲ ದರ್ಶನಕಾರರೂ ತಮ್ಮ ತಮ್ಮ ಸಿದ್ಧಾಂತವೇ ತತ್ತ್ವವಾದುದು. ಯಥಾರ್ಥವಾದುದು. ಕಲ್ಪಿತವಲ್ಲದಿರುವುದು ಎಂದು ವಿಶ್ವಾಸವಿಟ್ಟಿರುವರು. ಮಧ್ಯಸ್ಥವಾದ ದೃಷ್ಟಿಯಲ್ಲಿ ಪರಸ್ಪರ ವಿರುದ್ಧವಾದ ಸಕಲ ಸಿದ್ಧಾಂತಗಳೂ ಹೇಗೆ ಸಮರಸಗಳಾಗುವುವು? ಎಂದು ಆಕ್ಷೇಪವಿರುತ್ತದೆ. ಇದಕ್ಕೆ ಶಾಸ್ತ್ರಕಾರರು ಕೆಲವರು ಸರ್ವವಸ್ತುಗಳಿಗೂ ಸರ್ವಸ್ವಭಾವವನ್ನು ಅಂಗೀಕರಿಸಿ ವಿರೋಧ ಪರಿಹಾರ ಮಾಡಿರುವರು. ಇದಕ್ಕೆ ಅನೇಕಾಂತವಾದವೆಂದು ಹೆಸರು. ಏಕಾಂತವೆಂದರೆ ಒಂದೇ ಸ್ವಭಾವವು. ಅನೇಕಾಂತವೆಂದರೆ ನಾನಾ ಸ್ವಭಾವವು. ಇದೇ ಸಾರ್ವಾತ್ಮ್ಯವಾದವು.

ಕೆಲವರು ಸಕಲ ವಸ್ತುಗಳೂ. ಅವುಗಳ ಸ್ವಭಾವಗಳೂ ಪರಮಾರ್ಥಗಳಲ್ಲ. ವಸ್ತುವೆಂಬುದೇ ಇಲ್ಲದಿರುವುದರಿಂದ ವಿರೋಧವಿಲ್ಲ ಎಂದು ಹೇಳುವರು. ಇದಕ್ಕೆ ನೈರಾತ್ಮ್ಯವಾದವೆಂದೂ ಶೂನ್ಯವಾದವೆಂದೂ ಹೆಸರು.

ಕೆಲವರ ತಾತ್ಪರ್ಯವಿದು–ಪ್ರತ್ಯಕ್ಷ ಗೋಚರವಾದ ಮಹಾವೃಕ್ಷ. ಮಹಾಪರ್ವತ ಮೊದಲಾದುವು ಒಂದೊಂದು ದಿಕ್ಕಿನಲ್ಲಿ ನೋಡಿದರೆ ಒಂದೊಂದು ರೀತಿಯಿಂದ ಕಾಣುತ್ತಿರುವಲ್ಲಿ. ಅತ್ಯಂತ ಪರೋಕ್ಷವಾದ ಮತ್ತು ಉಪದೇಶದಿಂದಲೇ ತಿಳಿಯತಕ್ಕುದಾದ ಪ್ರಪಂಚಮೂಲಕಾರಣ ತತ್ತ್ವದಲ್ಲಿ ದೃಷ್ಟಿಭೇದದಿಂದಲೂ ಕಾಲದೇಶಭೇದಗಳಿಂದಲೂ ಮತಭೇದಗಳು. ಅಭಿಪ್ರಾಯಭೇದಗಳು ಏತಕ್ಕೆ ಉದಯಿಸಲಾರವು? ಸಾಮರಸ್ಯವು ಏತಕ್ಕೆ ಬರಲಾರವು? ಇದಕ್ಕೆ ಅಂಧಗಜಪರೀಕ್ಷಾವೃತ್ತಾಂತವೇ ನಿದರ್ಶನವಾಗುವುದು. ಅದೆಂತೆಂದರೆ–ನಾಲ್ಕು ಕುರುಡರು ಆನೆಯನ್ನು ತಿಳಿಯಬೇಕೆಂಬ ಅಪೇಕ್ಷೆಯಿಂದ ಒಬ್ಬ ಪುರುಷನ ಸಹಾಯದಿಂದ ಗಜವನ್ನು ಮುಟ್ಟಿ ನೋಡಿದರು. ಅವರಲ್ಲಿ ಕಾಲನ್ನು ಮುಟ್ಟಿ ನೋಡಿದವನು ಆನೆ ಕಂಭದಂತಿರುವುದೆಂದು ತಿಳಿದನು. ಬಾಲವನ್ನು ಮುಟ್ಟಿದವನು ಕಸಪೊರಕೆಯಂತೆ ಗಜವಿರುವುದೆಂದು ತಿಳಿದನು. ಹೀಗೆ ಕಿವಿಯನ್ನು ಮುಟ್ಟಿದವನು ಮೊರದಂತೆ ಗಜಸ್ವರೂಪವನ್ನೂ. ದಂತವನ್ನು ಮುಟ್ಟಿದವನು ಕಬ್ಬಿನಂತೆ ಗಜಸ್ವರೂಪವನ್ನೂ ತಿಳಿದರು. ಇವರಲ್ಲಿ ಎಲ್ಲವೂ ತಪ್ಪು. ಎಲ್ಲವೂ ಸತ್ಯವು. ಎಂದರೆ ಯಾವುದೂ ಸಮಗ್ರವಲ್ಲ. ಏಕದೇಶವೆಂದು ತಾತ್ಪರ್ಯವು ಆಗುತ್ತದೆ. ಅದರಂತೆ ತತ್ತ್ವವಿಚಾರವೂ ಇರಬಹುದು: ಪರಸ್ಪರ ಅಭಿಪ್ರಾಯಭೇದಗಳೂ ಇರಬಹುದು ಎಂದು ಕೆಲವರ ಸಿದ್ಧಾಂತವು.

ಇದರಿಂದ ಸಾರ್ವಾತ್ಮ್ಯ, ನೈರಾತ್ಮ್ಯ, ಏಕದೇಶ ಎಂದು ಮೂರು ಮಾರ್ಗಗಳು ಸಾಮರಸ್ಯೋಪಾಯಗಳೆಂದು ಅಭಿಪ್ರಾಯವಾಗುವುದು.

ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರ
'ಹಿಂದೂದರ್ಶನಸಾರ' ದಿಂದ

ಕೆ. ಬಿ. ರಾಮಕೃಷ್ಣರಾವ್

ಭಾರತೀಯ ತತ್ತ್ವ

(ಹಿಂದಿನ ದರ್ಶನ–ಇಂದಿನ ಪ್ರಶ್ನೆ)

1

ಅಧ್ಯಾತ್ಮಿಕತೆಯ ತವರೂರು ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಭಾರತದೇಶ ಪ್ರಚಲಿತ ಪ್ರಪಂಚದ ದೃಷ್ಟಿಯಿಂದ ಯಾವ ಹಿರಿಮೆಯನ್ನು ಉಳಿಸಿಕೊಂಡಿದೆ ಎನ್ನುವ ಪ್ರಶ್ನೆ ಅಭಿಮಾನಿಗಳನ್ನು ಕೆಣಕದೆ ಇರದು. ಈ ಪ್ರಶ್ನೆ ಪರಕೀಯರು ಕೇಳುವ ಪ್ರಶ್ನೆಯಾಗಿರದೆ ಭಾರತೀಯರೇ ಕೇಳುವಂತಹುದಾಗಿದೆ. ಆಧುನಿಕ ದೃಷ್ಟಿಯಿಂದ ನೋಡಿದರೆ ಭಾರತವು ಪ್ರಪಂಚದ ವೈಜ್ಞಾನಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪ್ರಭಾವಗಳಿಗೆ ಒಳಗಾಗಿ ತನ್ನ ಭೌಗೋಳಿಕ ಪ್ರತ್ಯೇಕತೆಯನ್ನು ಎಂದೋ ಕಳೆದುಕೊಂಡದ್ದು ಸಹಜವಾಗಿಯೇ ಇದೆ. ಭಾರತೀಯನ ಜೀವನದ ಮೇಲೆ ಸ್ವದೇಶಿಯ ಪರಿಣಾಮ ಒಂದೇ ಅಲ್ಲದೆ, ವಿದೇಶೀಯ ಪರಿಣಾಮಗಳೂ ಬಿದ್ದು ಆತನ ವಿಚಾರಕ್ರಮ, ಆಚಾರ–ವ್ಯವಹಾರಗಳೂ ಬದಲಾಗಿವೆ. ಪ್ರಾಚೀನವಾದ ಸಂಪ್ರದಾಯಬದ್ಧ ನಿಯಮ ಒಂದು ಕಡೆಯಿಂದ ಆತನನ್ನು ಬೆಳೆಸಿಕೊಂಡು ಬಂದಿದೆಯಾದರೂ ಬದಲಾದ ವಾತಾವರಣದಲ್ಲಿ ಎಷ್ಟೇ ಸತ್ಯನಿಷ್ಠವಾದರೂ ಆ ಸಂಪ್ರದಾಯದ ಔಚಿತ್ಯ, ಮೌಲ್ಯ ಎಷ್ಟರದು ಎನ್ನುವ ಮಾತುಗಳು ಕೇಳಿಬರುತ್ತಿವೆ. ರೂಢಮೂಲವಾದ ಧಾರ್ಮಿಕ ವ್ಯವಹಾರ ಆಧ್ಯಾತ್ಮಿಕ ತತ್ತ್ವಕ್ಕೂ, ಅನೇಕ ರೀತಿಯಲ್ಲಿ ಪರಿಣಾಮ ಹೊಂದಿದ ಆಧುನಿಕ ವಿಚಾರ ಮತ್ತು ಜೀವನಕ್ಕೂ ಹೊಂದಾಣಿಕೆ ಹೇಗೆ? ಕಾಲದ ಓಟಕ್ಕೆ ಸರಿಯಾಗಿ ಆಚಾರ ವ್ಯವಹಾರಗಳೂ ವ್ಯತ್ಯಾಸಗೊಳ್ಳುವಂತೆ ಧಾರ್ಮಿಕ ಮನೋಭಾವ ಮತ್ತು ಧರ್ಮದ ಅನ್ವಯವೂ ವ್ಯತ್ಯಾಸಗೊಳ್ಳಬೇಡವೇ? ಕರಟಿಹೋದ ಧರ್ಮಶ್ರದ್ಧೆಯು ದೇಶದ, ಜನರ ಪ್ರಗತಿಗೆ ಅಡ್ಡಿಯಲ್ಲವೆ?–ಎನ್ನುವ ಅನೇಕ ಪ್ರಶ್ನೆಗಳು ಈ ದಿನ ಕೇಳಿಬರುತ್ತಿವೆ.

ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿ ಮಾನವಕುಲದ ವರ್ಗವಿಶೇಷತೆಯನ್ನು ಅಲುಗಾಡಿಸಿದೆ. ಆರ್ಥಿಕ ಅಭಿವೃದ್ಧಿ ಮತ್ತು ಔದ್ಯೋಗೀಕರಣಗಳು ಜೀವನ ಸೌಲಭ್ಯ ದೃಷ್ಟಿಯಿಂದ ಜನತೆಯ ಏರುಪೇರುಗಳನ್ನು ತೊಡೆದುಹಾಕಿವೆ. ರಾಜಕೀಯ ಮತ್ತು ಸಾಮಾಜಿಕ ವಿಚಾರಮಂಥನ ಮಾನವನ ಸಮಾನತೆಯನ್ನು ಸಾಧಿಸಹೊರಟಿದೆ. ಗಾತ್ರದಲ್ಲಿ 'ಕುಸಿದ' ಈ ಭೂಗ್ರಹದಲ್ಲಿ ಯಾವ ಭೂಖಂಡದ ಪ್ರತ್ಯೇಕತೆಯಾಗಲೀ ಇಲ್ಲವೆಂದಾಗಿ ಎಲ್ಲ ಜೀವನಪ್ರಶ್ನೆಯೂ ಸಾಮಾನ್ಯೀಕರಣಗೊಂಡು ಎಲ್ಲ ಮಾನವನ, ಎಲ್ಲ ಜನರ, ಎಲ್ಲ ವರ್ಗಗಳ ಪ್ರಶ್ನೆಯೇ ಆಗಿದೆ. ಮಾನವನು ಉಳಿಯುವುದಾಗಲೀ ಅಳಿಯುವುದಾಗಲೀ ಎಲ್ಲರಿಗೂ ಸಮಾನವಾಗಿ ಅನ್ವಯವಾಗುವ ಪ್ರಶ್ನೆಯಾಗಿದೆ. ತಡೆಯಿಲ್ಲದ ವಿಚಾರ ಆಚಾರ ಪ್ರವಾಹಗಳು ಅನೇಕ ದಿಕ್ಕುಗಳಿಂದ ಹರಿದು ಬಂದು ಜೀವನದ ಅನೇಕ ಕ್ಷೇತ್ರಗಳನ್ನು ಅಲ್ಲೋಲಕಲ್ಲೋಲಗೊಳಿಸಿರುವ ಸನ್ನಿವೇಶದಲ್ಲಿ ಯಾವ ದೇಶದ 'ಧರ್ಮ' ಅಥವಾ 'ಸಂಸ್ಕೃತಿ' ತನ್ನ ವೈಶಿಷ್ಟ್ಯವನ್ನು ಉಳಿಸಿಕೊಳ್ಳಬಲ್ಲದು? ಒಂದು ವೇಳೆ ಜಾಗತಿಕ ಬಿರುಗಾಳಿಗೆ ಸಿಕ್ಕಿಯೂ ತನ್ನತನವನ್ನು ಯಾವುದೋ ಜನಾಂಗ ಉಳಿಸಿಕೊಂಡಿದೆ ಎನ್ನುವುದಾದರೆ ಅದರ ಸಂಘಟನಾಶಕ್ತಿ ಮೆಚ್ಚುವಂತಹುದೇ.

ಜನಸಾಮಾನ್ಯರನ್ನು ವಿಚಾರವಂತರು ಮತ್ತು ಅವಿಚಾರವಂತರು ಎಂದು ನಾವು ವಿಂಗಡಿಸಿದಲ್ಲಿ ಮೊದಲ ಗುಂಪಿನವರು ಜಾಗತಿಕ ಆಂದೋಲನದ ಪ್ರಭಾವಕ್ಕೆ ಅರಿತು ಒಳಗಾಗುತ್ತಾರೆ. ಆಂದೋಲನದ ನೇತಾರರೂ ಆಗಬಹುದು. ಇಂತಹವರ ವಿಚಾರ ಮತ್ತು ಪ್ರಯೋಗ ಜೀವನದ ಎಲ್ಲ ಕ್ಷೇತ್ರಗಳ ಮೇಲೂ ಪರಿಣಾಮ ಬೀರುತ್ತದೆ. ದೇಶವಿದೇಶಗಳಲ್ಲದೆ ಸಮಸ್ತ ಪ್ರಪಂಚದ ಮೇಲೂ ಪ್ರಭಾವ ಬೀರಬಹುದು. ಜನಸಮುದಾಯದ ಹೆಚ್ಚಿನ ಅಂಶದವರು ಅರಿಯದೆಯೇ ಆಂದೋಲನದ ಪ್ರಭಾವಕ್ಕೆ ಸಿಲುಕುತ್ತಾರೆ. ಅದನ್ನು ಅರಿಯುವ ಗೋಜಿಗೂ ಅವರು ಹೋಗುವುದಿಲ್ಲ. ಅವರಿಗೆ ಯಾವ ಪರಿಣಾಮವೂ ಸ್ವಾಭಾವಿಕವೇ. ಯಾಂತ್ರಿಕವಾದ ಅವರ ಜೀವನಕ್ರಮ ಎಲ್ಲವನ್ನೂ ಒಪ್ಪಿಕೊಳ್ಳುತ್ತದೆ. ಸಮುದಾಯದ ದಾರಿ ತನ್ನದೇ ಎಂದು ಭಾವಿಸುತ್ತದೆ.

ಇದಕ್ಕೆ ಅಪವಾದವೆಂಬ ರೀತಿಯಲ್ಲಿ ಅನೇಕರು ಅರಿಯಬಲ್ಲವರಾದರೂ ಜಾಗತಿಕ ಆಂದೋಲನ ತಮಗೆ ಸಂಬಂಧಿಸಿಲ್ಲವೆಂಬ ಭಾವನೆಯಿಂದ ಸಂಪ್ರದಾಯಬದ್ಧರಾಗಿಯೇ ಇರುತ್ತಾರೆ. ತಮ್ಮ ಪರಂಪರಾನುಗತ ಜೀವನಮಾರ್ಗ ಮತ್ತು ವಿಚಾರಗಳಲ್ಲಿ ಶ್ರದ್ಧೆ ಇಟ್ಟಿರುವುದು ತಪ್ಪಲ್ಲದಿದ್ದರೂ ಕ್ಷಿಪ್ರಗತಿಯಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು ನೋಡಿದರೆ ಅದಕ್ಕೆ ಎದುರು ನಿಲ್ಲುವ ಶಕ್ತಿ ಅಂತಹವರಿಗೆ ಇಲ್ಲವೇನೋ ಎನ್ನಿಸುತ್ತದೆ. ಈ ವಿಧಿ ಕೇವಲ ಧಾರ್ಮಿಕ ಅಥವಾ ತಾತ್ತ್ವಿಕ ಮನೋಭಾವಗಳಿಗೆ ಮಾತ್ರ ಅನ್ವಯವಾಗುವುದಿಲ್ಲ. ಜೀವನದ ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುವಂತಹದು. ಎದುರು ನಿಲ್ಲುವ ಶಕ್ತಿ ಸಂಪ್ರದಾಯದ ಅಂತಃಸತ್ವವನ್ನು ಹೊಂದಿಕೊಂಡಿರುತ್ತದೆ.

ಯಾವ ಸುಧಾರಣೆಯನ್ನಾಗಲೀ ಆಂದೋಲನವನ್ನಾಗಲೀ ತಮ್ಮ ಜ್ಞಾನದ ಬೆಳಕಿನಲ್ಲಿ ಕಂಡು ಅದರ ಗುಣಾವಗುಣಗಳನ್ನು ವಿವೇಚಿಸಿ, ಜೀವನ ಸಂವರ್ಧನೆಯಾಗುವ ಅಂಶಗಳನ್ನು ಪುರಸ್ಕರಿಸಿ ವಿರುದ್ಧಭಾವಗಳನ್ನು ತಿರಸ್ಕರಿಸುವವರ ಸಂಖ್ಯೆ ಎಂದೆಂದೂ ಕಡಿಮೆಯಾಗಿಯೇ ಇತ್ತು. ಈಗಲೂ ಕಡಿಮೆಯೇ. ಸಮಾಜದಲ್ಲಿ ಎಲ್ಲರೂ ಸತ್ಯವನ್ನು ತಿಳಿದವರೇ ಆಗಬೇಕಾಗಿಲ್ಲ. ಜ್ಞಾನಿಗಳ, ವಿಚಾರವಂತರ 'ಆಪ್ತವಚನ'ದಲ್ಲಿ ಶ್ರದ್ಧೆಯಿಟ್ಟು, ಅವರ 'ಮಂತ್ರಾಲೋಚನೆ' ಜನಸಾಮಾನ್ಯರಿಗೂ ಶ್ರೇಯಸ್ಕರವಾದದ್ದೆಂದು ತಿಳಿಯುವುದು ತಪ್ಪು ಹಾದಿಯೇನಲ್ಲ. ಏಕೆಂದರೆ ಎಂತಹ ಸಾಮಾನ್ಯನಾದವನಾದರೂ ತನ್ನ ಸೀಮಿತ ಅನುಭವದ ದೃಷ್ಟಿಯಿಂದ ಸತ್ಯ ಒಳ್ಳೆಯದೆಂದೂ ಅಸತ್ಯ ಕೆಟ್ಟದ್ದೆಂದೂ, ಮೈತ್ರಿ ಕ್ಷೇಮಕರವೆಂದೂ ದ್ವೇಷ ನಾಶಕರವೆಂದೂ ತಿಳಿಯಬಲ್ಲವನಾಗುತ್ತಾನೆ. ಈ 'ಅನುಭವ'ದ ನೆಲೆಯಲ್ಲೇ ಎಲ್ಲ 'ಆಪ್ತವಚನ'ಗಳೂ ಸ್ವಾಭಾವಿಕವಾಗಿ ಅಧಿಕೃತ 'ಧರ್ಮನಿಯಮ'ಗಳೆನಿಸುತ್ತವೆ. ವಿಸ್ತಾರವಾದ ಅರ್ಥದಲ್ಲಿ 'ಅನುಭವ'ವನ್ನೇ ಭೂಮಿಕೆಯನ್ನಾಗಿ ಮಾಡಿಕೊಂಡ 'ಧರ್ಮನಿಯಮ' ಸಾಧುವೇ, ಸ್ವಾಗತಾರ್ಹವೇ, ಅಪೇಕ್ಷಣೀಯವೇ. ಅದು ಸಾರ್ವತ್ರಿಕವಾಗಿರುತ್ತದೆ, ಕಾಲದೇಶ ನಿಯಮಗಳಿಗೆ ಒಳಪಡದೆ ನಿರಂತರವಾದ 'ಸತ್ಯ'ವೆಂದಾಗುತ್ತದೆ.

ಆದರೆ ನಮ್ಮ ಜೀವನಕ್ಷೇತ್ರದಲ್ಲಿ ಎಷ್ಟು ವ್ಯವಹಾರಗಳು, ಆಚರಣೆಗಳು, ಮಾತುಕತೆಗಳು ಅಂತಹ ಸಾರ್ವತ್ರಿಕ ನಿರಂತರ ಸತ್ಯದ ಆಧಾರವನ್ನು ಹೊಂದಿರುತ್ತವೆ? ಹೆಚ್ಚಿನ ಮಟ್ಟಿಗೆ ಇಲ್ಲವೆಂದೇ ಹೇಳಬೇಕು. ಇದಕ್ಕೆ ಕಾರಣ ವೈಯಕ್ತಿಕ ಅವಿಚಾರತೆ, ಅಜ್ಞತೆ. ಯಾವ ಕಾಲದಲ್ಲಾಗಲೀ ಅಥವಾ ದೇಶದಲ್ಲಾಗಲೀ ಯಾವುದಾದರೂ ಒಂದು ಸಮಯದಲ್ಲಿ ಧರ್ಮ ಕುಸಿದಿದೆ ಎಂದು ಹೇಳುವುದಾದರೆ, ಅದರ ಅರ್ಥ ಧರ್ಮ ಕುಸಿದಿದ್ದಲ್ಲ; ವ್ಯಕ್ತಿಜೀವನದಲ್ಲಿ ಧರ್ಮಕ್ಕೂ ಆಚರಣೆಗೂ ಹೊಂದಾಣಿಕೆ ಇಲ್ಲದಿರುವುದು. ಯಾವುದೋ ಸಂಕುಚಿತಭಾವ ನಮಗೂ ಸಾರ್ವತ್ರಿಕತೆಗೂ ಮಧ್ಯೆ ನಿಂತು ಸ್ವಾಭಾವಿಕ ಉದಾರತೆಯನ್ನು ಕುಂಠಿತಗೊಳಿಸುತ್ತದೆ. ಪರಾರ್ಥಕ್ಕಿಂತಲೂ ಸ್ವಾರ್ಥತೆ ಬರುವುದು ಹೀಗೆ. ಪ್ರತ್ಯೇಕತೆ ಬರುವುದು ಹೀಗೆ. ಧರ್ಮ ಕುಸಿಯುವುದೂ ಹೀಗೆ. ವಿಶಾಲದೃಷ್ಟಿಯಿದ್ದಷ್ಟೂ ಸಾರ್ವತ್ರಿಕ ಹಿತಚಿಂತನೆ ಇದ್ದಷ್ಟೂ, ಮೈತ್ರಿ, ಕರುಣೆ, ದಯೆ, ಸಂಯಮ ಮುಂತಾದ ಮೌಲಿಕ ಅಂಶಗಳು ಜೀವನದಲ್ಲಿ ತುಂಬಿರುತ್ತವೆ. ಜೀವನ-ಸಾಮರಸ್ಯ ಒಬ್ಬನ ಹುಟ್ಟುಗುಣವಾದರಂತೂ ಅವನ ಅನುಭವಕ್ಷೇತ್ರ ಮಾನವ ಪರಿಮಿತಿಗಿಂತ ವಿಸ್ತಾರವಾಗಿದ್ದು ಸಮಸ್ತ ವಿಶ್ವವನ್ನೂ ಒಳಗೊಳ್ಳುತ್ತದೆ. ಅಂತಹವನ ದೃಷ್ಟಿಯಲ್ಲಿ ಸಸ್ಯ, ಪ್ರಾಣಿ, ಮಾನವ ಮುಂತಾದ ಜೀವ ವಿಶೇಷಗಳೆಲ್ಲಾ ಒಂದೇ ತೆರನಾದ ಆದರ ಮತ್ತು ಮರ್ಯಾದೆಗೆ

ಒಳಗಾಗುತ್ತವೆ. ಇಷ್ಟೇ ಅಲ್ಲ. ಜೀವರಾಶಿಗೂ ಅಜೀವ ವಾಸ್ತವಿಕತೆಗೂ ಸಂಬಂಧವನ್ನು ಹುಡುಕುತ್ತದೆ. ಸಮಸ್ತ ಜಗತ್ತನ್ನು ಒಂದೇ ಕುಟುಂಬವೆಂಬ ಭಾವದಿಂದ ತೋರುತ್ತದೆ. ಇಲ್ಲಿ ದೃಷ್ಟಿಯೊಂದೇ ಅಲ್ಲದೆ ಭಾವವೂ ಕೂಡ ಸಾಮಾನ್ಯೀಕರಣಗೊಂಡು ಜಗತ್ಕಲ್ಯಾಣದ ದೃಷ್ಟಿಯಿಂದ ವೈಯಕ್ತಿಕ ಜೀವನವನ್ನು ಸುಧಾರಿಸುವ ನಿಲುವನ್ನು ತಾಳುತ್ತದೆ. ಧರ್ಮ ಸತ್ಯಗಳ ಆದಿಸ್ವರೂಪ ತನ್ನಲ್ಲಿ ಕಂಡಂತೆಯೇ ಬಾಹ್ಯದಲ್ಲೂ ಕಾಣುತ್ತವೆ. ಚರಾಚರಗಳ ಸಾಹಚರ್ಯ ಸಹಜೀವನ ಆ ಧರ್ಮದ ಉದ್ದೇಶ ಎಂದು ಕಂಡುಬರುತ್ತದೆ. ಇದು ತತ್ತ್ವದ ದೃಷ್ಟಿ. ಸಮನ್ವಯದೃಷ್ಟಿ. ಸಾಪೇಕ್ಷತೆಯನ್ನು ಮೀರಿದ ಸತ್ಯದ ದೃಷ್ಟಿ. ವಿಶ್ವದೃಷ್ಟಿ.

ಸಮಗ್ರ ದೃಷ್ಟಿಯಿಂದ ನೋಡಿದಲ್ಲಿ 'ಸಂಸ್ಕೃತಿ' ಎನ್ನುವುದೂ ಹೀಗೆಯೇ. ಮಾನವನ ಉಚ್ಚ ಮನೋಧರ್ಮದಿಂದ ಹೊರಹೊಮ್ಮಿದ ಜೀವನ ಮತ್ತು ವಿಚಾರ ಮಾರ್ಗಗಳು ಪ್ರಾಯೋಗಿಕ, ವ್ಯಾವಹಾರಿಕ ಮತ್ತು ನೈತಿಕ ಇತ್ಯಾದಿ ರೀತಿಗಳಲ್ಲಿ ವ್ಯಕ್ತಗೊಳ್ಳುತ್ತವೆ. ಭಾವನೆಗೂ ಆಚರಣೆಗೂ ನಿಕಟಸಂಬಂಧವಿದ್ದು ಹೃದಯದಲ್ಲಿ ಮಿಡಿದ ಭಾವ, ಯೋಚನೆಗಳು ಅಷ್ಟೇ ಕುಶಲದಿಂದ ಕಾವ್ಯ, ಸಾಹಿತ್ಯ, ಕಲಾಧಾರೆಗಳಾಗಿ ಹರಿಯುತ್ತವೆ. ಈ ಎಲ್ಲಾ ಆವಿರ್ಭಾವಗಳು ಮೂಲಭಾವದ ಶುದ್ಧತೆ ಮತ್ತು ಸಾತ್ವಿಕತೆಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಇವುಗಳಿಂದ ಭಾವ ಪರಿಶುದ್ಧತೆಯೂ ಆಗುತ್ತದೆ. ಜೀವನ ವಿಚಕ್ಷಣವಾದ ಶೋಭೆಯಿಂದ ತುಂಬುವುದೂ ಸಹಜ. ಸಮಾಜದಲ್ಲಿ ಆಗುವ ಎಲ್ಲ ಪರಿಣಾಮಗಳೂ ದ್ವಿಮುಖವಾಗಿರುತ್ತವೆ. ಭಾವದಿಂದ ಆಚರಣೆ ಶುದ್ಧವಾಗುವಂತೆ ಆಚರಣೆಯಿಂದ ಭಾವವೂ ಶುದ್ಧಗೊಳ್ಳುತ್ತದೆ, ಬೆಳೆಯುತ್ತದೆ. ಎಲ್ಲ ಜೀವನ ಕ್ಷೇತ್ರಗಳೂ ಪರಸ್ಪರ ಸಂಪರ್ಕ ಹೊಂದಿದ್ದು ಪರಸ್ಪರ ಪರಿಣಾಮಗಳನ್ನು ಬೀರುತ್ತವೆ. ಸಮಗ್ರ ದೃಷ್ಟಿಯಿಂದ ನೋಡಿದರೆ ಸಂಸ್ಕೃತಿಯೆನ್ನುವುದು ಕಲಾತ್ಮಕವಾದ ಒಂದು ಜೀವನ ರೂಪ. ಅದರ ನಯ ನಾಜೂಕು, ಸಾಧನೆ ಇವು ಜನರಾಶಿಯ ವಿಶಿಷ್ಟ ಚೇತನವನ್ನು ತೋರಿಸಿಕೊಡುತ್ತದೆ. ಜನರಾಶಿಯು ಜೀವಂತವಾಗಿದೆ ಎನ್ನುವುದಕ್ಕೆ ಕುರುಹು ನವನವೋನ್ಮೇಷಶಾಲಿನಿಯಾಗಿರುವ ಈ ಸಂಸ್ಕೃತಿಯೆಂಬ ಚೇತನ.

ಔಚಿತ್ಯದ ದೃಷ್ಟಿಯಿಂದ ಯಾವ ತತ್ತ್ವಸಿದ್ಧಾಂತವನ್ನಾಗಲೀ, ರೂಢಿಯಲ್ಲಿನ ಧರ್ಮ ಅಥವಾ ಮತವನ್ನಾಗಲೀ ನೋಡಿದಾಗ, ಎದ್ದು ನಿಲ್ಲುವ ಪ್ರಶ್ನೆ ಯಾವ ನಂಬಿಕೆ ಯಾವ ನಡವಳಿಕೆ ಪ್ರಸ್ತುತ ಜೀವನವನ್ನು ತುಂಬುವಂತಿದೆ, ಪೋಷಿಸುವಂತಿದೆ, ಆನಂದ ನೀಡುವಂತಿದೆ ಮತ್ತು ಎಲ್ಲ ದೃಷ್ಟಿಯಿಂದಲೂ ಸಾಫಲ್ಯದಾಯಕವಾಗಿದೆ, ಎಂಬುದು.

ಭಾರತೀಯ ಜೀವನಕ್ಷೇತ್ರವನ್ನು ವೀಕ್ಷಿಸಿದಾಗ ಎದ್ದು ನಿಲ್ಲುವ ಪ್ರಶ್ನೆ ಈ ರೀತಿಯಿದೆ: ನಮ್ಮ ಚಿಂತನ ಸಂಪ್ರದಾಯ ಬಹು ಹಿಂದಿನದೆಂದೂ ಸನಾತನವೆಂದೂ ಹೇಳುತ್ತೇವೆ. ಜೀವನದ ಮಹಾಮೌಲ್ಯ ಎನ್ನುವ 'ಈಶ್ವರ'ನ ಸ್ಥಾನದಲ್ಲೇ ನಮ್ಮ ವೇದವಾಙ್ಮಯವನ್ನು ನಿಲ್ಲಿಸಿದ್ದೇವೆ. ಅಥವಾ ಅದಕ್ಕಿಂತ ಹೆಚ್ಚಿನ ಸ್ಥಾನವನ್ನೇ ಅದಕ್ಕೆ ನೀಡಿದ್ದೇವೆ. ವೇದಕ್ಕೆ ಈ ರೀತಿ ಕೊಟ್ಟಿರುವ ಸ್ಥಾನ 'ಜ್ಞಾನ'ಕ್ಕೆ ನೀಡಿರುವ ಸ್ಥಾನ. 'ಸತ್ಯಾನುಬೋಧ'ಕ್ಕೆ ನೀಡಿರುವ ಸ್ಥಾನ. ಇದರಲ್ಲಿ ಯಾರಿಗೂ ಸಂಶಯ ಬರಬೇಕಾಗಿಲ್ಲ. ಸಂಪ್ರದಾಯದಲ್ಲಿ ಶ್ರದ್ಧೆ ಇದ್ದವರಿಗೆ, ಅದರ ಪರಂಪರೆಯಲ್ಲಿ ಜೀವನಕ್ರಮವನ್ನು ಬೆಳೆಸಿಕೊಂಡು ಬಂದವರಿಗೆ ಈ ವಿಚಾರದಲ್ಲಿ ಯಾವ ಸಂಶಯವೂ ಇಲ್ಲ. ಅಂತಹ 'ವೇದ'ದಲ್ಲಿ 'ವೇದಧರ್ಮ'ದಲ್ಲಿ ಯಾವ ಆಕ್ಷೇಪವೂ ಇಲ್ಲ. ಆದರೆ ಬದಲಾದ ಜಾಗತಿಕದೃಷ್ಟಿಯಿಂದ ನೋಡಿದರೆ, ಯಾವ ಸಂಪ್ರದಾಯವೂ ಕಲಬೆರಕೆಗೊಳ್ಳದೆ ಶುದ್ಧವಾಗಿಯೇ ಹರಿದುಬಂದಿಲ್ಲ ಎಂಬುದು ಕಾಣುತ್ತದೆ. ಪರಂಪರೆಯ ಕೊಂಡಿಗಳಲ್ಲಿ ಎಲ್ಲವೂ ಉಳಿದಿವೆ ಎನ್ನುವಂತಿಲ್ಲ. ಹೊಸ ಚಿಂತನೆಗಳು ಆವಿಷ್ಕಾರಗಳು ಹುಟ್ಟಿಬಂದು, ವಿಚಾರ ಬದಲಾವಣೆಗೊಂಡು ಜೀವನವು ಪರಿಣಾಮಕ್ಕೆ ಒಳಗಾಗಿ ಶತಮಾನಗಳ ಲೆಕ್ಕದಲ್ಲಿ ನೋಡಿದರೆ ಹಿಂದಿನ ಮತ್ತು ನಂತರದ ಜೀವನವೇ ಬೇರೆ ಬೇರೆ ಎನ್ನುವಂತೆಯೇ ಆಗುತ್ತದೆ ಎನ್ನುವ ಅಭಿಪ್ರಾಯ ಬರುವುದು ಸಹಜ. ವೈದಿಕ ಧರ್ಮದ ಇತಿಹಾಸದಲ್ಲೇ ಈ ವ್ಯತ್ಯಾಸಗಳು ಬಂದಿದ್ದನ್ನು ನಾವು ಕಾಣುತ್ತೇವೆ.

ಕವಿಸದೃಶ ಮತ್ತು ಕವಿಸಹಜವಾದ ದೃಷ್ಟಿಗೆ ತೋರಿದ ನಿರಾಡಂಬರ ಸತ್ಯಗಳು ಜೀವನವನ್ನು ಎಷ್ಟು ತುಂಬಿ ಬಾಳನ್ನು ಆನಂದಮಯವಾಗಿಸತ್ತೋ ಅಷ್ಟೇ ಪ್ರಮಾಣದಲ್ಲಿ ಅದನ್ನು ವಿಚಲಿತ

ಗೊಳಿಸಿದ ಯಜ್ಞ ಯಾಗಾದಿಗಳ ದೃಷ್ಟಿಯು ಜೀವನ ಕ್ರಮವನ್ನು ಯಾಂತ್ರಿಕಗೊಳಿಸಿದ್ದೂ ಉಂಟು. ಜೀವನದಲ್ಲಿ ವ್ಯಾವಹಾರಿಕ ಕೃತ್ರಿಮತೆಯನ್ನು ತಂದದ್ದೂ ಉಂಟು. ಇಹಲೋಕಜೀವನದ ಸಂತಸ ಸಾಲ ದೆಂಬಂತೆ ಪಾರಲೌಕಿಕ ಸ್ವರ್ಗಜೀವನದ ಆಶೆಯನ್ನು ಪ್ರಚೋದಿಸಿದ್ದೂ ಉಂಟು.

ನಂತರ ಉದಿಸಿದ ತತ್ತ್ವದೃಷ್ಟಿ ಸ್ವರ್ಗಲೋಲುಪತೆಯನ್ನು ತಪ್ಪಿಸಿ ಸಹಜ ಅಮರತ್ವವನ್ನು ಹುಡುಕುವ ಪ್ರಯತ್ನ ಒಳ್ಳೆಯದೆಂದಿತು. ಕವಿ ಮತ್ತು ದ್ರಷ್ಟಾರರು ಕಂಡ ಸತ್ಯದ ಜಾಡನ್ನೇ ಹಿಡಿದು ಜೀವನವನ್ನೇ ಅಮೃತಮಯವನ್ನಾಗಿ ಮಾಡುವ ಪ್ರಯತ್ನ ನಡೆಯಿತು. ಅಂತರ್ಮುಖಿಸಮಾಧಿಯಲ್ಲಿ ಕಂಡುಕೊಂಡ ಆನಂದವನ್ನು ಜೀವನದಲ್ಲಿ ಪ್ರಸರಿಸುವ ಉದ್ಯಮ ನಡೆಯಿತು. ತರ್ಕವೆನ್ನುವುದು ಅಂತರ್‌ಜ್ಯೋತಿಯ ಬೆಳಕಿನಲ್ಲಿ ನಡೆಯಬೇಕಾದ ವ್ಯವಹಾರವಿಧಾನವಲ್ಲದೆ ವಿಶ್ಲೇಷಣಾತ್ಮಕ ಭೇದ ಪ್ರಚೋದಕ ಸಾಧನವಾಗಬಾರದೆಂಬ ವಿವೇಕವನ್ನು ಮುಂದಿಟ್ಟಿತು. ಅರ್ಥ ಮತ್ತು ಕಾಮಗಳ ಕಾತರತೆ ಧರ್ಮಸಂಗ್ರಹಕಾರಕಗಳಾಗಿರಬೇಕೆಂದು ತೋರಿಸಿ ಕೊಟ್ಟಿತು. ಎಲ್ಲಿ ಯೋಗವು ಕೂಡ ಜೀವನ ಸಂಪನ್ನತೆಯನ್ನು ಹೆಚ್ಚು ಮಾಡುವ ಆಧ್ಯಾತ್ಮಿಕ ಸಾಧನವಾಗಬೇಕೆಂಬ ಅರಿವನ್ನು ಮುಂದಿಟ್ಟಿತು. ವಿವೇಕವೆನ್ನುವುದು ವಸ್ತುಸ್ವರೂಪವನ್ನೇ ಅಲ್ಲದೆ ಜೀವನಕ್ಕೆ ಅದರ ಅರ್ಥವನ್ನೂ ತೋರಿಸಿಕೊಡುವ ಉದ್ಯಮವಾಗಬೇಕೆಂಬ ಸೂಕ್ಷ್ಮವನ್ನು ಮುಂದಿಟ್ಟಿತು. ಆರೋಗ್ಯದ ದೃಷ್ಟಿಯಿಂದ. ಆಯುಸ್ಸಿನ ದೃಷ್ಟಿಯಿಂದ. ಆರ್ಥಿಕ ದೃಷ್ಟಿಯಿಂದ. ಆನಂದದ ದೃಷ್ಟಿಯಿಂದ ಬಾಳು ನಂದನವಾಗಿರಬೇಕು ಎನ್ನುವ ಆಶಯವನ್ನು ಮುಂದಿಟ್ಟಿತು. ಯಶಸ್ಸು ಸಮೃದ್ಧವಾಗಬೇಕು. ಬ್ರಹ್ಮವರ್ಚಸ್ಸು ಸಮೃದ್ಧವಾಗಬೇಕು. ಎಲ್ಲ ಪ್ರವೃತ್ತಿಯೂ ವಿಶ್ವಚಿಂತಕವಾಗಬೇಕು ಎನ್ನುವ ಮೂಲ ಆದರ್ಶವನ್ನು ಮುಂದಿಟ್ಟಿತು. ಪಾರಲೌಕಿಕದಲ್ಲಿ ಯಾವ ಅಮೃತತ್ವವಿದೆಯೋ ಅದರ ರುಚಿ ಇಲ್ಲಿಯೂ ಕಂಡುಬರಬೇಕು. ಈ ಬಾಳು ಆ ಬಾಳಿನ ಅಂಶ. ಈ ಬಾಳು ಆ ಬಾಳಿಗೆ ಸಹಜವಾದ ಹಂತ. ಇಲ್ಲಿನ ಮೌಲ್ಯ ಅಲ್ಲಿನ ಮೌಲ್ಯದ ಅಪವಾದವಲ್ಲ. ನಿರೂಪಣೆ. ಉದಾಹರಣೆ ಎನ್ನುವ ವ್ಯವಹಾರಿಕ ಮಾರ್ಗವನ್ನು ತೋರಿಸಿತು.

II

ಇದು ಉಪನಿಷತ್ತುಗಳ ಜೀವನ ದರ್ಶನ. ಭಾರತದ ಇತಿಹಾಸದಲ್ಲಿ ಸ್ವರ್ಣಯುಗ. ಅದು ಜೀವನದ ಗುರಿ ಪಾರಮಾರ್ಥಿಕವಾದ ಯಾವ ಅಲೌಕಿಕ ಕ್ಷೇತ್ರವನ್ನೂ ಸಾಧಿಸುವುದಾಗಿರದೆ. ಇಹ ಜೀವನವನ್ನೇ ಸ್ವರ್ಗತುಲ್ಯವನ್ನಾಗಿ ಮಾಡುವ ಆಶಯ. ಪರಿಶ್ರಮಗಳು ತುಂಬಿದ್ದ ಕಾಲ. ಜನಜೀವನ ಸುಖಸಂಪದಗಳಿಂದ ತುಂಬಿತ್ತು. ಜೀವನ 'ಧರ್ಮ'ವಾಗಿತ್ತು. ಧರ್ಮ 'ಜೀವನ'ವಾಗಿತ್ತು. ಇದಕ್ಕೆಲ್ಲಾ ಮೂಲಭೂತವಾಗಿ ತಾತ್ತ್ವಿಕ ದೃಷ್ಟಿ ಅಂದಿನ ಜನರ ಅನುಭವದಲ್ಲಿ ನೆಲೆಸಿತ್ತು. ಎಲ್ಲ ವ್ಯವಹಾರಕ್ಕೂ ಎಲ್ಲ ಕೃತಿಗೂ ಮೌಲ್ಯವಿದ್ದ ಕಾಲ ಅದು.

ಆದರೆ ಭಾರತದ ನಂತರದ ಸ್ಥಿತಿ ಬದಲಾಯಿತು. ಜೀವನ ಮತ್ತು ಧರ್ಮಗಳ ನಿಕಟ ಸಂಬಂಧ ಮರೆತಂತಾಗಿ ಅವುಗಳ 'ತತ್ತ್ವ'ವನ್ನು ಕೇವಲ ಬುದ್ಧಿಕ್ಷೇತ್ರಕ್ಕೆ ಒತ್ತರಿಸಲಾಯಿತು. ತರ್ಕದ ಅಧೀನಕ್ಕೆ ಒಳಪಡಿಸಲಾಯಿತು. ಕಲಹದ ಸೀಮೆಗೆ ವಸ್ತುವನ್ನಾಗಿಸಲಾಯಿತು. ವಿಶ್ವಹೃದಯದಲ್ಲಿ ಅಥವಾ ರಚನೆಯಲ್ಲಿ ಅನಿರ್ವಚನೀಯವಾದ ರೀತಿಯಲ್ಲಿ ಸಮನ್ವಯಗೊಂಡ ತತ್ತ್ವಗಳ 'ವಿಶ್ಲೇಷಣೆ' ಆಗ ತೊಡಗಿತು. ದ್ರವ್ಯ. ಗುಣ, ಕಾಲ. ದೇಶ. ಜೀವ. ಅಜೀವ, ಅಧ್ಯಾತ್ಮ. ಅದಿಭೌತ ಮುಂತಾದವುಗಳಿಗೆ ಪ್ರತ್ಯೇಕವಾಗಿ ಸಂಬಂಧಿಸಿದಂತೆ ಮತ್ತು ಅವುಗಳಿಗೆ ಸಾಪೇಕ್ಷವಾದ ರೀತಿಯಲ್ಲಿ ಬರುವ ಅನೇಕ ಅಂಶಗಳಾದ ಸೃಷ್ಟಿ. ವಿನಾಶ, ಪರಿಣಾಮ. ವಿಕಾಸ. ಪ್ರಗತಿ ಮುಂತಾದವುಗಳ ವಿಚಾರ ಮುಂದೆ ಬಂದು ಅವುಗಳ ಪರಸ್ಪರ ಸಂಬಂಧ ನಿರ್ಧಾರಗಳ ರೂಪದಲ್ಲೇ ವೈದಿಕ ವರ್ಗದ ಎಲ್ಲ 'ದರ್ಶನ'ಗಳೂ. ಅವೈದಿಕ ವರ್ಗದ ಬೌದ್ಧ ಮತ್ತು ಜೈನಧರ್ಮಗಳೂ ಬಂದವು. ವಿಶ್ವಸತ್ಯದ ಮೂಲಸ್ವರೂಪದಲ್ಲೇ ಭಿನ್ನಾಭಿಪ್ರಾಯಗಳು ಉದಿಸಿದವು. ಹಲವರು ವಿಶ್ವಸತ್ಯ ಅಥವಾ ಧರ್ಮವನ್ನು ದ್ವೈತರಹಿತವೆಂದರೆ ಮತ್ತೆ ಕೆಲವರು ಅದನ್ನು ಅನೇಕತಾದೃಷ್ಟಿಯಿಂದ ಕಂಡರು. ಒಂದು ದರ್ಶನ ಎಲ್ಲವನ್ನೂ ಅಧ್ಯಾತ್ಮ ವೆಂದರೆ, ಮತ್ತೊಂದು ಎಲ್ಲವನ್ನೂ ಆದಿಭೌತಿಕವೆಂದಿತು. ಒಂದು ಸತ್ಯವನ್ನು ನಿರಪೇಕ್ಷ ಅಸ್ತಿತ್ವವೆಂದೂ. ಚಿನ್ಮಾತ್ರವೆಂದೂ, ಆನಂದವೆಂದೂ ಕರೆದರೆ ಮತ್ತೊಂದು ಅದನ್ನು ಸಗುಣ ವಿಶಿಷ್ಟವೆಂದು ಕರೆಯಿತು.

ಒಂದು ಸತ್ಯವನ್ನು ಅಧ್ಯಾತ್ಮ ಮತ್ತು ಆದಿಭೌತಿಕಗಳ ದ್ವೈತವೆಂದರೆ ಮತ್ತ ಹಲವು ಅವುಗಳ ಅನೇಕತೆಯನ್ನು ಸಾರಿದವು. ಒಂದು ಸಿದ್ಧಾಂತವಂತೂ ಎಲ್ಲದರ ನಾಸ್ತಿಕತೆಯನ್ನೇ ಸಾರಿತು.

ಬೌದ್ಧಿಕ ದೃಷ್ಟಿಯಿಂದ ಇದನ್ನು ನೋಡಿದಲ್ಲಿ ಅದೂ ಒಂದು ಜಾಗೃತಕಾಲವೇ.ಪ್ರತಿಬೋಧ ವಿಹಿತವಾದ ಶ್ರುತಿಯ ವಾಕ್ಯನ್ನು. ತತ್ತ್ವವನ್ನು ತರ್ಕದ ಮೂಸೆಯಲ್ಲಿ ಪರೀಕ್ಷಿಸುವ ಉದ್ಯಮ ಮೂಢ ನಂಬಿಕೆಯ ವಿರುದ್ಧ ಬುದ್ಧಿಯ ಉತ್ಕರ್ಷವೆಂದು ಕರೆಯಬಹುದಾದವರೂ ಸತ್ಯದ ಮಂಟಪದಲ್ಲಿ ವಿವೇಚನೆಗೆ ಎಡೆಕೊಟ್ಟಿತು. ತರ್ಕ ಪ್ರತಿಪಾದಿಸುವ ಸತ್ಯಕ್ಕೂ ಜೀವನ ಅಥವಾ ವಿಶ್ವದಲ್ಲಿ ತರ್ಕಾತೀತವಾಗಿ ಅಡಗಿ, ಜೀವನಕ್ಕೆ ಮತ್ತು ವಿಶ್ವಕ್ಕೆ ಹೇಗೆ ಆಧಾರವಾಗಿದೆಯೋ ಆ ಸತ್ಯಕ್ಕೂ ವ್ಯತ್ಯಾಸವಿದೆಯೆಂಬುದನ್ನು ಉಪನಿಷತ್ಕಾರರು ಹೇಳಿದ್ದರೂ, ಅವೆರಡರ ಅಂತರವನ್ನು ಮರೆಯಲು ಸಮಾಜ ಸಿದ್ಧವಾಯಿತು. ಬುದ್ಧಿ ಎಚ್ಚೆತ್ತಿತು. ನಿಜ. ಆದರೆ ಬಾಳು ಕುಂದಿತು. ಷಡ್ದರ್ಶನಗಳ ಪ್ರವರ್ತಕರ ದೃಷ್ಟಿ ಎಷ್ಟೇ ಶ್ರುತಿ ಭೂತವಾದ ಸತ್ಯದಲ್ಲಿ ನೆಲೆ ನಿಂತಿದ್ದರೂ ಬುದ್ಧಿಯ ವಿಶ್ಲೇಷಣೆಯ ಪವಾಡ ನಡೆದೇ ನಡೆಯಿತು. 'ದರ್ಶನ'ಗಳು 'ಪಂಥ'ಗಳಾದವು. ವಿವಿಧ ತತ್ತ್ವಗಳಾದವು. ಒಂದೇ ಸತ್ಯದ ವಿವಿಧ ದೃಷ್ಟಿವಾದಗಳೇ ಈ ದರ್ಶನಗಳು ಎಂದಾಗದೆ. ವಿವಿಧ ಸತ್ಯಗಳನ್ನೇ ಸಾಧಿಸುವ ವಿಶಿಷ್ಟ ಮಾರ್ಗಗಳಾದವು. ಸಾಂಖ್ಯಯೋಗ, ನ್ಯಾಯ, ವೈಶೇಷಿಕ. ಪೂರ್ವ ಮೀಮಾಂಸೆಗಳ ಪ್ರವೃತ್ತಿಗಳ ವಿರುದ್ಧ ವೇದಾಂತದ ಸಮನ್ವಯ ಕಾರ್ಯ ಬೇಕಾಯಿತು. ವಿಚಾರಪಥದಲ್ಲಿ ಒದಗಿಬಂದ ವೈವಿಧ್ಯವನ್ನು ತೊಡೆದುಹಾಕುವ ಅನುಭಾವ ಬೇಕಾಯಿತು. ಆದರೆ ದುರದೃಷ್ಟವಶಾತ್ ತರ್ಕವನ್ನು ತಡೆಯಲು ತರ್ಕವನ್ನೇ ಒಡ್ಡಿದ್ದರಿಂದ ನಿರೀಕ್ಷಿಸಿದ ಫಲ ಉಂಟಾಯಿತು ಎಂದು ಧೈರ್ಯದಿಂದ ಹೇಳುವಂತಿಲ್ಲ. 'ವೇದಾಂತ-ತರ್ಕ' ಪ್ರಬಲವಾದದ್ದರಿಂದ ಇತರ ತರ್ಕಗಳು ಹಿಂದೆ ಬಿದ್ದವು. ಆದರೆ ವೇದಾಂತ ಉಪಯೋಗಿಸಿ 'ತರ್ಕ–ವಿಧಾನ' ವೇದಾಂತದಲ್ಲೇ ವೈವಿಧ್ಯಕ್ಕೆ ಎಡೆಕೊಟ್ಟಿತು. ಸತ್ಯವು ನಿರಪೇಕ್ಷ ನಿರ್ಗುಣವೋ, ಸಗುಣ ವಿಶಿಷ್ಟವೋ ಎನ್ನುವುದರಲ್ಲೂ, ಸತ್ಯಸಾಧನೆಯಲ್ಲಿ ಜ್ಞಾನ, ಭಕ್ತಿ, ಕರ್ಮಗಳಲ್ಲಿ ಪರಸ್ಪರ ಉದಾತ್ತತೆಯ ವಿಚಾರದಲ್ಲೂ ಭಿನ್ನಾಭಿಪ್ರಾಯ ಗಳುಂಟಾದುವು. ಇವು ಕೇವಲ ತತ್ತ್ವವಿಧಾನಗಳಾಗಿರದೆ ಮತವಿಧಾನವೂ ಆಗಿದ್ದುದರಿಂದ ವೇದ, ಕಲ್ಪ, ಪುರಾಣೋಕ್ತ ಪೂಜಾವಿಧಾನಗಳನ್ನು ಅಳವಡಿಸಿಕೊಂಡ ವಿವಿಧ 'ಪಂಥ'ಗಳೇ ಆದವು. ಶಾಕ್ತ ಮತ್ತು ಪಾಂಚರಾತ್ರ ಆಗಮಗಳ ಪ್ರಭಾವವೂ ಸೇರಿ ಮತಧರ್ಮಾವಲಂಬನ ರೀತಿಗಳು ವಿಶಿಷ್ಟ ರೂಪಗಳನ್ನು ತಾಳಿದವು. ವೈದಿಕ. ಆಗಮಿಕ, ಶೈವ. ವೈಷ್ಣವ, ಶಾಕ್ತ. ಸೌರ. ಗಾಣಾಪತ್ಯ ಮುಂತಾದ ವಿಶಿಷ್ಟ ಗುಂಪುಗಳಾದವು. ಸದಾಚಾರಮಾರ್ಗವಿದ್ದೆಡೆ ವಾಮಾಚಾರವೂ ಇರಬಹುದು. ಹೀಗೆ ವಾಮ ಪಂಥಗಳೂ ಬಂದವು. ಬುದ್ಧಿಯ ಪಾರಮ್ಯಕ್ಕೆ ಜೀವನ ಮಾರ್ಗಗಳನ್ನು ತಿದ್ದುವ ಶಕ್ತಿಯಿರುವುದರಿಂದ ಬುದ್ಧಿಯ ಅನುವೇದನೆಯನ್ನು ಪಡೆದ ಭಾವನೆಯೂ ರೂಪಗೊಂಡಿತು. ಬುದ್ಧಿಯು ವಿವೇಕವಲ್ಲದೆ ಇರಬಹುದು ಎನ್ನುವುದನ್ನು ನಾವು ಇಲ್ಲಿ ಕಾಣಬಹುದು. 'ಬುದ್ಧಂ ಶರಣಮನ್ವಿಚ್ಛ' ಎನ್ನುವ ಮಾತಿನ ಹಿನ್ನೆಲೆಯಲ್ಲಿದ್ದ 'ವಿವೇಕಂ ಶರಣಮನ್ವಿಚ್ಛ' ಎನ್ನುವ ಅರ್ಥ ನಮಗೆ ತೋರದೆ ಬಾಳು ಬುದ್ಧಿಯ ಕಾವಿನಲ್ಲಿ ಬೇಯತೊಡಗಿತು. ಪದಶಃ ಅರ್ಥವನ್ನೇ ಅಧಿಕೃತವೆಂದು ಭಾವಿಸಿದ ಪರಂಪರೆ ಬೆಳೆಯಿತು. ಈ ಪರಂಪರೆಯ ಪರಿಧಿಯಲ್ಲಿ ಮೌಢ್ಯ ಹೆಚ್ಚಿತು. ಸಚೇತನ ಮತ್ತು ಅಮೃತವಾದ ಸತ್ಯ ನಮ್ಮ ಬಾಳಿನಿಂದ ನುಸುಳಿಕೊಂಡಂತಾಯಿತು. ಈ ಎಲ್ಲ ಸನ್ನಿವೇಶಗಳೂ ಭಾರತೀಯನ ಇತಿಹಾಸದಲ್ಲಿ ಬಂದವು ಎಂದರೆ ತಪ್ಪಲ್ಲ. ಯಾವ 'ಧರ್ಮಶ್ರದ್ಧೆ'ಯಿಂದ ನಾವು ಕಟ್ಟಿದ 'ಈಶ್ವರ'ನ 'ದೈವ'ದ ಶರಣು ಹೋಗುತ್ತೇವೆಯೋ. ಆ ಧರ್ಮಶ್ರದ್ಧೆ ಬಾಳನ್ನು ಬೆಳಗಬೇಕು, ಸಚೇತನಗೊಳಿಸಬೇಕು. ಬಾಳಿನ ಪರ್ಯಂತ ನಮ್ಮ ಬಲವೆಂಬಂತೆ ನಿಂತು ಯಾವ ಧರ್ಮ, ಈಶ್ವರ, ದೈವಗಳು ಸಹಜವಾಗಿ ಸಾರ್ವತ್ರಿಕ ಸುಖ, ಸುಖ, ಆನಂದಗಳಿಗೆ ಪ್ರತೀಕಗಳಾಗಿವೆಯೋ ಆ ಭಾವನೆಗಳನ್ನು ಪರಸ್ಪರ ಉಂಟುಮಾಡಬೇಕು. ಹೀಗಾದಲ್ಲಿ ಮಾತ್ರ ಯಾವ ಧಾರ್ಮಿಕ ಮಾರ್ಗಕ್ಕೂ ಒಂದು ಮೌಲಿಕತೆ ಬರುತ್ತದೆ. ಜೀವನ ದೃಷ್ಟಿ ಯಿಂದ 'ಅರ್ಥ' ಬರುತ್ತದೆ. ಬಾಳಿನ ಯುದ್ಧದಲ್ಲಿ ಆಶಾಕಿರಣವಾಗಿ ಪರಿಣಮಿಸುತ್ತದೆ. ಅಪಜಯ ವೈಯಕ್ತಿಕವಾಗುವುದಿಲ್ಲ. ಜಯವೂ ವೈಯಕ್ತಿಕವಾಗುವುದಿಲ್ಲ, ಅದೊಂದು ಸಮುದಾಯ ಶ್ರಮ ವಾಗುತ್ತದೆ. ಸಮುದಾಯ ಗಳಿಸಿದ ಫಲವಾಗುತ್ತದೆ. ಜೀವನ ಸಾಫಲ್ಯಕ್ಕೆ ಕಾರಣವಾಗುತ್ತದೆ.

ಹೀಗಿದ್ದಲ್ಲಿ ಮಾನವ ಮಾನವನನ್ನು ನೇರವಾಗಿ ಕಂಡು ಪರಸ್ಪರ ಉಪಚರಿಸಿ, ಸತ್ಕರಿಸಿ, ಸಹಾಯ ನೀಡುವ ಸಮಯಗಳಲ್ಲಿಯೂ ಬೇರೆ ದೇಶ, ಭಾಷೆ, ಮತ, ಧರ್ಮ, ಕುಲಗೋತ್ರಗಳು ದೃಷ್ಟಿಗೆ ಬಂದರೆ ಸ್ವಾಭಾವಿಕ ಮಾನವಸಂಬಂಧಕ್ಕೆ ವಿರುದ್ಧವಾದ ಪ್ರವೃತ್ತಿಯನ್ನು ತರುವುದಾದರೂ ಹೇಗೆ? ಸಹಜ ಬಾಂಧವ್ಯಕ್ಕೆ ಸ್ವಾಭಾವಿಕವಾದ ಸಹನೆ, ಸಂಯಮ, ಪ್ರೇಮ, ಔದಾರ್ಯ ಇವುಗಳಿಗೆ ಬೇರೆ ಊರು, ಮಾತು, ಧರ್ಮ, ಕುಲಗೋತ್ರಗಳು ಅಡ್ಡಿ ತರುವುದಾದರೂ ಹೇಗೆ? ಧರ್ಮ, ಈಶ್ವರ, ದೈವಗಳು ನಮ್ಮ ಆದರ್ಶಗಳೇ ಆಗಿದ್ದರೆ, ಅವುಗಳ ಹಾದಿಯಲ್ಲಿ ಇತರರೂ ಕೂಡ ಬಂದಿಲ್ಲ ಎನ್ನುವವರಿಂದಲೇ? ಅಥವಾ ಆ ಆದರ್ಶಗಳ ಅರ್ಥ ನಮಗಾಗದೆ ಅವುಗಳ ಜೋಡನೆ ನಮ್ಮ ಜೀವನದ ಮೇಲೆ ಸಾಕಷ್ಟು ಆಗಿಲ್ಲವೆಂಬ ಕಾರಣದಿಂದಲೇ? ಈ ಯಾವ ಕಾರಣವೇ ಆಗಲಿ ವ್ಯಕ್ತಿಯ ಪ್ರವೃತ್ತಿಯು ಆತನ 'ಸಂಸ್ಕಾರ'ದ ಭಾಗವೇ ಆಗುತ್ತದೆ. ಹೀನ ಸಂಸ್ಕಾರಗಳ ಹೇರಣಿಗೆಗಳ ಆದರ್ಶಗಳ ಕಲ್ಪನೆಯಲ್ಲಿ ಅಡಗಿರುವ ಪರಿಮಿತಿಗಳೇ ಕಾರಣವಾಗಬಹುದು. ಅವೈಚಾರಿಕ ಸ್ವಾರ್ಥವೇ ಕಾರಣವಾಗಬಹುದು. ಇವೆಲ್ಲವೂ ಸತ್ಯಾನುಭವದ ಅಭಾವಗಳೇ ಹೊರತು ಬೇರಲ್ಲ. ಈ ದೃಷ್ಟಿಯಿಂದ ನೋಡಿದರೆ ನಮ್ಮ ಆಚರಿತ ಧರ್ಮ, ಕರ್ಮ, ಕಲ್ಪನೆಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತವೆ. ಇವುಗಳನ್ನು ಸರಿಪಡಿಸಲು ಧರ್ಮಪ್ರಸ್ಥಾಪಕರು ಮತ್ತೆ ಹುಟ್ಟಬೇಕು. ಧರ್ಮ ಮತ್ತು ಸತ್ಯದ ಜಾಗೃತಿಯನ್ನುಂಟು ಮಾಡಬೇಕು.

ಜೀವನ ಮತ್ತು ಧರ್ಮಸಮನ್ವಯಗಳ ಪ್ರಯತ್ನ ಮಹಾಮೇರುಪರ್ವತವನ್ನು ಹತ್ತಿಬರುವುದಕ್ಕಿಂತ ಕಠಿಣ. ಅದನ್ನು ಸಾಧಿಸಬೇಕು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡಿದ್ದರಿಂದಲೇ ಭಾರತ ಸಂಸ್ಕೃತಿ ವಿಶಿಷ್ಟವಾದದ್ದು. ಆದರೆ ಕಾಲ ಕಾಲಕ್ಕೆ ಈ ವಿಚಾರದ ಸಂಸ್ಕರಣ ಪುನಃಪ್ರಯೋಗ ಆಗುವ ಸಮಯದಲ್ಲೆಲ್ಲಾ ತತ್ತ್ವಗ್ರಹಣದಲ್ಲಿ ಅಥವಾ ಅದನ್ನು ಆಚರಣೆಗೆ ತರುವುದರಲ್ಲಿ ಲೋಪ ಬಂದು ಈ ಸಮನ್ವಯ ಆಗದೆ ಹೋಗಿದೆ. ಪಾರಮಾರ್ಥಿಕಕ್ಕೂ ಲೌಕಿಕಕ್ಕೂ ನಿಕಟಸಂಬಂಧವಿರುವುದಾದರೆ ಹೀಗೇಕೆ ಆಗಬೇಕು? ಲೌಕಿಕದ ಭಾರ ಪಾರಮಾರ್ಥಿಕ ಸಾತ್ತ್ವಿಕತೆಯನ್ನು ಕುಗ್ಗಿಸುವುದಾದರೂ ಹೇಗೆ? ಅಥವಾ ಪಾರಮಾರ್ಥಿಕ ಸತ್ವ ಲೌಕಿಕದ ಭಾರವನ್ನು ಎತ್ತದಿರುವುದಾದರೂ ಹೇಗೆ?

ಇದರ ಉತ್ತರ ಸುಲಭವಲ್ಲದಿದ್ದರೂ, ಈ ಕಾರ್ಯ ಎಲ್ಲರ ವ್ಯಕ್ತಿ ಜೀವನದಲ್ಲಿ ನಡೆಯಬೇಕೆಂಬುದನ್ನು ನಾವು ಮರೆಯುತ್ತೇವೆ. ಜನಸಮುದಾಯದಲ್ಲಿ ಒದಗುವ ಕ್ಷೋಭೆ, ದ್ವೇಷ, ಕಲಹ, ದೌರ್ಜನ್ಯ, ಅಶಾಂತಿ ಇವುಗಳೇ ವ್ಯಕ್ತಿಗಳ ಮನಸ್ಸನ್ನು ಕೆಣಕಬೇಕು. ವಿಚಾರಪರರನ್ನಾಗಿ ಮಾಡಬೇಕು. ಅವುಗಳ ಕಾರಣಗಳು ಗೊತ್ತಾದರೆ ಅವುಗಳ ಪರಿಹಾರವನ್ನು ವ್ಯಕ್ತಿಜೀವನದಲ್ಲೇ ಕಂಡುಕೊಳ್ಳಬೇಕು. ಇವುಗಳ ಬೋಧೆ ಎಲ್ಲ ವ್ಯಕ್ತಿಗಳಿಗೂ ಆಗದಿರಬಹುದು. ಈ ಸಮಯದಲ್ಲಿಯೇ ಆದರ್ಶ ಪುರುಷರ ನೆರವು ನಮಗೆ ಬೇಕೆಂದು ಕಾಣುತ್ತದೆ. ಸಮಾಜ ಹಲವು ಗೌರವಯುತ ಸ್ಥಾನಗಳನ್ನು ಕಲ್ಪಿಸಿ ಆ ಸ್ಥಾನದಲ್ಲಿರುವವರೆಲ್ಲಾ ಧರ್ಮಜೀವನ ನಡೆಸುವವರು ಎಂದು ಭಾವಿಸುತ್ತದೆ. ಅಂತಹವರೇ ಧರ್ಮಗುರುಗಳು, ಪೀಠಾಧಿಪತಿಗಳು. ಈ ವ್ಯಕ್ತಿಗಳು ಅಸ್ವಾರ್ಥ ನಿದರ್ಶನಗಳಾಗಿಲ್ಲದಿರುವುದೇ ಪ್ರಪಂಚದ ದೌರ್ಭಾಗ್ಯ. ಕಟ್ಟಿದ ದೇಗುಲ, ವಿಹಾರ, ಮಠ, ಇವುಗಳು ಲೌಕಿಕ ಅಥವಾ ವ್ಯಾವಹಾರಿಕ ಕೇಂದ್ರಗಳಾಗಿ ಹೋದರೆ ಸಾಮಾನ್ಯರ ಪಾಡೇನು! ಸಮಾಜ ಸೃಷ್ಟಿಸಿದ ಸಂಸ್ಥೆ ಸಮಾಜಕ್ಕೇ ಭಾರವಾದರೆ ಅದನ್ನು ಸರಿಪಡಿಸುವವರಾರು?

ಈ ವಿಚಾರದಲ್ಲಿ ಆಧುನಿಕ ಸಂಸ್ಕಾರಕ್ಕೊಳಗಾದ, ವಿಚಾರದಿಂದ ಪ್ರಭಾವಿತಗೊಂಡವನ ಉದ್ವೇಗ ಸಹಜವೇ! ಆತನ ಕ್ರಾಂತಿಮನೋಧರ್ಮ ಸಹಜವೇ! ಆತನ ಉದ್ವೇಗವು ವಿಚಾರಶೀಲತೆಯಿಂದ ಬಂದದ್ದಲ್ಲದಿರಬಹುದು. ಆದರೆ ತಾನು ಕಂಡ ನಿದರ್ಶನ ಯಾವ ಆದರ್ಶವನ್ನು ಹೇಳುತ್ತದೋ ಆ ಆದರ್ಶವನ್ನು ಬಾಳದಿದ್ದರೆ ಸ್ವಾಭಾವಿಕವಾಗಿಯೇ ಪ್ರತಿಕ್ರಿಯೆಯನ್ನು ಆಹ್ವಾನಿಸುತ್ತದೆ. ಅಂತಹ ವ್ಯಕ್ತಿಯೊಬ್ಬನ ಉದ್ವೇಗ ಸಮಾಜದಲ್ಲಿ ಸುಪ್ತವಾಗಿ ಅಡಗಿಕೊಂಡಿರುವ ಅಸಮಾಧಾನದ ಅಭಿವ್ಯಕ್ತಿ ಇರಬಹುದು. ಅಂತಹ ಅಸಮಾಧಾನದ ನಿದರ್ಶನ ಸಂಖ್ಯೆಯಲ್ಲಿ ಕೇವಲ ಒಂದೇ ಎನಿಸಿದರೂ ಅದರ ತೀವ್ರತೆಯನ್ನಾದರೂ ನಾವು ಗ್ರಹಿಸಬೇಕಾಗುತ್ತದೆ. ಸೂಕ್ಷ್ಮಮತಿಗೆ ಅದರ ಸೂಚನೆಯೇ ಸಾಕು—ತಾನು ಸುಧಾರಿಸುವುದಕ್ಕೆ!

ಉದ್ವೇಗದ ಆವೇಶದಲ್ಲಿ ವ್ಯಕ್ತಿ ಸಂಪ್ರದಾಯಬದ್ಧ ಜೀವನವನ್ನು ತೆಗಳುವುದು ಸಹಜ. ಯಾವ ಸಂಪ್ರದಾಯ ಜೀವನಕ್ಕೆ ಚೈತನ್ಯವನ್ನು ನೀಡದೋ ಅಂತಹುದನ್ನು ಕಟ್ಟಿಕೊಂಡು ಬಾಳುವುದಾದರೂ ಏಕೆಂದು ಆತ ಕೇಳಬಹುದು. ಹಿಂದಿನ ಪರಂಪರೆಯನ್ನು ತ್ಯಜಿಸಿ ಹೊಸ ಜೀವನವನ್ನು ನಡೆಸಲು ಆಸಕ್ತನಾಗಬಹುದು. ಕಾಣದ ಯಾವ ದೈವವಾಗಲೀ, ಪರಲೋಕದ ಯಾವ ಅಲೌಕಿಕ ಆನಂದವಾಗಲೀ ತನಗೆ ಬೇಡವೆಂದು, ತನ್ನ ಪರಿಸರ ಮತ್ತು ಅದಕ್ಕೆ ಸಾಪೇಕ್ಷವಾದ ತನ್ನ ಇರವು ಇವುಗಳಿಗೆ ಸಂಬಂಧ ಪಟ್ಟ ಜೀವನಕ್ರಮವನ್ನು ರೂಪಿಸಬೇಕೆಂದು ಹೊರಡಬಹುದು. ಸಂಪ್ರದಾಯಜೀವನದಲ್ಲಿ ಸ್ವಾತಂತ್ರ್ಯ ವನ್ನು ಕಾಣದ ಆತನು ಹೊಸ ಇರವಿನ ತತ್ತ್ವವನ್ನೇ ಪ್ರತಿಪಾದಿಸ ಹೊರಡಬಹುದು.

ಇವೆಲ್ಲವೂ ಅಪ್ರಮಾಣಿಕ ಸಂಪ್ರದಾಯಜೀವನವನ್ನು ನಡೆಸುವವನಿಂದ ಇಂದಿನ ಪೀಳಿಗೆಯ ಮೇಲೆ ಆಗಬಹುದಾದ ಪರಿಣಾಮಗಳೆಂದು ಗಮನಿಸಬೇಕು. ಎಲ್ಲದಕ್ಕಿಂತ 'ತತ್ತ್ವ'ವೆನ್ನುವುದು ದೊಡ್ಡದೆನ್ನುವ ಕಾಲ ಒಂದಿತ್ತು. ತರ್ಕನಿಷ್ಠವಾಗಿ ತರ್ಕಸಂಯುತವಾಗಿ, ತರ್ಕ ಆಧಾರಿತವಾದ ಧರ್ಮವನ್ನು ಅವಲಂಬಿಸುವುದೇ ಶ್ರೇಯಸ್ಕರ ಎನ್ನುವ ಭಾವ ಇತ್ತು. ಆದರೆ ಈಗ ತರ್ಕಕ್ಕಿಂತ, ತತ್ತ್ವಕ್ಕಿಂತ ಜೀವನ ದೊಡ್ಡದು ಎನ್ನುವ ಮಾತು, ದೃಷ್ಟಿ ಬಂದಿದೆ. ತತ್ತ್ವಕ್ಕೂ ಜೀವನಕ್ಕೂ ಸಂಬಂಧ ವಿಲ್ಲವೆನ್ನುವ ಧೋರಣೆ ಇದರಲ್ಲಿಲ್ಲ. ಆದರೆ ತತ್ತ್ವ ಶುಷ್ಕವಾದರೆ ಜೀವನ ಬೆಂದೀತು ಎನ್ನುವ ಕಾತರ ಇಲ್ಲಿದೆ. ಈ ಕಾರಣದಿಂದಲೇ ಸಂಪ್ರದಾಯವನ್ನು ಕುರಿತ ಅನೇಕ ಆಕ್ಷೇಪಣೆಗಳು ಕೇಳಿಬರುತ್ತಿವೆ.

ಭಾರತದ ಎದುರಿಗಿರುವ ಸಮಸ್ಯೆ ಇದೇ. ಅದರ ಸಂಪ್ರದಾಯದ ಔಚಿತ್ಯವನ್ನು ಪ್ರಶ್ನಿಸುವ ಬಗೆಯೂ ಇದೇ. ಸಂಪ್ರದಾಯವನ್ನು ನಂಬಿಕೊಂಡ ಈ ಜನಾಂಗ ನಿಷ್ಕ್ರಿಯಾವಂತವಾಗಿ ಜಡವಾಗಿದೆ. ಕರ್ಮವಾದದ ಭಾರದಲ್ಲಿ ತನ್ನ ವೈಯಕ್ತಿಕ ಸ್ವಾತಂತ್ರ್ಯವನ್ನೇ ಕಳೆದುಕೊಂಡಿದೆ. ಪರಸ್ಪರ ಅನುಕರಣೆಯೇ ತನಗೆ ಮಾರ್ಗವೆಂಬ ಭಾವದಿಂದ ಹೀಗೆ ದಾಸ್ಯವನ್ನೇ ತಂದುಕೊಳ್ಳುತ್ತಿದೆ. ಭಾರತ ತನ್ನ ದುರ್ದೆಶೆ ಯಿಂದ ಎಚ್ಚೆತ್ತುಕೊಂಡು ಪ್ರಪಂಚದ ಮಾರ್ಗದರ್ಶಕತ್ವವನ್ನು ತಾಳುವ ಹಂಬಲ ಪಡೆಯದಿದ್ದರೂ ಪ್ರಥಮವಾಗಿ ತನ್ನನ್ನು ತಾನು ಸರಿಮಾಡಿಕೊಳ್ಳುವ ಹಂಬಲವನ್ನಾದರೂ ಅಗತ್ಯವಾಗಿ ಪಡೆದಿರಬೇಕು. ಇದು ಆಧುನಿಕನ ಆಹ್ವಾನ, ಆಗ್ರಹ.

ಪಾಶ್ಚಾತ್ಯ ದರ್ಶನಗಳ, ತತ್ತ್ವವೇತ್ತರ 'ಅನುಭವ'ವೂ ಈ ತೆರನಾದ ಆಹ್ವಾನಕ್ಕೆ ಪ್ರಚೋದನೆ ಯಾಗಿದೆ ಎಂಬುದನ್ನು ನಾವು ಇಲ್ಲಿ ಗಮನಿಸಬೇಕು.

ತತ್ತ್ವವನ್ನು ತತ್ತ್ವವನ್ನಾಗಿಯೇ, ಧರ್ಮವನ್ನು ಧರ್ಮವನ್ನಾಗಿಯೇ ಜೀವನವನ್ನು, ಜೀವನ ವನ್ನಾಗಿಯೇ ನೋಡುವ ಪರಿಪಾಠ ಅಲ್ಲಿನ ವೈಶಿಷ್ಟ್ಯ. ವಿಚಾರದ ದೃಷ್ಟಿಯಿಂದ ಈ ಕ್ರಮ ಉತ್ತಮ ಪರಿಣಾಮಗಳನ್ನು ಉಂಟುಮಾಡುತ್ತದೆ. ಜೀವನದ ದೃಷ್ಟಿಯಿಂದಲೂ ಒಂದು ತೆರನಾದ ಪ್ರಾಮಾಣಿ ಕತೆಯೂ ಇರುತ್ತದೆನ್ನಬಹುದು. ಆದರೆ ಭಾರತದ ಅನುಭವ ಇದನ್ನು ನಿರಾಕರಿಸುತ್ತದೆ. ಯಾವ ತತ್ತ್ವವಾಗಲೀ, ಧರ್ಮವಾಗಲೀ, ಜೀವನದಲ್ಲಿ ಸಮನ್ವಯಗೊಳ್ಳದಿದ್ದರೆ ಅವು ಕೇವಲ ಶುಷ್ಕ ವೆನ್ನುವ ಇಲ್ಲಿನ ದೃಷ್ಟಿ ಮಾನ್ಯ ಮತ್ತು ಸಾಧುವೆಂದೇ ಹೇಳಬೇಕು. ಈ ದೃಷ್ಟಿಯಿಂದ ಭಾರತದ ದೃಷ್ಟಿ ಪರಿಪೂರ್ಣವೆಂದೇ ಸರ್ವರಿಗೂ ಮಾನ್ಯವಾಗಬೇಕು.

III

ಆದರೆ ಇತ್ತೀಚೆಗೆ ಪಾಶ್ಚಾತ್ಯಖಂಡದಲ್ಲಿ ಹುಟ್ಟಿಬಂದ ನವೀನ ವಿಚಾರಧಾರೆಯೊಂದಿದೆ. ಮಾನವನ ಪ್ರಗತಿಗೆ, ಮಾನವನ ಕರ್ಮಕ್ಕೆ ಮಾನವನನ್ನೇ ಕಾರಣನನ್ನಾಗಿ ಮಾಡುವುದು ಈ ವಿಚಾರ ಧಾರೆಯ ಲಕ್ಷಣ. ಇದು ಅನೇಕರನ್ನು ಆಕರ್ಷಿಸಿದೆ ಎಂದು ಹೇಳಬಹುದು. ಇದನ್ನು 'ಇರವಿನ ಮೀಮಾಂಸೆ' (Existentialism) ಎನ್ನುತ್ತಾರೆ. ಮಾನವನು ತನ್ನ ಎಲ್ಲ ಮೌಲ್ಯಗಳನ್ನೂ ತನ್ನ ಇರವಿನಿಂದಲೇ ಪಡೆಯುತ್ತಾನೆ, ರೂಪಿಸಿಕೊಳ್ಳುತ್ತಾನೆ. ತನ್ನ ಸ್ವಾತಂತ್ರ್ಯಕ್ಕೆ, ದಾಸ್ಯಕ್ಕೆ, ಪ್ರಗತಿಗೆ, ಸೋಲಿಗೆ ತಾನೇ ಜವಾಬ್ದಾರ. ಯಾವ ಪೂರ್ವಕರ್ಮದ ಬಾಧೆಯೂ ಇಲ್ಲ, ಇತರ ಕಾರಣಗಳ ನಿರ್ಬಂಧವೂ ಇಲ್ಲ. ಶುದ್ಧ ಅಸ್ತಿತ್ವದ ಪ್ರಥಮ ಸೋಪಾನದ ಮೇಲೆ ನಿಂತ ಮಾನವನಿಗೆ 'ಒಂಟಿತನ'ದ

ಅನುಭವವೇ ಎಲ್ಲ ಪ್ರವೃತ್ತಿಗೂ ಚೋದಕವಾಗುತ್ತದೆ. ತಾನು ಮಾಡಿದರೆ ಉಂಟು, ಇಲ್ಲದಿದ್ದರೆ ಇಲ್ಲ ಎನ್ನುವ ಮನಃಸ್ಥಿತಿಯಲ್ಲಿ ಸ್ವಾಭಾವಿಕವಾಗಿ ಆತನಲ್ಲಿ ಉದ್ವೇಗ ಅಥವಾ ಕಾತರತೆ, ಜವಾಬ್ದಾರಿಯುಂತಾದ ಭಾವಗಳು ತುಂಬುತ್ತವೆ. ಎಲ್ಲ ಪ್ರವೃತ್ತಿಯಲ್ಲೂ, ಕಾರ್ಯದಲ್ಲೂ, ತನ್ನ ಸಮಸ್ತ ವ್ಯಕ್ತಿತ್ವವನ್ನೇ ತುಂಬಬೇಕಾದ ಪರಿಸ್ಥಿತಿ ಬರುವುದರಿಂದ ಜವಾಬ್ದಾರಿ ತಾನೇ ತಾನಾಗಿ ಬರುತ್ತದೆ. ಸ್ವಾತಂತ್ರ್ಯ ತಾನೇ ತಾನಾಗಿ ಇರುತ್ತದೆ. ತನಗೇ ತಾನು ಕೆಟ್ಟದ್ದನ್ನು ಮಾಡಿಕೊಳ್ಳುವ ಮಾನವನಾರೂ ಇರಲಾರ. ಈ ಕಾರಣದಿಂದ ಒಳಿತನ್ನೇ ಆತನು ಸ್ವಾಭಾವಿಕವಾಗಿ ಹುಡುಕುತ್ತಾನೆ. ಇದೇ ಕಾರಣದಿಂದ ಇತರರ ಒಳಿತನ್ನೇ ತನ್ನ ಕಾರ್ಯಪರಿಧಿಯಲ್ಲಿ ಸೇರಿಸುತ್ತಾನೆ. ಎಂದರೆ ತನ್ನ ಜವಾಬ್ದಾರಿಯಲ್ಲಿ ಇತರರನ್ನು ಭಾಗಿಗಳಾಗಿಸುತ್ತಾನೆ. ಎಲ್ಲ ನಂಬಿಕೆ ನಡವಳಿಕೆಗಳೂ ಮಾನವತೆಯ ಕೇಂದ್ರದಿಂದ ಹೊರಡುವುದರಿಂದ ಎಲ್ಲ ಪ್ರವೃತ್ತಿಗಳೂ ಸ್ವಾತಂತ್ರ್ಯಪರವಾದ ಉದ್ವೇಗ ಮತ್ತು ಜವಾಬ್ದಾರಿಭಾವಗಳಿಂದ ಚೋದಿಸಲ್ಪಡುವುದರಿಂದ ಯಾವ ಫಲ ಬರುತ್ತದೆಂಬ ಭ್ರಾಂತಿ ಇರಬೇಕಾದದ್ದಿಲ್ಲ. ಒಳಿತೇ ಆಗುತ್ತದೆ. ಆದರೆ ಈ ಒಳಿತಿನ ಅರಿವು ಮಾತ್ರ ಇಟ್ಟುಕೊಳ್ಳದೆ ಪ್ರವೃತ್ತಿಯೊಂದೇ ಗುರಿಯಾಗಿಟ್ಟುಕೊಂಡಿರುವುದರಿಂದ ಇದೊಂದು 'ಕರ್ಮಯೋಗ'ವಾಗುತ್ತದೆ. ಮಾನವನ ಸಕಲ ವ್ಯಕ್ತಿತ್ವವನ್ನೂ ಒಂದು ಪ್ರವೃತ್ತಿ ಅಥವಾ ಕಾರ್ಯದಲ್ಲಿ ನಿಯೋಜಿತಗೊಳಿಸುವುದರಿಂದ ಅದು 'ಭಕ್ತಿಯೋಗವೂ' ಆಗುತ್ತದೆ. ವ್ಯಕ್ತಿತ್ವದ ರೂಪರೇಷೆಗಳ ಮೀಮಾಂಸೆ ಶುದ್ಧ ಅರಿವನ್ನು ಆಧಾರವಾಗಿಟ್ಟುಕೊಳ್ಳುವುದರಿಂದ ಇದು 'ಜ್ಞಾನಯೋಗ'ವೂ ಆಗುತ್ತದೆ.

ಈ ಮೀಮಾಂಸೆ ಹೇಗೇ ಇರಲಿ. ಪ್ರಚಲಿತ ಪರಿಸ್ಥಿತಿಯಲ್ಲಿ ಗಮನಾರ್ಹವಾದ ಪ್ರಭಾವ ಇದರಿಂದ ನಮ್ಮ ಹೊಸ ಪೀಳಿಗೆಯ ಮೇಲೆ ಬಿದ್ದಿದೆ. ಈ ತೆರನಾದ ತತ್ತ್ವ ನಮ್ಮಲ್ಲಿ ಇದ್ದಿಲ್ಲವೆಂದಲ್ಲ. ಅದು ನಿರಂತರವಾಗಿ ಇದ್ದುದೇ. ಪ್ರಾಯೋಗಿಕವಾಗಿ ಈ ದೃಷ್ಟಿ ನಮ್ಮದಾಗಬೇಕೆಂದೇ ಎಲ್ಲ ಮಹಾತ್ಮರ ಚಿಂತನೆಯಾಗಿತ್ತು. ಅನೇಕ ಧರ್ಮ ಮತ್ತು ನೀತಿಸೂತ್ರಗಳಲ್ಲಿ ಅಡಗಿರುವ ಮಾತುಗಳೇ ಇವು. ಮಾನವನ ಜೀವಿತಕಾಲದ ಮಿತಿಯಲ್ಲಿ ತಾನು ಏನನ್ನು ಸಾಧಿಸಬೇಕು, ಸಾಧಿಸಬಹುದು ಎನ್ನುವುದನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಹೋರಾಡಬೇಕೆನ್ನುವ ಈ ವಿಚಾರಧಾರೆ ಸ್ವಾಗತಾರ್ಹವಾಗಿದೆ. ಎಲ್ಲ ನೀತಿ, ಧರ್ಮ, ಸಂಸ್ಕೃತಿ ಮಾನವ ಉನ್ನತಿಗೆ ಸಾಧಕವಾಗಿರಬೇಕೆಂಬ ಹಂಬಲ ಎಲ್ಲ ತತ್ತ್ವಸಿದ್ಧಾಂತಗಳಲ್ಲಿದ್ದರೂ ಸಹ ವ್ಯಕ್ತಿಗತವಾದ ಜವಾಬ್ದಾರಿಯನ್ನು ಒತ್ತಿ ಹೇಳುವ ಈ ಧಾಟಿ ಸಕಾಲಿಕವೆಂದೇ ಹೇಳಬೇಕು. ಈ ದೃಷ್ಟಿಯ ಪ್ರಕಾರ ಯಾರೂ ಕೂತು ತಿನ್ನುವಹಾಗಿಲ್ಲ. ಎಲ್ಲ ಸಮಯದಲ್ಲೂ ಜೀವನದಲ್ಲಿ ಒದಗುವ ಸನ್ನಿವೇಶ ಸಂದಿಗ್ಧಗಳನ್ನು ಎದುರಿಸಿಯೇ ಮುನ್ನಡೆಯಬೇಕು. ಮೌಲ್ಯಗಳನ್ನು ನಾವು ಕಟ್ಟಬೇಕಲ್ಲದೆ ಮೌಲ್ಯವೂ ಪೂರ್ವಭಾವಿಯಾಗಿದ್ದು ಅದನ್ನು ನಾವು ಸಾಧಿಸಬೇಕು ಎನ್ನುವುದಲ್ಲ. ಈ ಸಿದ್ಧಾಂತದ ವಿಸ್ತರಿಕೆಯೇನೆಂದರೆ ಎಲ್ಲವನ್ನೂ ನಾವು ಸೃಷ್ಟಿಸಬೇಕು ಎನ್ನುವುದು. ಇದು ವಿವೇಕದ ಹಾದಿಯಾಗಿದೆ. ತಿರಸ್ಕರಿಸುವ ಹಾಗಿಲ್ಲ.

ಯಾವ ಆಧ್ಯಾತ್ಮಿಕವನ್ನೂ ಹೊಸ್ತಿಲಿನ ಆಚೆ ಹುಡುಕಿಕೊಂಡು ಹೋಗಬೇಕಾಗಿಲ್ಲ. ಎನ್ನುವ ಸನಾತನ ಭಾರತದ ದೃಷ್ಟಿ ನೂತನ ಮಾತುಗಳಿಂದ ಇಲ್ಲಿ ವ್ಯಕ್ತಗೊಳ್ಳುತ್ತದೆ. ಬಾಳಿಗೆ ಔಚಿತ್ಯ ಬರಬೇಕಾದರೆ ವ್ಯಕ್ತಿ ವ್ಯಕ್ತಿಯೂ ಜೀವನ ಚಕ್ರದ ಕೇಂದ್ರವಾಗಬೇಕು. ಸಮುದಾಯದ ಚಿಂತನ ಅನೇಕ ರೂಪವಾದದ್ದಾದರೂ ಅದರ ಲಾಭ ತನ್ನದಾಗಬೇಕಾದರೆ ತನ್ನ ವ್ಯಕ್ತಿಜೀವನದ ಮೂಸೆಯಲ್ಲಿ ಹದಗೊಳಿಸಬೇಕಾಗುತ್ತದೆ. ಇನ್ನೊಬ್ಬನ ಅನುಭವದ ಆಶಾಗೋಪುರದಲ್ಲಿ ನಮ್ಮ ಸ್ವಂತ ಜೀವನ ನಡೆಸಲಾಗದು. ಅದು ಬಾಡಿಗೆಯ ಮನೆಯಲ್ಲಿನ ಸಂಸಾರ. ಗುರುವು ಶಿಷ್ಯನಲ್ಲಿ ಉದ್ಬೋಧಿಸುವ ಅನುಭವವಾದರೂ ಶಿಷ್ಯನದೇ ಆಗಬೇಕಲ್ಲದೆ ಗುರುವಿನದಾಗುವುದಿಲ್ಲ. ಎಲ್ಲ ತತ್ತ್ವಾನುಭವವೂ, ಸತ್ಯಾನುಭವವೂ ಅಪರೋಕ್ಷ ಸಾಧನವಾಗಬೇಕು. ಶ್ರುತಿಯು ಮಾರ್ಗ ತೋರಿಸುವುದಾದರೂ ನಡೆಯಬೇಕಾದವರು ನಾವೇ ಆಗಬೇಕು.

'ಜವಾಬ್ದಾರಿಯ' ದೃಷ್ಟಿಯಿಂದ ಹೇಳಬಹುದಾದರೆ ಭಾರತದ ಧರ್ಮಗ್ರಂಥವಾದ ಭಗವದ್ಗೀತೆ ಬಹು ಮೆಚ್ಚಿನ ತತ್ತ್ವವನ್ನು ಪ್ರತಿಪಾದಿಸಿದೆ. ವ್ಯಕ್ತಿಯು ತನ್ನ ಮನೆ, ಸಂಸಾರ, ಹೆಂಡತಿ, ಮಕ್ಕಳ

ಕ್ಷೇಮಕ್ಕೆ ಮೀಸಲಾದವನಲ್ಲ. ವ್ಯಕ್ತಿಯ ಜವಾಬ್ದಾರಿಯ ಕ್ಷೇತ್ರದಲ್ಲಿ ಸಮಾಜ ಅಥವಾ ಸಮುದಾಯ–ಮತ್ತೂ ವಿಸ್ತಾರವಾದ ದೃಷ್ಟಿಯಲ್ಲಿ ನೋಡುವುದಾದರೆ ಭೂತ ಭೌತಿಕ ವಿಶ್ವವೂ ಕೂಡ–ಪಾಲುಗೊಳ್ಳುತ್ತದೆ. ವ್ಯಕ್ತಿಯು ವ್ಯಕ್ತಿತ್ವ ವಿಶ್ವರಚನೆಯ ಅಂಶಗಳಲ್ಲಿ ಒಂದು ಘಟಕವೆಂದು ಅರಿವಾಗುವ ತನಕ ಪೂರ್ಣ ಜವಾಬ್ದಾರಿಯನ್ನು ಸಾಧಿಸಿದಂತಾಗುವುದಿಲ್ಲ. ವ್ಯಕ್ತಿಯು ಮಾನವತೆಯ ಪ್ರತೀಕವೆಂಬ ಕಾರಣದಿಂದಲೇ ಇಷ್ಟು ವಿಸ್ತಾರವಾದ ಅರ್ಥದಲ್ಲಿ ತನ್ನ ನಿಲುವನ್ನು ಕಂಡುಕೊಳ್ಳಬೇಕು. ಮಾನವತೆ ಪ್ರತಿಯೊಂದು ವ್ಯಕ್ತಿಯಲ್ಲೂ ನಿರೀಕ್ಷಿಸುತ್ತಿರುವ ಅಂಶವೊಂದಿದೆ. ವಿಕಾಸವಾದದ ಹೃದಯ ಇಲ್ಲಿ ಅಡಗಿದೆ. ಕೈಬೆರಳು ಇದನ್ನು ತೋರಿಸುತ್ತಿದೆ. ಯಾವ ವ್ಯಕ್ತಿ ಮಾನವತೆಯನ್ನು ಒಂದು ಹೆಜ್ಜೆ ಮುಂದೆ ತೆಗೆದುಕೊಂಡು ಹೋಗುವನೋ ಅವನೇ ಮಹಾತ್ಮ. ಮಾನವತೆಯ ಪ್ರಗತಿಯನ್ನು ಅಳೆಯುವ ಅಳತೆಗೋಲೂ ಅವನೇ. ಜೀವ ವಿಶೇಷದ ಸಂಗೋಪನ ಮತ್ತು ಸಂಘಟನ ಪ್ರತಿಯೊಬ್ಬ ಜೀವಿಯಲ್ಲೂ ನಡೆಯುತ್ತಿರುವ ಹಾಗೆಯೇ ಮಾನವತೆಯೆಂಬ ಮೌಲ್ಯ ಪ್ರತಿಯೊಬ್ಬ ಮಾನವನಲ್ಲಿಯೂ ಪ್ರಗತಿಗೋಸ್ಕರ ನಿರೀಕ್ಷಿಸುತ್ತಿದೆ. ಇದನ್ನೇ ಪೂರ್ವಿಕರು ಆತ್ಮನಿರೀಕ್ಷೆ ಎಂದಿದ್ದಾರೆ. ಇದರ ಅರಿವಾಗಬೇಕೆಂಬ ಉದ್ದೇಶದಿಂದಲೇ ಆ ಧರ್ಮಗ್ರಂಥ ಇದನ್ನು 'ಲೋಕಸಂಗ್ರಹ' ಎಂದು ಕರೆದಿದೆ. ಇದರ ಅರಿವಾದರೆ ಮಾನವನು ತನ್ನ ಜವಾಬ್ದಾರಿಯನ್ನು ತಿಳಿದುಕೊಳ್ಳುವುದಲ್ಲದೆ ಇತರರಿಗೂ ಜವಾಬ್ದಾರಿಯಾಗುತ್ತಾನೆ. ಜೀವನವೆನ್ನುವುದು ಜವಾಬ್ದಾರಿಯುತವಾದ ವಿಶ್ವಪ್ರಸಂಗ. ಹಗುರವಾದ ಆಕಸ್ಮಿಕ ಪ್ರಾಕೃತಿಕ ಘಟನೆಯಲ್ಲ ಎಂದು ಎಚ್ಚರಿಸುವುದೇ ಈ ಗ್ರಂಥದ ಅಭಿಪ್ರಾಯ. ಇದರ ಗ್ರಹಿಕೆ ನಮಗೆ ಅಗತ್ಯವಾಗಿ ಬೇಕಾಗಿದೆ.

IV

ಪ್ರಸ್ತುತ ಸಮಯದಲ್ಲಿ ಭಾರತದ ತಾತ್ತ್ವಿಕ ಇತಿಹಾಸದ ಅಂಗಗಳಾದ ಹಲವು ದರ್ಶನಗಳಿವೆ, ಮತಗಳಿವೆ, ಪಂಥಗಳಿವೆ. ಅವುಗಳ ಸೂಕ್ಷ್ಮ ಹಾಗೂ ವಿಸ್ತಾರವಾದ ಪರಿಚಯಸೌಲಭ್ಯವೂ ಇದೆ. ಜಾತಿಮತಗಳ ಭೇದವಿಲ್ಲದೆ. ಎಲ್ಲರೂ ಎಲ್ಲವನ್ನೂ ತಿಳಿದುಕೊಳ್ಳುವ ಅವಕಾಶವಿದೆ. ಆದರೆ ಅವಕಾಶ ಮಾಡಿಕೊಂಡು ಅವುಗಳೆಲ್ಲವರ. ಅಥವಾ ಅವುಗಳಲ್ಲೊಂದರ ಅಧಿಕೃತಜ್ಞಾನವನ್ನು ಸಂಪಾದಿಸುವವನಿನಾವರೂ ಆ ವಿಭಾಗದ ದರ್ಶನ ಅಥವಾ ಸತ್ತ್ವವು ಜೀವನವನ್ನು ಯಾವ ರೀತಿ ಮಾರ್ಪಾಟು ಮಾಡಬಲ್ಲದು ಎನ್ನುವುದಕ್ಕೆ ನಿದರ್ಶನಗಳೆಂಬ ವ್ಯಕ್ತಿಗಳು ಕಾಣದಾಗಿದ್ದಾರೆ. ಆದರೆ ಇಲ್ಲವೇ ಇಲ್ಲವೆಂದರ್ಥವಲ್ಲ. ತತ್ತ್ವವನ್ನು ಬಾಳುವವರು ಬೇಕು.ಹೇಳುವವರಲ್ಲ. ತತ್ತ್ವ ಪ್ರಕ್ಷಿಪ್ತವಲ್ಲ. ಅದು ಸರಳ ಎನ್ನುವ ಅನುಭವದ ಮಾತು ಉಪನಿಷತ್ಕಾಲಕ್ಕೂ ನಿಜ. ಈಗಲೂ ನಿಜ. ಸಂಕೀರ್ಣಜೀವನ ಹೆಚ್ಚಿದಷ್ಟೂ ತತ್ತ್ವ ನುಸುಳಿಕೊಳ್ಳುತ್ತದೆ. ಆದ್ದರಿಂದಲೇ ಸಂನ್ಯಾಸ, ತ್ಯಾಗ, ವೈರಾಗ್ಯ, ಸರಳತನ, ಮನೋವೈಶಾಲ್ಯ ಎನ್ನುವ ಆದರ್ಶಗಳಿದ್ದರೆಯೇ ಈ ತತ್ತ್ವ ಉಳಿಯುವುದು. ವ್ಯಕ್ತಿಯ ವಾತಾವರಣ ಎಷ್ಟೇ ಸಂಕ್ಲಿಷ್ಟವಾಗಿರಲಿ ಸಂಕೀರ್ಣವಾಗಿರಲಿ ತ್ಯಾಗ ವೈರಾಗ್ಯಗಳು ಕೇವಲ ಮಾನಸಿಕ ಭಾವಗಳಾಗಿರದೆ ಪ್ರವೃತ್ತಿಯಲ್ಲೂ ತೋರಿಸುವುದಾದರೆ ಜೀವನದ ಮೌಲ್ಯ ತಾನೇ ತಾನಾಗಿ ಬೆಳಗುತ್ತದೆ. ತ್ಯಾಗ ವೈರಾಗ್ಯಗಳು ಮಾನವನ ಹೃದಯ ಲಕ್ಷಣಗಳಾಗಿರುವಂತೆಯೇ ಹೃದಯವನ್ನು ಮಿಡಿಯುಲೂಬಯುದು. ಸರಳ ಸೌಂದರ್ಯ ಎಲ್ಲ ಆಭರಣಗಳಿಗಿಂತ ಉತ್ತಮ ಎನ್ನುತ್ತಾರೆ. ಹಾಗೆಯೇ ವ್ಯಕ್ತಿಯ ಮನಸ್ಸೌಂದರ್ಯ ಆತನ ಔದಾರ್ಯ, ಕರುಣೆ. ಅನುಕಂಪ. ಸಹಾಯಪರತೆ. ಸೇವಾಶೀಲತೆ ಮುಂತಾದ ಪ್ರವೃತ್ತಿಗಳಲ್ಲಿ ವ್ಯಕ್ತವಾಗಬೇಕು.

ಬಾಳಿನ ಅರ್ಥ ನಮಗಾಗಬೇಕೆಂದರೆ ಆಧುನಿಕ ನಾಗರಿಕತೆಯ ತುತ್ತತುದಿಯಲ್ಲಿರುವ ಒಂದು ವರ್ಗವನ್ನು ಮಾತ್ರ ಅಧ್ಯಯನ ಮಾಡಬೇಕೆಂದಲ್ಲ. ಏಕೆಂದರೆ ಪ್ರಾಚೀನ ಗುಹೆ-ಮಾನವನ ಜೀವನ ಪ್ರಶ್ನೆಯೂ ಈಗಿನ ನಾಗರಿಕ ಯುಗದ ಜೀವನ ಪ್ರಶ್ನೆಯೂ ಒಂದೇ ಆಗಿದೆ. ಆಹಾರ, ಬಟ್ಟೆ, ವಸತಿಯ ಪ್ರಶ್ನೆ ಆಗಲೂ ಇತ್ತು. ಈಗಲೂ ಇದೆ. ಆದರೆ ಒಂದೇ ವ್ಯತ್ಯಾಸ. ನಾಗರಿಕತೆಯ ಕ್ಷೋಭೆ ಇಂದಿನ ಮನಸ್ಸನ್ನು ಆವರಿಸಿದೆ. ಅಂದಿನವನವನ್ನಲ್ಲ. ಚರಿತ್ರೆಯಲ್ಲಿ ಹಿಂದೆ ಹಿಂದೆ ಸರಿದಷ್ಟೂ ಬಾಳ್ವೆಯಲ್ಲಿ ಸಂತೃಪ್ತಿಯಿತ್ತು, ಸಂತೋಷವಿತ್ತು. ಆದರೆ ಜೀವನ ಸೌಲಭ್ಯಗಳು ಹೆಚ್ಚಿದ ಇತ್ತೀಚಿನ ಕಾಲದಲ್ಲಿ

ಅದು ಮಾಯವಾಗಿದೆ ಅಥವಾ ಕ್ಷೀಣವಾಗಿದೆ. ಮಾನವನ ಶುದ್ಧಭಾವನೆ, ಆತ್ಮಸಂತೃಪ್ತಿ, ಸರಳ ಜೀವನ ಇಂತಹವು ಅವನ ಉನ್ನತಿಯನ್ನು ತೋರಿಸುತ್ತವೆ. ಎಂದರೆ, ಆತನು ಪ್ರಾಪಂಚಿಕ ವ್ಯವಹಾರ, ನಾಗರಿಕತೆಯ ಪ್ರಗತಿ ಮುಂತಾದವುಗಳ ಜ್ಞಾನವನ್ನು ಪಡೆಯಕೂಡದು ಎನ್ನುವ ಮಾತೂ ಅಲ್ಲ. ಜ್ಞಾನ ಹೆಚ್ಚಿದಷ್ಟೂ ಶಾಂತಿ ಇರಬೇಕು: ಹೊರಗೂ ಇರಬೇಕು, ಒಳಗೂ ಇರಬೇಕು.

ಭಾರತದ ತಾತ್ತ್ವಿಕ ಮತ್ತು ಧಾರ್ಮಿಕ ಸಂಪತ್ತು ಹಿರಿದು. ಇದನ್ನು ಎಲ್ಲರೂ ಒಪ್ಪಬೇಕು. ಪಾಶ್ಚಾತ್ಯ ಚಿಂತನೆಯಲ್ಲಿ ಎಷ್ಟು ವೈವಿಧ್ಯವಿದೆಯೋ ಅಷ್ಟೂ ವೈವಿಧ್ಯ ಇಲ್ಲಿವೆ. ಸತ್ಯ ಯಾವುದೆಂದು ನಿರ್ಧರಿಸುವುದರಲ್ಲಿ, ಅದನ್ನು ಪ್ರತಿಪಾದಿಸುವುದರಲ್ಲಿ ಎಷ್ಟು ಮಾರ್ಗಗಳಿವೆಯೋ ಅಷ್ಟೂ ಮಾರ್ಗಗಳನ್ನು ಇಲ್ಲೂ ಕಾಣಬಹುದು. ಆದರೆ ಆಧುನಿಕ ಪರಿಣಾಮಗಳಿಗೆ ಸಿಲುಕಿ ಜರ್ಝರಿತವಾದ ಭಾರತೀಯನ ಮನಸ್ಸಿಗೆ ಉತ್ಸಾಹ ನೀಡುವ ಮೂಲಕ ಪರಿಣಾಮಕಾರಿಯಾದ ರೀತಿಯಲ್ಲಿ ಅವನ ಜೀವನಕ್ಕೆ ಬೇಕಾಗದಿದ್ದರೆ ಇಷ್ಟೂ ಸಂಪತ್ತು ವ್ಯರ್ಥವಾದಂತಾಗುತ್ತದೆ. ವಿಜ್ಞಾನ ನೀಡುವ ಖಚಿತಜ್ಞಾನ, ವಿಜ್ಞಾನದ ಪ್ರಾಯೋಗಿಕ ವಿಧಾನ ನೀಡಿರುವ ಜೀವನ ಸೌಲಭ್ಯ, ಆಧುನಿಕ ಮಾನವಿಕಶಾಸ್ತ್ರಗಳು, ತಂತ್ರಗಳು ಸಮಾಜದಲ್ಲಿ ಉಂಟುಮಾಡಿರುವ ಜೀವನ ಮಾರ್ಪಾಡು ಇವುಗಳೆಲ್ಲದಕ್ಕೂ ಸರಿಸಮಾನವಾಗಿ, ಮತ್ತು ಇವುಗಳೆಲ್ಲದರ ಲೌಕಿಕ ಮತ್ತು ಪ್ರಯೋಗ ಪ್ರವೃತ್ತಿಗಳಿಂದ ಆಗುವ ದುಷ್ಪರಿಣಾಮಗಳನ್ನು ತಡೆಹಿಡಿಯುವಲ್ಲಿ ಏಕೈಕ ಶಕ್ತಿಯಾಗಿ ತತ್ತ್ವಚಿಂತನೆ ಮತ್ತು ಅನುಸಂಧಾನಗಳು ತಮ್ಮನ್ನು ಅಳವಡಿಸಿ ಕೊಳ್ಳದಿದ್ದರೆ ಅವುಗಳ ಔಚಿತ್ಯ ಕಡಿಮೆಯಾಗುವುದೆಂಬ ಭಯ ಮನದಲ್ಲಿ ಮೂಡುವುದು ಸಹಜ. ಇಂದಿನ ಪೀಳಿಗೆ ನಿರೀಕ್ಷಿಸುವುದು ಅತುಲವಾದ ಶಾಸ್ತ್ರಜ್ಞಾನವನ್ನಲ್ಲ. ಮಾರ್ಪಾಟಾದ ಜೀವನಕ್ಷೇತ್ರದಲ್ಲಿ ಆ ಶಾಸ್ತ್ರವು ಹೇಗೆ ಇಂದಿಗೂ ಬೆಳಕಾಗಿ ನಿಲ್ಲಬಹುದು ಎನ್ನುವ ವಿಚಾರವನ್ನು. ವಿವೇಕ ಎನ್ನುವುದರ ಪರ್ಯಾಯವೆನ್ನಿಸಿಕೊಂಡ ಆರ್ಷೇಯ ಜ್ಞಾನಸಂಪತ್ತು ಪ್ರಚಲಿತ ಸಮಯದಲ್ಲಿ ಹೇಗೆ ನಮ್ಮನ್ನು ನಡೆಸೀತು ಎನ್ನುವುದೇ ಆಧುನಿಕನ ಕಾತರ.

ಕೆ. ಜಿ. ವಸಂತಮಾಧವ

ಭೂತ ಪಾಂಡ್ಯನ ಐತಿಹಾಸಿಕ ಹಿನ್ನೆಲೆ

ಭೂತಪಾಂಡ್ಯ ಯಾ ಭೂತಾಳಪಾಂಡ್ಯನು ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ಚರ್ಚಾಸ್ಪದ ವ್ಯಕ್ತಿಯಾಗಿದ್ದಾನೆ. ಇಲ್ಲಿನ ಪರಂಪರೆಯಂತೆ ಈ ವ್ಯಕ್ತಿ ಅಳಿಯಸಂತಾನ ಮತ್ತು ಇನ್ನಿತರ ಕಟ್ಟುಕಟ್ಟಳೆಗಳನ್ನು ಜಾರಿಗೆ ತಂದನು. ಆದರೆ ಇತಿಹಾಸ ವಿದ್ವಾಂಸರ ಅಭಿಪ್ರಾಯದ ಪ್ರಕಾರ ಇವನೊಬ್ಬ ಕಾಲ್ಪನಿಕ ವ್ಯಕ್ತಿ.[1] ಆದರೆ ಇವನ ಕುರಿತಾಗಿ ಕೆಲವು ಶಾಸನಗಳು ಮತ್ತು 'ಕೆಳದಿ ನೃಪವಿಜಯ' ಕಾವ್ಯ ಉಲ್ಲೇಖ ಮಾಡಿರುವುದರಿಂದ ಇವನೊಬ್ಬ ಕಾಲ್ಪನಿಕ ವ್ಯಕ್ತಿಯೆಂದು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಶಾಸನ ಮತ್ತು ಕಾವ್ಯಗಳ ಆಧಾರದ ಹಿನ್ನೆಲೆಯಲ್ಲಿ ಈ ವ್ಯಕ್ತಿಯ ವಿಚಾರ ಪುನಃ ವಿಮರ್ಶಿಸುವುದೇ ಈ ಲೇಖನದ ಉದ್ದೇಶ.

ಭೂತಪಾಂಡ್ಯನ ಪ್ರಥಮ ಉಲ್ಲೇಖವಿರುವುದು ಕೋಟದ ಮಹಾಲಿಂಗೇಶ್ವರ ದೇವಸ್ಥಾನದ ಹದಿಮೂರನೇ ಶತಮಾನದ ಶಾಸನದಲ್ಲಿ. ಇದರ ಕಾಲ ಶಾ.ಶ. ೧೧೬೬ಕ್ಕೆ ಸರಿಹೊಂದುವ ಕ್ರಿ.ಶ. ೧೨೪೪ರ ಆನಂದ ಸಂವತ್ಸರ. ಆ ಸಂವತ್ಸರದಲ್ಲಿ ಭೂತಪಾಂಡ್ಯನ ಸಂತತಿಯವನಾದ ವಿಭೂಧವಸು ಈ ದೇವಾಲಯದಲ್ಲಿ ಪೂಜೆ ನಡೆಸಲು ೧೦೦೦ ಪಗೋಡ ಉತ್ಪತ್ತಿಯಿರುವ ಗ್ರಾಮವನ್ನು ನೀಡಿದ್ದನು[2]. ಈ ಶಾಸನದ ಆಧಾರದಿಂದ ಭೂತಪಾಂಡ್ಯನೆಂಬ ವ್ಯಕ್ತಿ ಈ ಮೇಲೆ ತಿಳಿಸಿದ ವರ್ಷದ ಪೂರ್ವದಲ್ಲೇ ಇದ್ದಿರಬೇಕೆಂದು ತಿಳಿಯಬಹುದು. ಈ ಶಾಸನ ಕಾಲದ ಹತ್ತು ವರ್ಷಗಳ ಅನಂತರ (ಕ್ರಿ.ಶ. ೧೨೫೪) ಆಳುವ ಅರಸ ವೀರಪಾಂಡ್ಯದೇವನನ್ನು ಇನ್ನೊಂದು ಶಾಸನವು ಉಲ್ಲೇಖಿಸುತ್ತದೆ.[3] ಕ್ರಿ.ಶ. ೧೪೨೪ (ಶಕ ೧೩೪೬)ರ[4] ತಾಮ್ರಶಾಸನದಲ್ಲಿ ದೇವರಾಯಮಹಾರಾಜರ ನಿರೂಪದಿಂದ ಬಾರಕನ್ಯಾಪುರದ ರಾಜ್ಯವನ್ನು ಸ್ವಧರ್ಮದಿಂದ ಪಾಲಿಸುತ್ತಿರುವ ನರಸಿಂಹ ಮಂತ್ರಿ ತಲತೋಟದ ನರಸಿಂಹಭಟ್ಟರಿಗೆ ಕೊಟ್ಟ ಪಟ್ಟಿಗೆ ಇನ್ನಿತರ ದೇವತೆಗಳೊಂದಿಗೆ ಭೂತಪಾಂಡ್ಯರ ಒಪ್ಪು ಸಾಕ್ಷಿ ಎಂದಿದೆ. ಇದೇ ಶಾಸನವು ಇನ್ನೊಂದು ಕಡೆಯಲ್ಲಿ 'ಭೂತಪಾಂಡ್ಯ ಮಹಾರಾಜ'ನೆಂದು ಉಲ್ಲೇಖಿಸಿದೆ. ಒಟ್ಟಿನಲ್ಲಿ ಭೂತಪಾಂಡ್ಯನು

---

[1] B. A. Saletore : *Ancient Karnataka*, p. 347 ;
K. V. Ramesh : *A History of South Kanara*, p. 56 ;
P. Gururaja Bhat : *Studies in Tuluva History and Culture* p. 257, 264–65

[2] V. Rangacharya : *A Topographical List of Inscriptions of Madras Presidency*, Vol. II Ins. No. 217 ಈ ಶಾಸನದ ಸಂವತ್ಸರ ತಪ್ಪಾಗಿದೆ. ವಸುಚಕ್ರವರ್ತಿ ಬಸ್ರೂರನ್ನು ಆಳಿದ್ದನೆಂಬ ಪ್ರತೀತಿ ಇದೆ.

[3] *ARSIE* ; 1928-29. No. 509.

[4] ಈ ತಾಮ್ರಶಾಸನದ ಪ್ರತಿ ತ್ರಾಸಿ ಮಂಜಯ್ಯ ಭಟ್ಟರ ವಶವಿದೆ. ಇದರ ಮೂಲ ನಾಶವಾಗಿದೆಯಂತೆ.

ರಾಜವಂಶದವನೆಂದು ಮತ್ತು ದಾನ ಪಾಲಿಸುವ ಸಾಕ್ಷಿಗಳಲ್ಲಿ ದೇವತೆಯು ಗೌರವ ಸ್ಥಾನವನ್ನು ಜನರಿಂದ ಪಡೆದಿದ್ದನೆಂದು ಈ ಶಾಸನದ ಆಧಾರದಿಂದ ಅಭಿಪ್ರಾಯಪಡಬಹುದು. ಉಡುಪಿ ತಾಲೂಕಿನ ಪೊಕ್ಕಾಡಿಯಲ್ಲಿ ಸಿಕ್ಕಿದ ಕ್ರಿ.ಶ. ೧೪೭೪ರ ಶಾಸನ[5] "ತೆಂಕಲು ಭೂತಪಾಂಡ್ಯನ ಜತ್ತಿಕಲ್ಲು" ಎಂಬ ವಿಚಾರವನ್ನು ತಿಳಿಸುತ್ತದೆ.

ಹದಿನೆಂಟನೇ ಶತಮಾನದ ಉತ್ತರಾರ್ಧದಲ್ಲಿ ರಚಿಸಿದ 'ಕೆಳದಿ ನೃಪವಿಜಯ'[6]ದಲ್ಲಿ "ಅಪಾರ ಭೂತಪಾಂಡ್ಯೋದ್ಭವರ್ಗಳ ಮುನ್ನಾಳ್ದ ಪರಮ ವೈಭವದಿಂದೊಪ್ಪುವ ಬಾರಕೂರ ಸಂಸ್ಥಾನ"ವನ್ನು ಕೆಳದಿ ವೆಂಕಟಪ್ಪ ನಾಯಕನು ವಶಪಡಿಸಿಕೊಂಡನೆಂದು ಲಿಂಗಣ್ಣಕವಿಯು ತಿಳಿಸುತ್ತಾನೆ.

ಶಾಸನ ಮತ್ತು ಕಾವ್ಯಗಳ ಅಧ್ಯಯನದ ಹಿನ್ನೆಲೆಯಲ್ಲಿ ಭೂತಪಾಂಡ್ಯನು ರಾಜವಂಶದವನೆಂಬ ಅಭಿಪ್ರಾಯ ನಮಗೆ ಬರುತ್ತದೆ. ಇವನ ಕುರಿತಾದ ಶಾಸನಗಳು ಬಾರಕೂರು ಪ್ರದೇಶದಲ್ಲಿ ಸಿಕ್ಕಿವೆ. ಆದುದರಿಂದ ಇವನು ಕ್ರಿ.ಶ. ೧೪೦೦ರ ಪೂರ್ವದಲ್ಲಿ ಬಾರಕೂರನ್ನು ಆಳಿದನೆಂಬ ಊಹೆ ಬರುತ್ತದೆ. ಆದರೆ ಇವನು ಎಷ್ಟು ಕಾಲ ಮತ್ತು ಯಾವ ರಾಜವಂಶಕ್ಕೆ ಸಂಬಂಧಿಸಿದವನೆಂದು ತಿಳಿಯಲು ಈವರೆಗಿನ ಐತಿಹಾಸಿಕ ದಾಖಲೆಗಳು ಸಹಾಯಕವಾಗಿಲ್ಲ.

ಪಾಂಡ್ಯ ಚಕ್ರವರ್ತಿ ಎಂಬ ಬಿರುದು ಆಳುಪ ಅರಸರಲ್ಲಿ ಇದ್ದರೂ[7]. ಆ ವಂಶದ ಯಾವ ಅರಸನಿಗೂ ಭೂತಪಾಂಡ್ಯನೆಂಬ ಹೆಸರಿಲ್ಲ. ಬಾರಕೂರನ್ನು ರಾಜಧಾನಿಯಾಗಿ ಮಾಡಿಕೊಂಡು ಕ್ರಿ.ಶ. ೧೩೦೦ರ ಪೂರ್ವದಲ್ಲಿ ಪಾಂಡ್ಯ ಪಟ್ಟದೇವನು ಕ್ರಿ.ಶ. ೧೨೬೦–೧೨೭೦ರ ವರೆಗೆ ಆಳಿದ್ದನು[8]. ಮೇಲೆ ಹೇಳಿದ ಭೂತಪಾಂಡ್ಯನು ಪಾಂಡ್ಯ ಪಟ್ಟದೇವನೇ ಆಗಿರಬಹುದೇ? ಪಾಂಡ್ಯ ಪಟ್ಟದೇವ ಮತ್ತು ವೀರಪಾಂಡ್ಯರನ್ನು ಗುರುತಿಸಲು ಮೊದಲನೆಯವನಿಗೆ ಭೂತಪಾಂಡ್ಯನೆಂದು ಕರೆದಿರಬಹುದೆ? ಭೂತ ಪಾಂಡ್ಯನೆಂದರೆ ಹಿಂದೆ ಆಗಿ ಹೋದ ಪಾಂಡ್ಯನೆಂದು ಏಕೆ ತಿಳಿಯಬಾರದು? ಆದರೆ ಇವನು ಅಳಿಯ ಸಂತಾನವನ್ನು ಜಾರಿಗೆ ತಂದವನೆಂದು ಯಾವ ಐತಿಹಾಸಿಕ ದಾಖಲೆಗಳೂ ಸಮರ್ಥಿಸುವುದಿಲ್ಲ. ಒಟ್ಟಿನಲ್ಲಿ ಭೂತಪಾಂಡ್ಯನೆಂಬ ವ್ಯಕ್ತಿ ಇದ್ದನೆಂದು ಮೇಲೆ ತಿಳಿಸಿದ ದಾಖಲೆಗಳು ಸಮರ್ಥಿಸುತ್ತದೆ. ಆದರೆ ಇಲ್ಲಿ ಇವನನ್ನು ಹಿಂದೆ ಆಗಿ ಹೋದ ಪಾಂಡ್ಯನೆಂದು ತಿಳಿದರೆ ತಪ್ಪಾಗಲಿಕ್ಕಿಲ್ಲ.

---

5 *ARSIE*., 1929-30, No. 579. ಈ ಶಾಸನದ ವಿವರ ಡಾ. ಪಿ. ಗುರುರಾಜಭಟ್ಟರ 'ಬಾರಕೂರು' (೧೯೭೩,ಪು.೧೯)ದಲ್ಲಿ ನೋಡಬಹುದು.

6 ಪಂಚಮ ಆಶ್ವಾಸ, ಪದ್ಯ ೩೦ (೧೯೭೩)

7 *SII*., VII, No. 223, *ARSIE*., 1928-29. No. 509. ಕೆ. ವಿ. ರಮೇಶ. ಅದೇ ಗ್ರಂಥ ಪು. 56, 108, 135-36.

8 ರಮೇಶ. ಅದೇ ಗ್ರಂಥ ಪು. 135

[ಇದೂ ಒಂದು ಊಹೆಯೇ. ಇದು ಭೂತಾಳಪಾಂಡ್ಯನ ಐತಿಹಾಸಿಕತೆಯನ್ನು ತೋರಿಸುತ್ತದೆಂದು ಹೇಳಲಾಗದು.–ಬಾ. ರಾ. ಗೋ.]

ಬಾ. ರಾ. ಗೋಪಾಲ್

ಕಳೆದ ೨೫ ವರ್ಷಗಳಲ್ಲಿ ಕನ್ನಡದಲ್ಲಿ ಇತಿಹಾಸ ಗ್ರಂಥಗಳು

ಕಳೆದ ೨೫ ವರ್ಷಗಳಲ್ಲಿ ಕನ್ನಡದಲ್ಲಿ ಇತಿಹಾಸ ಗ್ರಂಥಗಳ ರಚನೆ ವಿಪುಲವಾಗಿಯೇ ಆಗಿದೆ ಎನ್ನಬೇಕು.[1] ಇದಕ್ಕೆ ಮುಖ್ಯ ಕಾರಣವೆಂದರೆ ರಾಜ್ಯಸರ್ಕಾರ, ರಾಜ್ಯದ ಮೂರು ವಿಶ್ವವಿದ್ಯಾನಿಲಯಗಳು ಹಾಗೂ ಕನ್ನಡಸಾಹಿತ್ಯ ಪರಿಷತ್ತು ಕೊಡುತ್ತಿರುವ ಪ್ರೋತ್ಸಾಹ. ಈ ದಿಶೆಯಲ್ಲಿ ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಪ್ರಸಾರಾಂಗ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗಳು ವಹಿಸಿರುವ ಪಾತ್ರ ಅತಿಸ್ತುತ್ಯವಾಗಿದೆ. ವಿಶ್ವವಿದ್ಯಾನಿಲಯದ ಈ ಎರಡೂ ಅಂಗಗಳೂ ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿ ಹಲವಾರು ಕಿರು ಗ್ರಂಥಗಳನ್ನೂ, ಪಠ್ಯಪುಸ್ತಕಗಳನ್ನೂ, ಉದ್ಗ್ರಂಥಗಳನ್ನೂ ಪ್ರಕಟಿಸಿ ಕೀರ್ತಿಯನ್ನೂ, ಜನರ ಮೆಚ್ಚುಗೆಯನ್ನೂ ಪಡೆದಿವೆ. ಕನ್ನಡದಲ್ಲಿ ಬರೆಯಬೇಕೆಂಬ ಉತ್ಸಾಹ ಹೆಚ್ಚಿದಂತೆಲ್ಲಾ ಅನೇಕ ಪ್ರಕಾಶನ ಸಂಸ್ಥೆಗಳು ನವ ಕನ್ನಡ ಗ್ರಂಥಗಳನ್ನು ಹೊರತರಲು ಮುಂದೆ ಬಂದಿವೆ. ನಮ್ಮ ನಾಡಿನ ಸಂಸ್ಕೃತಿಯ ಪರಿಚಯ ಹಿರಿಯರಿಗೂ ಕಿರಿಯರಿಗೂ ಆಗಬೇಕೆಂಬ ಉದ್ದೇಶದಿಂದಲೇ ಡಿ. ವಿ. ಕೆ. ಮೂರ್ತಿ, ಗೀತಾಬುಕ್ ಹೌಸ್(ಮೈಸೂರು), ಮನೋಹರ ಗ್ರಂಥಮಾಲಾ (ಧಾರವಾಡ), ಮಿಂಚಿನಬಳ್ಳಿ, ಐ.ಬಿ.ಹೆಚ್ ಪ್ರಕಾಶನ(ಬೆಂಗಳೂರು) ದಂತಹ ಸಂಸ್ಥೆಗಳೂ ಈ ದಿಶೆಯಲ್ಲಿ ಯೋಗ್ಯ ರೀತಿಯಲ್ಲಿ ಕೆಲಸಮಾಡಿವೆ.

ಭಾರತದ ಇತಿಹಾಸಕ್ಕೆ ಸಂಬಂಧಿಸಿದ ಹಲವು ಪಠ್ಯಪುಸ್ತಕಗಳು ಈಗ ಪ್ರಕಟವಾಗಿವೆ. ಭಾರತದ ಇತಿಹಾಸವನ್ನು ಪ್ರಾಚೀನಯುಗ, ಮಧ್ಯಕಾಲೀನಯುಗ ಹಾಗೂ ಆಧುನಿಕ ಯುಗವೆಂದು ಮೂರು ಭಾಗಗಳಾಗಿ ವಿಂಗಡಿಸಿರುವುದು ಸರ್ವವಿದಿತ. ಪ್ರಾಚೀನ ಭಾರತದ ಚರಿತ್ರೆಗೆ ಸಂಬಂಧಿಸಿದ ಹಲವಾರು ಗ್ರಂಥಗಳು ಈಗ ದೊರಬದ್ದಿವೆ. ಆಧುನಿಕ ಭಾರತಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಪ್ರಕಟವಾಗಿರುವ ಗ್ರಂಥಗಳು ಅತಿವಿರಳ. ಮಧ್ಯಕಾಲೀನ ಇತಿಹಾಸದ ಗ್ರಂಥಗಳು ಬಂದೇ ಇಲ್ಲವೆನ್ನಬಹುದು.

ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳು ಪ್ರಕಟವಾಗಿವೆ. ಕೆಲವು ಇಡೀ ಕರ್ನಾಟಕದ ಇತಿಹಾಸವನ್ನು ನಿರೂಪಿಸುವ ಗ್ರಂಥಗಳಾಗಿದ್ದರೆ ಇನ್ನು ಕೆಲವು ಕರ್ನಾಟಕದ ಕೆಲವು ಭಾಗಗಳ ಅಥವಾ ಒಂದೆರಡು ಅರಸು ಮನೆತನಗಳ ಇತಿಹಾಸವನ್ನು ಚಿತ್ರಿಸುವ ಪುಸ್ತಕಗಳಾಗಿವೆ. ಇಲ್ಲಿಯೂ ಒಂದು ಮಾತು ಹೇಳಬಹುದು. ದಕ್ಷಿಣ ಭಾರತದ ಇತಿಹಾಸವನ್ನು ಪ್ರಾಚೀನ, ಮಧ್ಯಯುಗೀನ.ಆಧುನಿಕ ಎಂದು ವಿಭಾಗಿಸದೆ. ಕೇವಲ ಪ್ರಾಚೀನ ಹಾಗೂ ಆಧುನಿಕ ಎಂದು ಎರಡೇ ಭಾಗಗಳಾಗಿ ಮಾಡಬಹುದು. ೧೫೬೫ರಲ್ಲಿ ನಡೆದ ತಾಳೀಕೋಟೆಯ ಕದನ ದಕ್ಷಿಣ ಭಾರತದ ಇತಿಹಾಸ ದಲ್ಲಿ ಒಂದು ವಿಶಿಷ್ಟವಾದ ಘಟನೆ. ಅಂದು ದಕ್ಷಿಣ ಭಾರತ, ಅದರಲ್ಲೂ ಕರ್ನಾಟಕ, ರಾಜಕೀಯವಾಗಿ ಛಿದ್ರಗೊಂಡಿತು. ಭಾರತ ಸ್ವತಂತ್ರವಾಗುವವರೆಗೂ ಇದರ ಇತಿಹಾಸ ಬದುಮುಖವಾಗಿರುವುದಿಲ್ಲವೆ.

---

1 ಈ ಸಮೀಕ್ಷೆ ೧೯೭೨–೭೩ ಕ್ಕೆ ಸೀಮಿತವಾಗಿದೆ.

ಕರ್ನಾಟಕದ ಈ ಕಾಲದ ಇತಿಹಾಸ ಹೆಚ್ಚಿನ ಮಟ್ಟಿಗೆ ತಿಳಿದೇ ಇಲ್ಲವೆನ್ನಬಹುದು. ಆದ್ದರಿಂದ ಪ್ರಾಚೀನ ಕಾಲದಿಂದ ೧೭೯೯ರ ವರೆಗೆ ಒಂದು ಯುಗ, ನಂತರ ಇನ್ನೊಂದು ಆಧುನಿಕ ಯುಗವೆಂದು ನಾವು ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಹೇಳಬಹುದು. ಈ ದೃಷ್ಟಿಯಲ್ಲಿ ಕರ್ನಾಟಕದ ಆಧುನಿಕ ಚರಿತ್ರೆಗೆ ಸಂಬಂಧಿಸಿದ ಗ್ರಂಥಗಳು ಬಹು ಕಡಿಮೆ.

ಸುಮಾರು ೧೮೫೦ರಲ್ಲಿ ಪ್ರಕಟವಾದ ಶಾನುಭೋಗ ವೆಂಕಟರಮಣರ 'ಮೈಸೂರು ರಾಜರ ಚರಿತ್ರೆ' ಕನ್ನಡದಲ್ಲಿನ ಮೊತ್ತಮೊದಲ ಐತಿಹಾಸಿಕ ಗ್ರಂಥವೆನ್ನಬಹುದು. ನಂತರ ಇನ್ನು ಕೆಲವು ಗ್ರಂಥಗಳು–ದೇವಚಂದ್ರನ 'ರಾಜಾವಳೀ ಕಥೆ', ಕಚೇರಿ ಕೃಷ್ಣಯ್ಯನ 'ಹೈದರ್‌ನಾಮ', ಕೊಡಗಿನ ಹಾಲೇರಿ ಅರಸರಿಗೆ ಸಂಬಂಧಿಸಿದ 'ರಾಜೇಂದ್ರನಾಮೆ' ಇತ್ಯಾದಿ ೧೮–೧೯ನೆಯ ಶತಮಾನಗಳಲ್ಲಿ ರಚಿತವಾದವುಗಳು. ಇವುಗಳು ಹೆಚ್ಚಾಗಿ ಅಂದಿನ ಅರಸರ ಕೋರಿಕೆಯ ಮೇರೆಗೆ ಬರೆದವು. 'ರಾಜೇಂದ್ರ ನಾಮೆ', ಮುಮ್ಮಡಿ ಕೃಷ್ಣರಾಜನ ಕಾಲದಲ್ಲಿ ತಮ್ಮಯ್ಯಕವಿ ರಚಿಸಿದ 'ರಾಜವಂಶ ರತ್ನಪ್ರಭೆ' ಇತ್ಯಾದಿಗಳು ಅಂತಹವು. ಇನ್ನು ೨೦ನೆಯ ಶತಮಾನದಲ್ಲಿ ಮೈಸೂರು ಅರಸರ ಜೀವನ ಚರಿತ್ರೆಗಳು ಕೆಲವು ಪ್ರಕಟವಾದವು. ಎ. ಎನ್. ಲಿಂಗಣ್ಣಯ್ಯನವರ 'ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್' ಮತ್ತು 'ಮಹಾರಾಣಿ ಲಕ್ಷ್ಮಮ್ಮಣ್ಣಿ', ಸಿಂಗಾರಯ್ಯನವರ 'ಚಾಮರಾಜೇಂದ್ರ ಒಡೆಯರ್ ಬಹದೂರ್' ಹಾಗೂ 'ನಾಲ್ಮಡಿ ಕೃಷ್ಣರಾಜೇಂದ್ರ ಒಡೆಯರ್', ಶ್ರೀನಾಥನ 'ನಾಲ್ವಡಿ ಕೃಷ್ಣ ಮೈಸೂರು', ಸಿ. ಕೆ. ವೆಂಕಟರಾಮಯ್ಯನವರ 'ದಿವಂಗತ ಶ್ರೀಮನ್ಮಹಾರಾಜರವರು' ಇತ್ಯಾದಿಗಳು ಇಂತಹ ಹಲವು. ವೆಂಕಟರಾಮಯ್ಯನವರ ಗ್ರಂಥವನ್ನುಳಿದು ಮೇಲೆ ಹೆಸರಿಸಿದವುಗಳು ಸ್ವಾತಂತ್ರ್ಯಪೂರ್ವ ವರ್ಷಗಳಲ್ಲಿ ಪ್ರಕಟವಾದವು. ಇದರಿಂದ ಒಂದು ಅಂಶವನ್ನು ನಾವು ಇಲ್ಲಿ ಸೂಚಿಸಬಹುದು. ಆ ವರ್ಷಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಇತಿಹಾಸ ಗ್ರಂಥಗಳು ಕೇವಲ ಮೈಸೂರಿನ, ಕೊಡಗಿನ, ಅರಸರಿಗೆ, ಅರಸು ಮನೆತನಗಳಿಗೆ ಸೀಮಿತವಾಗಿದ್ದವು. ಅಲ್ಲದೆ ಆ ಅರಸರ ಕೈಕೆಳಗಿನ ಪ್ರಭಾವಶಾಲೀ ಅಧಿಕಾರಿಗಳ ಜೀವನ ಚರಿತ್ರೆಗಳನ್ನು ಕುರಿತ ಗ್ರಂಥಗಳಿಗೆ ಸಂಬಂಧಿಸಿದವುಗಳಾಗಿದ್ದುವು. ಡಿ. ವಿ. ಗುಂಡಪ್ಪನವರ 'ದಿವಾನ್ ಸಿ. ರಂಗಾಚಾರ್ಲು' ಎಂಬ ಗ್ರಂಥವೂ ಒಂದು.

ಇನ್ನು ಈ ಸೂಕ್ಷ್ಮಾವಲೋಕನದಲ್ಲಿ ಆಂಗ್ಲಭಾಷೆಯಲ್ಲಿನ ಗ್ರಂಥಗಳನ್ನೂ ಗಮನಿಸಿರುವುದನ್ನು ಕುರಿತು ಒಂದು ಮಾತು ಹೇಳುವುದು ಅವಶ್ಯ. ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ನೂರಾರು ಪುಸ್ತಕಗಳು ಆ ಭಾಷೆಯಲ್ಲಿ ಪ್ರಕಟವಾಗಿವೆ. ಆದರೆ ಭಾರತಾಂತರ್ಗತ ಕರ್ನಾಟಕದ ಇತಿಹಾಸ ಗ್ರಂಥಗಳು ಕಡಿಮೆ. ಇತ್ತೀಚೆಗೆ ಪ್ರಾಂತಾಭಿಮಾನದಿಂದಲೋ ಅಥವಾ ಆ ದಿಶೆಯಲ್ಲಿ ಹೆಚ್ಚಿನ ಕೆಲಸ ನಡೆದಿಲ್ಲವೆಂಬ ಸಹಜವಾದ ಕಾತುರತೆಯಿಂದಲೋ ಕರ್ನಾಟಕದ ಮೂರು ವಿಶ್ವವಿದ್ಯಾಲಯಗಳಲ್ಲಿ ಅನೇಕ ವಿದ್ಯಾರ್ಥಿಗಳು ತಮ್ಮ ಸಂಶೋಧನೆಗೆ ಇಂತಹ ವಿಷಯಗಳನ್ನೇ ಆರಿಸಿಕೊಂಡು ಕೆಲಸಮಾಡುತ್ತಿದ್ದಾರೆ. ಅವರಲ್ಲಿ ಅನೇಕರು ಪಿಎಚ್.ಡಿ. ಪದವಿಗಳನ್ನು ಪಡೆದು ಅವರ ಅಂತಹ ಕೆಲವು ಪ್ರಬಂಧಗಳು ಈಗ ಪ್ರಕಟಗೊಂಡಿವೆ. ಅಲ್ಲದೆ ಕೆಲವು ಸ್ವತಂತ್ರ ಸಂಶೋಧನಾ ಗ್ರಂಥಗಳೂ ಆಂಗ್ಲಭಾಷೆಯಲ್ಲಿ ಪ್ರಕಟವಾಗಿವೆ. ಈ ದೃಷ್ಟಿಯಿಂದ ಕರ್ನಾಟಕಕ್ಕೆ ಸಂಬಂಧಿಸಿದಂತೆ ಆಂಗ್ಲಭಾಷೆಯಲ್ಲಿ ಪ್ರಕಟವಾದ ಗ್ರಂಥಗಳನ್ನು ಸಹ ಈ ಸಮೀಕ್ಷೆಯಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ಈ ಸಮೀಕ್ಷೆಯನ್ನು ಪಿ.ಯು.ಸಿ. ತರಗತಿಯಿಂದಾರಂಭಿಸಿ ವಿಶ್ವವಿದ್ಯಾನಿಲಯಗಳು ಒಪ್ಪಿಗೆ ಇತ್ತ ಕಾಲೇಜಿನ ಪಠ್ಯಪುಸ್ತಕಗಳಿಂದ ಆರಂಭಿಸಿದ್ದೇವೆ. ಪಿ.ಯು.ಸಿ. ಶಿಕ್ಷಣಕ್ಕೆ ಮೊದಲು ಇಂಟರ್ ಮೀಡಿಯಟ್ ತರಗತಿಗಳಿದ್ದವು. ಎರಡು ವರ್ಷಗಳ ಆ ಶಿಕ್ಷಣದ ನಂತರ ಎರಡು ವರ್ಷಗಳ ಪದವಿ ತರಗತಿಗಳಲ್ಲಿ ಅಭ್ಯಾಸಮಾಡಬೇಕಾಗಿತ್ತು–ಮೂಲ ಪದವಿಯನ್ನು ಪಡೆಯಲು. ನಂತರ ಒಂದೇ ವರ್ಷದ ಪಿ.ಯು.ಸಿ. ಅಸ್ತಿತ್ವಕ್ಕೆ ಬಂದು, ಈಗ, ಕಳೆದ ವರ್ಷದಿಂದ ಪುನಃ ಎರಡು ವರ್ಷಗಳ ಪಿ.ಯು.ಸಿ. ಶಿಕ್ಷಣ ಆರಂಭವಾಗಿದೆ. ಇದಕ್ಕನುಗುಣವಾಗಿ ಪ್ರತಿಯೊಂದು ವಿಷಯದಲ್ಲಿಯೂ ಪಠ್ಯಕ್ರಮಗಳೂ ಆಗಿಂದಾಗ್ಗೆ ಬದಲಾಗಿವೆ. ಹಿಂದೆ ಇತಿಹಾಸದ ವಿದ್ಯಾರ್ಥಿ ಗ್ರೀಸ್ ಮತ್ತು ರೋಮ್ ದೇಶಗಳ ಹಾಗೂ ಬೃಹತ್ ಬ್ರಿಟನ್ನಿನ (Great Britain) ಚರಿತ್ರೆಯನ್ನು ಕಲಿಯುವುದು ಅವಶ್ಯಕ

ವಾಗಿತ್ತು. ನಂತರ ಅವರಲ್ಲಿಯೂ ಮಾರ್ಪಾಡಾಗಿ ಈಗ ಸಂಕ್ಷಿಪ್ತವಾಗಿ ವಿಶ್ವದ ಇತಿಹಾಸವನ್ನೇ ಬೋಧನೆಯ ವಿಷಯವಾಗಿ ಆರಿಸಲಾಗಿದೆ. ಹೀಗೆ ಪಠ್ಯಕ್ರಮಗಳಲ್ಲಿ ಬದಲಾವಣೆಗಳಾದಂತೆಲ್ಲಾ ಆದ್ಯಕನುಗುಣವಾಗಿ ಪಠ್ಯಪುಸ್ತಕಗಳ ಅಗತ್ಯ ಹೆಚ್ಚಿತು.

ಮೈಸೂರು ವಿಶ್ವವಿದ್ಯಾನಿಲಯ ಬಹಳ ಹಿಂದಿನಿಂದಲೇ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಘೋಷಿಸಿ ಅದರನ್ವಯ ಪಠ್ಯಪುಸ್ತಕಗಳನ್ನು ಹೊರತರುವ ಹೊಣೆಯನ್ನು ಹೊತ್ತಿತು. ಆಗ ಆರಂಭವಾದ ಪಠ್ಯಪುಸ್ತಕಮಾಲೆಯಲ್ಲಿ ೪. ೧೧. ೧೪ ಮತ್ತು ೧೫ನೆಯ ಗ್ರಂಥಗಳು ಇತಿಹಾಸಕ್ಕೆ ಸಂಬಂಧಿಸಿದವುಗಳು. ದಿವಂಗತ ಡಾ. ಎಂ. ಶೇಷಾದ್ರಿಯವರ ಗ್ರೇಟ್ ಬ್ರಿಟನ್ನಿನ ಚರಿತ್ರೆ ಇವುಗಳಲ್ಲಿ ಮೊದಲಿನದು. ೧೪ ಮತ್ತು ೧೫ನೆಯವು ಡಾ. ಬಿ. ಎಸ್. ಕೃಷ್ಣಸ್ವಾಮಯ್ಯಂಗಾರ್ಯರ 'ರೋಮ್ ಚಕ್ರಾಧಿಪತ್ಯದ ಚರಿತ್ರೆ' ಮತ್ತು 'ಗ್ರೀಸ್‌ದೇಶದ ಚರಿತ್ರೆ'. ಗ್ರೇಟ್ ಬ್ರಿಟನ್ನಿನ ಚರಿತ್ರೆ ರೋಮನರು ಈ ಭೂಭಾಗವನ್ನು ಆಕ್ರಮಿಸಿದಂದಿನಿಂದ ಆರಂಭಿಸಿ ಮೊದಲನೆಯ ಮಹಾಯುದ್ಧದ ಅಂತ್ಯದವರೆಗೂ (೧೯೧೮) ಬಂದಿದೆ. ಈ ಗ್ರಂಥದಲ್ಲಿ ಆ ದೇಶದ ರಾಜಕೀಯ ಇತಿಹಾಸವನ್ನೇ ಅಲ್ಲದೆ, ಸಂಕ್ಷೇಪವಾಗಿ ಆಯಾ ಶತಮಾನಗಳಲ್ಲಿ ಇಂಗ್ಲೆಂಡಿನ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿನ ಬೆಳವಣಿಗೆ, ಬದಲಾವಣೆ ಇತ್ಯಾದಿಗಳನ್ನೆಲ್ಲಾ ೩೪೦ ಪುಟಗಳಲ್ಲಿ ನಿರೂಪಿಸಲಾಗಿದೆ.

ಗ್ರೀಸ್ ಹಾಗೂ ರೋಮ್ ದೇಶಗಳ ಚರಿತ್ರೆಗಳು ಪಾಶ್ಚಾತ್ಯ ನಾಗರಿಕತೆಯನ್ನು ಅರಿಯಲು ಅತ್ಯಾವಶ್ಯಕವಾದ ಹಿನ್ನೆಲೆಯನ್ನು ಒದಗಿಸುತ್ತವೆ. ಈ ಎರಡೂ ನಾಗರಿಕತೆಗಳ ಒಟ್ಟುಗೂಡಿಕೆ ಪಾಶ್ಚಾತ್ಯ ಸಂಸ್ಕೃತಿಗೆ ಮೂಲ. ಸ್ವಾತಂತ್ರ್ಯಪ್ರಿಯರಾದ ಗ್ರೀಕರು ಪ್ರಜಾಪ್ರಭುತ್ವ ಪದ್ಧತಿಯನ್ನು ಜಾರಿಗೆ ತಂದ ಪಾಶ್ಚಾತ್ಯರಲ್ಲಿ ಮೊದಲಿಗರು. ಇವರ ಸಾಹಿತ್ಯ, ಕಲೆ, ವಿಜ್ಞಾನಗಳನ್ನು ರೋಮನರು ಬಳಸಿಕೊಂಡರು. ಅಪಾರ ಹೆಚ್ಚಿನ ಸೈನ್ಯ ಶಕ್ತಿಯನ್ನು ಹೊಂದಿದ್ದ ರೋಮನರು ದಕ್ಷ ಆಡಳಿತಗಾರರಾಗಿದ್ದು ಉತ್ತಮವಾದ ಆಡಳಿತ ಪದ್ಧತಿಯ ಮೂಲಕವೂ, ಯುದ್ಧಕೌಶಲದ ಮೂಲಕವೂ ಗ್ರೀಕರನ್ನು ಸೋಲಿಸಿ ಪಡೆದ ರಾಜ್ಯವನ್ನು ವಿಸ್ತರಿಸಿ ಪ್ರಬಲವಾದ ಸಾಮ್ರಾಜ್ಯವನ್ನೇ ಕಟ್ಟಿದರು. ಸಾಕ್ರೆಟೀಸ್, ಅರಿಸ್ಟೋಟಲ್ ಮುಂತಾದ ಜ್ಞಾನಿಗಳು, ಹೋಮರ್‌ನಂತಹ ಕವಿಗಳು, ಸೋಲನನಂತಹ ಸಮಾಜ ಸುಧಾರಕರು, ಪೆರಿಕ್ಲಿಸ್‌ನಂತಹ ಅರಸರು, ಅಲೆಕ್ಸಾಂಡರ್‌ನಂತಹ ಶೂರ ಸೇನಾನಿಗಳೂ ಗ್ರೀಕರ ಇತಿಹಾಸದಲ್ಲಿ ಅಚ್ಚಳಿಯದ ಸ್ಥಾನವನ್ನು ಪಡೆದಿದ್ದಾರೆ. ಅಂತೆಯೇ 'ರೋಮನರ ಶಾಂತಿ' (Pax Romana) ಎಂಬುದು ರೋಮನರ ಅಚ್ಚುಕಟ್ಟಾದ ಆಡಳಿತ ವ್ಯವಸ್ಥೆಯ ಸೂಚಕವಾಗಿ ಮೂಡಿಬಂದ ಪದಪುಂಜ. ಮಹಾಪುರುಷ ಪಾಂಪೆ, ಸರ್ವಾಧಿಕಾರಿ ಸೀಸರ್, ರೋಮನ್ ಜನರ ಸ್ವಾತಂತ್ರ್ಯರಕ್ಷಕನೆನಿಸಿಕೊಂಡ ಅಗಸ್ಟಸ್ ಸೀಸರ್ ಇವರ ಹೆಸರುಗಳೂ ಸಹ ಅಷ್ಟೇ ಚಿರಸ್ಥಾಯಿಯಾಗಿ ಉಳಿದಿವೆ. ಇವರು ತಮ್ಮ ನಾಡಿಗೆ ಸಲ್ಲಿಸಿದ ಸೇವೆಯ ಸೂಕ್ಷ್ಮ ಪರಿಚಯಗಳನ್ನು ಈ ಗ್ರಂಥಗಳಲ್ಲಿ ಮಾಡಿಕೊಡಲಾಗಿದೆ. ಡಾ. ಶ್ರೀಕಂಠಶಾಸ್ತ್ರಿಗಳವರು ಸಹ ರೋಮನ್ ಚಕ್ರಾಧಿಪತ್ಯಕ್ಕೆ ಸಂಬಂಧಿಸಿದಂತೆ ಒಂದು ಗ್ರಂಥವನ್ನು ಪ್ರಕಟಿಸಿದ್ದಾರೆ.

ಒಂದು ವರ್ಷದ ಪಿ.ಯು.ಸಿ. ಶಿಕ್ಷಣಕ್ಕೆ ಪ್ರಪಂಚದ ಚರಿತ್ರೆಯ ರೂಪರೇಖೆಗಳನ್ನು ಪರಿಚಯ ಮಾಡಿಕೊಡಬೇಕೆಂದು ಮೂರೂ ವಿಶ್ವವಿದ್ಯಾನಿಲಯಗಳ ಇತಿಹಾಸ ವಿಭಾಗದವರು ನಿರ್ಧರಿಸಿದುದರ ಪರಿಣಾಮವಾಗಿ ಅವಕ್ಕೆ ಸಂಬಂಧಿಸಿದ ಪಠ್ಯಪುಸ್ತಕಗಳನ್ನು ಪ್ರಕಟಿಸುವ ಹೊಣೆಯನ್ನು ಸಹ ಅವರು ಹೊರಬೇಕಾಯಿತು. ಇದರ ಪರಿಣಾಮವಾಗಿ ಮೊದಲು ಬಂದ ಗ್ರಂಥ ಡಾ. ಶ್ರೀಕಂಠಶಾಸ್ತ್ರಿಗಳ 'ಪ್ರಪಂಚ ಚರಿತ್ರೆಯ ರೂಪರೇಖೆಗಳು' (೧೯೬೭). ೧೨೦ ಪುಟಗಳಲ್ಲಿ ಸಂಕ್ಷಿಪ್ತವಾಗಿ ಪ್ರಪಂಚದ ಚರಿತ್ರೆಯ ಸ್ಥೂಲರೂಪವನ್ನು ಈ ಗ್ರಂಥದಲ್ಲಿ ಮಾಡಿಕೊಡಲಾಗಿದೆ. ಪ್ರಾಚೀನ ಪ್ರಪಂಚ ಹಾಗೂ ಆಧುನಿಕ ಪ್ರಪಂಚವೆಂದು ವಿಷಯವನ್ನು ಎರಡು ಭಾಗಮಾಡಿ ಪ್ರತಿಭಾಗಕ್ಕೂ ಸಮಾನವಾದ ಪ್ರಾಧಾನ್ಯತೆಯನ್ನು ಈ ಗ್ರಂಥದಲ್ಲಿ ಕೊಡಲಾಗಿದೆಯಲ್ಲದೆ. ಪ್ರಾಗೈತಿಹಾಸಿಕ ಕಾಲದಿಂದಾರಂಭಿಸಿ ಎರಡನೆಯ ಮಹಾಯುದ್ಧ ಅಂತ್ಯಗೊಂಡು ವಿಶ್ವಸಂಸ್ಥೆ (U.N.O.)ಯ ಸ್ಥಾಪನೆಯ ಹಾಗೂ ೧೯೪೫ರವರೆಗಿನ ಅವರ ಕೆಲವು ಸಾಧನೆಗಳ ವಿವರಗಳೊಡನೆ ಗ್ರಂಥ ಮುಗಿದಿದೆ. ಕ್ರಿ.ಶ. ೧೫೦೦ರವರೆಗೆ

'ಪ್ರಾಚೀನ ಪ್ರಪಂಚ'ವೆಂದೂ ನಂತರದ ಕಾಲ 'ಆಧುನಿಕ ಪ್ರಪಂಚ'ವೆಂದೂ ಇವರು ವಿಭಾಗ ಮಾಡಿರುವುದು ಸಮಂಜಸವಾಗಿದೆ ಎನ್ನಬಹುದು. ಆರ್. ಜಿ. ಐವಣ್ಣ ಹಾಗೂ ಎಚ್. ರಾಮಲಿಂಗಪ್ಪನವರ 'ಸಂಕ್ಷಿಪ್ತ ವಿಶ್ವ ಇತಿಹಾಸ' (೧೯೬೮) ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪಠ್ಯಪುಸ್ತಕ ಮಾಲೆಯಲ್ಲಿ ಬಂದಿರುವ ಗ್ರಂಥ. ಇದೂ ಸಹ ಪ್ರಪಂಚ ಚರಿತ್ರೆಯನ್ನೇ ನಿರೂಪಿಸುತ್ತದೆಯಾದರೂ. ವಿಷಯ ನಿರೂಪಣೆಯಲ್ಲಾಗಲೀ ಶೈಲಿಯಲ್ಲಾಗಲೀ ಯಾವ ಬಿಗುವೂ ಇಲ್ಲ. ಅಲ್ಲದೆ ಅನೇಕ ತಪ್ಪುಗಳೂ ಇಲ್ಲಿ ನುಸುಳಿಕೊಂಡಿವೆ.

ಕರ್ನಾಟಕ ವಿಶ್ವವಿದ್ಯಾನಿಲಯದವರು ಹೊರತಂದಿರುವ 'ಜಗತ್ತಿನ ಇತಿಹಾಸ' ಹಿಂದಿನ ಪಿ.ಯು.ಸಿ. ಶಿಕ್ಷಣ ಕ್ರಮಕ್ಕೆ ಸಂಬಂಧಪಟ್ಟಂತಹ ಪಠ್ಯಪುಸ್ತಕ. ಇದರ ಗ್ರಂಥಕರ್ತರು ಡಾ. ಜಿ. ಎಸ್. ದೀಕ್ಷಿತ ಮತ್ತು ಶ್ರೀ ಬಿ. ಟಿ. ಜೋಶಿ. ಮೇಲೆ ಗಮನಿಸಿದ ಗ್ರಂಥಗಳಿಗಿಂತ ಹೆಚ್ಚು ವಿಸ್ತೃತವಾಗಿರುವ ಈ ಗ್ರಂಥದಲ್ಲಿ ಘಟನೆಗಳನ್ನು ಕುರಿತು ಹೆಚ್ಚಿನ ವಿವರಗಳೂ ಇವೆ. ಈ ಪುಸ್ತಕದ ಕೊನೆಯಲ್ಲಿ ಪಾರಿಭಾಷಿಕ ಶಬ್ದಗಳ ಪಟ್ಟಿಯನ್ನು ಕೊಡಲಾಗಿದೆ. ಇಲ್ಲಿನ ಕೆಲವು ಪದಗಳು ಸಮಂಜಸವಲ್ಲವೇನೋ ಎನಿಸುತ್ತದೆ. Central control ಗೆ ಕೇಂದ್ರಪ್ರಭುತ್ವ. gloveಗೆ ಹಸ್ತತ್ರಾಣ. gladiatorಗೆ ಶಸ್ತ್ರಸಾಧಕ humanitarian ಗೆ ಪರೋಪಕಾರನಿರತ ಎಂಬುವ ಪದಗಳಿಗಿಂತ ಕ್ರಮವಾಗಿ ಕೇಂದ್ರ ಹತೋಟಿ. ಕೈಚೀಲ. ಜಗಮಲ್ಲ. ಮಾನವಹಿತೋದ್ಧಾರ ಇತ್ಯಾದಿ ಹೆಚ್ಚು ಸಮಂಜಸ ಪದಗಳನ್ನು ಉಪಯೋಗಿಸಬಹುದಾಗಿತ್ತೇನೋ?

ಬೆಂಗಳೂರಿನ ಸ್ಟೂಡೆಂಟ್ಸ್ ಬುಕ್ ಡಿಪೋದವರು ೧೯೬೮ರಲ್ಲಿ ಪ್ರಕಟಿಸಿದ 'ಮಾನವ ಇತಿಹಾಸ'ದ ಗ್ರಂಥಕರ್ತರು ಡಾ. ಎಂ. ವಿ. ಕೃಷ್ಣರಾವ್ ಮತ್ತು [illegible]. ಇದು ಕನ್ನಡ ಮಾಧ್ಯಮವನ್ನು ತೆಗೆದುಕೊಂಡು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಬರೆದ ಪುಸ್ತಕ. ಈ ಪುಸ್ತಕದ 'ಮುನ್ನುಡಿ'ಯನ್ನು ಬರೆದವರಾರು. ಎಂಬುದನ್ನು ಹೇಳಿಲ್ಲ. 'ನಾಲ್ಕು ಹೊಸ ಮಾತು' ಮಾತ್ರ ಗ್ರಂಥಕರ್ತರದು. "ಎಲ್ಲ ಜನಾಂಗಗಳ ಚರಿತ್ರೆಯನ್ನೂ ಪೂರ್ವಕಲ್ಪಿತ ಅಭಿಪ್ರಾಯವಿಲ್ಲದೆ ತಿಳಿದುಕೊಳ್ಳುವ ಪ್ರಯತ್ನ ಮಾಡಿದರೆ ಇತರರೂ ಕೂಡ ಮಾನವನ ಏಳಿಗೆಗೆ ಯಾವ ರೀತಿ ಸಹಾಯ ಮಾಡಿದ್ದಾರೆ ಎಂದು ತಿಳಿಯುತ್ತೆ. ಇದರಿಂದ ವಿಶ್ವಸೌಹಾರ್ದ ಬೆಳೆಯಲು ಸಹಾಯವಾಗುತ್ತೆ" ಎಂದು ಪೀಠಿಕೆಯಲ್ಲಿ ಹೇಳಿದೆ. ಪ್ರಾಚೀನ ಹಾಗೂ ಮಧ್ಯಯುಗದ ಇತಿಹಾಸವನ್ನು ನಿರೂಪಿಸುವಾಗ ನಿರ್ದಿಷ್ಟವಾದ ವರ್ಷಗಳನ್ನು ಹೇಳದೆ ಸ್ಥೂಲವಾಗಿ ಕ್ರಿ.ಪೂ. ಆರನೆಯ ಶತಮಾನ. ಕ್ರಿ.ಶ. ನಾಲ್ಕನೆಯ ಶತಮಾನ ಇತ್ಯಾದಿ ಹೇಳಿರುವುದು ವಿದ್ಯಾರ್ಥಿಗಳಿಗೆ ಸಹಾಯಕವಾಗಿಲ್ಲ. ಚೀನಾದ ರಾಜವಂಶಗಳು (ಪು. ೧೯). ಅಸೀರಿಯ (ಪು.೩೫). ಈಜಿಪ್ಟ್ (ಪು.೫೦). ಗ್ರೀಕರು (ಪು. ೭೫). ಇಂಡಿಯಾದ ದಕ್ಷಿಣದ ರಾಜ್ಯಗಳು (ಪು. ೧೦೯–೧೧) ಇತ್ಯಾದಿಗಳನ್ನು ಉದಹರಿಸಬಹುದು. ಭಾರತವರ್ಷ ಎಂಬುದು ಭರತವರ್ಷ ಎಂದೂ. ಶಾತವಾಹನ 'ಶತವಾಹನ' ಎಂದೂ (ಪು. ೧೧೯) ಆಗಿದೆ. ಲೇಖಕರೇ ಹೇಳಿರುವಂತೆ ಸ್ವಲ್ಪ ತ್ವರಿತವಾಗಿಯೇ ಬರೆದದ್ದು ಈ ಲೋಪದೋಷಗಳಿಗೆ ಕಾರಣವಾಗಿರಬಹುದು. ಐದನೆಯ ಪುಟದಲ್ಲಿ 'ಕೊನೆಯದಾಗಿ ವಿದ್ಯಾರ್ಥಿಗಳಿಗೆ ಒಂದು ಮಾತು' ಎಂದು ಆರಂಭಿಸಿ. ಭಾರತೀಯರಾದ ವಿದ್ಯಾರ್ಥಿಗಳು "ನಮ್ಮ ಇತಿಹಾಸವನ್ನು ಚೆನ್ನಾಗಿ ತಿಳಿದರೇನೇ" ಪ್ರಪಂಚಕ್ಕೆ ಮಾರ್ಗದರ್ಶಿಗಳಾಗಬಲ್ಲರು ಎಂಬಂತಹ ಉಪದೇಶಕರ ಮಾತುಗಳ ಔಚಿತ್ಯವೇನೋ ತಿಳಿಯದು. ಇದು ಪಠ್ಯಪುಸ್ತಕವೂ ಆಗದೆ ಸಾಮಾನ್ಯ ಓದುಗರಿಗೂ ಸಹಾಯವಾಗದೆ ಕನ್ನಡದಲ್ಲಿ ಮಾನವ ಇತಿಹಾಸದ ಸಾಹಿತ್ಯಕ್ಕೆ ಇಲ್ಲಿದೆ ಎಂಬುದರ ಹೊರತು ಹೆಚ್ಚಿನ ಪ್ರಯೋಜನವಾಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಕೆ. ಎಸ್. ಉಪಾಧ್ಯ ಮತ್ತು ರಾಮದಾಸ್‌ರವರ "ಸಂಕ್ಷಿಪ್ತ ಜಾಗತಿಕ ಇತಿಹಾಸ"ವು ಸಾಗರದ ಅಕ್ಷರ ಪ್ರಕಾಶನ ಸಂಸ್ಥೆಯವರ ಪ್ರಕಟಣೆ (೧೯೭೭). ರಾಜ್ಯದ ಮೂರು ವಿಶ್ವವಿದ್ಯಾನಿಲಯಗಳ ಪಿ.ಯು.ಸಿ. ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಬರೆದ ಈ ಪುಸ್ತಕ ಹನ್ನೆರಡು ಅಧ್ಯಾಯಗಳನ್ನೊಳಗೊಂಡಿದೆ. ಎರಡನೆಯ ಅಧ್ಯಾಯದಲ್ಲಿ ಸುಮೇರಿಯನರ. ಬೇಬಿಲೋನಿಯರ. ಅಸ್ಸೀರಿಯನ್ನರ. ಫಿನೀಷಿಯನರ. ಈಜಿಪ್ಟ್ ಹಾಗೂ ಪ್ರಾಚೀನ ಚೀನಾಗಳ ನಾಗರಿಕತೆಗಳನ್ನು ೨೪ ಪುಟಗಳಲ್ಲಿ ನಿರೂಪಿಸಿದ್ದಾರೆ.

೨೬ ಪುಟಗಳ ಮೂರನೆಯ ಅಧ್ಯಾಯ ಗ್ರೀಸ್ ಮತ್ತು ರೋಮ್ ಸಂಸ್ಕೃತಿಗಳಿಗೆ ಮೀಸಲಾಗಿದೆ. ಪರೀಕ್ಷೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಬರೆದ ಈ ಪುಸ್ತಕದಲ್ಲಿ ಹೆಚ್ಚಿನ ವಿವರಗಳನ್ನು ಕಾಣಲಾಗದು. ೨೦೦ ಪುಟಗಳ ಈ ಪುಸ್ತಕದಲ್ಲಿ ೬೦ಕ್ಕೂ ಮೀರಿದ ತಪ್ಪುಗಳಿರುವುದು ಆಶ್ಚರ್ಯಕರ. ಈ ತಪ್ಪು-ಒಪ್ಪುಗಳ ಪಟ್ಟಿಯನ್ನು ಅಂತ್ಯದಲ್ಲಿ ಕೊಡಲಾಗಿದೆ. ಕೂಡಲೇ ಕಣ್ಣಿಗೆ ಕಾಣದ ಇನ್ನೂ ಎಷ್ಟಿವೆಯೋ. ಒಂಬತ್ತು ಭೂಪಟಗಳು ಇವರಲ್ಲಿವೆ. ಮುದ್ರಣ ಮಾತ್ರ ಮುದ್ದಾಗಿದೆ.

ಇಂತಹುದೇ ಇನ್ನೊಂದು ಪುಸ್ತಕ ಶ್ರೀ ಎಸ್. ಸತ್ಯನಾರಾಯಣರಾವ್ ಹಾಗೂ ಶ್ರೀ ಎಮ್. ವಿ. ಶ್ರೀನಿವಾಸ್‌ರವರ 'ಪ್ರಪಂಚದ ಚರಿತ್ರೆ'. ಪ್ರಕಾಶಕರು: ಗೀತಾಬುಕ್ ಹೌಸ್'. ಮೈಸೂರು. ಇವರಿಬ್ಬರೂ ನುರಿತ ಅಧ್ಯಾಪಕರು. ಎರಡು ದಶಕಗಳಿಗೂ ಹೆಚ್ಚಿನ ಕಾಲ ಪಾಠಮಾಡಿರುವ ಶ್ರೀ ಸತ್ಯನಾರಾಯಣರಾವ್ ಅವರು ತಮ್ಮ ಅನುಭವದ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ವಿವರಗಳನ್ನು ಮಾತ್ರ ಕೊಟ್ಟು ಈ ಪುಸ್ತಕ ಅವರಿಗೆ ಹೆಚ್ಚು ಪ್ರಯೋಜನಕಾರಿಯಾಗುವಂತೆ ಮಾಡಿದ್ದಾರೆ.

ಎರಡು ವರ್ಷದ ಪಿ.ಯು.ಸಿ. ಶಿಕ್ಷಣಕ್ಕೆ ಅನುಗುಣವಾಗಿ ಎರಡನೆಯ ವರ್ಷದಲ್ಲಿ ಕಲಿಸಬೇಕಾದ ಭಾರತೀಯ ಸಂಸ್ಕೃತಿಯ ರೂಪರೇಖೆಗಳನ್ನು ಚಿತ್ರಿಸುವ ಪುಸ್ತಕ. ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಈಗ ತಾನೇ ಪ್ರಕಟವಾದ (ನವೆಂಬರ್ ೧೯೭೨) 'ಇತಿಹಾಸ ಪರಿಚಯ' (ಭಾಗ ೨). ಇದು ಎರಡನೆಯ ಭಾಗವೆಂದು ಹೇಳಿರುವುದರಿಂದ ಶಿವಣ್ಣ ಹಾಗೂ ರಾಮಲಿಂಗಪ್ಪನವರ ಪುಸ್ತಕವನ್ನು ಮೊದಲನೆಯ ಭಾಗವೆಂದು ಗ್ರಹಿಸಬೇಕು. ಆದರೆ ಆ ಬಗ್ಗೆ ಇಲ್ಲಿ ಯಾವ ಸೂಚನೆಯೂ ಇಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಡಾ. ಷೇಕ್‌ಅಲಿ, ಜಿ. ಆರ್. ರಂಗಸ್ವಾಮಯ್ಯ, ಡಾ. ಎ. ವಿ. ವೆಂಕಟರತ್ನಂ ಹಾಗೂ ಡಾ. ಬಿ. ಮುದ್ದಾಚಾರಿ–ಇವರುಗಳು ಇದರ ಲೇಖಕರು. ೧೮೮ ಪುಟಗಳಲ್ಲಿ ಭಾರತದ ಪ್ರಾಚೀನ ನಾಗರೀಕತೆಯಿಂದಾರಂಭಿಸಿ ೧೯೪೭ರಲ್ಲಿ ಭಾರತಕ್ಕೆ ದೊರೆತ ಸ್ವಾತಂತ್ರ್ಯದ ವರೆಗಿನ ಪಕ್ಷಿನೋಟ ಇಲ್ಲಿದೆ. ನಾಲ್ಕು ಲೇಖಕರ ನಾಲ್ಕು ಭಿನ್ನ ಶೈಲಿಗಳನ್ನು ಇಲ್ಲಿ ಸುಲಭವಾಗಿ ಗುರುತಿಸಬಹುದು. 'ಯೂರೋಪಿಯನ್ ಯುಗದ ಸಂಸ್ಕೃತಿ' ಎಂಬ ಅಧ್ಯಾಯದಲ್ಲಿನ ಕೆಲವು ವಿವರಗಳು ವಿಷಯಕ್ಕೆ ಸಂಬಂಧಿಸಿದಂತೆ ಕಾಣುವುದಿಲ್ಲ. ಇಲ್ಲಿ ಉಪಯೋಗಿಸಲಾದ 'ಪ್ರಮಾಣಿಕ ಕಲೆ' (ಪು. ೧೫೮) ಮತ್ತು 'ಆಧುನೀಕರಣ' ಎಂಬ ಮಾತುಗಳು ಸೂಕ್ತವಲ್ಲವೇನೋ ಎನಿಸುತ್ತದೆ.

ಈ ವರ್ಷ(೧೯೭೨)ಮೈಸೂರಿನ ಗೀತಾಬುಕ್ ಹೌಸ್‌ನವರು ಪ್ರಕಟಿಸಿದ ಗ್ರಂಥ ಡಾ. ಎ.ವಿ. ನರಸಿಂಹ ಮೂರ್ತಿ ಹಾಗೂ ಡಾ. ಬಿ. ಕೆ. ಗುರುರಾಜರಾಯರ ಪ್ರಾಚೀನ ಭಾರತ. ಇದು ಸಮಗ್ರ ಭಾರತೀಯ ಇತಿಹಾಸದ ಮೊದಲನೆಯ ಭಾಗವೆನ್ನಲಾಗಿದೆ. ಮಧ್ಯಕಾಲೀನ ಮತ್ತು ಆಧುನಿಕ ಕಾಲದ ಇತಿಹಾಸವನ್ನು ಎರಡು ಮತ್ತು ಮೂರನೆಯ ಭಾಗಗಳಾಗಿ ಹೊರತರುವುದು ಲೇಖಕರ ಅಭಿಲಾಷೆಯಾಗಿದೆ. ಭಾರತದ ಇತಿಹಾಸವನ್ನು ಹೀಗೆ ಮೂರು ಭಾಗಗಳಾಗಿ ವಿಂಗಡಿಸಿರುವುದರ ಹಾಗೂ ಅದಕ್ಕೆ ಕೆಲವರು ಹಿಂದೂ, ಮುಸಲ್ಮಾನ ಮತ್ತು ಬ್ರಿಟಿಷ್ ಕಾಲಗಳೆಂಬ ಹೆಸರುಗಳನ್ನು ಕೊಟ್ಟಿರುವುದನ್ನು ಕುರಿತು ಇವರು ದೀರ್ಘವಾಗಿ ವಿವೇಚಿಸಿ (ಪು. ೧೪–೧೯). ಅದು ಅಷ್ಟು ಸಮಂಜಸವಲ್ಲವೆಂದು ವಾದಿಸಿ, ಉತ್ತರ ಭಾರತದಲ್ಲಿ ಕ್ರಿ.ಶ. ೧೨೦೬ ಮತ್ತು ದಕ್ಷಿಣದಲ್ಲಿ ೧೩೦೦ನೆಯ ವರ್ಷಗಳು ಪ್ರಾಚೀನ ಭಾರತದ ಇತಿಹಾಸದ ಅಂತ್ಯವನ್ನೂ, ಮಧ್ಯಕಾಲೀನ ಇತಿಹಾಸದ ಪ್ರಾರಂಭವನ್ನೂ ಮಾಡಿದುದಾಗಿ ತೀರ್ಮಾನಿಸಿದ್ದಾರೆ. ಅಂತೆಯೇ ಮೂರನೆಯ ಪಾಣಿಪಟ್ಟದ ಕದನ (೧೭೬೧) ಹಾಗೂ ೧೭೬೪ರಲ್ಲಿ ಮೊಘಲರ ಷಾ ಅಲಮನು ಬ್ರಿಟಿಷರ ಆಶ್ರಯ ಯಾಚಿಸಿದಂದಿನಿಂದ ಆಧುನಿಕ ಭಾರತದ ಇತಿಹಾಸ ಆರಂಭವಾಯಿತೆಂದೂ ಸೂಚಿಸಿದ್ದಾರೆ. ಇದೂ ಒಂದು ಅಭಿಪ್ರಾಯವೇ ಹೊರತು, ಅಂತಿಮ ನಿರ್ಧಾರವಲ್ಲವೆಂದು ಹೇಳಬಹುದು. ಈ ಸಂದರ್ಭದಲ್ಲಿ ಲೇಖಕರು ಹೇಳಿರುವ "ಭಾರತ ಇತಿಹಾಸದಲ್ಲಿ ಬಹುಶಃ ಹಿಂದೂ ಇಂಡಿಯಾ ಎಂದು ಕರೆಯಲ್ಪಟ್ಟಿರುವ ಮೊದಲ ವಿಭಾಗವನ್ನು ಬಿಟ್ಟರೆ ಉಳಿದ ಯಾವ ಸಮಯದಲ್ಲೂ ಆಳರಸರ ಮತೀಯ ಮತ್ತು ಸಾಮಾಜಿಕ ಪದ್ಧತಿಗಳು ಜನಸಾಮಾನ್ಯರ ಆಚಾರ ವ್ಯವಹಾರಗಳೊಂದಿಗೆ ಒಂದುಗೂಡಿರಲಿಲ್ಲ"ವೆಂಬ ಹೇಳಿಕೆ ಆಳರಸರ ಈ ಪದ್ಧತಿಗಳು ಭಿನ್ನವಾಗಿದ್ದುವೇ? ಎಂಬ ಪ್ರಶ್ನೆಗೆ ದಾರಿಮಾಡಿಕೊಡುತ್ತದೆ. ಇದು ಅಷ್ಟು ಸಮಂಜಸವಲ್ಲ. ಇತಿಹಾಸವು ಕೇವಲ ಯುದ್ಧಗಳ ಮತ್ತು

ತಾರೀಖುಗಳ ಸೂಚಿಯಿಲ್ಲ. ಅದು ಸಂಸ್ಕೃತಿಯ ಪ್ರತಿಬಿಂಬವೆಂಬ ಕಾರಣದಿಂದ ಇವರು ಸಾಂಸ್ಕೃತಿಕ ಇತಿಹಾಸಕ್ಕೆ ಪ್ರತಿಯೊಂದು ಅಧ್ಯಾಯದಲ್ಲೂ ವಿಶೇಷ ಗಮನವನ್ನು ಕೊಟ್ಟಿರುವುದು ಅಭಿನಂದನಾರ್ಹವಾಗಿದೆ. ದಕ್ಷಿಣಭಾರತಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಾಯಗಳಿದ್ದರೂ, ತಮಿಳರ ಸಂಘ ಸಾಹಿತ್ಯವನ್ನು ಕುರಿತು ಹೆಚ್ಚಿನ ವಿವರಗಳನ್ನು ನೀಡದಿರುವುದು ಒಂದು ಕುಂದು ಎನಿಸಬಹುದು. ಆದರೂ ಈ ಗ್ರಂಥದಲ್ಲಿ ಭಾರತದ ಇತಿಹಾಸ ಕುರಿತು ಹೆಚ್ಚಿನ ವಿವರಗಳಿರುವುದು ಇದರ ಉಪಯುಕ್ತತೆಯನ್ನು ಹೆಚ್ಚಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದವರು ಪ್ರಕಟಿಸಿರುವ ಡಾ. ಕೆ. ನರಸಯ್ಯನವರ 'ಭಾರತ ಚರಿತ್ರೆ' ಈಗ ಎರಡನೆಯ ಮುದ್ರಣವನ್ನು ಕಂಡಿದೆ. ಆದರೆ ಭಾಷಾದೃಷ್ಟಿಯಿಂದಾಗಲೀ, ವಿಷಯ ವ್ಯಾಪಕತೆ ಇತ್ಯಾದಿಗಳಿಂದಾಗಲೀ ಈ ಪುಸ್ತಕ ಅಷ್ಟೇನೂ ಉಪಯುಕ್ತವಲ್ಲವೆಂದೇ ಹೇಳಬೇಕು. ಭಾರತೀಯ ವಿದ್ಯಾಭವನದವರು ಪ್ರಕಟಿಸಿರುವ ಭಾರತೀಯ ಇತಿಹಾಸದ ಮೊದಲ ನಾಲ್ಕು ಸಂಪುಟಗಳ ಅನೇಕ ಅಧ್ಯಾಯಗಳನ್ನು ಹೆಚ್ಚು ಕಡಿಮೆ ಸಂಗ್ರಹವಾಗಿ ಇಲ್ಲಿ ಭಾಷಾಂತರಿಸಲಾಗಿದೆಯಾದರೂ, ಭಾಷಾಂತರವು ಸಹ ಯಶಸ್ವಿಯಾಗಿಲ್ಲ. ಅಲ್ಲದೆ ವಿಷಯ ನಿರೂಪಣೆಯಲ್ಲಿಯೂ ಅನೇಕ ತಪ್ಪುಗಳಿವೆ. ಶಾತಕರ್ಣಿ ಇಲ್ಲಿ ಶಾತಕರಣಿ, ಶಾತಕಿರಣಿ ಆಗಿದೆ. (ಪು. ೨೦೫, ೨೦೬). ಸಮುದ್ರಗುಪ್ತನ ದಂಡಯಾತ್ರೆಯನ್ನು ವಿವರಿಸುವಾಗ, ಅಲಹಾಬಾದ್ ಶಾಸನದಲ್ಲಿನ ಕ್ರಮವನ್ನೇ ಅನುಸರಿಸಿರುವುದರ ಫಲವಾಗಿ ಆ ಅರಸನು ಕಂಚಿಯ ವಿಷ್ಣುಗೋಪನನ್ನು ಸೋಲಿಸಿದ ಬಳಿಕ ಅವಮುಕ್ತದ ನೀಲರಾಜ, ವೆಂಗಿಯ ಹಸ್ತಿವರ್ಮ ಮುಂತಾದವರನ್ನು ಸೋಲಿಸಿದನೆಂದು ಹೇಳಿದೆ. ಇದು ಗ್ರಂಥಕರ್ತರು ಶಾಸನವನ್ನು ಕುರಿತು ಮಾಡಲಾಗಿರುವ ಚರ್ಚೆಗಳನ್ನು ತಿಳಿದುಕೊಳ್ಳುವ ಗೋಜಿಗೇ ಹೋಗಿಲ್ಲವೆಂಬುದನ್ನು ಸೂಚಿಸುತ್ತದೆ. ಇರಾಂಡಪಲ್ಲಿ, ಅವಮುಕ್ತ ಮುಂತಾದ ರಾಜ್ಯಗಳಾವುವು ಎಂಬುದನ್ನೂ ಹೇಳಿಲ್ಲ (ಪು. ೨೨೮). 'ಧರ್ಮವಿಜಯಿಯಾಗಿ ಪ್ರಖ್ಯಾತನಾಗಿದ್ದ ಅಶೋಕನನ್ನು ಅನುಕರಿಸುವುದಕ್ಕಾಗಿ ಸಮುದ್ರಗುಪ್ತನು ತನ್ನ ದಿಗ್ವಿಜಯದ ಯಾತ್ರೆಯನ್ನು ವರ್ಣಿಸಲು ಅಶೋಕಸ್ತಂಭವನ್ನೇ ಉದ್ದೇಶಪೂರ್ವಕವಾಗಿ ಗೊತ್ತುಮಾಡಿದನೆಂದು ಕಾಣುತ್ತದೆ" ಎಂಬುದೊಂದು ವಿಚಿತ್ರ ಊಹೆ. ಮಹಾನುಭಾವನಾದ ಅಶೋಕನೆಲ್ಲಿ, ಯುದ್ಧಮಲ್ಲನಾದ ಸಮುದ್ರಗುಪ್ತನೆಲ್ಲಿ (ಪು. ೨೩೦) ಎಂಬ ಮಾತುಗಳನ್ನು, ನಾಲ್ಕೇ ಪುಟಗಳ ಮೊದಲು, ಪುಟ ೨೩೪ರಲ್ಲಿನ 'ದೇಶವನ್ನು ಪರಕೀಯರ ಆಡಳಿತದಿಂದ ತಪ್ಪಿಸಿ ಏಕ ಚಕ್ರಾಧಿಪತ್ಯವನ್ನು ಸ್ಥಾಪಿಸಿ ಅಧೋಗತಿಗಿಳಿದಿದ್ದ ಸನಾತನ ಧರ್ಮವನ್ನು ರಕ್ಷಿಸಲು (ಸಮುದ್ರಗುಪ್ತನು) ಕಂಕಣಬದ್ಧನಾದನೆಂಬ ಇವರ ಹೇಳಿಕೆಯೊಡನೆ ಹೋಲಿಸಿದಾಗ ಇಲ್ಲಿನ ಅಸಂಬದ್ಧತೆ ವ್ಯಕ್ತವಾಗುತ್ತದೆ.

ಈ ವಿಷಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯವರು ಪ್ರಕಟಿಸಿದ 'ಪ್ರಾಚೀನ ಭಾರತ' (೧೯೭೨) ಹೆಚ್ಚು ಉಪಯುಕ್ತವಾಗಿದೆ. ಇದರ ಲೇಖಕರು ಶ್ರೀ ಜಿ. ಆರ್. ರಂಗಸ್ವಾಮಯ್ಯ. ಈ ಗ್ರಂಥದಲ್ಲಿ ಏಳನೆಯ ಶತಮಾನದ ಕೊನೆಯವರೆಗಿನ ಪ್ರಾಚೀನ ಭಾರತದ ಇತಿಹಾಸವನ್ನು ನಿರೂಪಿಸಲಾಗಿದೆ. ಬಿ.ಎ. ತರಗತಿಯ ವಿದ್ಯಾರ್ಥಿಗಳ ಮತ್ತು ಸಾಮಾನ್ಯ ಓದುಗರ ಅಭಿರುಚಿ ಮತ್ತು ಉಪಯುಕ್ತತೆಯನ್ನು ಗಮನದಲ್ಲಿರಿಸಿಕೊಂಡು ಬರೆಯಲಾಗಿದೆ ಎಂದು ಲೇಖಕರು ನಿವೇದಿಸಿಕೊಂಡಿದ್ದಾರೆ. ಕೆಲವು ಕಡೆ ಇವರ ಬರವಣಿಗೆಯಲ್ಲಿ ವಿರೋಧಾಭಾಸವೆನಿಸಬಹುದಾದ ಹೇಳಿಕೆಗಳು ನುಸುಳಿವೆ. ಸಮುದ್ರಗುಪ್ತನು ದಕ್ಷಿಣ ಭಾರತದ ಮೇಲೆ ದಂಡಯಾತ್ರೆ ಕೈಗೊಂಡಾಗ್ಯೂ ತನ್ನ ಆಡಳಿತವನ್ನು ಅಲ್ಲಿ ಸ್ಥಾಪಿಸಲಾಗಲಿಲ್ಲ ಎಂಬ ಹೇಳಿಕೆ (ಪು. ೬) ಆತನ ಅಸಮರ್ಥತೆಯನ್ನು ಸೂಚಿಸುವಂತಿದೆ. ಆದರೆ ೧೯೬ನೆಯ ಪುಟದಲ್ಲಿ ದಕ್ಷಿಣ ಭಾರತದ ಮೇಲೆ ಉತ್ತರದ ರಾಜಧಾನಿಯಿಂದ ಆಡಳಿತ ನಡೆಸುವುದು ಆ ಕಾಲದಲ್ಲಿ ಸುಲಭಸಾಧ್ಯವಲ್ಲ ಎಂಬುದನ್ನರಿತು ಸಮುದ್ರಗುಪ್ತ ಸೋತರಾಜರಿಂದ ಕಪ್ಪಕಾಣಿಕೆ ಪಡೆದು ಹಿಂದಿರುಗಿದನು ಎಂದಿದೆ. ಇದರ ಮೊದಲಭಾಗ ಸತ್ಯಕ್ಕೆ ಸಮೀಪವಾಗಿದೆ. ವಾಸ್ತವಿಕವಾಗಿ ಇದು ಆ ಅರಸನ ಜಾಣಾಕ್ಷತನವನ್ನು ಸೂಚಿಸುತ್ತದೆ. ಉತ್ತರದ ಅರಸರಿಗೆ, ದಕ್ಷಿಣದ ಅರಸರಿಗೆ ಹಾಗೂ ಇತರರಿಗೆ ಸಂಬಂಧಿಸಿದಂತೆ ಈತನು ಬೇರೆ ಬೇರೆ ನೀತಿಯನ್ನವಲಂಬಿಸಿದನೆಂದು ಅಲಹಾಬಾದ್ ಶಾಸನದಲ್ಲಿಯೇ ಹೇಳಿದೆ. ಇದರಂತೆಯೇ ಪು. ೮ರಲ್ಲಿನ "ಸಂಸ್ಕೃತ ಗ್ರಂಥಗಳೂ ಪ್ರಾದೇಶಿಕ ಭಾಷೆಗಳಿಗೂ ತರ್ಜುಮೆಯಾದವು.

ಉದಾಹರಣೆಗೆ ದಕ್ಷಿಣದ ತುತ್ತತುದಿಯ ತಮಿಳು ಭಾಷೆಗೆ ಪ್ರಾಚೀನ ಕಾಲದಲ್ಲೇ ದಾರ್ಶನಿಕ ಮತ್ತು ಮತೀಯ ಗ್ರಂಥಗಳೆಲ್ಲವೂ ತರ್ಜುಮೆಯಾಗಿದ್ದುವು" ಎಂಬ ಹೇಳಿಕೆ ಸರಿಯಲ್ಲ. ಇಂತಹ ಕೆಲವು ನ್ಯೂನತೆಗಳಿದ್ದರೂ, ವಿದ್ಯಾರ್ಥಿಗಳಿಗೆ ಇದೊಂದು ಉಪಯುಕ್ತ ಗ್ರಂಥ.

ಕರ್ನಾಟಕ ವಿಶ್ವವಿದ್ಯಾನಿಲಯದವರೂ ಸಹ ಇದೀಗ 'ಪ್ರಾಚೀನ ಭಾರತದ ಚರಿತ್ರೆ'ಯೊಂದನ್ನು ಪ್ರಕಟಿಸಿದ್ದಾರೆ. (೧೯೭೩) ಇದು ಕ್ರಿ.ಶ. ೧೨೦೦ರವರೆಗಿನ ಇತಿಹಾಸವನ್ನೊಳಗೊಂಡಿದೆ. ಡಾ. ಪಿ. ಬಿ. ದೇಸಾಯಿ. ಡಾ. ಎಸ್. ಎಚ್. ರಿತ್ತಿ ಹಾಗೂ ಡಾ. ಜಿ. ಆರ್. ಗೋಪಾಲ್ ಇದರ ಲೇಖಕರು. ಪ್ರಸ್ತುತ ಲೇಖಕರು ಈ ಗ್ರಂಥದ ಲೇಖಕರೂ ಆಗಿರುವ ಕಾರಣ ಇದನ್ನು ಕುರಿತು ಹೇಳುವುದು ಉಚಿತವಲ್ಲ.

ಶ್ರೀ ಷಡಕ್ಷರವರ 'ಭಾರತೀಯ ಸಂಸ್ಕೃತಿಯ ಅಧ್ಯಯನ' ತಿಪಟೂರಿನ ಶಶಿಪ್ರಕಾಶನದವರ ಪ್ರಕಟಣೆ. ಪಿ.ಯು.ಸಿ. ಎರಡನೆಯ ವರ್ಷದ ವಿದ್ಯಾರ್ಥಿಗಳಿಗಾಗಿ ಬರೆದ ಇದರ ಒಂದು ವೈಶಿಷ್ಟ್ಯ ವೆಂದರೆ ಸಿಂಧೂ ಸಂಸ್ಕೃತಿಯನ್ನು ಕುರಿತು ನಡೆಸಲಾದ ಇತ್ತೀಚಿನ ಸಂಶೋಧನೆಗಳನ್ನು ಇದರಲ್ಲಿ ವಿವೇಚಿಸಿರುವುದು. ಹರಪ್ಪ ಮೊಹೆಂಜೊದಾರೊ ಹಾಗೂ ಲೋಥಾಲ್‌ಗಳಲ್ಲಿ ದೊರೆತ ಮುದ್ರೆ ಗಳನ್ನು ಓದಲು ನಡೆದಿರುವ ಪ್ರಯತ್ನಗಳಲ್ಲಿ ಕನ್ನಡಿಗರೇ ಆದ ಶ್ರೀ ಎಸ್. ಆರ್. ರಾವ್‌ರವರರದು ಇತ್ತೀಚಿನದು. ಅಂದಿನ ಜನರು ವೇದಗಳಲ್ಲಿನ ಮಹರ್ಷಿಗಳ. ಜ್ಯೋತಿಷರ ಮತ್ತು ಕೃತಿಕಾರರ ಹೆಸರು ಗಳನ್ನಿಟ್ಟುಕೊಳ್ಳುತ್ತಿದ್ದರು. ಚರಿತ್ರೆ ಪೂರ್ವಕಾಲದ ರಾಜಕೀಯ ವ್ಯವಸ್ಥೆಗಳ ಮೇಲೆ ಪ್ರಸ್ತುತ ಗೋಪ್ಯ ಲಿಪಿಯ ಅರ್ಥ ಬೆಳಕನ್ನು ಚೆಲ್ಲುತ್ತದೆ. ಆ ಪಟ್ಟಣಗಳಲ್ಲಿ ವಂಶಪಾರಂಪರ್ಯ ಕ್ರಮದ ಆಡಳಿತ ವ್ಯವಸ್ಥೆ ಇತ್ತು ಎಂಬ ಅಭಿಪ್ರಾಯವನ್ನು ಇವರು ಈ ಪುಸ್ತಕದಲ್ಲಿ ಸೇರಿಸಿದ್ದಾರೆ. ಜೈನಧರ್ಮವು ಬೌದ್ಧ ಧರ್ಮದ ಒಂದು ಶಾಖೆ ಎಂಬ ನಂಬಿಕೆ ಇತ್ತೀಚಿನವರೆಗೂ ಇದ್ದಿತು. (ಪು.೨೯) ಎಂಬ ಇವರ ಮಾತುಗಳು ಸರಿಯಲ್ಲ. ಚಾಲುಕ್ಯ ವಾಸ್ತುಶಿಲ್ಪವನ್ನು ಕುರಿತು ಬರೆಯುವಾಗ ಶೈಲಿಗಳಲ್ಲಿ ನಾಗರ ವಾಸರ ಮತ್ತು ದ್ರಾವಿಡ ಎಂಬ ಪ್ರಮುಖ ಶೈಲಿಗಳಿದ್ದುವೆಂದಿದ್ದಾರೆ. 'ವಾಸರ' ಎಂಬುದು ತಪ್ಪು. ಇದು ವೇಸರ ಎಂದಿರಬೇಕು.

ಈ ಸಂದರ್ಭದಲ್ಲಿ ಡಾ. ಶ್ರೀಕಂಠಶಾಸ್ತ್ರಿಗಳ 'ಭಾರತೀಯ ಸಂಸ್ಕೃತಿ'ಯನ್ನು ಇಲ್ಲಿ ಪ್ರಮುಖವಾಗಿ ಹೆಸರಿಸಬೇಕು. ೧೯೪೪ರ ವೇಳೆಗೇ ಸಿದ್ಧವಾಗಿದ್ದ ಈ ಗ್ರಂಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ೧೯೫೪ರಲ್ಲಿ ಪ್ರಕಟಿಸಿತು. ಇಪ್ಪತ್ತನೆಯ ಶತಮಾನದಲ್ಲಿ ವಿಜ್ಞಾನ ಮತ್ತು ದಂಡನೀತಿ ಪ್ರಧಾನವಾದ ಪಾಶ್ಚಾತ್ಯ ಸಂಸ್ಕೃತಿಯು ವಿಶ್ವವ್ಯಾಪ್ತಿಯನ್ನು ಹೊಂದಿ ವಿಶ್ವಕಲ್ಯಾಣಕ್ಕೆ ಎಡೆಮಾಡಿ ಕೊಡುವುದೆಂಬ ಆಸೆ ಎರಡು ಮಹಾಯುದ್ಧಗಳಿಂದ ಮಣ್ಣುಪಾಲಾಗಿ, ಈ ನಿರಾಶೆಗೆ–ವಿನಾಶಕ್ಕೆ– ವಿಜ್ಞಾನದ ಪ್ರಗತಿ, ಜಾತಿವೈಷಮ್ಯ, ಬಂಡವಾಳಶಾಹಿ, ಮತಗಳ ದೌರ್ಬಲ್ಯ ಇತ್ಯಾದಿಗಳು ಕಾರಣ ಗಳೆಂದು ಪ್ರತಿಪಾದಿಸಲಾಗಿದೆ. ಇದರಿಂದ ಉತ್ಪನ್ನವಾಗಿರುವ ಮಾನವನ ಜೀವನಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳಿಗೆ ಪರಿಹಾರವೇನು ಎಂದು ಇಂದು ವಿಶ್ವದ ಮುಖಂಡರು ತೀವ್ರವಾಗಿ ಯೋಚಿಸ ತೊಡಗಿದ್ದಾರೆ. ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲಿ ಇವಕ್ಕೆ ಉತ್ತರವನ್ನು ಕಾಣಬಹುದೆಂಬುದನ್ನು ಸೂಚಿಸುವುದು ಈ ಗ್ರಂಥದ ಉದ್ದಿಶ್ಯ ಎಂದು ಡಾ. ಶಾಸ್ತ್ರಿಗಳು ಹೇಳಿದ್ದಾರೆ. ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪನವರು ತಮ್ಮ ಮುನ್ನುಡಿಯಲ್ಲಿ "ಯಂತ್ರನಾಗರಿಕತೆಯ ಸುಳಿಯಲ್ಲಿ ಸಿಕ್ಕಿ ಅನ್ನಕ್ಷೇಮ, ವಸನಕ್ಷೇಮಗಳನ್ನು ಪ್ರಧಾನವಾಗಿಟ್ಟುಕೊಂಡು, ಭೋಗಾಭಿಲಾಷಿಗಳಾಗಿರುವ ಮಾನವರು ತಮ್ಮ ದೃಷ್ಟಿಯನ್ನು ಪ್ರಾಚೀನ ಭಾರತೀಯ ಸಂಸ್ಕೃತಿಯತ್ತ ಹರಿಸಿ ಅಲ್ಲಿ ಹೃದ್ಗೋಚರವಾಗುವ ವಿಪುಲವಾದ ಆತ್ಮೈಶ್ವರ್ಯವನ್ನು ಕಂಡು, ಆತ್ಮಶ್ರೀಗಾಗಿಯೂ ಹಾರೈಸುವ ಸುಮುಹೂರ್ತಸಮಯ ಪ್ರಾಪ್ತ ವಾಗಿದೆ ಇಂದು" ಎಂದು ಭಾರತ ಸಂಸ್ಕೃತಿಯ ಪರಿಚಯ ಮಾಡಿಕೊಳ್ಳಬೇಕಾದುದರ ಆವಶ್ಯಕತೆಯನ್ನು ಎತ್ತಿ ತೋರಿಸಿದ್ದಾರೆ.

ನಮ್ಮ ಸಂಸ್ಕೃತಿಯ ವೈಶಿಷ್ಟ್ಯವನ್ನು ಕುರಿತು ಹೇಳುತ್ತಾ, ಭಾರತೀಯರ ಆಧ್ಯಾತ್ಮಿಕ ದೃಷ್ಟಿ ಕೇವಲ ಪರಮತಸಹಿಷ್ಣುತೆಯಲ್ಲದೆ, ಗುಣಾವಗುಣ ವಿಮರ್ಶೆ ಮತ್ತು ಗ್ರಹಣಕ್ರಮದಲ್ಲಿ ಒಂದು ನಿಯತವಾದ ಧರ್ಮವಿರುವುದೇ ಅಂತಹ ವೈಶಿಷ್ಟ್ಯವೆಂದಿದ್ದಾರೆ ಡಾ.ಶಾಸ್ತ್ರಿಗಳು. ನಮ್ಮ ಸಂಸ್ಕೃತಿ

ಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯವಿದೆ. ಆಧ್ಯಾತ್ಮಿಕವಿವೇಚನೆಗೆ ಅಧಿಕ ಪ್ರಾಶಸ್ತ್ಯವಿದ್ದರೂ ಲೋಕಸಂಗ್ರಹಕ್ಕಾಗಿ ಅಷ್ಟೇ ಐಹಿಕವಿಷಯವಾದ ಶಾಸ್ತ್ರಗಳೂ ಇವೆ. ಇವೆಲ್ಲಕ್ಕೂ ಮಿಗಿಲಾದುದು ನಮ್ಮ ಸಂಸ್ಕೃತಿಯಲ್ಲಿ ಕಂಡು ಬರುವ ಅದ್ವೈತಭಾವ—ಇವು ವಿಶಿಷ್ಟತೆಗಳು ಎಂದು ತೋರಿಸಿದ್ದಾರೆ. ಇಲ್ಲಿ ರಾಜಕೀಯ ಇತಿಹಾಸ ಇಲ್ಲ. ನಮ್ಮ ಸಂಸ್ಕೃತಿಯ ವಿವಿಧ ಮುಖಗಳ—ವೈದಿಕಸಂಸ್ಕೃತಿ, ಆಧ್ಯಾತ್ಮಿಕ ಸತ್ಯಾನ್ವೇಷಣೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳು, ರಾಜಕೀಯ ಪದ್ಧತಿಗಳು, ಸಾಹಿತ್ಯ, ಕಲೆ, ವಿಜ್ಞಾನ—ಇವುಗಳ ಸೂಕ್ಷ್ಮ ಪರಿಚಯವನ್ನು ಈ ಗ್ರಂಥದಲ್ಲಿ ಮಾಡಿಕೊಡಲಾಗಿದೆ. ಕೊನೆಯ ಅಧ್ಯಾಯ ಬೃಹದ್ಭಾರತಕ್ಕೆ ಸಂಬಂಧಿಸಿದುದಾಗಿದೆ. ಭಾರತೀಯ ಸಂಸ್ಕೃತಿಯು ಅನಾದಿಯಾಗಿ ಭೌತಿಕ ಸರಹದ್ದುಗಳಿಗೆ ಕಟ್ಟುಬೀಳದೆ ವಿದೇಶಾಂತರಗಳಲ್ಲಿ ಹೇಗೆ ಶಾಂತರೀತಿಯಿಂದ ವ್ಯಾಪಿಸಿತೆಂದು ಇಲ್ಲಿ ತೋರಿಸಿದೆ.

ಇದೊಂದು ಶ್ರೇಷ್ಠಮಟ್ಟದ ಗ್ರಂಥ. ಇಲ್ಲಿ ಎಷ್ಟೋ ವಿಷಯಗಳು ಅಡಕವಾಗಿವೆ. ಅನೇಕ ವೇಳೆ ಸಾಮಾನ್ಯ ಓದುಗರಿಗೆ ಇಲ್ಲಿನ ಕೆಲವು ವಿಷಯಗಳು ಬೇಗನೆ ಅರ್ಥವಾಗದಿರಬಹುದು. ಆದರೆ ಡಾ. ಶಾಸ್ತ್ರಿಗಳು ತಮ್ಮ ಜ್ಞಾನವನ್ನೆಲ್ಲಾ ಇಲ್ಲಿ ಎರೆದಿದ್ದಾರೆಂದರೆ ತಪ್ಪಾಗಲಾರದು. ಕುವೆಂಪುರವರೇ ಹೇಳಿರುವಂತೆ "ಸಾವಿರಾರು ವರ್ಷಗಳಲ್ಲಿ ಒಂದು ಜನಾಂಗವೋ ದೇಶವೋ ಸಾಧಿಸಿದ ಸಂಸ್ಕೃತಿಯನ್ನು ಒಂದು ಪುಸ್ತಕದಲ್ಲಿ ನಿರೂಪಿಸುವುದೇನೂ ಸುಲಭದ ಕೆಲಸವಲ್ಲ." ಆದ್ದರಿಂದಲೇ ಈ ಗ್ರಂಥ ಸಿರಿಗನ್ನಡಕ್ಕೂ ಸಿರಿಯ ಕಾಣಿಕೆಯಾಗಿದೆ.

ಮೈಸೂರು ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳ ಪದವಿ ತರಗತಿಗಳಲ್ಲಿ ಮುಖ್ಯ ಐಚ್ಛಿಕ ವಿಷಯಗಳಲ್ಲೊಂದಾಗಿ ಇತಿಹಾಸವನ್ನು ಆರಿಸಿಕೊಂಡ ವಿದ್ಯಾರ್ಥಿಗಳಿಗೆ ವಿಶ್ವದ ನಾಗರಿಕತೆಗಳ ಪರಿಚಯ ಒಂದು ಅಧ್ಯಯನ ವಿಷಯವಾಗಿತ್ತು. ಅವರಿಗಾಗಿಯೇ ಬರೆದ ಗ್ರಂಥ ಪ್ರಪಂಚ ನಾಗರಿಕತೆಗಳ ಸಂಕ್ಷಿಪ್ತ ಇತಿಹಾಸ. ಇದು ಎರಡು ಭಾಗಗಳಲ್ಲಿದ್ದು, ಮೊದಲಭಾಗ ೧೯೬೭ರಲ್ಲಿಯೂ, ಎರಡನೆಯದು ೧೯೬೮ರಲ್ಲಿಯೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಮೂಲಕ ಪ್ರಕಟವಾಯಿತು. ಇವರ ಲೇಖಕಿ ಶ್ರೀಮತಿ ಕೆ. ಪದ್ಮಾವತಮ್ಮ. "ಪ್ರಪಂಚದ ಇತಿಹಾಸವನ್ನು ಓದುವುದರಿಂದ ಈಗಿನ ರಾಜಕೀಯ ತೊಡಕುಗಳಿಗೆ ಬಿಡಿಸ ಅಪಕ್ವ ರಾಷ್ಟ್ರೀಯ ಭಾವನೆ ಕಾರಣವೆಂದು ಸ್ಪಷ್ಟಪಡುತ್ತದೆ" ಎಂಬ ಲೇಖಕಿಯ 'ಮೊದಲಮಾತು' ಒಪ್ಪತಕ್ಕದ್ದಲ್ಲವೆನಿಸಿದರೂ, "ಮಾನವನ ಜೀವನ ಎಷ್ಟು ವಿಸ್ತಾರವಾದ ಕ್ಷೇತ್ರಗಳಲ್ಲಿ ಹರಡಿದೆ ಎಂದೂ ಮತ್ತು ನಾಗರಿಕ ಜೀವನದ ಚಟುವಟಿಕೆಗಳು ವಿಶ್ವವ್ಯಾಪಕವೆಂದೂ ತಿಳಿಯುತ್ತದೆ" ಎಂಬ ಅವರ ಮಾತುಗಳು ನಿಜ. ಇತಿಹಾಸದ ಪರಿಚಯವನ್ನು ಸುಲಭ ಮಾಡಿಕೊಳ್ಳುವ ಪ್ರಯತ್ನದಿಂದ ಅವರಲ್ಲಿ ಪ್ರಾಚೀನಯುಗ, ಮಧ್ಯಯುಗ ಹಾಗೂ ಆಧುನಿಕಯುಗ ಎಂಬ ಮೂರು ಘಟ್ಟಗಳನ್ನು ಗುರುತಿಸಿ, ಪ್ರಾಚೀನಯುಗ ಪೂರ್ವೇತಿಹಾಸಕಾಲದಿಂದ ಕ್ರಿ.ಶ. ೫೦೦ರವರೆಗೂ, ೫೦೦ರಿಂದ ೧೫೦೦ರವರೆಗೆ ಮಧ್ಯಯುಗವೆಂದೂ, ೧೫೦೦ರಿಂದ ೧೮೦೦ರವರೆಗೆ ಆಧುನಿಕ ಯುಗದ ಮೊದಲ ದಿನಗಳೆಂದೂ, ನಂತರದ ಇಂದಿನವರೆಗಿನ ಕಾಲವನ್ನು ಆಧುನಿಕ ಯುಗವೆಂದೂ ಈಕೆ ಸೂಚಿಸಿದ್ದಾರೆ. ಮೊದಲನೆಯ ಭಾಗದಲ್ಲಿ ಪ್ರಾಚೀನಯುಗದ ನಾಗರಿಕತೆಗಳನ್ನು ಚಿತ್ರಿಸಲಾಗಿದೆ. ಈ ಯುಗದಲ್ಲಿ ಮಾನವನ "ಜೀವನ ಹೆಚ್ಚು ಸ್ವಾತಂತ್ರ್ಯವನ್ನು ಪರಿಚಯ ಮಾಡಿಕೊಡುವುದಿಲ್ಲ. ಕೆಲವು ರಾಜರುಗಳ ಮತ್ತು ಸಾಮ್ರಾಟರುಗಳ ಆಶ್ರಯದಲ್ಲಿ ನಡೆದ ಸಾಧನೆಗಳು ಅಲ್ಲಿ ಮುಖ್ಯವೆನಿಸುತ್ತವೆ." (ಭಾಗ ೨ ಪು. XVI) ಎನ್ನುತ್ತಾರೆ ಈಕೆ. ಮಧ್ಯಯುಗದಲ್ಲಿ ಎರಡು ಲೌಕಿಕ ಶಕ್ತಿಗಳು—ಪಾಳೆಯಪಟ್ಟುಗಳೆಂತಿದ್ದ ಭಾಗಗಳ ಒಡೆಯರಾದ ಜಹಗೀರುದಾರರುಗಳು ಮತ್ತು ಧಾರ್ಮಿಕ ಸಂಸ್ಥೆಗಳು—ಜನರಿಗೆ ಒದಗಿಸಿದ ಚೌಕಟ್ಟಿನಲ್ಲಿ ಜೀವನ ಸಾಗಿತ್ತು. ಜನರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಯನ್ನು ಸಾಧಿಸುವ ಅವಕಾಶವಿದ್ದೇ ಇತ್ತು ಎನ್ನುವ ಈ ಲೇಖಕಿ ಈ ದೃಷ್ಟಿಯಿಂದ ಹಿಂದುಳಿದಂತೆ ಕಾಣುವ ಯುಗವೂ ಜೀವನದ ಬಗ್ಗೆ ಒಂದು ಒಳ್ಳೆಯ ದೃಷ್ಟಿಯನ್ನು ತಳೆದುದು ಕಂಡುಬರುತ್ತದೆ ಎಂದು ಹೇಳಿ—ಈ ಹಿನ್ನೆಲೆಯಲ್ಲಿ ಪ್ರಪಂಚದ ನಾಗರಿಕತೆಗಳನ್ನು ಚಿತ್ರಿಸಿದ್ದಾರೆ. ಇದು ಈ ಎರಡು ಗ್ರಂಥಗಳ ದೃಷ್ಟಿಕೋನ. ಇದನ್ನವಲಂಬಿಸಿ ಈಕೆ ವಿಶ್ವದ ನಾಗರಿಕತೆಗಳನ್ನು ವಿಶ್ಲೇಷಿರುವ

ರೀತಿ ವಿಶಿಷ್ಟವಾಗಿದೆ. ಎರಡನೆಯ ಭಾಗ ಕ್ರಿ.ಶ. ೧೬೨೦ಕ್ಕೆ ಮುಗಿಯುತ್ತದೆ. ಎಂದಮೇಲೆ ಇದರ ಮುಂದಿನ ಭಾಗಗಳನ್ನು ಸಹ ಈಕೆ ಪ್ರಕಟಿಸಬಹುದು–ಪ್ರಕಟಿಸಲಿ ಎಂದು ಆಶಿಸೋಣ. ಎರಡು ಭಾಗಗಳ ಆರಂಭದಲ್ಲಿ ಕೊಟ್ಟಿರುವ ಕಾಲಸೂಚಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಅಧ್ಯಯನಕ್ಕೆ ಸಹಾಯವಾಗುವಂತೆ ಅಲ್ಲಲ್ಲಿ ಭೂಪಟಗಳನ್ನು ಕೊಡಲಾಗಿದೆ. ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ವಿಶೇಷ ಅಧ್ಯಯನಕ್ಕೆಂದು ಆಧಾರ ಗ್ರಂಥಗಳನ್ನೂ ಸೂಚಿಸಿದೆ.

ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಬಿ.ಎ. ಎರಡನೆಯ ತರಗತಿಯಲ್ಲಿ ಇತಿಹಾಸವನ್ನು ಐಚ್ಛಿಕ ವಿಷಯವಾಗಿ ಆರಿಸಿಕೊಂಡ ವಿದ್ಯಾರ್ಥಿಗಳು ೧೨೦೬ರಿಂದ ೧೭೦೭ರವರೆಗಿನ ಭಾರತದ ಇತಿಹಾಸವನ್ನು ಅಭ್ಯಾಸಿಸಬೇಕು. ಅವರ ಅನುಕೂಲಕ್ಕಾಗಿ ರಚಿತವಾದ ಗ್ರಂಥ ಡಾ. ಸಿ. ವ್ಹಿ. ರಂಗಸ್ವಾಮಿಯವರ 'ಮಧ್ಯಕಾಲೀನ ಭಾರತದ ಇತಿಹಾಸ (೧೯೭೧)'. ಇವರ ಪ್ರಕಾಶಕರು ಗದಗಿನ ವಿಜಯ ಬುಕ್‌ಡಿಪ್ಪೋನವರು. ಈ ಗ್ರಂಥವನ್ನು ರಚಿಸುವಾಗ ಲೇಖಕರು ಅನೇಕ ಆಧಾರ ಗ್ರಂಥಗಳ ನೆರವನ್ನು ಪಡೆದು, ಅವುಗಳನ್ನು ತುಲನಾತ್ಮಕ ದೃಷ್ಟಿಯಿಂದ ವಿವೇಚಿಸಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಮಾದರೀ ಪ್ರಶ್ನೆಗಳನ್ನು ಕೊಟ್ಟಿದ್ದಾರೆ. ಕೇವಲ ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೇ. ಅದರಲ್ಲೂ ಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡೇ ಬರೆದ ಗ್ರಂಥವಿದು. ಆದರೆ ಅವಸರದಲ್ಲಿ ಅಚ್ಚು ಹಾಕಿಸಿದ ಪರಿಣಾಮವಾಗಿ ಅನೇಕ ಮುದ್ರಣ ಇತ್ಯಾದಿ ದೋಷಗಳು ಇಲ್ಲಿ ಕಂಡುಬರುತ್ತವೆ. ೧ನೆಯ ಪುಟದಿಂದ ೨೯೬ ಪುಟದವರೆಗೆ ಅಧ್ಯಾಯದ ಬಳಿಕ ಅಧ್ಯಾಯ ೧೫ ಪುನಃ ಒಂದನೆಯ ಪುಟದಿಂದ ಆರಂಭವಾಗಿರುವುದು ಅವಸರದ ಮುದ್ರಣಕ್ಕೆ ನಿದರ್ಶನ. ಪರಿಶಿಷ್ಟದಲ್ಲಿ ಪ್ರಸಿದ್ಧ ಮಹಾಪುರುಷರ ಹಾಗೂ ಸ್ಮಾರಕ ಕಟ್ಟಡಗಳ ವಿವರಣೆ ಇದೆ. ಆದರೆ ಇಲ್ಲಿ ರಾಬರ್ಟ್ ಸೂಯೆಲ್‌ನನ್ನು ಸೇರಿಸಿದುದರ ಔಚಿತ್ಯವೇನೋ ತಿಳಿಯದಾಗಿದೆ. ಸ್ಮಾರಕ ಕಟ್ಟಡಗಳು ಎಂಬಲ್ಲಿ ಕುತುಬ್‌ಮಿನಾರ್ ಮಾತ್ರ ಸೇರಿವೆ. ಉಳಿದವುಗಳು ಇಲ್ಲಿ ಯಾಕೆ ಸೇರಲಿಲ್ಲವೋ ತಿಳಿಯದು. ಈ ಕಟ್ಟಡವನ್ನು ಕುರಿತ ಕೆಲವು ವಿವರಗಳನ್ನು ೧ನೆಯ ಪುಟದಲ್ಲಿಯೇ ಕೊಡಲಾಗಿದೆ.

ಕನ್ನಡ ಅಧ್ಯಯನ ಸಂಸ್ಥೆಯ ಪತ್ರಪುಸ್ತಕ ಮಾಲೆಯಲ್ಲಿ ೨೦ನೆಯ ಗ್ರಂಥ ಡಾ. ಬಿ. ಮುದ್ದಾಚಾರಿಯವರ 'ಆಧುನಿಕ ಭಾರತ'. ಇದು ಬಿ.ಎ. ತರಗತಿಯಲ್ಲಿ ಭಾರತೀಯ ಇತಿಹಾಸವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ವ್ಯಾಸಂಗಮಾಡುತ್ತಿರುವ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬರೆದುದು. ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಸಾಧ್ಯವಾದಷ್ಟು ಸರಳವಾಗಿ ವಿಶದವಾಗಿ ನಿರ್ದಿಷ್ಟವಾಗಿ ಸ್ಪಷ್ಟವಾಗಿ ಮತ್ತು ವಸ್ತುನಿಷ್ಠ ರೀತಿಯಲ್ಲಿ ಮುಂದಿಡುವ ಪ್ರಯತ್ನ ಇಲ್ಲಿದೆ ಎಂದು ಇತಿಹಾಸ ವಿಭಾಗದ ಸಂಪಾದಕರಾದ ಡಾ. ಷೇಕ್ ಅಲಿಯವರು ತಿಳಿಸಿದ್ದಾರೆ. ಒಂದೆರಡು ಶತಮಾನಗಳ ಹಿಂದಿನ ಘಟನೆಗಳು ನಮಗೆ ಇನ್ನೂ ಹತ್ತಿರದವೇ ಆಗಿರುವುದರಿಂದ ನಿಷ್ಪಕ್ಷಪಾತವಾಗಿ. ಸಮರ್ಪಕವಾಗಿ. ಉದ್ವೇಗ ರಹಿತವಾಗಿ ಅವುಗಳನ್ನು ಕುರಿತು ನಿರೂಪಿಸುವುದು ಸುಲಭವಲ್ಲ. ಈ ದೃಷ್ಟಿಯಲ್ಲಿ ಡಾ. ಮುದ್ದಾಚಾರಿಯವರ ಪ್ರಯತ್ನ ಸ್ತುತ್ಯ. ಆದರೂ ಅನೇಕ ಕಡೆ ಒಂದು ಘಟನೆಯನ್ನು ಕುರಿತ ನಾಲ್ಕಾರು ದೃಷ್ಟಿಕೋನಗಳನ್ನು ಮಾತ್ರ ಸೂಚಿಸಿ ಅವುಗಳನ್ನು ಕುರಿತು ಹೆಚ್ಚಿನ ವಿಚಾರ ಮಾಡದೆ ಇರುವುದನ್ನು ಕಂಡಾಗ ಅವುಗಳ ಬಗ್ಗೆ ಇವರಿಗೆ ಖಚಿತವಾದ ಅಭಿಪ್ರಾಯವಿಲ್ಲವೇನೋ ಎಂಬ ಸಂಶಯ ಬರುತ್ತದೆ. ಇದು ಒಮ್ಮೊಮ್ಮೆ ಸಂದೇಹಗಳಿಗೆ ಎಡೆಕೊಟ್ಟಿದೆ. ಉದಾಹರಣೆಗಾಗಿ ೧೮೫೭ರ ದಂಗೆಯನ್ನು ಸೂಚಿಸಬಹುದು. ೧೮೫೬ರಲ್ಲಿ ಗವರ್ನರ ಜನರಲ್ಲನಾಗಿ ಬಂದ ಕ್ಯಾನಿಂಗನ ಕಾಲದಲ್ಲಿ ೧೮೫೭ರಲ್ಲಿ ತಲೆದೋರಿದ ಈ 'ದಂಗೆ'ಯ ಕಾರಣಗಳು ಇತ್ಯಾದಿಗಳನ್ನು ಕುರಿತು ಬರೆಯುವಾಗ (ಪು. ೧೨೫–೩೩) "ಭಾರತದ ದಂಗೆಯ ಉಗಮ ಮತ್ತು ಅರ್ಥದ ಬಗ್ಗೆ ಎರಡು ಪ್ರಬಲವಾದ ಅಭಿಪ್ರಾಯಗಳಿವೆ" ಎಂದಿದ್ದಾರೆ. ಇಲ್ಲಿ 'ಅರ್ಥ' ಎಂಬ ಪದದ ಅರ್ಥವಾಗುವುದಿಲ್ಲ. ಈ ಅಭಿಪ್ರಾಯಗಳು ಒಂದು ಅದು ಕೇವಲ ಸೈನಿಕ ದಂಗೆಯೆಂಬುದು; ಇನ್ನೊಂದು ಬ್ರಿಟಿಷ್ ಅಧಿಕಾರವನ್ನು ತೊಡೆದು ಹಾಕಲು ನಡೆಸಿದ ಒಳಸಂಚೆಂಬುದು ಎಂದಿದ್ದಾರೆ. ಆದರೆ 'ರಾಷ್ಟ್ರೀಯ ಚಳವಳಿ', 'ಬಂಡಾಯ'

'ಸ್ವಾತಂತ್ರ್ಯ ಸಂಗ್ರಾಮ' ಎಂಬ ಇತರ ಇತಿಹಾಸಕಾರರು ಉಪಯೋಗಿಸಿರುವ ವಿಶೇಷಣಗಳನ್ನು ಸಹ ಸೂಚಿಸಿದ್ದಾರೆ. ಖಚಿತವಾಗಿ ಅದು ಏನಾಗಿತ್ತು ಎಂಬುದರ ಬಗ್ಗೆ ತಮ್ಮ ಅಭಿಪ್ರಾಯ ಕೊಟ್ಟಿಲ್ಲ. ಲೇಖಕರು ಬಳಸಿರುವ 'ಒಳಸಂಚು' ಎಂಬ ಪದ plot, intrigue ಎಂಬ ಅರ್ಥವನ್ನು ಕೊಡುತ್ತದೆ. ಒಳಸಂಚೆನ್ನುವುದು ಸರಿಯಲ್ಲ. ಇದನ್ನು ದಂಗೆಯೆಂದೇ ಅಲ್ಲಲ್ಲಿ ಕರೆದು ಕೊನೆಯಲ್ಲಿ (ಪು. ೨೩೧) ಭಾರತೀಯರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಮುಗಿಯಿತು ಎನ್ನುವುದು ವಿರೋಧಾಭಾಸವೆನಿಸುತ್ತದೆ.

ಒಮ್ಮೊಮ್ಮೆ ಇವರ ಬರವಣಿಗೆಯಲ್ಲಿ ಹೊಂದಾಣಿಕೆ ಇಲ್ಲವೆಂಬ ಭಾವನೆ ಉಂಟಾಗುತ್ತದೆ. ೩೨೭ನೆಯ ಪುಟದಲ್ಲಿ ಇದೇ ದಂಗೆಯ ವಿವರಗಳನ್ನು ಕುರಿತು ಬರೆಯುವಾಗ ಇಂಗ್ಲಿಷರು ದಾಳಿಕಾರರನ್ನು ಸೋಲಿಸಿ ಲಕ್ನೋವನ್ನು ಹಿಡಿದುಕೊಂಡರೆಂದು ಹೇಳಿದ ನಂತರ. ಮದ್ರಾಸ್ ಅಧಿಕಾರಿಯಾದ ನೇಯಿಲ್ ಎಂಬುವವನನ್ನು ಲಕ್ನೋ ಬೀದಿಯಲ್ಲಿ ಗುಂಡಿಟ್ಟು ಕೊಲ್ಲಲಾಯಿತು ಎಂದು ಹೇಳಿದೆ. ಅದರ ಮುಂದಿನ ವಾಕ್ಯ ಹೀಗಿದೆ "ಮದ್ರಾಸಿನ ಮೌಂಟ್ ರೋಡಿನಲ್ಲಿದ್ದ ಅವನ ಪ್ರತಿಮೆ ಸತ್ಯಾಗ್ರಹಗಳನ್ನು ಕೆರಳಿಸಿತು ಎಂಬ ಕಾರಣದ ಮೇಲೆ ಕಾಂಗ್ರೆಸ್ ಮಂತ್ರಿಮಂಡಳವು ೧೯೩೭ರ ನವಂಬರ್ ೧೭ರಂದು ಅದನ್ನು ಅಲ್ಲಿಂದ ತೆಗೆಸಿ ಮದ್ರಾಸ್ ಮ್ಯೂಸಿಯಂನಲ್ಲಿ ಹಾಕಿಸಿತು" ಇವೆರಡಕ್ಕೂ ಇಲ್ಲಿ ಸಂಬಂಧವೇನು ಎಂಬುದಾಗಲೀ. ಅದರ ಔಚಿತ್ಯವಾಗಲೀ ಅರ್ಥವಾಗುವುದಿಲ್ಲ.

ಇಂತಹ ಕೆಲವು ದೋಷಗಳಿದ್ದರೂ ಸಹ. ಆಧುನಿಕ ಭಾರತಕ್ಕೆ ಸಂಬಂಧಪಟ್ಟಂತೆ. ಪಠ್ಯಪುಸ್ತಕವಾಗಿಯಾದರೂ. ಹೀಗೆ ವಿಷಯಗಳನ್ನು ಕ್ರೋಢೀಕರಿಸಲಾದ ಗ್ರಂಥ ಕನ್ನಡದಲ್ಲಿ ಇಲ್ಲವೆಂಬ ದೃಷ್ಟಿಯಿಂದ ಡಾ. ಮುದ್ದಾಚಾರಿಯವರು ಈ ದಿಶೆಯಲ್ಲಿ ಮಾಡಿರುವ ಈ ಪ್ರಯತ್ನ ಅಭಿನಂದನಾರ್ಹವಾಗಿದೆ.

'ಭಾರತೀಯ ಸಂಸ್ಕೃತಿ ಪರಂಪರೆ' ಮತ್ತು 'ಸಾಂಸ್ಕೃತಿಕ ಬೃಹದ್ಭಾರತ' ಇವೆರಡೂ ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟಣೆಗಳು. ಮೊದಲನೆಯದು ಪ್ರೊಫೆಸರ್ ಹುಮಾಯೂನ್ ಕಬೀರ್‌ರವರ ಇಂಗ್ಲೀಷಿನಲ್ಲಿನ 'ದಿ ಇಂಡಿಯನ್ ಹೆರಿಟೇಜ್' ಎಂಬ ಕಿರುಗ್ರಂಥದ ಅನುವಾದ. ಅನುವಾದಕರು ಶ್ರೀ ಆರ್. ಎಲ್. ಅನಂತರಾಮಯ್ಯ. ಮೂಲಗ್ರಂಥ ಅನೇಕ ಬಾರಿ ಪುನರ್ಮುದ್ರಣಗೊಂಡಿದೆ. ಭಾರತೀಯ ಇತಿಹಾಸ. ಸಂಸ್ಕೃತಿಗಳ ಒಂದು ಚಿಕ್ಕ ಅಧ್ಯಯನವಿದು. ಇಲ್ಲಿನ ಚಿತ್ರ. ಲೇಖಕರೇ ಹೇಳಿರುವಂತೆ, ಚರಿತ್ರೆಯ ಹೆಸರಿನಲ್ಲಿ ಹೊರಬರುತ್ತಿರುವ ಕೆಲವು ರಾಜಕೀಯ ವ್ಯಕ್ತಿಗಳ ಹೊಡೆದಾಟಗಳ ಘರ್ಷಣೆಗಳ ನಿರೂಪಣೆಗಿಂತಲೂ ಸತ್ಯಕ್ಕೆ ಹೆಚ್ಚು ಹತ್ತಿರವಾಗಿದೆ. ಇದರಲ್ಲಿ ಮೂರು ಅಧ್ಯಾಯಗಳಿವೆ. ಅವುಗಳಿಗೆ ಪೀಠಿಕೆಯೆಂಬಂತೆ ಗ್ರಂಥದ ಮೂರನೆಯ ಮುದ್ರಣದಲ್ಲಿ 'ಪ್ರವೇಶ' ಒಂದಿದೆ. ಇದರ ೩೪ ಪುಟಗಳಲ್ಲಿ ಭಾರತ ಇತಿಹಾಸದ ಪಕ್ಷಿನೋಟವಿದೆ. ಇದನ್ನು ಓದಿದಾಗ ಲೇಖಕರು ವಿಷಯವನ್ನು ಎಷ್ಟು ಚೆನ್ನಾಗಿ ಅರಗಿಸಿಕೊಂಡಿದ್ದಾರೆಂಬುದು ಗೋಚರವಾಗುತ್ತದೆ. ಮೊಹೆಂಜೊದಾರೊ ನಾಗರಿಕತೆಯನ್ನು ಕುರಿತು ಹೇಳುತ್ತಾ "ಈ ನಾಗರಿಕತೆಯ ಅತ್ಯಂತ ಮುಖ್ಯ ಪ್ರಭಾವ ಕಾಣುವುದು ಭಾರತೀಯರ ಶಾಂತಿಸ್ವಭಾವದಲ್ಲಿ. ಪ್ರಪಂಚದ ಇತರ ಭಾಗಗಳಲ್ಲಿರುವ ಆರ್ಯರು ಈ ಬಗೆಯ ಶಾಂತಸ್ವಭಾವಕ್ಕೆ ಹೆಸರಾಗಿಲ್ಲ"–ಹರಪ್ಪ ಮತ್ತು ಮೊಹೆಂಜೊದಾರೊಗಳಲ್ಲಿದ್ದ ಜನರ ಈ ಸ್ವಭಾವವೇ ಅವರು ಆರ್ಯರ ಕೈಲಿ ಸೋಲನ್ನನುಭವಿಸಲು ಕಾರಣವಾಯಿತೆಂಬ ಕೆಲವು ಇತಿಹಾಸಕಾರರ ಅಭಿಪ್ರಾಯವನ್ನು ಇವರು ಒಪ್ಪಿದ್ದಾರೆ. ಬಿಳುಪು ಮೈಯಿನ ಆರ್ಯರು ಬಣ್ಣದಲ್ಲಿ ಕಪ್ಪಗಿದ್ದ ರಾಮ ಮತ್ತು ಕೃಷ್ಣರನ್ನು ಮಹಾಕಾವ್ಯಗಳ ಪ್ರಧಾನ ವ್ಯಕ್ತಿಗಳಾಗಿ, ದೇವರನ್ನಾಗಿ ಏಕೆ ಮತ್ತು ಹೇಗೆ ಮಾಡಿದರು ಎಂಬುದು ಅರ್ಥವಾಗುವುದಿಲ್ಲವೆಂದು ಹೇಳಿ ಬಹುಶಃ ನಾಡಿನ ಮೂಲನಿವಾಸಿಗಳನ್ನು ಗೆಲ್ಲಲು ಮಾಡಿದ ಉನ್ನತ ಮಟ್ಟದ ರಾಜತಂತ್ರವಿದು ಎಂದು ಊಹಿಸಿದ್ದಾರೆ. ಇದು ವಿಚಾರಣೀಯವಾದ ಊಹೆ.

ಮಧ್ಯಕಾಲೀನ ಯುಗದಲ್ಲಿ ದೆಹಲಿಯ ಸುಲ್ತಾನಗಿರಿಯ ಸ್ಥಾಪನೆ ಆಡಳಿತಕ್ರಮದಲ್ಲಿ ಕುತೂಹಲಕಾರಿಯೂ ನವ್ಯವೂ ಆದ ಅನೇಕ ಪ್ರಯೋಗಗಳನ್ನು ಕಂಡಿತು. ಅಂದಿನ ಸಮಸ್ಯೆ ಎಂದರೆ ಅಲ್ಪಸಂಖ್ಯಾತ ವರ್ಗವು ಬಹುಸಂಖ್ಯಾತ ವರ್ಗದ ಮೇಲೆ ಪ್ರಭುತ್ವ ನಡೆಸುವುದು. ಅಲ್ಲಾವುದ್ದೀನನ ಕೇಂದ್ರೀಕೃತ ಆಡಳಿತ, ದರನಿಬಂಧನೆ ಇತ್ಯಾದಿಗಳು ಇಂದಿನ ಪ್ರಯೋಗಗಳಿಗೆ ಬಹಳ ಸ್ವಾರಸ್ಯವಾದ

ಹಿಂದಿನ ಮಾದರಿ ಪ್ರಯೋಗಗಳಂತಾಗಿವೆ. ಸುಲ್ತಾನಗಿರಿಯ ಸ್ಥಾಪನೆಯಿಂದ ಆಸ್ಥಾನದ ಭಾಷೆಯಾಗಿ ಪರ್ಷಿಯನ್ ಬಳಕೆಗೆ ಬಂದರೂ, ಹಿಂದೂ ಪ್ರಜೆಗಳೊಡನೆ ಅವಶ್ಯಕವಾಗಿದ್ದ ಸಂಪರ್ಕಕ್ಕಾಗಿ ಅವರ ಆಡುಮಾತುಗಳಿಗೆ, ಭಾರತದ ಭಾಷೆಗಳಿಗೆ ಪ್ರೋತ್ಸಾಹ ಕೊಡಲೇಬೇಕಾಯಿತು. ಈ ಭಾಷೆಗಳು ತತ್ಫಲವಾಗಿ ಹೊಸಜೀವ, ಗೌರವಗಳನ್ನು ಗಳಿಸಿದ್ದವು. ಈ ಕಾಲದ ಗಮನಾರ್ಹ ಸಂಗತಿಯೆಂದರೆ ಹಿಂದೂ ಜನಾಂಗದ ಜೊತೆಗೆ ಪ್ರತ್ಯೇಕವಾದ ಮುಸ್ಲಿಂ ಜನಾಂಗವೊಂದು ಇರುವಂತಾದುದು.

ಆಧುನಿಕ ಭಾರತವನ್ನು ಕುರಿತು ಬರೆಯುತ್ತಾ ಹಿಂದಿನ ಯಾವುದೇ ರಾಜ್ಯಭಾರಕ್ಕೂ ಬ್ರಿಟಿಷರಿಗೂ ಇದ್ದ ಬಹುಮುಖ್ಯವಾದ ವ್ಯತ್ಯಾಸ ಸರಕಾರದ ಲಕ್ಷಣವನ್ನು ಕುರಿತದ್ದು. ಮೊದಲಿನವು ರಾಜ್ಯಗಳನ್ನು ಕಟ್ಟಲೇಬೇಕೆಂದು ಹೊರಟ ಯೋಧರಿಂದ, ಸಾಹಸಿಗಳಿಂದ ಸ್ಥಾಪಿತವಾದವು. ಆದರೆ ಬ್ರಿಟಿಷರು ಭಾರತಕ್ಕೆ ಬಂದುದು ವ್ಯಾಪಾರಕ್ಕಾಗಿ. ವ್ಯಾಪಾರ ಸಂಸ್ಥೆಯ ಉದ್ದೇಶ ಲಾಭಸಂಪಾದನೆ. ಈಸ್ಟ್ ಇಂಡಿಯಾ ಕಂಪೆನಿ ಆಡಳಿತ ಸಂಸ್ಥೆಯಾಗಿರುವವರೆಗೆ ಅದಕ್ಕೆ ತನ್ನ ವಶದಲ್ಲಿದ್ದ ಮಾನವಜೀವಿಗಳ ಹಿತರಕ್ಷಣೆಗಿಂತ ಷೇರುದಾರರ ವ್ಯಾವಹಾರಿಕ ಅಗತ್ಯಗಳ ದೃಷ್ಟಿ ಮುಖ್ಯವಾಗಿದ್ದಿತು. ೧೮೫೮ರ ಬಳಿಕ ಬ್ರಿಟಿಷ್ ಪಾರ್ಲಿಮೆಂಟ್ ಅಧಿಕಾರ ವಹಿಸಿಕೊಂಡಾಗ ಆಡಳಿತದಲ್ಲಿ ಪ್ರಜಾಹಿತಾಸಕ್ತಿ ಎಂಬ ಹೊಸ ಅಂಶದ ಪ್ರವೇಶವಾಯಿತು. ಆಡಳಿತವು ಭಾರತದ ಪ್ರಜೆಗಳ, ಅವರಿಗೋಸ್ಕರವಾದ, ಅವರಿಂದಲೇ ಆದ ಸರಕಾರವಾದ ಹೊರತು ಅಂತಹ ಆಸಕ್ತಿ ಪೂರ್ಣವಾಗಿ ಪರಿಣಾಮಕಾರಿಯಾಗುವುದು ಸಾಧ್ಯವಿರಲಿಲ್ಲ. ಆದ್ದರಿಂದ ಈ ಕತೆಯ ಉಳಿದ ಅರ್ಧ ಹಾಗೂ ಮುಖ್ಯಭಾಗವೆಂದರೆ ಕ್ರಮೇಣ ಆಡಳಿತ ಬ್ರಿಟಿಷರಿಂದ ಭಾರತೀಯರಿಗೆ ಬಂದುದು.

ಇದು ಪ್ರೊ. ಕಬೀರರು ಭಾರತ ಇತಿಹಾಸವನ್ನು ಕುರಿತು ಮಾಡಿರುವ ಉತ್ಕೃಷ್ಟವಾದ ವಿಶ್ಲೇಷಣೆ. ಮುಂದಿನ ಮೂರು ಅಧ್ಯಾಯ(?)ಗಳಲ್ಲೂ ಇಂತಹುದೇ ಆದ ವಿಶ್ಲೇಷಣೆಯನ್ನು ನಾವು ಕಾಣಬಹುದು. ಉದಾಹರಣೆಗೆ ಜಾತಿವ್ಯವಸ್ಥೆ–ವರ್ಣವ್ಯವಸ್ಥೆಯನ್ನು ಕುರಿತು ಬರೆಯುತ್ತಾ (ಪು. ೫೦–೫೨) ಅದು ಸಹಿಷ್ಣುತೆಯ ಅಭಿವ್ಯಕ್ತಿ ಎಂದು ಗಣಿಸುವುದು ಮೊದಲನೋಟಕ್ಕೆ ವಿರೋಧಾಭಾಸವಾಗಿ ಕಂಡರೂ, ಭಿನ್ನಭಾಷೆ, ರಕ್ತ ಮತ್ತು ವರ್ಣಗಳ ಕಲಬೆರಕೆಯಿದ್ದ ಸಂದರ್ಭದಲ್ಲಿ ಹೊಂದಾಣಿಕೆಯ ಪ್ರಶ್ನೆ ಜಟಿಲವಾಗಿದ್ದು, ಇತರರು (ಯೂರೋಪಿಯನ್ನರು) ಆ ಸಂದರ್ಭಗಳಲ್ಲಿ ಮೂಲನಿವಾಸಿಗಳನ್ನು ಸಮೂಲವಾಗಿ ನಾಶಮಾಡಿ ಆ ಸಮಸ್ಯೆಯನ್ನು ಪರಿಹರಿಸಿಕೊಂಡಾಗ, ಆರ್ಯರು ಈ ಸಮಸ್ಯೆಗೆ ಪರಿಹಾರ ಹುಡುಕಿದುದು ವರ್ಣವ್ಯವಸ್ಥೆಯ ಮೂಲಕ ಎಂದಿದ್ದಾರೆ ಲೇಖಕರು. ಇಂತಹ ಹಲವಾರನ್ನು ಇಲ್ಲಿ ಉದಹರಿಸಬಹುದು. ಒಟ್ಟಿನಲ್ಲಿ ಚಿಕ್ಕದಾದರೂ ಚೊಕ್ಕವಾದ, ಓದುಗರಲ್ಲಿ ಆಸಕ್ತಿಯನ್ನು ಕೆರಳಿಸುವ ಗ್ರಂಥವಿದು. ಭಾಷಾಂತರ ಸರಳವಾಗಿದ್ದು, ಸುಲಭವಾಗಿ ಓದಿಸಿಕೊಂಡು ಹೋಗುವುದಲ್ಲದೆ ಮೂಲ ಬರವಣಿಗೆಯ ಭಾವನೆಗಳನ್ನು ಉಳಿಸಿಕೊಂಡಿದೆ. ಭಾಷಾಂತರಕಾರರು ತಮ್ಮ ಕೆಲಸವನ್ನು ಯಶಸ್ವಿಯಾಗಿ ಸಾಧಿಸಿ, ಸಂಸ್ಥೆಗೆ ಹೆಸರು ತಂದಿದ್ದಾರೆನ್ನಬಹುದು.

ಎರಡನೆಯದು ಡಾ. ಎ.ವಿ. ನರಸಿಂಹಮೂರ್ತಿಯವರ 'ಸಾಂಸ್ಕೃತಿಕ ಬೃಹದ್ಭಾರತ'. ಭಾರತೀಯ ಸಂಸ್ಕೃತಿ ಕಡಲಾಚೆಯ ದೇಶಗಳಿಗೆ ವ್ಯಾಪಿಸಿದ ವಿಷಯವನ್ನು ಈ ಗ್ರಂಥದಲ್ಲಿ ಸಮೀಕ್ಷಿಸಲಾಗಿದೆ. ನಮ್ಮ ಸಂಸ್ಕೃತಿಯ ಪ್ರಭಾವ, ಆಗ್ನೇಯ ಏಷ್ಯಾ ದೇಶಗಳ ಮೇಲೆ ಬಹಳವಾಗಿದ್ದಿತು. ಅಲ್ಲಿನ ಪ್ರಾಚೀನ ಸಾಹಿತ್ಯ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ತತ್ತ್ವಶಾಸ್ತ್ರ ಇತ್ಯಾದಿಗಳು ಬಹಳಷ್ಟು ಸ್ಫೂರ್ತಿಯನ್ನು ಪಡೆದುದು ಭಾರತದಿಂದಲೇ. ಇದು ಭಾರತೀಯರ ರಾಜಕೀಯ ವಿಸ್ತರಣೆಯ ಫಲ ಎಂದು ಹೇಳಲಾಗದು. ದೂರದ ಆಗ್ನೇಯ ಏಷ್ಯಾ ಪ್ರದೇಶಗಳಿಗೆ ಸಮುದ್ರಯಾನ ಮಾಡಿ ಹೋದ ಭಾರತೀಯರು ಕ್ರಮೇಣ ಅಲ್ಲಿಯೇ ಬೀಡುಬಿಟ್ಟರು. ಅಲ್ಲಿನ ಜನರೊಡನೆ ಬೆರೆತರು. ಅವರೊಡನೆ ರಕ್ತಸಂಬಂಧ ಬೆಳೆಸಿದರು. ತಮ್ಮೊಡನೆ ತಂದಿದ್ದ ಸರಕುಗಳನ್ನು ಅಲ್ಲಿ ಮಾರಾಟಮಾಡಿದ್ದಲ್ಲದೆ, ರಕ್ತಗತವಾಗಿ ಬಂದಿದ್ದ ತಮ್ಮ ಸಂಸ್ಕೃತಿ ಆಚಾರ–ವ್ಯವಹಾರಗಳ ಪರಿಚಯವನ್ನು ಅವರಿಗೆ ಮಾಡಿಸಿದರು. ಸಾಂಸ್ಕೃತಿಕವಾಗಿ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದ್ದರೆನ್ನಬಹುದಾದ ಅಲ್ಲಿನ ಜನಾಂಗ ಇವರ ಪ್ರಭಾವಕ್ಕೊಳಗಾದುದರಲ್ಲಿ ಆಶ್ಚರ್ಯವೇನಿಲ್ಲ. ದೂರದೇಶದ ರಾಜರುಗಳು ಭಾರತಕ್ಕೆ ಬಂದು ಇಲ್ಲಿನ ನಾಗರಿಕತೆಯಿಂದ ಪ್ರಭಾವಿತ

ರಾಗಿ ಇವರ ವಿಶಿಷ್ಟ ಅಂಶಗಳನ್ನು ತಮ್ಮ ಸಂಸ್ಕೃತಿಯಲ್ಲಿಯೂ ಅಳವಡಿಸಲು ಯತ್ನಿಸಿದರು ಎಂಬ ಅಭಿಪ್ರಾಯವಿದೆಯಾದರೂ. ಅದು ಅಷ್ಟು ಸಮರ್ಥನೀಯವಲ್ಲವೆನಿಸುತ್ತದೆ. ಪ್ರಾಚೀನ ಭಾರತದ ಈ ವಲಸೆಗಾರರ ಮೂಲ ಯಾವುದು? ಇವರು ಭಾರತದ ಯಾವ ಭಾಗಕ್ಕೆ ಸೇರಿದವರು? ಎಂಬ ಪ್ರಶ್ನೆಗಳಿಗೆ ವಿದ್ವಾಂಸರಲ್ಲಿ ಒಮ್ಮತದ ಉತ್ತರವಿಲ್ಲ. ಇವರು ಬಂಗಾಳದವರೆಂದು ಕೆಲವರೆಂದರೆ. ಇವರು ಆಂಧ್ರದವರೆಂದು ಇನ್ನು ಕೆಲವರು. ತಮಿಳರೆಂದು ಇತರರೂ. ಕರ್ಣಾಟಕದವರೆಂದು ಹಲವರೂ ವಾದಿಸಿದ್ದಾರೆ. ಇತ್ತೀಚಿನ ಸಂಶೋಧನೆಗಳ ಫಲವಾಗಿ ಈ ದಿಶೆಯಲ್ಲಿ ಕನ್ನಡಿಗರ ಪಾತ್ರವೂ ಪ್ರಮುಖವಾಗಿದೆ ಎಂಬ ವಾದ ಸ್ವಲ್ಪ ಸ್ವಲ್ಪವಾಗಿ ಬೆಂಬಲ ಪಡೆಯುತ್ತಿದೆ.

ಇವುಗಳನ್ನೆಲ್ಲಾ ಡಾ. ಮೂರ್ತಿಯವರು ಇಲ್ಲಿ ನಿರೂಪಿಸಿದ್ದಾರೆ. ನಂತರ ಆ ದೇಶಗಳ ಇತಿಹಾಸ ಅದಕ್ಕೆ ಭಾರತೀಯ ಸಂಸ್ಕೃತಿಯ ಕೊಡುಗೆ ಇತ್ಯಾದಿಗಳನ್ನು ಉಳಿದ ಅಧ್ಯಾಯಗಳಲ್ಲಿ ಚಿತ್ರಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಬಹುಶಃ ಕನ್ನಡದಲ್ಲಿ ಗ್ರಂಥಗಳು ಅತಿವಿರಳ. ಎಲ್ಲ ವಿಷಯಗಳನ್ನೂ ಕ್ರೋಢೀಕರಿಸಿ ಸುಮಾರು ೩೦೦ ಪುಟಗಳಲ್ಲಿ ಪ್ರಕಟಿಸಿರುವ ಮೂಲಕ ಲೇಖಕರು ವಿದ್ಯಾರ್ಥಿಗಳ. ಓದುಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

'ಪ್ರವಾಸಿ ಕಂಡ ಇಂಡಿಯಾ' ಎಂಬ ಇದುವರೆಗೆ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿರುವ ಗ್ರಂಥವನ್ನು ನೆನೆಯದಿದ್ದರೆ ಭಾರತ ಇತಿಹಾಸಕ್ಕೆ ಸಂಬಂಧಿಸಿದ ಈ ಸಮೀಕ್ಷೆ ಸಂಪೂರ್ಣವಾಗುವುದಿಲ್ಲ. ನಮ್ಮ ದೇಶದ ಇತಿಹಾಸದ ರಚನೆಗೆ ಶಾಸನಗಳು. ನಾಣ್ಯಗಳು. ದೇಶೀಯ ಸಾಹಿತ್ಯಗಳ ಜೊತೆಗೆ ನಮ್ಮ ದೇಶಕ್ಕೆ ಬಂದು ಇಲ್ಲಿ ತಿರುಗಾಡಿ ತಾವು ಕಂಡದ್ದನ್ನು. ಕೇಳಿದ್ದನ್ನು ಬರೆದಿಟ್ಟ ಪ್ರವಾಸಿಗಳ ಸಾಹಿತ್ಯ ಸಹ ಒಂದು ಪ್ರಮುಖ ಮೂಲಾಧಾರವಾಗಿದೆ ಎಂಬುದು ನಮಗೆಲ್ಲ ತಿಳಿದ ವಿಷಯವೇ. ಈ ಸಾಹಿತ್ಯಕ್ಕೆ ಸುಮಾರು ೨೫೦೦ ವರ್ಷಗಳ ಇತಿಹಾಸವಿದೆ. ಭಾರತವನ್ನು ನೋಡದೆಯೇ ಅದನ್ನು ಕುರಿತು ಬರೆದ ಗ್ರೀಕ್ ಇತಿಹಾಸಕಾರ ಹೆರೊಡೋಟಸನು ಈ ವಿಷಯಗಳನ್ನು ಪರ್ಷಿಯನರಿಂದ ಪಡೆದಿರಬೇಕು. ಅಂದಿನಿಂದಾರಂಭಿಸಿ ೧೭-೧೮ನೆಯ ಶತಮಾನಗಳವರೆಗೆ ಭಾರತಕ್ಕೆ ನೂರಾರು ಪ್ರವಾಸಿಗರು ಬಂದಿದ್ದಾರೆ–ಪ್ರವಾಸ ಕಥನವನ್ನು ಬರೆದಿಟ್ಟಿದ್ದಾರೆ. ಅನೇಕ ಬಾರಿ ನಮಗೆ ಬೇರಾವ ಮೂಲದಿಂದಲೂ ತಿಳಿಯಲಾರದ ಅಂಶಗಳು ಈ ಪ್ರವಾಸಿಗರ ಕಥನದಿಂದ ತಿಳಿಯಬಂದಿವೆ. ಪ್ರಾಚೀನ ಭಾರತಕ್ಕೆ ಸಂಬಂಧಿಸಿದಂತೆ ಈ ಬರವಣಿಗೆಗಳನ್ನೆಲ್ಲ ಕ್ರೋಢೀಕರಿಸಿ ಇಂಗ್ಲೀಷಿಗೆ ಭಾಷಾಂತರಿಸಿದ ಮೊದಲ ಕೀರ್ತಿ ಮ್ಯಾಕ್ ಕ್ರಿಂಡಲ್ (J.W. Mac Crindle) ಎಂಬಾತನಿಗೆ ಸಲ್ಲಬೇಕು. Ancient India as described in Classical Literature ಎಂಬ ಈತನ ಗ್ರಂಥ ಇತಿಹಾಸಕಾರರಿಗೆ ಬಹಳ ಉಪಯುಕ್ತವಾದ ಗ್ರಂಥ. ಅಂತೆಯೇ ಮಧ್ಯಯುಗದಲ್ಲಿ ಮಹಮದೀಯರ ಬರವಣಿಗೆಗಳನ್ನು ಇಲಿಯಟ್ ಮತ್ತು ಡೌಸನ್‌ರವರು ಹಲವು ಸಂಪುಟಗಳಲ್ಲಿ ಭಾಷಾಂತರಿಸಿದರು. ಈ ಗ್ರಂಥದ ಹೆಸರು History of India as told by its own Historians ಎಂದು. ಸಿವೆಲ್ಲರು (Robert Sewell) ತಮ್ಮ 'ಮರೆತು ಹೋದ ಸಾಮ್ರಾಜ್ಯ' (Forgotten Empire) ದಲ್ಲಿ ಪೇ (Paes). ನ್ಯೂನಿಜ್ (Nuniz) ಮುಂತಾದವರ ಬರವಣಿಗೆಗಳನ್ನು ಭಾಷಾಂತರಿಸಿದ್ದಾರೆ.

ಇವುಗಳನ್ನೆಲ್ಲಾ ಕನ್ನಡಕ್ಕೆ ಅನುವಾದ ಮಾಡುವುದು ಸುಲಭವೇನಲ್ಲ. ಶ್ರೀ ನಾಗೇಗೌಡರು ಒಬ್ಬ ಐ.ಎ.ಎಸ್. ಅಧಿಕಾರಿ. ಅವರೇ ಹೇಳಿರುವಂತೆ ಇತಿಹಾಸವಾಗಲೀ. ಸಾಹಿತ್ಯವಾಗಲೀ ಅವರ ಅಭ್ಯಾಸ ವಿಷಯವಾಗಿರಲಿಲ್ಲ. ಮೂಲದಲ್ಲಿ ಸುಮಾರು ಇಪ್ಪತ್ತು, ಮೂವತ್ತು ಸಾವಿರ ಪುಟಗಳಷ್ಟಾಗುವ ವಿಷಯವನ್ನು ಸಂಗ್ರಹಿಸಿ. ಉಪಯುಕ್ತ ವಿಷಯಗಳನ್ನು ಆರಿಸಿ. ಅದನ್ನು ಕನ್ನಡಿಗರ ಮುಂದೆ ಇಡುತ್ತಿರುವುದು ಅವರ ಭಾಗ್ಯವೆಂದು ಲೇಖಕರು ಬಗೆದಿದ್ದಾರೆ. ಮೊದಲು ೨-೩ ಸಂಪುಟಗಳಲ್ಲಿ ಮುಗಿಯಬಹುದೆಂದಿದ್ದ ಅವರ ಊಹೆಗೂ ಮೀರಿ ನಾಲ್ಕು ಸಂಪುಟಗಳು ಈಗ ಬೆಳಕು ಕಂಡಿವೆ. ಇನ್ನೂ ಮೂರು ಸಂಪುಟಗಳು ಬರುವ ನಿರೀಕ್ಷೆಯಿದೆ. ಇದು ಶ್ರೀ ರಂಗನಾಥ ದಿವಾಕರರು ಹೇಳಿರುವಂತೆ ಓರ್ವ ಐ.ಎ.ಎಸ್. ಅಧಿಕಾರಿ ಕನ್ನಡಿಗರಿಗೆ ಕೊಟ್ಟ ಕೊಡುಗೆ. ಬಹಳ ಮಹತ್ವಪೂರ್ಣ. ಉಪಯುಕ್ತ

ಕೊಡುಗೆ. ಇದಕ್ಕಾಗಿ ಲೇಖಕರಿಗೂ, ಸಂಪುಟಗಳನ್ನು ಪ್ರಕಟಿಸುವ ಹೊಣೆ ಹೊತ್ತ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೂ ಕನ್ನಡಿಗರಾದ ನಾವು ಕೃತಜ್ಞತೆಯನ್ನು ಸಲ್ಲಿಸಬೇಕು.

ಯೂರೋಪ್ ಖಂಡದ ಇತಿಹಾಸದ–ಅದರಲ್ಲಿಯೂ ೧೮೧೫ರಿಂದ ನಂತರದ ಶತಮಾನಗಳ ಇತಿಹಾಸದ ಅರಿವು ವಿದ್ಯಾರ್ಥಿಗಳಿಗೆ ಅತ್ಯವಶ್ಯಕ. ಅಲ್ಲಿನ ಘಟನೆಗಳು ವಿಶ್ವದ ಭಾಗಗಳ ಮೇಲೂ ತಮ್ಮ ಪ್ರಭಾವವನ್ನು ಬೀರಿವೆ. ಸಾಂಸ್ಕೃತಿಕ ಪುನರುಜ್ಜೀವನ ಮತ್ತು ಧಾರ್ಮಿಕಕ್ರಾಂತಿ ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮ. ಕೈಗಾರಿಕಾಕ್ರಾಂತಿ. ಫ್ರಾನ್ಸ್‌ದೇಶದ ಕ್ರಾಂತಿ. ಇತ್ಯಾದಿಗಳು ಯೂರೋಪಿನ ಇತಿಹಾಸದ ಮೈಲುಗಲ್ಲುಗಳಾಗಿದ್ದು. ಆ ಖಂಡದ ಇತಿಹಾಸವನ್ನಷ್ಟೇ ಅಲ್ಲದೆ ಮಾನವನ ಇತಿಹಾಸದಲ್ಲೂ ಅಭೂತಪೂರ್ವ ಮಾರ್ಪಾಡುಗಳಿಗೆ ಕಾರಣವಾಗಿವೆ. ಇವುಗಳನ್ನು ಕುರಿತಾದ ನೂರಾರು ಗ್ರಂಥಗಳು ಆಂಗ್ಲಭಾಷೆಯಲ್ಲಿವೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕನ್ನಡದಲ್ಲಿ ಇಂತಹ ಗ್ರಂಥಗಳನ್ನು ಪ್ರಕಟಿಸಿದ ಕನ್ನಡ ಅಧ್ಯಯನ ಸಂಸ್ಥೆಯವರು ಸಕಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರು ಪ್ರಕಟಿಸಿದ ಎರಡು ಗ್ರಂಥಗಳು ಡಾ. ಬಿ. ಮುದ್ದಾಚಾರಿಯವರ 'ಆಧುನಿಕ ಯೂರೋಪಿನ ಚರಿತ್ರೆ' ಹಾಗೂ ಜಿ. ಡಬ್ಲ್ಯು. ಸೌತ್‌ಗೇಟ್‌ರವರ A Text-book of Modern European History ಎಂಬ ಗ್ರಂಥದ ಅನುವಾದವಾದ ಶ್ರೀ ಎಚ್. ಎಸ್. ಹರಿಶಂಕರರ "ಆಧುನಿಕ ಯೂರೋಪಿನ ಇತಿಹಾಸ" ಮೊದಲನೆಯದು ಅನೇಕ ಪಾಶ್ಚಾತ್ಯ ಲೇಖಕರ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಬಿ.ಎ. ತರಗತಿಯಲ್ಲಿ ಇತಿಹಾಸವನ್ನು ಐಚ್ಛಿಕವಾಗಿ ತೆಗೆದುಕೊಂಡು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ರಚಿತವಾದದ್ದು. ಹದಿನಾರನೆಯ ಶತಮಾನದಿಂದ ಈ ಇತಿಹಾಸ ಆರಂಭವಾಗಿದೆ. ಶ್ರೀ ಎಚ್. ಎಸ್. ಹರಿಶಂಕರರು ಅನುವಾದ ಮಾಡಿರುವ ಆಧುನಿಕ ಯೂರೋಪಿನ ಇತಿಹಾಸ ಕ್ರಿ.ಶ. ೧೭೮೯ರಿಂದ– ಅಂದರೆ ಫ್ರಾನ್ಸ್‌ದೇಶದಲ್ಲಿನ ಕ್ರಾಂತಿಯಿಂದ ಆರಂಭವಾಗಿ ೧೯೬೦ರವರೆಗಿನ ಘಟನೆಗಳನ್ನು ನಿರೂಪಿಸುತ್ತದೆ ಮೂಲ ಲೇಖಕರ ಮೂರು ಸಂಪುಟಗಳ ಈ ಗ್ರಂಥದ ಮೊದಲನೆಯ ಭಾಗವಿದು. ಭಾಷಾಂತರ ಚೆನ್ನಾಗಿದೆ.

ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಪುಸ್ತಕ ಕರ್ನಾಟಕ ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ನಿರ್ದೇಶನಾಲಯ ಪ್ರಕಟಿಸಿರುವ 'ಫ್ರಾನ್ಸ್‌ದೇಶದ ಮಹಾಕ್ರಾಂತಿ'. ಇದರ ಲೇಖಕರು ಯುವಕ ಅಧ್ಯಾಪಕರಾದ ಶ್ರೀ. ಎ. ಕೆ. ಶಾಸ್ತ್ರಿ. ಟೊಣ್ಣೇಮನೆ. ಇದು ಪಠ್ಯವಿಷಯಗಳಿಗೆ ಸಹಾಯಕವಾಗುವ ಪೂರಕಗ್ರಂಥ. ಫ್ರಾನ್ಸ್‌ದೇಶದ ಕ್ರಾಂತಿ ಯೂರೋಪಿಗೆ ನೀಡಿದ ಅಪೂರ್ವ ಕೊಡುಗೆ ಎಂದರೆ ಪ್ರಜಾಪ್ರಭುತ್ವದ ತತ್ವಗಳು. "ಇಂದಿನ ಪ್ರಜಾಪ್ರಭುತ್ವ ಸರಕಾರಗಳು ಫ್ರಾನ್ಸ್‌ದ ಮಾನವ ಹಕ್ಕುಗಳ ಘೋಷಣೆಯಿಂದ ಸ್ಫೂರ್ತಿಪಡೆದಿವೆ" ಎಂದು ಲೇಖಕರು ಹೇಳಿರುವ ಮಾತುಗಳು ನಿಜ. ಮತ್ತೊಂದು ಕೊಡುಗೆ ನೆಪೋಲಿಯನ್ ಬೋನಪಾರ್ಟ್. ಈತನು ಈ ಕ್ರಾಂತಿಯ ನೂತನ ಯುಗವೊಂದರ ಪ್ರವರ್ತಕನೆನಿಸಿದ. ಆ ಕ್ರಾಂತಿಯಿಲ್ಲದಿದ್ದಲ್ಲಿ ಈತನು ಐತಿಹಾಸಿಕ ವ್ಯಕ್ತಿಯಾಗುತ್ತಲೇ ಇರಲಿಲ್ಲ. ಪ್ರಸ್ತುತ ಗ್ರಂಥದಲ್ಲಿ ಎರಡು ಭಾಗಗಳಿದ್ದು ಮೊದಲನೆಯ ಭಾಗದಲ್ಲಿ ಆಧುನಿಕ ಯೂರೋಪಿನ ಐತಿಹಾಸಿಕ ಹಿನ್ನೆಲೆಯನ್ನು ಗುರುತಿಸಿದೆ. ಎರಡನೆಯ ಭಾಗದಲ್ಲಿ ಮಹಾಕ್ರಾಂತಿಯ ಕಾರಣಗಳು. ಮಹಾಕ್ರಾಂತಿಯ ಗತಿ ಹಾಗೂ ಅದರ ಪರಿಣಾಮಗಳನ್ನು ನಿರೂಪಿಸಲಾಗಿದೆ.

ಈಗ ಕರ್ನಾಟಕದ ಇತಿಹಾಸ ಗ್ರಂಥಗಳನ್ನವಲೋಕಿಸೋಣ.ಈ ಅಧ್ಯಾಯದ ಆರಂಭದಲ್ಲಿಯೇ ಇದಕ್ಕೆ ಸಂಬಂಧಿಸಿದಂತೆ ಹಲವು ಹಿಂದಿನ ಪುಸ್ತಕಗಳನ್ನು, ಇತ್ತೀಚಿನ ಪುಸ್ತಕಗಳನ್ನು ಸಹ. ಹೆಸರಿಸುವಾಗ ಅವುಗಳಲ್ಲಿ ಅನೇಕವು ಮೈಸೂರು ಮತ್ತು ಕೆಳದಿಯ ಅರಸುಮನೆತನಗಳಿಗೆ ಸೀಮಿತವಾಗಿದ್ದುವು ಅಥವಾ ಆ ಅರಸರ ಕೈಕೆಳಗಿನ ಪ್ರಭಾವಶಾಲೀ ಅಧಿಕಾರಿಗಳ ಜೀವನ ಚರಿತ್ರೆಗೆ ಸಂಬಂಧಿಸಿದವುಗಳಾಗಿದ್ದುವು ಎಂದು ಹೇಳಿದ್ದೇವೆ. ಸಮಗ್ರ ಕರ್ನಾಟಕದ ಇತಿಹಾಸವನ್ನು ನಿರೂಪಿಸುವ ಗ್ರಂಥಗಳು ಬಂದಿರುವುದೆಲ್ಲಾ ಇತ್ತೀಚೆಗೆ. ೨೫ ವರ್ಷಗಳಿಗೂ ಹಿಂದೆ ಇಂತಹ ಗ್ರಂಥಗಳಲ್ಲಿ ಪ್ರಮುಖವಾಗಿ ಹೆಸರಿಸಬೇಕಾದವುಗಳು ಮೂರೋ ನಾಲ್ಕೋ. ಅಂತಹವುಗಳಲ್ಲಿ ಒಂದು ದಿವಂಗತ ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ'. ೧೯೧೭ರಲ್ಲಿ ಪ್ರಕಟವಾದ ಈ ಗ್ರಂಥ ಕರ್ನಾಟಕದ ಇತಿಹಾಸ ರಚನೆಯಲ್ಲಿ

ಮೊದಲ ಯತ್ನವೆಂದೇ ಹೇಳಬೇಕು. ಆಲೂರು ವೆಂಕಟರಾಯರು ಕರ್ನಾಟಕದ ಏಕೀಕರಣಕ್ಕಾಗಿ ಕನ್ನಡಿಗರಲ್ಲಿನ ಸುಪ್ತಚೇತನವನ್ನು ಕೆರಳಿಸುವುದಕ್ಕಾಗಿ ಹೋರಾಡಿದ ಸುಪ್ರಸಿದ್ಧ ವ್ಯಕ್ತಿ. ಅವರೇ ಹೇಳಿರುವಂತೆ ಇದು ಕೇವಲ ಇತಿಹಾಸವಲ್ಲ. "ಕರ್ನಾಟಕದ ಇತಿಹಾಸದೊಳಗಿನ ಚಿತ್ತಾಕರ್ಷಕವಾದ ಹಲಕೆಲವು ಸಂಗತಿಗಳನ್ನೂ ಅನೇಕ ಪುಸ್ತಕಗಳಿಂದ ಆರಿಸಿ ನಮಗೆ ತೋರಿದ ಕೆಲವು ವಿಧಾನಗಳನ್ನು ಅವುಗಳಲ್ಲಿ ಬೆರೆಸಿ, ಆ ಮಿಶ್ರಣವನ್ನು ಕಾಸಿ ಕರ್ನಾಟಕದ ಅಭಿಮಾನವೆಂಬ ಏರಕದಲ್ಲಿ ಕೈಲಾದಷ್ಟು ಮಟ್ಟಿಗೆ ಹೊಯ್ದು" ಈ ಪ್ರಬಂಧವನ್ನು ರಚಿಸಲಾಗಿದೆ. ಸುಮಾರು ೧೦೦ ಪುಟಗಳಲ್ಲಿ ಕರ್ನಾಟಕದ ಇತಿಹಾಸದ ಪಕ್ಷಿನೋಟವಿದೆ. ನಂತರ ಕನ್ನಡಿಗರ ಅಭಿಮಾನವನ್ನು ಕೆರಳಿಸಿ ಕರ್ನಾಟಕ, ಆರ್ಯ ಸಂಸ್ಕೃತಿಗಳನ್ನು ಉದ್ಧರಿಸಬೇಕೆಂಬ ಕಳಕಳಿಯು ಬಿನ್ನಹವಿದೆ. ಆದರೂ ನಾವು ಭಾರತಾಂತರ್ಗತ ಕನ್ನಡಿಗರು. ಕರ್ನಾಟಕದಲ್ಲಿನ ಭಾರತಮಾತೆಯನ್ನು ನಾವು ಪೂಜಿಸಬೇಕು ಎಂದು ಹೇಳಿದ್ದಾರೆ.

೧೯೩೬ರಲ್ಲಿ ಶ್ರೀ ಆರ್. ಹೆಚ್ ದೇಶಪಾಂಡೆಯವರ 'ಕರ್ನಾಟಕ ಸಾಮ್ರಾಜ್ಯ'ದ ಮೊದಲ ಸಂಪುಟ ಪ್ರಕಟಗೊಂಡಿತು. ೧೯೩೯ರಲ್ಲಿ ಎರಡನೆಯ ಸಂಪುಟ ಬಂದಿತು. ಈ ಎರಡೂ ಸಂಪುಟಗಳಲ್ಲಿ ಹದಿಮೂರನೆಯ ಶತಮಾನದವರೆಗಿನ ಕರ್ನಾಟಕ ಇತಿಹಾಸದ ನಿರೂಪಣೆಯಿದೆ. ಡಾ. ಫ್ಲೀಟ್ ಅವರ "Dynasties of Kanarese Districts" ಇವರ ಗ್ರಂಥಕ್ಕೆ ಮುಖ್ಯವಾದ ಆಧಾರ. ಇತರ ಶಾಸನ ಹಾಗೂ ಸಾಹಿತ್ಯಕ ಮೂಲ ಸಾಮಗ್ರಿಗಳನ್ನೂ ಇವರು ಪರಿಶೋಧಿಸಿ ಅವುಗಳ ಸಹಾಯ ಪಡೆದಿದ್ದಾರೆ. ಹೆಚ್. ಕೃಷ್ಣಶಾಸ್ತ್ರಿ ಹಾಗೂ ಆರ್. ನರಸಿಂಹಾಚಾರ್ಯರು ಇವರ ಹಸ್ತಪ್ರತಿಯನ್ನು ನೋಡಿ ತಿದ್ದಿಕೊಟ್ಟಿದ್ದಾರೆ. ಎಷ್ಟೇ ಭಾವೋದ್ವೇಗದಿಂದ ಬರೆದಿದ್ದರೂ ವಾಸ್ತವಿಕಾಂಶಗಳಿಗೆ ಚ್ಯುತಿಬಾರದಂತೆ ನಮ್ಮ ನಾಡಿನ ಇತಿಹಾಸವನ್ನು ಇಲ್ಲಿ ಚಿತ್ರಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ೧೯೪೬ರಲ್ಲಿ 'ಕನ್ನಡ ನಾಡಿನ ಚರಿತ್ರೆ'ಯನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸಿತು. ಪೂಜ್ಯ ಬಿ.ಎಂ. ಶ್ರೀಕಂಠಯ್ಯನವರು ಇವರ ಸಂಪಾದಕರು. ರಾಜಕೀಯ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಇತಿಹಾಸ ಮೊದಲ ಭಾಗದಲ್ಲಿದೆ. ೯೪ ಪುಟಗಳ ರಾಜಕೀಯ ಇತಿಹಾಸದ ಲೇಖಕರು ಶ್ರೀ ಜಿ. ಪಿ. ಸಾಲೆತೊರೆಯವರು. ಡಾ. ಪಾಂಡುರಂಗ ದೇಸಾಯಿ ಅವರು ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಇತಿಹಾಸವನ್ನು ೫೪ ಪುಟಗಳಲ್ಲಿ ರೂಪಿಸಿದ್ದಾರೆ. ಕರ್ನಾಟಕದ ರಾಜಕೀಯ ಇತಿಹಾಸ ಕ್ರಿ.ಶ. ೧೫೬೫ರವರೆಗೆ ಸಮಗ್ರವಾಗಿದ್ದು ನಂತರದ ಕತೆ ಕೆಳದಿ ಹಾಗೂ ಮೈಸೂರು ಸಂಸ್ಥಾನಗಳಿಗೆ ಮಾತ್ರ ಸೀಮಿತಗೊಂಡಿದೆ. ೧೯೪೦ರಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಮೈಸೂರು ಸಿಂಹಾಸನಾಧೀಶ್ವರರಾದ ಕಾಲದವರೆಗಿನ ಮೈಸೂರಿನ ಇತಿಹಾಸವನ್ನು ಇಲ್ಲಿ ಹೇಳಿದೆ. ಎರಡು ಹಾಗೂ ಮೂರನೆಯ ಭಾಗಗಳಲ್ಲಿ ಕ್ರಮವಾಗಿ ಕರ್ನಾಟಕದ ಧರ್ಮಗಳು ಹಾಗೂ ಕಲೆಗಳ ಕತೆಯನ್ನು ಹೆಣೆಯಲಾಗಿದೆ. ಕರ್ನಾಟಕದ ಧರ್ಮಗಳನ್ನು ಕುರಿತು ಬರೆದಿರುವವರು ಡಾ. ಶಿ. ಚ. ನಂದೀಮಠ ಅವರು. ಇವರ ಬರೆಹ ಹೆಚ್ಚು ವಾಸ್ತವಿಕತೆಯನ್ನು ಹೊಂದಿದ್ದು ವಿದ್ವತ್ಪೂರ್ಣವಾಗಿದೆ. ಕರ್ನಾಟಕದಲ್ಲಿ ಪ್ರಚಲಿತವಿದ್ದ ಧರ್ಮಗಳನ್ನು, ಧಾರ್ಮಿಕ ಪಂಥಗಳನ್ನು ಕುರಿತು ಇದಕ್ಕೂ ಉತ್ತಮವಾದ ಬರೆಹ ಕನ್ನಡದಲ್ಲಿ ಇನ್ನೂ ಬಂದಿಲ್ಲವೆಂದೇ ಹೇಳಬೇಕು. ಕರ್ನಾಟಕದ ಕಲೆಗಳನ್ನು ಕುರಿತು ಬರೆದಿರುವವರು ಡಾ. ಎಂ. ಹೆಚ್. ಕೃಷ್ಣ ಅವರು. ಅನೇಕ ವರ್ಷಗಳು ಮೈಸೂರಿನ ಪುರಾತತ್ವ ಇಲಾಖೆಯ ನಿರ್ದೇಶಕರೂ, ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರೂ ಆಗಿದ್ದ ಇವರ ಇಲಾಖೆಯ ವಾರ್ಷಿಕ ವರದಿಗಳನ್ನು ಓದಿರುವವರಿಗೆ ಇವರು ಈ ವಿಷಯದಲ್ಲಿ ಅಧಿಕಾರಯುಕ್ತವಾಗಿ ಹೇಳಬಲ್ಲ ನಿಷ್ಣಾತರೆಂಬುದು ತಿಳಿದಿದೆ. ಆದ್ದರಿಂದ ಇವರ ಬರಹ ಪ್ರೌಢವಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪರಿಷತ್ತಿನ ಈ 'ಕನ್ನಡ ನಾಡಿನ ಚರಿತ್ರೆ' ಸಾಮಾನ್ಯ ಓದುಗನಿಗೆ ಬಹಳ ವಿಷಯಗಳನ್ನೊಳಗೊಂಡ ಉಪಯುಕ್ತವಾದ ಗ್ರಂಥ. ಆದರೆ ೨೦೦೦ ವರ್ಷಗಳ ನಮ್ಮ ನಾಡಿನ ಇತಿಹಾಸವನ್ನು ೨೦೦ ಪುಟಗಳಲ್ಲಿ ಅಡಗಿಸಿರುವುದರಿಂದ ಅನೇಕ ವಿವರಗಳಿಗೆ ಎಡೆಯೇ ಇಲ್ಲದಂತಾಗಿದೆ.

ಇದಕ್ಕೂ ಹೆಚ್ಚು ಪರಿಣಾಮಕಾರಿಯಾದ ಗ್ರಂಥ ಅದೇ ವರ್ಷ (೧೯೪೬) ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಪ್ರಕಟಿಸಿದ ಶ್ರೀಯುತ ಎನ್. ಲಕ್ಷ್ಮೀನಾರಾಯಣರಾಯರು

ಮತ್ತು ಆರ್. ಎಸ್. ಪಂಚಮುಖಿಯವರು ಕೂಡಿ ಬರೆದ 'ಕರ್ನಾಟಕದ ಅರಸುಮನೆತನಗಳು' ಕನ್ನಡದಲ್ಲಿ ಇದುವರೆಗೆ ಪ್ರಕಟವಾಗಿರುವ ಗ್ರಂಥಗಳನ್ನೆಲ್ಲಾ ಹೆಚ್ಚು ವಸ್ತುನಿಷ್ಠವೂ, ಸಂಶೋಧನಾತ್ಮಕವೂ ಆದ ಗ್ರಂಥ. ೧೯೩೦ರ ಸುಮಾರಿಗೇ ಪ್ರಕಟಣೆಗೆ ಸಿದ್ಧವಾಗಿದ್ದ ಈ ಗ್ರಂಥದ ಹಸ್ತಪ್ರತಿ ೧೫ ವರ್ಷಗಳ ಕಾಲ ಕತ್ತಲೆಯ ಕೋಣೆಯಲ್ಲಡಗಿದ್ದು ನಂತರ ಪ್ರಕಟವಾಯಿತು. ಇಬ್ಬರು ಲೇಖಕರೂ ಶಾಸನ ತಜ್ಞರು. ಕೇಂದ್ರ ಪುರಾತತ್ವ ಇಲಾಖೆಯ ಶಾಸನ ವಿಭಾಗದಲ್ಲಿ ಅವಿಶ್ರಾಂತವಾಗಿ ದುಡಿದವರು. ಶ್ರೀ ಲಕ್ಷ್ಮೀನಾರಾಯಣರು ಆ ವಿಭಾಗದ ಮುಖ್ಯ ಶಾಸನತಜ್ಞರಾಗಿ ನಿವೃತ್ತಿಹೊಂದಿದರೆ. ಶ್ರೀ. ಪಂಚಮುಖಿಯವರು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಪ್ರಥಮ ನಿರ್ದೇಶಕರಾಗಿ ದುಡಿದು ನಿವೃತ್ತರಾದವರು. ಕರ್ನಾಟಕದ ಇತಿಹಾಸ ರಚನೆಗೆ ಅತ್ಯಾವಶ್ಯಕವಾದ ಶಾಸನಗಳನ್ನು ಓದಿ, ಅರ್ಥೈಸಿ, ತನ್ಮೂಲಕ ಕರ್ನಾಟಕದ ಅರಸುಮನೆತನಗಳ ಇತಿಹಾಸ ರಚನೆಗೆ ತೊಡಗಿದ ಇವರ ಗ್ರಂಥದಲ್ಲಿ ಪ್ರಾಚೀನ ಗಂಗ, ಕದಂಬ, ಬಾದಾಮಿಯ ಚಾಲುಕ್ಯ ಹಾಗೂ ಸಾಮಂತರಾಗಿದ್ದ ನೊಳಂಬ ಹಾಗೂ ಬಾಣರ ಇತಿಹಾಸವಿದೆ. ಈ ಅರಸರ ಶಾಸನಗಳನ್ನು ಪರಿಶೋಧಿಸಿ ಡಾ. ಫ್ಲೀಟ್, ರೈಸ್ ಮುಂತಾದವರ ಬರೆಹಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ತಮ್ಮ ಖಚಿತವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಶಾಸನ ಸಾಮುಗ್ರಿಗಳನ್ನೇ ಅಲ್ಲದೆ ಸಾಹಿತ್ಯಕ ಆಧಾರಗಳನ್ನೂ ಸಹ ಗಣನೆಗೆ ತಂದುಕೊಂಡಿದ್ದಾರೆ. ಇತಿಹಾಸ ರಚನೆಗೆ ಇವರ ಗ್ರಂಥ ಒಂದು ಮಾದರಿಯಾಗಿದೆ ಎನ್ನಬಹುದು; ಆದರೆ ಬಾದಾಮಿಯ ಚಾಲುಕ್ಯರೊಂದಿಗೆ ಕರ್ನಾಟಕದ ಇತಿಹಾಸ ಇಲ್ಲಿ ಮುಕ್ತಾಯವಾಗಿದೆ. ನಂತರದ ಸಂಪುಟಗಳನು ಹೊರತರುವುದಾಗಿ ಲೇಖಕರು ಹೇಳಿದ್ದರೂ ಆ ಕೆಲಸ ಅಪೂರ್ಣವಾಗಿಯೇ ಉಳಿದಿರುವುದು ನಮ್ಮ ದುರದೃಷ್ಟ.

ಮೇಲೆ ಹೇಳಲಾದ ಎರಡು ಗ್ರಂಥಗಳೂ ದೇಶದ ಸ್ವಾತಂತ್ರ್ಯದ ಹಿಂದಿನ ವರ್ಷ ಪ್ರಕಟವಾದವುಗಳು. ಆದರೆ ಪರಿಷತ್ತಿನ ಪ್ರಕಟಣೆಯಲ್ಲಿ ಕರ್ನಾಟಕದ ಇತಿಹಾಸ ೧೯೪೦ರ ವರೆಗೆ ಸಾಗಿ ಬಂದಿದೆ. ವೆಂಕಟರಾಯರ ಪುಸ್ತಕದಲ್ಲಿ ಅದು ವಿಜಯನಗರದ ಇತಿಹಾಸದೊಡನೆ ಮುಕ್ತಾಯವಾಗಿದೆ. ಈ ದೃಷ್ಟಿಯಿಂದ ನೋಡಿದಾಗ ಕನ್ನಡನಾಡಿನ ಪ್ರಾಚೀನ ಕಾಲದಿಂದಲೂ ೧೯೬೧ರವರೆಗಿನ ಇತಿಹಾಸವನ್ನು ನಿರೂಪಿಸಿರುವ ಮೊದಲಗ್ರಂಥ ಡಾ. ಎಂ. ವಿ. ಕೃಷ್ಣರಾಯರ 'ಕರ್ನಾಟಕದ ಚರಿತ್ರೆ'. ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರು ೧೯೬೯ರಲ್ಲಿ ಈ ಸಣ್ಣ ಪುಸ್ತಕವನ್ನು (೧೯೯ ಪುಟಗಳು) ಪ್ರಕಟಿಸಿದರು. ಕರ್ನಾಟಕದಲ್ಲಿ ಕಾಲಕ್ರಮವಾಗಿ ಆಳಿದ ಹಲವು ರಾಜವಂಶಗಳ ಚರಿತ್ರೆಯನ್ನೂ ಆ ರಾಜರುಗಳ ಆಳಿಕೆಯ ಮಹತ್ವವನ್ನೂ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಿದೆ. ವಿವಾದಾಸ್ಪದ ಅಂಶಗಳನ್ನು ಬಿಟ್ಟು ಖಚಿತವಾಗಿ ತಿಳಿದಿರುವ ವಿಷಯಗಳ ನಿರೂಪಣೆ ಇಲ್ಲಿದೆ. ಆದರೆ ವಿಜಯನಗರ ರಾಜ್ಯಸ್ಥಾಪನೆ ಯಾದವರೆಗಿನ ಚಾರಿತ್ರಾಂಶಗಳು ಸಂಪೂರ್ಣವಾಗಿ ಖಚಿತವಾದವುಗಳಲ್ಲವೆಂಬ ಇವರ ಹೇಳಿಕೆ ಸರಿಯಲ್ಲ. ಈ ಪುಸ್ತಕದ ಪ್ರಸ್ತಾಪವನ್ನು ಮುಂದೆಯೂ ಮಾಡಲಾಗಿದೆ.

ಇದೇ ಲೇಖಕರು ಶ್ರೀ ಎಂ. ಕೇಶವಭಟ್ಟರೊಡಗೂಡಿ ಪ್ರಕಟಿಸಿದ ಬೃಹದ್ಗ್ರಂಥ, 'ಕರ್ನಾಟಕದ ಇತಿಹಾಸ ದರ್ಶನ'. ಬೆಂಗಳೂರಿನ ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದವರು ಇದರ ಪ್ರಕಾಶಕರು. ಅಂದು ರಾಜ್ಯದ ಸಚಿವರಾಗಿದ್ದ ಶ್ರೀ ಕೆ. ವಿ. ಶಂಕರಗೌಡರು ಮುನ್ನುಡಿಯಲ್ಲಿ ಹೇಳಿರುವಂತೆ "ನಮ್ಮ ನಾಡಿನ ಎರಡು ಸಾವಿರ ವರ್ಷಗಳಿಗೂ ಮೇಲಣ ಚರಿತ್ರೆಯ ವಿವಿಧ ಅಂಶಗಳನ್ನು ಕುರಿತು ಈಗಾಗಲೇ ಕೆಲವು ಗ್ರಂಥಗಳು ಪ್ರಕಟವಾಗಿವೆಯಾದರೂ ಕನ್ನಡದಲ್ಲಿ ಎಲ್ಲ ಅಂಶಗಳೂ ಅಡಕವಾಗಿರುವ ಇಷ್ಟು ದೊಡ್ಡ ಪ್ರಮಾಣದ ಹೊತ್ತಿಗೆ ಬೆಳಕುಕಾಣುತ್ತಿರುವುದು ಇದೇ ಮೊದಲು." ೧೩೦೪ ಪುಟಗಳ ಈ ಗ್ರಂಥದಲ್ಲಿ ಐದು ಪಟಲಗಳಿವೆ. ಪ್ರಥಮ ಪಟಲದಲ್ಲಿ ರಾಜಕೀಯ ಚರಿತ್ರೆ ಇದೆ. ಇದು ಗ್ರಂಥದ ಅರ್ಧಭಾಗಕ್ಕೂ ಹೆಚ್ಚಿನ ಪುಟಗಳನ್ನು (೭೦೭) ಆಕ್ರಮಿಸಿದೆ. ದ್ವಿತೀಯ ಹಾಗೂ ತೃತೀಯ ಪಟಲಗಳಲ್ಲಿ ಧರ್ಮ ಹಾಗೂ ರಾಜ್ಯಜೀವನ ಪರಂಪರೆಯ ಚಿತ್ರಣಗಳಿವೆ. 'ಕಲಾ ವೈಭವ' ಹಾಗೂ 'ಸಾಹಿತ್ಯ ಸಂಪತ್ತು'ಗಳಿಗಾಗಿ ಉಳಿದೆರಡು ಪಟಲಗಳು ಮೀಸಲಾಗಿವೆ. ಕನ್ನಡ ಜನತೆಯ ಜನಜೀವನವನ್ನೂ, ಸಂಸ್ಕೃತಿ ವಿವರಗಳನ್ನೂ ನಿದರ್ಶಿಸುವ ಚಿತ್ರದರ್ಶನ ಈ ಪಟಲಗಳಲ್ಲಿ ದೊರೆಯುವುದೆಂದು ಹೇಳಿರುವ

ಲೇಖಕರು ಇದುವರೆಗೆ ದೇಶವಿದೇಶಗಳ ವಿದ್ವಾಂಸರುಗಳು ನಡೆಸಿದ ಸಂಶೋಧನೆಯಿಂದ ಲಭಿಸಿರುವ ಅಮೂಲ್ಯ ಸಾಮಗ್ರಿಯನ್ನು ಕ್ರೋಢೀಕರಿಸಿಕೊಂಡು ಈ ಗ್ರಂಥದ ನಾನಾ ಅಧ್ಯಾಯಗಳನ್ನು ಬರೆದಿರುವುದಾಗಿದೆ ಎಂದೂ ಹೇಳಿಕೊಂಡಿದ್ದಾರೆ. ಆದರೆ ಕರ್ನಾಟಕದ ಇತಿಹಾಸವನ್ನು ತಕ್ಕಮಟ್ಟಿಗೆ ಬಲ್ಲ ವಿದ್ವಜ್ಜನರಿಗೆ ಈ ಗ್ರಂಥವನ್ನು ಓದಿದಾಗ ಲೇಖಕರು ತಮ್ಮ ಈ ಯತ್ನದಲ್ಲಿ ಸಫಲರಾಗಿಲ್ಲವೆಂಬ ಅಂಶ ಸ್ಪಷ್ಟವಾಗುತ್ತದೆ.

ಅರಸುಮನೆತನಗಳ ವಂಶಾವಳಿ ಹಾಗೂ ಅರಸರ ಆಳಿಕೆಯ ಕಾಲದ ಬಗೆಗೆ ಅನೇಕವೇಳೆ, ಅದರಲ್ಲೂ ಪ್ರಾಚೀನ ಕಾಲದ ಕದಂಬ, ಗಂಗ ಇತ್ಯಾದಿ ಅರಸರ ಆಳಿಕೆಯ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಆದರೂ ಯಾವುದೇ ಆಧಾರದ ಮೇಲೂ ಒಂದು ಕಾಲವನ್ನು ಸೂಚಿಸುವಾಗ ಅದರಲ್ಲಿ ತಪ್ಪು–ತಡೆಗಳಿಲ್ಲದಿರುವಂತೆ ನೋಡಿಕೊಳ್ಳುವುದು ಲೇಖಕರ ಹೊಣೆಯಾಗುತ್ತದೆ. ಪ್ರಸ್ತುತ ಗ್ರಂಥದಲ್ಲಿ ದುರ್ವಿನೀತನು ಕ್ರಿ.ಶ. ೫೪೦ರಿಂದ ೬೦೦ರವರೆಗೆ ಆಳಿದನೆಂದು ಹೇಳಿದೆ (ಪು. ೪೧). ೪೪ನೆಯ ಪುಟದಲ್ಲಿ ಇವನ ನಂತರದ ಅರಸರ ಕಾಲವನ್ನು ಹೀಗೆ ಕೊಟ್ಟಿದೆ: ಮುಷ್ಕರ ೬೫೫–೬೬೦; ಶ್ರೀವಿಕ್ರಮ ೬೬೦–೬೬೫ ಮತ್ತು ಭೂವಿಕ್ರಮ ೬೦೮–೬೬೦. ಇಲ್ಲಿನ ತಪ್ಪು ಸ್ಪಷ್ಟವಾಗಿದೆ. ಲೇಖಕರು ಸೂಚಿಸಿರುವ ಕಾಲಮಾನದಂತೆ ದುರ್ವಿನೀತನ ಮಗನಾದ ಮುಷ್ಕರನು ೬೫೫ರಿಂದ ಆಳುವುದು ಸಾಧ್ಯವಿಲ್ಲ. ದುರ್ವಿನೀತನು ೬೦೦ರವರೆಗೂ ಆಳಿದನೆಂದಾಗ ಅವನ ಮಗ ಮುಷ್ಕರ ೬೫೫ರಲ್ಲಿ ಪಟ್ಟಕ್ಕೆ ಬರುವುದು ಹೇಗೆ ಸಾಧ್ಯ? ಇನ್ನು ಭೂವಿಕ್ರಮ (ದುರ್ವಿನೀತನ ಮರಿಮಗ) ೬೦೮ರಲ್ಲಿ ಪಟ್ಟಕ್ಕೆ ಬಂದನೆಂದು ತೋರಿಸಿದೆ. ೧೨೬೬ನೆಯ ಪುಟದಲ್ಲಿ ತೋರಿಸಿರುವ ವಂಶವೃಕ್ಷದಲ್ಲಿಯೂ ಹೀಗೆಯೇ ಇದೆ. ತಪ್ಪು ಲೇಖಕರಿಗೆ ಯಾವ ಘಟ್ಟದಲ್ಲಿಯೂ ಕಂಡುಬರದಿರುವುದು ಆಶ್ಚರ್ಯಕರ.

ಗಂಗವಂಶದ ಮೊದಲನೆಯ ಅರಸನ ಹೆಸರನ್ನು ದಿಡಿಗ ಎಂದು ಕೊಟ್ಟಿದೆ. ನಮಗೆ ತಿಳಿದಂತೆ ಅವನ ಹೆಸರು ದಡಿಗ; ದಿಡಿಗ ಅಲ್ಲ. ಈತನ ಮಗ ಇಮ್ಮಡಿ ಮಾಧವನೆಂದು ೧೨೬೬ನೆಯ ಪುಟದಲ್ಲಿನ ವಂಶವೃಕ್ಷದಲ್ಲಿ ತೋರಿಸಿದೆ. ಆದರೆ ೪೯ನೆಯ ಪುಟದಲ್ಲಿ ದಿಡಿಗನ ನಂತರ ಅವನ ಮಗನಾದ ಕಿರಿಯ ಮಾಧವನೂ, ನಂತರ ಕ್ರಮವಾಗಿ ಹರಿವರ್ಮ, ವಿಷ್ಣುಗೋಪ ಮತ್ತು ಇಮ್ಮಡಿ ಮಾಧವರು ಪಟ್ಟಕ್ಕೆ ಬಂದರೆಂದು ಹೇಳಿದೆ. ವಂಶವೃಕ್ಷದಲ್ಲಿರುವುದನ್ನು ಗಮನಿಸಿದರೆ ವಿಷ್ಣುಗೋಪನ ಬಳಿಕ ತಡಂಗಾಲ ಮಾಧವ (III?)ನು ಆಳಿದನೆಂದಾಗುತ್ತದೆ. ಈ ಹೇಳಿಕೆಗಳಲ್ಲೆಲ್ಲಾ ಯಾವ ವಿಧವಾದ ಸಂಬಂಧವೂ ಇಲ್ಲ. ಕ್ರಿ.ಶ. ೫೪೦ರಿಂದ ೬೦೦ರ ವರೆಗೆ ಆಳಿದ ದುರ್ವಿನೀತನು ತನ್ನ ಮಲತಮ್ಮನೊಡನೆ ಹೋರಾಟದಲ್ಲಿ ಚಾಲುಕ್ಯ ವಿಜಯಾದಿತ್ಯನ ನೆರವು ಪಡೆದನೆಂದೂ, ಇವರ ವಿರುದ್ಧ ಪಲ್ಲವರು ಸೋತರೆಂದೂ ಈ ಯುದ್ಧ 'ಬಯಲಾಟ' ನಡೆಯಿತೆಂದೂ ಹೇಳಿದೆ (ಪುಟ ೪೨). ಅದೇ ಕಾಲಕ್ಕೆ ವಿಜಯಾದಿತ್ಯನ ಮಗ ಜಯಸಿಂಹವಲ್ಲಭನು ಚಾಲುಕ್ಯ ಸಿಂಹಾಸನಕ್ಕೆ ಬಂದನೆಂದೂ, ಅವನೂ ಪಲ್ಲವರೊಡನೆ ಅವ್ಯಾಹತವಾಗಿ ಹೋರಾಡಿ ಮಾತಾಮಹನಾದ ದುರ್ವಿನೀತನ ಸಹಾಯದಿಂದ ಚಾಲುಕ್ಯಾಧಿಕಾರವನ್ನು ಪ್ರಸ್ಥಾಪಿಸಿದನೆಂದೂ ಹೇಳಿದೆ. ಈ ಹೋರಾಟ ರಣರಾಗ ಹಾಗೂ ಮೊದಲನೆಯ ಪುಲಕೇಶಿಯರ ಕಾಲಕ್ಕೂ ಹಬ್ಬಿತೆಂದಮೇಲೆ, ದುರ್ವಿನೀತನು ಚಾಲುಕ್ಯವಂಶದ ನಾಲ್ಕು ತಲೆಮಾರಿನ ಅರಸರ ಸಮಕಾಲೀನನಾದಂತಾಯಿತು. ದುರ್ವಿನೀತನು ೫೪೦ರಿಂದ ೬೦೦ರ ವರೆಗೆ ಆಳಿದನು. ಚಾಲುಕ್ಯ ಪುಲಕೇಶಿ(೧) ಕ್ರಿ.ಶ. ೫೩೫ರಿಂದ ೫೬೬ರವರೆಗೆ ಆಳಿದನೆಂದು (ಪು. ೬೯ ಮತ್ತು ೧೨೬೮) ತೋರಿಸಿದೆ. ಎಂದ ಮೇಲೆ, ದುರ್ವಿನೀತನು ಪುಲಕೇಶಿಗೂ ಹಿಂದಿನವರಿಗೆ ಸಮಕಾಲೀನನಾಗುವುದು ಹೇಗೆ? ಡಾ. ಎಂ. ವಿ. ಕೃಷ್ಣರಾಯರು ತಲಕಾಡಿನ ಗಂಗರ ಬಗೆಗೆ ಹೆಚ್ಚಿನ ಅಧ್ಯಯನ ಮಾಡಿ ಬಹಳ ಹಿಂದೆಯೇ 'Gangas of Talkad' ಎಂಬ ಗ್ರಂಥವನ್ನು ಬರೆದವರು. ಅವರೂ ಇಂತಹ ಅಸಂಬದ್ಧ ಹೇಳಿಕೆಗಳನ್ನು ಮಾಡಿರುವುದು ಆಶ್ಚರ್ಯಕರ. ಗಂಗರನ್ನು ಕುರಿತು ಇತ್ತೀಚೆಗೆ ಅನೇಕ ಲೇಖನಗಳೂ ಪ್ರಕಟವಾಗಿವೆ. ಅವುಗಳನ್ನು ಅವರೇಕೆ ಗಮನಿಸಲಿಲ್ಲ? 'ಕರ್ನಾಟಕದ ಪರಂಪರೆ'ಯಲ್ಲಿ ಅವರೇ ಬರೆದಿರುವ ತಲಕಾಡಿನ ಗಂಗರ ಅಧ್ಯಾಯದಲ್ಲಿ ದುರ್ವಿನೀತನ ಆಳಿಕೆಯ ಕಾಲವನ್ನೂ ೫೮೨ರಿಂದ ೬೨೨ ಎನ್ನಲಾಗಿದೆ. ಇವುಗಳನ್ನೆಲ್ಲಾ ಓದುಗರು ಹೇಗೆ ಸಮನ್ವಯಗೊಳಿಸಬಹುದು?

ಕಲ್ಯಾಣದಲ್ಲಿ ಆಳಿದ ಕಳಚುರ್ಯ ಬಿಜ್ಜಳನನ್ನು ಕುರಿತಾದ ಅಧ್ಯಾಯದಲ್ಲಿ ಕ್ರಿ.ಶ. ೧೧೫೬ರ ಪ್ರಾರಂಭದಲ್ಲಿ ಬಿಜ್ಜಳನು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನೆಂದೂ, ೧೧೫೭ರ ನಂತರ ಸಾರ್ವಭೌಮನಾಗಿ ತೈಲಪನ ಹೆಸರು ಕೇಳಿಬಂದಿಲ್ಲವೆಂದೂ ಹೇಳಿದೆ (ಪು. ೧೯೬). ಆದರೆ ೧೯೭೦ರಲ್ಲಿ ಪ್ರಕಟವಾದ Karnataka Through the Ages ನಲ್ಲಿ ಮುಮ್ಮಡಿ ತೈಲಪನು ೧೧೫೧ರಿಂದ ೧೧೬೧ರ ವರೆಗೆ ಅಧಿಕಾರದಲ್ಲಿದ್ದರೂ ವಾಸ್ತವಿಕವಾಗಿ ಬಿಜ್ಜಳನು ಸರ್ವಾಧಿಕಾರಿಯಾಗಿದ್ದನೆಂದಿದೆ. ಈ ಗ್ರಂಥದ ಸಂಪಾದಕರಲ್ಲಿ ಡಾ. ಕೃಷ್ಣರಾಯರೂ ಒಬ್ಬರು. ಗ್ರಂಥದ ಪ್ರಕಟಣೆಯ ಹೆಚ್ಚಿನ ಹೊಣೆಯನ್ನು ಹೊತ್ತ ಉಪಸಮಿತಿಯ ಸದಸ್ಯರೂ ಆಗಿದ್ದರು. ಇಂತಹುದರಲ್ಲಿ ಇವರಿಗೆ ಈ ಹೇಳಿಕೆಗಳೇಕೆ ಗಮನಕ್ಕೆ ಬರಲಿಲ್ಲ? ಈ ಅಧ್ಯಾಯದ ನಂತರದ ಅಧ್ಯಾಯದಲ್ಲಿ (ಪು. ೨೧೦ರಿಂದ) ಅಧೀನ ರಾಜಕುಲಗಳಾದ ಸಾಳುವ, ಚೆಂಗಾಳ್ವ ಮುಂತಾದವರನ್ನು ಕುರಿತ ವಿವರಣೆಗಳಿವೆ. ಇದು ಕಾಲಾನುಕ್ರಮದಲ್ಲಿ ತಪ್ಪು. ಇವರೆಲ್ಲ ಸುಮಾರು ೧೪-೧೫ನೆಯ ಶತಮಾನಗಳಲ್ಲಿ ಪ್ರಬಲರಾಗಿದ್ದವರು. ವಾಸ್ತವಿಕವಾಗಿ ೩೦೬ನೆಯ ಪುಟದಿಂದ ನಿರೂಪಿಸಲಾದ ಮಹಾಮಂಡಲೇಶ್ವರರಾಗಿದ್ದ ರಟ್ಟರು, ಸಿಂದರು, ಗುತ್ತರು ಇತ್ಯಾದಿಗಳವರ ಇತಿಹಾಸ ಪು. ೨೧೦ರಿಂದ ಆರಂಭವಾಗಬೇಕಾಗಿತ್ತು. ಬಹುಶಃ ಇಲ್ಲಿ ಅಧ್ಯಾಯಗಳ ಸ್ಥಳ ಅದಲು ಬದಲು ಆಗಿದೆ. ಮೇಲೆ ಹೇಳಿದ Karnataka Through the Ages ನಲ್ಲಿನ ಪು. ೨೫೬ ಹಾಗೂ ೪೦೬ರಲ್ಲಿ ಆರಂಭವಾಗುವ ಅಧೀನ ರಾಜಕುಲಗಳ ನಿರೂಪಣೆಯನ್ನು ಇದರೊಡನೆ ಹೋಲಿಸಿದಲ್ಲಿ ಇದರ ಅರಿವಾಗುತ್ತದೆ.

ಕರ್ನಾಟಕದಲ್ಲಿ ಮೆರೆದ ವಿಜಯನಗರ ಸಾಮ್ರಾಜ್ಯವನ್ನು ಕುರಿತ ಅಧ್ಯಾಯದ ಬಗೆಗೂ ಒಂದೆರಡು ಮಾತುಗಳನ್ನು ಹೇಳಬೇಕೆನಿಸುತ್ತದೆ. ಕೃಷ್ಣರಾಯರ ಕರ್ನಾಟಕದ ಚರಿತ್ರೆಯಲ್ಲಿ ಸಂಗಮವಂಶದ ಹರಿಹರ ಬುಕ್ಕರೊಂದಿಗೆ ದೇವಗಿರಿಯ ಯಾದವ ಮತ್ತು ಹೊಯಿಸಳ ಮನೆತನದ ಅರಸರು ವಿವಾಹ ಸಂಬಂಧವನ್ನು ಬೆಳೆಸಿದ್ದರು; ಹರಿಹರನ ತಂದೆಯಾದ ಸಂಗಮನು ಸಣ್ಣ ರಾಜ್ಯಕ್ಕೆ ಒಡೆಯನಾಗಿದ್ದನೆಂದು ತೋರುತ್ತದೆ. ಈತನ ಇಬ್ಬರು ಮಕ್ಕಳು—ಹರಿಹರ ಮತ್ತು ಬುಕ್ಕರು—ವಿದ್ಯಾರಣ್ಯ ಯತಿಗಳನ್ನು ಸಂಧಿಸಿದರು; ಹಿಂದೂಧರ್ಮ ರಕ್ಷಣೆಗಾಗಿ ಕ್ಷಾತ್ರತೇಜಸ್ಸನ್ನು ಪಡೆದಿದ್ದ ನಾಯಕನೋರ್ವನು ಪ್ರಬಲ ರಾಜ್ಯವೊಂದನ್ನು ಕಟ್ಟಬೇಕಾದುದು ಅವಶ್ಯಕವೆಂದರಿತು ಅಂತಹ ನಾಯಕನನ್ನು ಅರಸುತ್ತಿದ್ದ ಯತಿಗಳು ಈ ಸಹೋದರರಲ್ಲಿ ತಮ್ಮ ಧ್ಯೇಯ ಸಾಧನೆಗಾಗಿ ಯೋಗ್ಯರಾದ ಯುವಕರನ್ನು ಕಂಡುಕೊಂಡು ಅವರ ಮೂಲಕ ವಿಜಯನಗರ ಸಾಮ್ರಾಜ್ಯದ ಅಸ್ತಿಭಾರವನ್ನು ಹಾಕಿದರು ಎಂದೆಲ್ಲಾ ಹೇಳಿದೆ. ಮೊದಲೇ ಹೇಳಿದಂತೆ ವಿವಾದಾಸ್ಪದವಾದ ವಿವರಗಳಿಗೆ ಕೈಹಾಕದೆ ಬಹುಮಟ್ಟಿಗೆ ನಿರ್ಣಯವಾಗಿರುವ ಅಂಶಗಳನ್ನೇ ಇಲ್ಲಿ ಹೇಳಿರುವುದಾಗಿ ತಮ್ಮ ಅರಿಕೆಯಲ್ಲಿ ತಿಳಿಸಿದ್ದಾರೆ. Karnataka Through the Ages ನಲ್ಲಿ ದೇಸಾಯಿ ಪಾಂಡುರಂಗರಾಯರು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯನ್ನು ಕುರಿತಾದ ವಾದವಿವಾದಗಳನ್ನು ಚರ್ಚಿಸಿ ಹರಿಹರ ಮತ್ತು ಬುಕ್ಕರನ್ನು ಸೆರೆಹಿಡಿದು ದೆಹಲಿಗೆ ಕರೆದೊಯ್ದು ಇಸ್ಲಾಂ ಮತಕ್ಕೆ ಸೇರಿಸಿ, ತದನಂತರ ಅವರನ್ನು ಕಂಪಿಲಿಯಲ್ಲಿ ದಂಗೆಯನ್ನಡಗಿಸಲು ಕಳುಹಿಸಿದಾಗ ಅವರು ಪುನಃ ಹಿಂದೂ ಮತಾನುಯಾಯಿಗಳಾಗಿ ಮತಾಂತರಗೊಂಡು ವಿದ್ಯಾರಣ್ಯರ ಬೆಂಬಲದಿಂದ ರಾಜ್ಯವನ್ನು ಕಟ್ಟಿದರೆಂದು ಮುಂದೂಡಿರುವ ಹಲವು ವಾದಗಳು ಅಸಮರ್ಥನೀಯವೆಂದು ತೋರಿಸಿದ್ದಾರೆ. ಆ ಇಬ್ಬರು ಸಹೋದರರೂ ಮೂಲತಃ ಕನ್ನಡಿಗರೆಂದೂ ಹೇಳಿದ್ದಾರೆ. ಇಷ್ಟಾದರೂ ಪ್ರಸ್ತುತ ಗ್ರಂಥದಲ್ಲಿ ಈ ವಿಷಯದಲ್ಲಿನ ವಾದವಿವಾದಗಳ ಪ್ರಸ್ತಾಪವಿಲ್ಲ. ಹರಿಹರ, ಬುಕ್ಕರು ಕಾಕತೀಯ ಪ್ರತಾಪರುದ್ರನ ಸೇವೆಯಲ್ಲಿದ್ದರೆಂದು ನಂತರ ಕಂಪಿಲಿಗೆ ತೆರಳಿದರೆಂದೂ ಹೇಳಿ (ಪು. ೨೨೮). ೧೩೨೭ರಲ್ಲಿ ಕಂಪಿಲಿಯು ಪತನಹೊಂದಿದೊಡನೆ ಹರಿಹರಾದಿ ಸೋದರರು ದಿಲ್ಲಿಗೆ ಬಂದಿಗಳಾಗಿ ಕಳುಹಿಸಲ್ಪಟ್ಟು "ಅಲ್ಲಿ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರಂತೆ" ಎಂದೂ (ಪು. ೨೨೯) ಅವರು ಕಂಪಿಲಿಗೆ ಹಿಂದಿರುಗಿದಾಗ "ಪುನರ್ಮತಾಂತರ ಹೊಂದಿ ಹಿಂದೂಗಳಾದರಂತೆ" (ಪು. ೨೩೦) ಎಂದೂ ಹೇಳಿದ್ದಾರೆ. ಈ ವಿಷಯವನ್ನು ಕುರಿತಾದ ಚರ್ಚೆಗಳಲ್ಲಿ ಪಾಲ್ಗೊಳ್ಳದೆ. ಬೇರೊಬ್ಬರು ಹೇಳಿದುದನ್ನು 'ಅಂತೆ' ಎಂದು ಸ್ವೀಕರಿಸುವುದರಲ್ಲಿನ ಈ ಲೇಖಕರ ಚಾರಿತ್ರಿಕ ದೃಷ್ಟಿ ಅರ್ಥವಾಗದು. ಇಷ್ಟು ವಿಸ್ತಾರವಾದ ಗ್ರಂಥದಲ್ಲಿ ಇದಕ್ಕೆ ಸಂಬಂಧಿಸಿದ ವಿವರಗಳನ್ನು ನೀಡಲು

ಸಾಧ್ಯವಾಗದೇ ಹೋಯಿತೇ? "ವಿಜಯನಗರ ಸ್ಥಾಪನೆಯ ಪೂರ್ವರಂಗ"ವೆಂಬ ಅಧ್ಯಾಯಗಳಲ್ಲಿ ಈ ವಿಷಯಗಳು ಇವೆ. ಮುಂದಿನ "ವಿಜಯನಗರ ಸಾಮ್ರಾಜ್ಯ" (ಅಧ್ಯಾಯ ೧೫)ದಲ್ಲಿ ಸಹ ಈ ಇಬ್ಬರು ಸಹೋದರರು "ಬಿಂದುಗಳಾಗಿ ಮತಾಂತರ ಹೊಂದಿದವರಾಗಿದ್ದರೂ ಇರಬಹುದೇನೋ" ಎಂದು ಊಹಿಸಿ (ಪು. ೨೫೬-೫೭) ಈ ಸಹೋದರರ ಮೂಲವನ್ನು ಕುರಿತು ವಿದ್ವಾಂಸರೊಳಗೆ ತೀವ್ರ ಭಿನ್ನಾಭಿಪ್ರಾಯಗಳಿವೆ ಎಂದು ಮಾತ್ರ ಹೇಳಿ ಈ ಸಾಮ್ರಾಜ್ಯ ೧೩೩೬ರಲ್ಲಿ ಸ್ಥಾಪಿತವಾಗಲಿಲ್ಲ ವೆಂದೂ ೧೩೭೭ರಲ್ಲಿ ಪಟ್ಟಕ್ಕೆ ಬಂದ ಇಮ್ಮಡಿ ಹರಿಹರನೇ ವಿಜಯನಗರ ಸಾಮ್ರಾಜ್ಯದ ಪ್ರಥಮ ಸಾಮ್ರಾಟನೆಂದೂ ಇತ್ತೀಚಿನ ಅನ್ವೇಷಣೆಗಳಿಂದ ವ್ಯಕ್ತವಾಗಿದೆ ಎಂದಿದ್ದಾರೆ. ಈ ಇತ್ತೀಚಿನ ಅನ್ವೇಷಣೆ ಗಳ ವಿವರ ಇಲ್ಲಿಲ್ಲ. ವಿದ್ಯಾರಣ್ಯರಿಗೆ ಪೂರ್ವದಲ್ಲಿ ಕ್ರಿಯಾಶಕ್ತಿ ಎಂಬ ಹೆಸರಿದ್ದಿತು ಎಂಬ ಇವರ ಖಚಿತವಾದ ಹೇಳಿಕೆ ಇನ್ನೂ ವಿವಾದಾಸ್ಪದವಾಗಿಯೇ ಇದೆ.

ಕನ್ನಡಿಗರ ಜನಜೀವನವನ್ನು ಚಿತ್ರಿಸುವಾಗ "ಗಂಗರ ಕಾಲದಲ್ಲಿ". "ಬಾದಾಮಿಯ ಚಾಲುಕ್ಯರ ಕಾಲದಲ್ಲಿ" ಎಂದೆಲ್ಲಾ ಹೇಳಿರುವುದನ್ನು (ಪು. ೯೪೮. ೯೬೧) ನೋಡಿದರೆ ಈ ಕಾಲಗಳಲ್ಲಿ ಜನಜೀವನದಲ್ಲಿ ಬದಲಾವಣೆಗಳುಂಟಾದುವೇನೋ ಎಂಬ ಭಾವನೆ ಬರುತ್ತದೆ. ಗಂಗರ ಕಾಲದ ಸಹಗಮನ ಪದ್ಧತಿ. ಮಾಸ್ತಿಕಲ್ಲು. ವೀರಗಲ್ಲುಗಳನ್ನು ನೆಡುವ ಸಂಪ್ರದಾಯ. ಕದಂಬರ ಕಾಲದ 'ಮತ್ತರ್' ಮುಂತಾದ ಭೂಮಾಪನ ಸಾಧನಗಳು ಕಲ್ಯಾಣಿಯ ಚಾಲುಕ್ಯರ ಕಾಲದಲ್ಲೂ ಇದ್ದುವಲ್ಲ! ಬೇರೆ ಬೇರೆ ರಾಜವಂಶಗಳ 'ಕಾಲದಲ್ಲಿ' ಎಂದು ಇವನ್ನು ಪ್ರತ್ಯೇಕವಾಗಿ ಚರ್ಚಿಸುವುದರ ಔಚಿತ್ಯವೇನು?

ಈ ಕೆಲವು ವಿವರಗಳನ್ನು ಇಲ್ಲಿ ಕೊಟ್ಟಿರುವುದಕ್ಕೆ ಕಾರಣಗಳಿಷ್ಟು: ಇಷ್ಟು ಬಿರಿದಾದ ಗ್ರಂಥ ಹೊರಿಸಿದರೂ ಇವನ್ನು ಓದುವಾಗ ವಿದ್ಯಾರ್ಥಿಗಳಿಗೆ ಅನೇಕವೇಳೆ ಗೊಂದಲವುಂಟಾಗಿ ಸಂದೇಹಗಳು ಸಂದೇಹಗಳಾಗಿಯೇ ಉಳಿಯುವುದಲ್ಲದೆ. ತಪ್ಪು ಹೇಳಿಕೆಗಳು ಓದುಗರನ್ನು ಚಕಿತಗೊಳಿಸುತ್ತವೆ. ವಾಸ್ತವಿಕವಾಗಿ ಇಲ್ಲಿರುವುದೆಲ್ಲಾ ಅನೇಕ ಗ್ರಂಥಗಳಿಂದ ಪಡೆದಿರುವ ವಿವರಗಳು ಮಾತ್ರ. ಅವುಗಳನ್ನು ಸರಿಯಾಗಿ ಜೀರ್ಣಿಸಿಕೊಳ್ಳದೆ. ಸಮನ್ವಯಗೊಳಿಸದೆ ಗ್ರಂಥದ ಗಾತ್ರವನ್ನು ಮಾತ್ರ ಬೆಳೆಸಲಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ಆದರೆ ಅನೇಕ ಗ್ರಂಥಗಳಲ್ಲಿ. ಲೇಖನಗಳಲ್ಲಿ ಚದುರಿಹೋಗಿರುವ. ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಒಂದುಕಡೆ ಒಟ್ಟುಗೂಡಿಸುವುದು ಸುಲಭದ ಕೆಲಸವಲ್ಲ. ಈ ಸಂಕಲನ ಕಾರ್ಯವನ್ನು ಸಾಧಿಸಿರುವುದಕ್ಕಾಗಿ ಲೇಖಕರು ಅಭಿನಂದನಾರ್ಹರು. ಇತ್ತೀಚೆಗೆ. ಕಳೆದ ೧೫-೨೦ ವರ್ಷಗಳಿಂದೀಚೆಗೆ. ಲಭ್ಯವಾಗಿರುವ ಹೊಸ ಶಾಸನಗಳೇ ಮುಂತಾದ ಮೂಲ ಸಾಮಗ್ರಿಗಳ ಹಾಗೂ ನೂತನ ವ್ಯಾಖ್ಯಾನಗಳನ್ನು ಸೇರಿಸಿಕೊಂಡರೆ. ಕರ್ನಾಟಕದ ಇತಿಹಾಸವನ್ನು ಕುರಿತು ಹೆಚ್ಚಿನ ಅಧ್ಯಯನ. ಸಂಶೋಧನ. ಮಾಡುವವರಿಗೆ ಈ ಗ್ರಂಥ ಸಹಾಯಕವಾಗುತ್ತದೆ.

ಮೈಸೂರು ಸರಕಾರದವರು ೧೯೭೦ರಲ್ಲಿ ಪ್ರಕಟಿಸಿದ 'ಕರ್ನಾಟಕ ಪರಂಪರೆ' ೧೯೬೮ರಲ್ಲಿ ಅವರೇ ಪ್ರಕಟಿಸಿದ ಆಂಗ್ಲ ಭಾಷೆಯಲ್ಲಿನ Karnataka Through the Ages ಎಂಬ ಗ್ರಂಥದ ಕನ್ನಡಾನುವಾದ. ಮೂಲದ ಗ್ರಂಥ ಒಂದೇ ಸಂಪುಟದಲ್ಲಿತ್ತು. ಇದನ್ನೇ ಈಗ ಕ್ರಮವಾಗಿ ೯೭೦ ಮತ್ತು ೯೯೮-ಒಟ್ಟು ೧೯೬೮-ಪುಟಗಳ ಎರಡು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಕೆಲವು ಲೇಖಕ ರನ್ನು ಹೊರರುಪಡಿಸಿ ಮೂಲ ಲೇಖನಗಳನ್ನು ಅನುವಾದ ಮಾಡಿದವರು ಬೇರೆ. ಅಲ್ಲದೆ ಮೂಲದಲ್ಲಿ ಇಲ್ಲದ ಕೆಲವು ಲೇಖನಗಳನ್ನು-ಆಳುಪರು ಮತ್ತು ಸೇನವರು. ಪೋರ್ಚುಗೀಸರು ಮತ್ತು ಕರ್ನಾಟಕ. ಸಾಳುವರು. ಸಂತರರು-ಇತ್ಯಾದಿಗಳನ್ನು ಕುರಿತು ಮೂರು ಹೊಸ ಲೇಖನಗಳನ್ನು ಇದರಲ್ಲಿ ಸೇರಿಸ ಲಾಗಿದೆ. ಮೊದಲ ಸಂಪುಟದಲ್ಲಿ ಆದಿಕಾಲದಿಂದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯವರೆಗಿನ ಸಂಗತಿಗಳೂ ಸಮಾವೇಶಗೊಂಡಿವೆ. "ಕರ್ನಾಟಕದ ಜನ ಹೇಗೆ ಬದುಕಿದ್ದಾರೆ. ಹೇಗೆ ನಡೆದುಕೊಂಡಿದ್ದಾರೆ ಎಂಬ ಬಗೆಗೆ ಸ್ಥೂಲವಾದ ನಿರೂಪಣೆಯನ್ನೂ ಕಾಣಬಹುದು. ರಾಜಕೀಯ ಚರಿತ್ರೆಯಂತೂ ಬಹು ಮುಖ್ಯವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅದಕ್ಕಿಂತ ಮಿಗಿಲಾದದ್ದು ಇಲ್ಲಿನ ಜನಜೀವನ. ಆರ್ಥಿಕ. ಧಾರ್ಮಿಕ ಶ್ರದ್ಧೆಗಳು. ಅವರ ತಾತ್ವಿಕ ನೆಲೆಗಟ್ಟು. ನೈತಿಕ ನಿಯಮಗಳು-ಆದಕಾರಣ ಈ ದಿಶೆಯಲ್ಲಿ

ತಕ್ಕಷ್ಟು ವಿಷಯ ಸಂಗ್ರಹಮಾಡಿ ನಿರೂಪಿಸಲು ವಿಶೇಷ ಪ್ರಯತ್ನಪಡಲಾಗಿದೆ" ಎಂದು ಸಂಪಾದಕ ಸಮಿತಿಯ ಅಧ್ಯಕ್ಷರಾದ ಶ್ರೀ ಆರ್. ಆರ್. ದಿವಾಕರರು ತಮ್ಮ ಪೀಠಿಕೆಯಲ್ಲಿ ಹೇಳಿದ್ದಾರೆ.

ಸೂಕ್ಷ್ಮವಲ್ಲಿ ಹೇಳಬೇಕೆಂದರೆ ಇದೊಂದು ಲೇಖನಮಂಜರಿ. ಗಾತ್ರದಲ್ಲಿ ಹಿರಿದು. ಆದರೆ ತಮ್ಮದೇ ಆದ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುವಾಗ. ಅದರಲ್ಲಿನ ಹೇಳಿಕೆಗಳನ್ನು ಸಮನ್ವಯ ಗೊಳಿಸುವುದು ಎಷ್ಟು ಕಷ್ಟವೆಂದು ಅರಿತವರಿಗೆ. ಇತರ ಅನೇಕರು ಬರೆದು ಕಳುಹಿಸಿದ ಲೇಖನಗಳ ಸಂಪಾದನ ಕಾರ್ಯ ಸುಲಭವಲ್ಲವೆಂಬುದೂ ತಿಳಿದೀತು. ಆದರೂ ಇಂತಹ ಸಂದರ್ಭಗಳಲ್ಲಿ ಸಂಪಾದಕರು ಬಹಳ ಜಾಗರೂಕರಾಗಿರಬೇಕಾದುದು ಅವಶ್ಯ. ಇತಿಹಾಸ ವಿಷಯದಲ್ಲಿ ಅನೇಕ ವೇಳೆ ಅರಸರ ಆಳಿಕೆಗಳ ವರ್ಷಗಳನ್ನು ತಿಳಿಸುವಾಗಲೋ. ಇತರ ಸಂದರ್ಭಗಳಲ್ಲಿಯೋ ಬಹಳಷ್ಟು ಲೇಖಕರಲ್ಲಿಯೂ ಅಭಿಪ್ರಾಯ ಬೇಧಗಳುಂಟಾಗುವ ಸಾಧ್ಯತೆ ಇವೆ. ಆದರೆ ಒಬ್ಬರೇ ಲೇಖಕರು ಬೇರೆ ಬೇರೆ ಕಾಲಗಳನ್ನು ಸೂಚಿಸಿದ್ದಾಗ ಅವುಗಳನ್ನು ಸರಿಪಡಿಸಬಹುದು–ಸರಿಪಡಿಸಬೇಕು. ಉದಾಹರಣೆಗೆ ತಲಕಾಡಿನ ಗಂಗರನ್ನು ಕುರಿತಾದ ಲೇಖನದಲ್ಲಿ ಶ್ರೀಪುರುಷನು ಕ್ರಿ.ಶ. ೭೨೬ರಿಂದ ೭೮೮ರವರೆಗೆ ಆಳಿದನೆಂದಿದೆ. (ಸಂ. ೧.ಪು. ೧೪೨ ೧೪೪) ಆದರೆ ಅದೇ ಲೇಖಕರ ಬಾಣರು ಎಂಬ ಲೇಖನದಲ್ಲಿ ಶ್ರೀಪುರುಷನ ಆಳಿಕೆಯ ಕಾಲ ಕ್ರಿ.ಶ. ೭೨೬ರಿಂದ ೭೭೮ ಎಂದಿದೆ. (ಪು. ೧೫೬) ಇದರಲ್ಲಿ ಯಾವುದು ಸರಿ? ಮುದ್ರಣದೋಷವೆಂದರೆ ಎಲ್ಲಿ? ೭೭೮ ರಲ್ಲಿಯೋ ಅಥವಾ ೭೮೮ರಲ್ಲಿಯೋ? ಇಂತಹ ದೋಷಗಳಿಗೆ ಎಡೆಕೊಡಬಾರದಿತ್ತು.

ವಿವಿಧ ಲೇಖಕರು ಬರೆದ ಲೇಖನಗಳ ಸಂಗ್ರಹವಿದಾದ ಕಾರಣ. ಸಹಜವಾಗಿಯೇ ಎಲ್ಲವೂ ಸೂತ್ರ ಪ್ರಾಯವಾಗಿಲ್ಲ. ಅವರೊಬ್ಬೊಬ್ಬರ ದೃಷ್ಟಿಕೋನಗಳನ್ನು ಅರಿಯುವುದು ಮಾತ್ರ ಇಲ್ಲಿ ಸಾಧ್ಯ. ವಿಷಯಗಳ ನಿರೂಪಣೆಯಲ್ಲಿಯೂ ಹೊಂದಾಣಿಕೆಯನ್ನು ಹೊಂದುವುದು ಕಷ್ಟ. ಒಂದೊಂದನ್ನು ಒಂದೊಂದು ಬಿಡಿ ಪ್ರಬಂಧವನ್ನಾಗಿ ಓದಿದಾಗ ಅದರ ಲೇಖಕರು ಆ ವಿಷಯದಲ್ಲಿ ಹೊಂದಿದ ಪರಿಣತಿ. ಅವರ ಶೈಲಿ ಇತ್ಯಾದಿಗಳನ್ನು ತಿಳಿಯಬಹುದು. ಕೆಲವು ಲೇಖನಗಳು ಬಹಳ ಪ್ರೌಢ ವಾಗಿವೆ. ಕನ್ನಡಿಗರ ಕತೆಯನ್ನು ಸಮಗ್ರವಾಗಿ ತಿಳಿಯಲು ಅನೇಕ ವಿಷಯಗಳ ಸಂಗ್ರಹ ಮಾತ್ರ ಇಲ್ಲಿ ಆಗಿದೆ. ವಿದ್ಯಾರ್ಥಿಗಳಿಗೆ ಇದೊಂದು ಉಪಯುಕ್ತವಾದ ಗ್ರಂಥವೆನಿಸಿದೆ.

ಕರ್ನಾಟಕದ ಸಮಗ್ರ ಇತಿಹಾಸವನ್ನುಳ್ಳ ಕನ್ನಡ ಗ್ರಂಥಗಳು ಇಷ್ಟೆ. ಆದರೆ ಕರ್ನಾಟಕದ ಬೇರೆ ಬೇರೆ ಅರಸುಮನೆತನಗಳ. ಭಾಗಗಳ ಕುರಿತಾದ ಇತಿಹಾಸ ಗ್ರಂಥಗಳು ಇನ್ನೂ ಹಲವಿವೆ. ಅವುಗಳನ್ನು ಈಗ ಗಮನಿಸುತ್ತೇವೆ.

ಶ್ರೀಯುತರಾದ ಲಕ್ಷ್ಮೀನಾರಾಯಣರಾಯರು ಮತ್ತು ಪಂಚಮುಖಿಗಳು ಬರೆದ ಕರ್ನಾಟಕದ ಅರಸುಮನೆತನಗಳನ್ನು ಕುರಿತು ಮೊದಲೇ ಹೇಳಿದೆ. ಶ್ರೀ ಪಂಚಮುಖಿಯವರು ಕರ್ನಾಟಕದ ಇತಿಹಾಸ ಎಂಬ ಗ್ರಂಥದ ಮೊದಲ ಸಂಪುಟವನ್ನು ೧೯೬೭ರಲ್ಲಿ ಪ್ರಕಟಿಸಿದ್ದಾರೆ. ಇದು ಮೊದಲನೆಯ ಸಂಪುಟ. ರಾಷ್ಟ್ರಕೂಟರ ಚರಿತ್ರೆಯೊಂದಿಗೆ ಮುಕ್ತಾಯವಾಗುವ ಇದರಲ್ಲಿ ಒಟ್ಟು ೫೭೯ ಪುಟಗಳಿವೆ. ಮೊದಲನೆಯ ಭಾಗ (೩೭೩ ಪುಟಗಳು) ರಾಜಕೀಯ ಚರಿತ್ರೆಗೂ. ಎರಡನೆಯ ಭಾಗ ಸಾಂಸ್ಕೃತಿಕ ಚರಿತ್ರೆಗೂ ಮೀಸಲಾಗಿದೆ. ಕರ್ನಾಟಕದ ಅರಸು ಮನೆತನಗಳು ಗ್ರಂಥದಲ್ಲಿನ ಎಲ್ಲ ವಿಷಯಗಳೂ ಇದರಲ್ಲಿ ಅಡಕವಾಗಿವೆ. ಲೇಖಕರೇ ಹೇಳುವಂತೆ ತದನಂತರ ದೊರಕಿದ ಎಲ್ಲ ಮಾಹಿತಿಗಳನ್ನೂ ಸಹ ಚರ್ಚಿಸಿ ಇದರಲ್ಲಿ ಸೂಕ್ತವಾಗಿ ಸೇರಿಸಲಾಗಿದೆ. ಒಂದು ವಿಧದಲ್ಲಿ ಇದನ್ನು ಆ ಗ್ರಂಥದ ವಿಸ್ತೃತರೂಪ ವೆನ್ನಬಹುದು. ಆ ಗ್ರಂಥ ಬಾದಾಮಿಯ ಚಾಲುಕ್ಯರ ಇತಿಹಾಸದೊಂದಿಗೆ ಮುಕ್ತಾಯಗೊಂಡಿದೆ. ಇಲ್ಲಿ ರಾಷ್ಟ್ರಕೂಟರ ಇತಿಹಾಸವೂ ಸೇರಿದೆ. ಶಾಸನತಜ್ಞರಾದ ಶ್ರೀ ಪಂಚಮುಖಿಯವರು ಹೊಸ ವಿಷಯಗಳನ್ನಳವಡಿಸಿಕೊಳ್ಳುವಾಗ ಆ ಮೂಲ ಸಾಮಗ್ರಿಗಳನ್ನು ಹೆಚ್ಚು ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದಾರೆ.

ಆದರೂ ಒಂದೆರಡು ಮಾತುಗಳನ್ನು ಇಲ್ಲಿ ಹೇಳುವುದು ಅವಶ್ಯವೆನಿಸುತ್ತದೆ. 'ಪ್ರಾಗೈತಿಹಾಸಿಕ ಕರ್ಣಾಟಕ' ಎಂಬ ಅಧ್ಯಾಯದಲ್ಲಿ ನೂತನವಾಗಿ ಗುರುತಿಸಲಾದ ನಿವೇಶನಗಳನ್ನು ಕುರಿತು ಬರೆಯುವಾಗ ಕೇವಲ ಉತ್ತರ ಕರ್ನಾಟಕದ ಜಿಲ್ಲೆಗಳಿಗೇ ಅದನ್ನು ಸೀಮಿತಗೊಳಿಸಿ ಕನ್ನಡ ಸಂಶೋಧನ ಸಂಸ್ಥೆಯ

ನಿರ್ದೇಶಕರಾಗಿ ಈ ನಿವೇಶನಗಳನ್ನು ಸ್ವತಃ ಕಂಡಿದ್ದಾರಾದ್ದರಿಂದ ಅದರ ವಿವರಗಳನ್ನು ಕೊಡಲು ಅವರಿಗೆ ಸಾಧ್ಯವಾಗಿದೆ. ಆದರೆ ಕರ್ನಾಟಕದ ಇತರ ಭಾಗಗಳಲ್ಲಿನ ನಿವೇಶನಗಳನ್ನು ಕುರಿತು ನಾಲ್ಕಾರು ಮಾತುಗಳನ್ನು ೫೫ನೆಯ ಪುಟದ ಅಡಿ ಟಿಪ್ಪಣಿಯಲ್ಲಿ ಹೇಳಿ ಮುಗಿಸಿದ್ದಾರೆ. ಚಂದ್ರವಳ್ಳಿ, ಬ್ರಹ್ಮಗಿರಿ, ಮಸ್ಕಿಗಳನ್ನು ಕುರಿತ ವರದಿಗಳು (ಒಂದು ವೇಳೆ ಸಂಪೂರ್ಣವೆನಿಸದಿದ್ದರೂ) ಇವರ ಈ ಗ್ರಂಥ ಪ್ರಕಟವಾಗುವುದಕ್ಕೂ ಹಿಂದೆಯೇ ಪ್ರಕಟವಾಗಿವೆ. ಸಂಗನಕಲ್ಲಿನ ನಿವೇಶನವನ್ನು ಕುರಿತ ವಿವರಗಳೂ ಲಭ್ಯವಾಗಿವೆ. ಇವುಗಳನ್ನು ಇಲ್ಲಿ ಕೊಡಬಹುದಿತ್ತು. ತಾವು ಮಾಡಿದ ಕಾರ್ಯಗಳನ್ನು ಕುರಿತು ಮಾತ್ರ ಹೇಳಿ ಇವುಗಳನ್ನು ಕೈಬಿಟ್ಟಿರುವುದು ಅಸಹಜವೆನಿಸುತ್ತದೆ.

ಕರ್ನಾಟಕದ ಇತಿಹಾಸವನ್ನು ಆಧಾರಪೂರ್ವಕವಾಗಿ ತಿಳಿಸಬಲ್ಲ ಪ್ರಮಾಣ ಗ್ರಂಥಗಳು ಕನ್ನಡದಲ್ಲಿ ಇಲ್ಲವೆಂದು ಮುನ್ನುಡಿಯಲ್ಲಿ ಹೇಳಿರುವ ಇವರ ಮಾತುಗಳು ಸತ್ಯ. ಹಿಂದೆ ಕೇವಲ ರಾಜಕೀಯ ಚರಿತ್ರೆಯ ನಿರೂಪಣೆಯೇ ಇತಿಹಾಸಕಾರನ ಗುರಿಯಾಗಿದ್ದು, ಈಗ ಜನತೆಯ ಇತಿಹಾಸಕ್ಕೂ ಅಷ್ಟೇ ಪ್ರಾಮುಖ್ಯತೆ ಕೊಡಬೇಕಾದ ಸಮಯ ಬಂದಿರುವುದು ನಿಜ. ಆದರೆ, ಪರಮಾತ್ಮನು ತನ್ನ ಕೃತಿಗಳಿಂದ ಜನರು ತಮ್ಮ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕೆಂಬುದನ್ನು ತಿಳಿಸುವುದು ಇತಿಹಾಸದ ಸ್ಪಷ್ಟವಾದ ಉದ್ದೇಶವೆಂದು ಶ್ರೀ ಮಧ್ವಾಚಾರ್ಯರು ಹೇಳಿದ್ದಾರೆ. ಇದು [illegible] ಲೇಖಕರ ಮನೋಧರ್ಮವನ್ನು ಸೂಚಿಸುತ್ತದೆ. "ಸಮಗ್ರ ಬ್ರಹ್ಮಾಂಡವು ಇತಿಹಾಸರೂಪದಲ್ಲಿ ನಿವರ್ತನಗೊಳ್ಳುತ್ತದೆ. ಅದ್ದರಿಂದ ಇತಿಹಾಸದ ತತ್ವಗಳನ್ನು ತಿಳಿದುಕೊಂಡು ಸೂಕ್ಷ್ಮ ಘಟನೆಗಳನ್ನು ಕಾರ್ಯಕಾರಣ ಭಾವದಿಂದ ಸಮನ್ವಯಿಸಿಕೊಂಡು ಅಂತರ್ದೃಷ್ಟಿಯಿಂದ ನಿರೀಕ್ಷಿಸಿದರೆ ಪರಮಾತ್ಮನ ಬೃಹತ್ ಸಂಕಲ್ಪವು ವಿಶದವಾಗಿ ಸಕಲ ಬ್ರಹ್ಮಾಂಡವು ನಮ್ಮ ಅವಗಾಹನೆಗೆ ಬರುವುದು" ಎಂಬುದು ಇತಿಹಾಸವನ್ನು ಕುರಿತಾದ ಇವರ ದರ್ಶನ. ಆದರೆ ಈ ಉದ್ದೇಶದಿಂದ ಇತಿಹಾಸವನ್ನು ಬರೆಯಬೇಕು ಮತ್ತು ಅಭ್ಯಾಸಿಗಳು ಓದಬೇಕು ಎನ್ನುವುದು ಅಭಿಪ್ರಾಯದ ಮಾತಾಗುತ್ತದೆಯೇ ಹೊರತು ಅದೇ ಸರಿಯೆನ್ನಿಸುವುದಿಲ್ಲ. ಅನೇಕ ಪುರಾಣ ಪ್ರಸಿದ್ಧರಾದ ರಾಜರು "ಅಹಂಕಾರ ಮಮಕಾರಗಳನ್ನು ಬಿಟ್ಟು ಭಗವಂತನನ್ನು ಅನನ್ಯಗತಿಕರಾಗಿ ಶರಣು ಹೋದ ಮೇಲೆ ಅವರ ಹೆಸರು ಇತಿಹಾಸದಲ್ಲಿ ಚಿರಂಜೀವಿಯಾಗಿ ಉಳಿಯಿತು. ಪ್ರಾಗೈತಿಹಾಸಿಕ ಕಾಲದಿಂದ ಇದುವರೆಗೂ ನಡೆದ ಮತ್ತು ನಡೆಯುತ್ತಿರುವ ಘಟನೆಗಳನ್ನು ಧರ್ಮದ ನಿಕಷಕ್ಕೆ ತಿಕ್ಕಿ ತಿಕ್ಕಿ ಅವುಗಳಲ್ಲಿ ಸಾರಭೂತವಾದದ್ದನ್ನು 'ಸಂಸ್ಕೃತಿ' ಎಂದು ತಿಳಿಯಬೇಕು"–ಎಂಬಿಂತಹ ಧೋರಣೆ ಇವರ ಮೂಲತತ್ವಗಳು ಎಂಬ ಅಧ್ಯಾಯದಲ್ಲಿ ಕಂಡುಬರುತ್ತಾದರೂ ಇತರ ಅಧ್ಯಾಯಗಳನ್ನು ಓದಿದಾಗ ಈ ತತ್ವವನ್ನು ಅಲ್ಲಿ ಅನ್ವಯಿಸಲು ಸಾಧ್ಯವಾಗಿಲ್ಲವೆಂದು ಕಂಡುಬರುತ್ತದೆ.

ಆದರೂ ಇದೊಂದು ಒಳ್ಳೆಯ ಗ್ರಂಥ–ಸಂಶೋಧಕರಿಗೂ ಸಹ ಇದು ಒಳ್ಳೆಯ ಆಧಾರ ಗ್ರಂಥ ಎನಿಸುತ್ತದೆ.

ಕರ್ನಾಟಕದ ಕೆಲವು ಅರಸುಮನೆತನಗಳಿಗೆ, ಭಾಗಗಳಿಗೆ ಸಂಬಂಧಿಸಿದ ಪುಸ್ತಕಗಳು ಕೆಲವು ಪ್ರಕಟವಾಗಿವೆ. ಇವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಪುಸ್ತಕಗಳು ಹೆಚ್ಚಾಗಿವೆ. ೧೯೩೮ರಲ್ಲಿ ಪ್ರಕಟವಾದ 'ತುಳುವ ಚರಿತ್ರೆ'ಯ ಲೇಖಕರು ಶ್ರೀ ಕೆ. ಕೆ. ಕುದ್ವರವರು. ಎಂ. ಜಿ. ಬಗಳರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಮತ್ತು ಶ್ರೀ ಎಸ್. ಎಸ್. ಹೆ… ಮತ್ತು ನಾರಾಯಣ ಕಿಲ್ಲೆ ಅವರ 'ಪ್ರಾಚೀನ ತುಳುನಾಡು'(೧೯೫೫) ಎಂಬ ಪುಸ್ತಕಗಳನ್ನೂ ಉಲ್ಲೇಖಿಸಬಹುದು. ಆದರೆ ಹೆಚ್ಚು ವೈಜ್ಞಾನಿಕ ರೀತಿಯಲ್ಲಿ, ಸಂಶೋಧನಾತ್ಮಕವಾಗಿ ಬರೆದ ಪುಸ್ತಕಗಳು ಪಿ. ಗುರುರಾಜ ಭಟ್ಟರ 'ತುಳುನಾಡು' ಮತ್ತು ಕೆ. ವಿ. ರಮೇಶರ 'ತುಳುನಾಡಿನ ಇತಿಹಾಸ'. 'ತುಳುನಾಡು' ಪ್ರಮುಖವಾಗಿ ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದುದಾಗಿದೆ. ಇದು ಸಾಮಾಜಿಕ ಚರಿತ್ರೆಯಲ್ಲ. ಒಂದು ಸಂಶೋಧನಾತ್ಮಕ ವಿವೇಚನೆ ಎಂದು ಲೇಖಕರೇ ಬಣ್ಣಿಸಿದ್ದಾರೆ. ಈ ಗ್ರಂಥದಲ್ಲಿ ತುಳುವರು ಯಾರು? ಎಂಬ ಪ್ರಶ್ನೆಯನ್ನು ಮೂಲ ಸಮಸ್ಯೆಯಾಗಿ ತೆಗೆದುಕೊಂಡು ಇದಕ್ಕೆ ಪೂರಕಗಳಾಗಿ ಇತರ ವಿಷಯಗಳನ್ನೂ ಪ್ರತಿಪಾದಿಸಲಾಗಿದೆ ಎಂದಿದ್ದಾರೆ ಶ್ರೀಭಟ್ಟರು. ತುಳುವರು, ತುರುವರು, ಒಂದು ವರ್ಗದ ದನಗಾರರು. ದಕ್ಷಿಣ ಕನ್ನಡದ ಸಮಾಜದಲ್ಲಿ ಪ್ರಮುಖವಾಗಿ ಏಳು ವರ್ಗಗಳಿದ್ದು, ಬಿಲ್ಲವರು, ಮೊಗೇರರು, ಕುಡುವರು,

ತುಳುವರು, ನಾಡವರು, ಆಳುವರು ಮತ್ತು ಬ್ರಾಹ್ಮಣರು ಇವರು ತುಳುನಾಡಿನ ಸಮಾಜದ ನಿರ್ಮಾಪಕರು ಇವನ್ನು ಆಧಾರವಾಗಿಟ್ಟುಕೊಂಡು ಆ ಸಮಾಜದ ಬೆಳವಣಿಗೆಯನ್ನು ನಿರೂಪಿಸಲು ಈ ಗ್ರಂಥದಲ್ಲಿ ಯತ್ನಿಸಲಾಗಿದೆ. ಶಂ. ಬಾ. ಜೋಷಿಯವರ 'ಎಡೆಗಳು ಹೇಳುವ ಕಂಪಾದ ಕತೆ' ಮತ್ತು 'ಕನ್ನಡದ ನೆಲೆ' ಎಂಬ ಗ್ರಂಥಗಳಿಂದ ಇವರು ಬಹಳಮಟ್ಟಿಗೆ ಪ್ರಭಾವಿತರಾಗಿದ್ದಾರೆ. ಆ ವಿಷಯವನ್ನು ಇವರೇ ಒಪ್ಪಿಕೊಂಡಿದ್ದಾರೆ (ಮೊದಲ ಮಾತು ಪುಟ ೨). ಇಲ್ಲಿ ಹೆಚ್ಚಾಗಿ ಸಾಂಪ್ರದಾಯಿಕ ಜನಪದ ಕತೆಗಳು, ಸ್ಥಳನಾಮಗಳು ಇತ್ಯಾದಿಗಳ ಆಧಾರದ ಮೇಲೆ ಸಾಮಾಜಿಕ ಚರಿತ್ರೆಯನ್ನು ನಿರೂಪಿಸುವ ಯತ್ನ ಮಾಡಲಾಗಿದೆ. ಇಲ್ಲಿನ ಅನೇಕ ವಿಷಯಗಳು ಇನ್ನೂ ಚರ್ಚಾಸ್ಪದವಾಗಿಯೇ ಇವೆ. ಆದ್ದರಿಂದ ಇವರು ಮಾಡಿರುವ ಅನೇಕ ನಿರ್ಣಯಗಳನ್ನು ಹಾಗೆಂದು ಭಾವಿಸಲಾಗದು. ಪರಿಶೀಲನಾರ್ಹವಾದ ಊಹೆಗಳೆಂದೇ ಹೇಳಬೇಕು. ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕಾಗಿದೆ. ಅದಕ್ಕೆ ಇದು ಒಂದು ಹಾದಿಯನ್ನು ತೋರಿಸಿದೆ ಎನ್ನಬಹುದು.

'ತುಳುನಾಡಿನ ಇತಿಹಾಸ'ವು ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರದ ಎರಡನೆಯ ಪ್ರಕಟಣೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಪರಿಸರದ ರಾಜಕೀಯ ಇತಿಹಾಸ. ಇದಕ್ಕಾಗಿ ಲೇಖಕರು ಅನೇಕ ಶಾಸನಗಳನ್ನು ಮೂಲ ಸಾಮಗ್ರಿಗಳನ್ನಾಗಿ ಉಪಯೋಗಿಸಿದ್ದಾರೆ. ಉತ್ಖನನಗಳಂತೂ ಅಲ್ಲಿ ನಡೆದೇ ಇಲ್ಲ. ಆ ಸಾಮಗ್ರಿಯನ್ನು ಉಪಯೋಗಿಸುವ ಪ್ರಶ್ನೆ ಬರುವುದೇ ಇಲ್ಲ. ಸಾಹಿತ್ಯ ಸಾಮಗ್ರಿಯಲ್ಲಿ ಕ್ರಿಸ್ತಶಕಾರಂಭದ ಮೊದಲ ಮೂರು ಶತಮಾನಗಳಿಗೆ ಸೇರಿದುವೆನ್ನಲಾದ 'ಸಂಘಂಕಾಲ'ದ ತಮಿಳು ಸಾಹಿತ್ಯದಲ್ಲಿ ತುಳುನಾಡಿಗೆ ಸಂಬಂಧಿಸಿದ ವಿವರಗಳು ಹಲವಾರು ಇದ್ದು ಅವುಗಳನ್ನು ವಿವೇಚನ ಪೂರ್ಣವಾಗಿ ಉಪಯೋಗಿಸಿಕೊಂಡಿದ್ದಕ್ಕಾಗಿ ಲೇಖಕರನ್ನು ಮೆಚ್ಚಬೇಕು. ಸಹ್ಯಾದ್ರಿಖಂಡ ಕಟ್ಟುಕತೆಗಳಿಂದ ಕೂಡಿದ್ದು. ಅದನ್ನು ಉಪಯೋಗಿಸುವಾಗ ಎಚ್ಚರದಿಂದಿರಬೇಕೆಂಬ ಮಾತನ್ನು ಆಡಿದ್ದಾರೆ. ವಿಜಯನಗರದ ಅರಸರ ಕಾಲದವರೆಗೆ ತುಳುನಾಡಿನಲ್ಲಿ ಆಳಿದ ಮನೆತನ ಆಳುಪರದು. ಕಳೆದ ಮೂರು ನಾಲ್ಕು ದಶಕಗಳಲ್ಲಿ ಇವರ ಶಾಸನಗಳು ಹೊಸದಾಗಿ ಅನೇಕವು ದೊರೆತಿದ್ದು ಅವು ಆಳುಪರ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಿವೆ. ಆದ್ದರಿಂದ ಈ ಕಿರು ಗ್ರಂಥದಲ್ಲಿ ಬಹಳವಾದ ಹೊಸ ವಿವರಗಳು ಅಡಕವಾಗಿದ್ದು, ಆ ಪ್ರಾಂತದ ಇತಿಹಾಸ ಸಂಶೋಧನೆಯಲ್ಲಿ ದಿಟ್ಟ ಹೆಜ್ಜೆಯೊಂದನ್ನು ಇಡಲಾಗಿದೆ. ಇದು ಬಹಳ ಉಪಯುಕ್ತವಾದ ಗ್ರಂಥ. ಲೇಖಕರು ಅಭಿನಂದನಾರ್ಹರು.

ಇಂತಹುದೇ ಇನ್ನೊಂದು ಉಪಯುಕ್ತವಾದ ಗ್ರಂಥ ಡಾ. ಎ. ವಿ. ನರಸಿಂಹಮೂರ್ತಿಯವರ 'ಕರ್ಣಾಟಕದ ಸೇವುಣರ ಇತಿಹಾಸ'–ಕನ್ನಡ ಅಧ್ಯಯನ ಸಂಸ್ಥೆಯ ೧೯೭೧ರ ಪ್ರಕಟಣೆ. ಸೇವುಣರು ಮಹಾರಾಷ್ಟ್ರದವರೆಂದು ಭಂಡಾರ್ಕರ್ ಮೊದಲಾದ ಪ್ರಖ್ಯಾತ ಇತಿಹಾಸಕಾರರು ಹೂಡಿದ್ದ ವಾದವನ್ನು ಅಲ್ಲಗಳೆದು, ಅವರು ಕನ್ನಡಿಗರೆಂದು ತೋರಿಸಿಕೊಟ್ಟಿರುವುದು ಈ ಪುಸ್ತಕದ ವಿಶಿಷ್ಟತೆ. ಈ ಅರಸು ಮನೆತನದ ಉಗಮ, ಪೂರ್ವಜರ ಚರಿತ್ರೆ, ಇತರ ಅರಸರ ಸಾಧನೆಗಳೆಲ್ಲವನ್ನೂ ಇಲ್ಲಿ ನಿರೂಪಿಸಿರುವುದಲ್ಲದೆ, ಅವರ ರಾಜ್ಯಭಾರ ಕ್ರಮ, ಅಂದಿನ ಸಾಮಾಜಿಕ, ಧಾರ್ಮಿಕ ಸ್ಥಿತಿಗಳು ಇತ್ಯಾದಿಗಳನ್ನು ಸಹ ಇಲ್ಲಿ ಚರ್ಚಿಸಲಾಗಿದೆ. ಕೆಲವು ತಪ್ಪುಗಳು ಕೈತಪ್ಪಿ ಉಳಿದುಹೋದಂತೆ ಕಾಣುತ್ತದೆ. ಉದಾಹರಣೆಗೆ ಪು. ೧೨೩ರಲ್ಲಿ ಮಾಸವಾಡಿಯ ಸೇವುಣರ ವಂಶಾವಳಿಯಲ್ಲಿ ಹೆಮ್ಮಾಡಿಯು ಕ್ರಿ.ಶ. ೧೦೦೩ರಿಂದ ೧೦೪೭ರವರೆಗೆ ಆಳಿದನೆಂದಿದೆ. ಇದು ಬಹುಶಃ ೧೦೯೩ರಿಂದ ೧೧೪೭ರವರೆಗೆ ಎಂದಿರಬೇಕೇನೋ? ಹೈಹೇಯ ಎಂಬುದು ತಪ್ಪೆನಿಸುತ್ತದೆ. ಶಾಸನಗಳಲ್ಲಿ ಇವರನ್ನು ಹೈಹಯರೆಂದೇ ಕರೆಯಲಾಗಿದೆ. ಹಾಗೆಯೇ ೨ನೆಯ ಪರಿಶಿಷ್ಟದಲ್ಲಿರುವ ಕೀಸುಕಾಡ್ ಎಂಬುದು ಸರಿಯಲ್ಲ. ಅದು ಕಿಸುಕಾಡು ಎಂದಿರಬೇಕು. ಇವುಗಳನ್ನು ಮುಂದಿನ ಮುದ್ರಣದಲ್ಲಿ ತಿದ್ದಿಕೊಳ್ಳಬಹುದು. ಈ ಪುಸ್ತಕ ಹಾಗೂ ಡಾ. ರಮೇಶ್‌ರ ಪುಸ್ತಕ–ಇವೆರಡೂ ಅವರು ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧಗಳ ಆಧಾರದ ಮೇಲೆ ರಚಿಸಲಾದ ಕಿರುಗ್ರಂಥಗಳು. ಇಂಗ್ಲಿಷ್ ಭಾಷೆಯಲ್ಲಿರುವ ಇವುಗಳ ಮೂಲ ಪ್ರಬಂಧಗಳು ಸಹ ಪ್ರಕಟವಾಗಿವೆ. ಡಾ. ರಮೇಶ್‌ರವರ A History of South Kanara ಕರ್ನಾಟಕ ವಿಶ್ವ ವಿದ್ಯಾನಿಲಯದ ಪ್ರಕಟಣೆ.

ಶ್ರೀ ಎ.ಎಸ್. ನಂಜುಂಡಸ್ವಾಮಿಯವರು ಕದಂಬ. ಗಂಗರ ಇತಿಹಾಸ, ರಾಷ್ಟ್ರಕೂಟರ ಇತಿಹಾಸ ಇತ್ಯಾದಿ ಕರ್ನಾಟಕದ ಕೆಲವು ಅರಸುಮನೆತನಗಳ ಚರಿತ್ರೆಯನ್ನು ಬರೆದಿದ್ದಾರೆ. ಇವು ಧಾರವಾಡ ಸಮಾಜ ಪುಸ್ತಕಾಲಯದ ಪ್ರಕಟಣೆಗಳು. ಸುಮಾರು ೧೫೦ ಪುಟಗಳೊಳಗೆ ಕರ್ನಾಟಕದ ಒಂದೊಂದು ಅರಸು ಮನೆತನಗಳ ರಾಜಕೀಯ ಇತಿಹಾಸ ಹಾಗೂ ಧಾರ್ಮಿಕ ಸ್ಥಿತಿ ಮುಂತಾದವುಗಳನ್ನು ಕುರಿತ ವಿವರಗಳನ್ನಿಲ್ಲಿ ಒದಗಿಸಲಾಗಿದೆ.

ಕದಂಬರ ಇತಿಹಾಸವನ್ನು ಹೇಳುವಾಗ ಮಯೂರವರ್ಮನು ಚಂದ್ರವರ್ಮನ ಮಗನು. ಕಲ್ಯಾಣದ ಅರಸ ರಾಜವಲ್ಲಭನ ಪತ್ನಿಯಾದ ಶಶಿಪ್ರಭೆಯನ್ನು ಶತ್ರುಗಳಿಂದ ಮುಕ್ತಗೊಳಿಸಿ. ಪ್ರತಿಫಲವಾಗಿ ಅಲ್ಲಿನ ರಾಜಕುಮಾರಿಯಾದ ಶಶಾಂಕಮುದ್ರೆಯನ್ನು ಮದುವೆಯಾದನೆಂದಿದ್ದಾರೆ. ಇವರು ಹೇಳುವ ಧಾಟಿಯನ್ನು ಗಮನಿಸಿದರೆ ಇದು ಚಿತ್ರಿತಗೊಳಿಸಲ್ಪಟ್ಟ ಐತಿಹಾಸಿಕ ಸತ್ಯವೆನಿಸುತ್ತದೆಯಾದರೂ ಇದು ಅಪದ್ಧವೆಂದೇ ಹೇಳಬೇಕು. ಕದಂಬಕುಲದ ಇತರ ಶಾಖೆಗಳಿಗೆ ಸೇರಿದ ಸಾಮಂತರಾಗಿ ಆಳಿದ ಇತರರನ್ನು ಕುರಿತೂ ಇಲ್ಲಿ ಹೇಳಿದೆ. ಗ್ರಂಥದ ಎರಡನೆಯ ಭಾಗದಲ್ಲಿ ಗಂಗರ ಇತಿಹಾಸವಿದೆ. ಇಲ್ಲಿಯೂ ಕೆಲವು ಸಮಸ್ಯೆಗಳನ್ನು ಲೇಖಕರು ಒಪ್ಪಿಸಲಾರದ ಅಸ್ಪಷ್ಟ ಹೇಳಿಕೆಗಳನ್ನು ಮಾಡಿದ್ದಾರೆ. ದುರ್ವಿನೀತನ ಆಳಿಕೆಯ ಕಾಲವನ್ನೆ ಇಲ್ಲಿ ಉದಾಹರಿಸಬಹುದು. ಅವಿನೀತನು ಕ್ರಿ.ಶ. ೫೦೦ರಿಂದ ೫೪೦ರವರೆಗೆ ಆಳಿದನೆಂದು ಹೇಳಿ (ಪು. ೬೬) ದುರ್ವಿನೀತನಿಗೆ ಯಾವ ಕಾಲವನ್ನೂ ಸೂಚಿಸದೆ ಆ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳಿವೆ ಎಂದು ಹೇಳಿದ ಮಾತ್ರದಿಂದ ಓದುಗರಿಗೆ ಖಚಿತವಾಗಿ ಏನನ್ನೂ ತಿಳಿಸಿದಂತಾಗುವುದಿಲ್ಲ. ಒಂದು ರೀತಿಯಲ್ಲಿ ಲೇಖಕರಿಗೂ ಇದು ಸಮಸ್ಯೆಯೇ. ನಾಲ್ಕಾರು ಪುಸ್ತಕಗಳಿಂದ ವಿಷಯಗಳನ್ನೆತ್ತಿ ಪುಸ್ತಕವೊಂದನ್ನು ತಾವೇ ಬರೆಯುತ್ತಿರುವಾಗ ಆ ಮೂಲ ಲೇಖಕರ ಜಾಡನ್ನು ಹಿಡಿಯುವುದು ಸಹಜ. ಅಂತಹ ಸಂದರ್ಭದಲ್ಲಿ ಮೂಲ ಲೇಖಕನ ಸಮಸ್ಯೆ ಈ ಲೇಖಕನಿಗೂ ಸಮಸ್ಯೆಯಾಗಿಯೇ ಉಳಿಯುವುದು ನ್ಯಾಯವೇ. ಈ ಮಾತು ಇದೇ ಲೇಖಕರ ರಾಷ್ಟ್ರಕೂಟ ಇತಿಹಾಸಕ್ಕೂ ಅನ್ವಯಿಸುತ್ತದೆ. ಇವರೇ ಬರೆದ ಹೊಯ್ಸಳರ. ಚಾಲುಕ್ಯರ. ವಿಜಯನಗರದ ಇತಿಹಾಸಗಳು ಸಹ ಬರಲಿವೆಯೆಂದು ಪ್ರಕಾಶಕರಾದ ಧಾರವಾಡದ ಸಮಾಜ ಪುಸ್ತಕಾಲಯದವರು ಹೇಳಿದ್ದಾರೆ.

ಕರ್ನಾಟಕ ವಿಶ್ವವಿದ್ಯಾನಿಲಯದ ಉಪನ್ಯಾಸ ಗ್ರಂಥಮಾಲೆಯಲ್ಲಿನ ೧೪೫ನೆಯ ಪುಸ್ತಿಕೆ 'ಇಕ್ಕೇರಿ ಅರಸರು' (೧೯೭೩). ಲೇಖಕರು ಕೆಳದಿ ಗುಂಡಾಜೋಯಿಸ್. ಇದು ಹಿಂದೆ ೧೯೬೮ರಲ್ಲಿ ಕೆಳದಿಯ ರಾಮೇಶ್ವರ ದೇವಸ್ಥಾನದವರು ಪ್ರಕಟಿಸಿದ ಇದೇ ಲೇಖಕರ ಕೆಳದಿಯ ಸಂಕ್ಷಿಪ್ತ ಇತಿಹಾಸದ ರೂಪ. ಇದೇ ಉಪನ್ಯಾಸಮಾಲೆಯಲ್ಲಿ ಡಾ. ಜಿ. ಎಸ್. ದೀಕ್ಷಿತರೂ ಕೆಳದಿ ನಾಯಕರು ಎಂಬ ಹೆಸರಿನಲ್ಲಿ ಪುಸ್ತಿಕೆಯನ್ನು ಪ್ರಕಟಿಸಿದ್ದಾರೆ. ಈ ಮೂರೂ ಕೃತಿಗಳು ಲಿಂಗಣ್ಣ ಕವಿಯ 'ಕೆಳದಿ ನೃಪ ವಿಜಯ' ಗ್ರಂಥವನ್ನೇ ಆಧರಿಸಿವೆ. ಅಲ್ಲಿನ ವಿಷಯಗಳನ್ನು ಸಂಕ್ಷೇಪಗೊಳಿಸಿ ಬರೆದವುಗಳು. ಇವುಗಳಲ್ಲಿ ಹೊಸ ಅಂಶಗಳೇನೂ ಇಲ್ಲ.

ಆದರೆ ಪೂರಕ ಗ್ರಂಥವಾಗಿ ಅದೇ ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ನಿರ್ದೇಶನಾಲಯ ಇತ್ತೀಚೆಗೆ ಹೊರತಂದ ಪುಸ್ತಕ 'ಕೆಳದಿಯ ಅರಸರು ಹಾಗೂ ಪೋರ್ತುಗೀಜರು' ಲೇಖಕರ ಹೆಸರು ಡಾ. ಬಿ. ಕೆ. ಶಾಸ್ತ್ರಿ. ಎಂದು. ಪುಸ್ತಕದ ಹೊರಪುಟದಲ್ಲೂ ಬಿ. ಎಸ್. ಶಾಸ್ತ್ರಿ ಎಂದು ಒಳಪುಟದಲ್ಲೂ ಅಚ್ಚಾಗಿದೆ. ಬಿ. ಕೆ. ಶಾಸ್ತ್ರಿ ಎಂಬುದೇ ಸರಿ. ಕೆಳದಿಯ ಅರಸರು ಪೋರ್ತುಗೀಜರೊಡನೆ ಹೊಂದಿದ್ದ ಸಂಬಂಧವನ್ನು ಈ ಪುಸ್ತಕದಲ್ಲಿ ವಿಶದೀಕರಿಸಲಾಗಿದೆ. ಈ ವಿಷಯದ ಅನೇಕ ವಿವರಗಳು ನಮಗೆ ಇದುವರೆಗೂ ತಿಳಿದಿರಲಿಲ್ಲ. ಇದಕ್ಕೆ ಸಂಬಂಧಿಸಿದ ದಾಖಲೆಪತ್ರಗಳು ಹೆಚ್ಚಿನ ಮಟ್ಟಿಗೆ ಪೋರ್ತುಗೀಜ್ ಭಾಷೆಯಲ್ಲಿರುವುದು ಇದಕ್ಕೆ ಮುಖ್ಯಕಾರಣ. ಡಾ. ಶಾಸ್ತ್ರಿ ಅವರು ಗೋವೆಯಲ್ಲಿದ್ದು ಪೋರ್ತುಗೀಜ್ ಭಾಷೆಯನ್ನು ಸ್ವತಃ ಅಭ್ಯಾಸಮಾಡಿ. ನಂತರ ಈ ದಾಖಲೆಗಳ ಸಹಾಯಪಡೆದಿರುವುದು ಈ ಪುಸ್ತಕದ ಮಹತ್ವವನ್ನು ಹೆಚ್ಚಿಸಿದೆ. ಈ ಮೊದಲೇ ಶ್ರೀ ಕೆ. ಡಿ. ಸ್ವಾಮಿನಾಥನ್‌ರವರು The Nayakas of Ikkeri' ಎಂಬ ಗ್ರಂಥವನ್ನು ಪ್ರಕಟಿಸಿದ್ದರಾದರೂ. ಕನ್ನಡ ಅಥವಾ ಪೋರ್ತುಗೀಜ್ ಭಾಷೆಗಳ ಪರಿಚಯವೇ ಇಲ್ಲದೆ ಶಾಸನಗಳ. ದಾಖಲೆ ಪತ್ರಗಳ ಮೂಲಗಳನ್ನು ಪರಿಶೋಧಿಸದೇ. ಅವುಗಳ

ಭಾಷಾಂತರವನ್ನೇ ಅವಲಂಬಿಸಿರುವ ಕಾರಣ ಅಲ್ಲಿ ಅನೇಕ ತಪ್ಪುಗಳುಂಟಾಗಿದೆ. ಆದರೆ ಡಾ. ಶಾಸ್ತ್ರಿಯವರು ಇಂತಹ ಕೊರತೆಗೆ ಆಸ್ಪದಕೊಟ್ಟಿಲ್ಲ. ಮೂಲಾಧಾರಗಳನ್ನು ಹೆಚ್ಚು ವೈಜ್ಞಾನಿಕವಾಗಿ ಪರಿಶೋಧಿಸಿ ಪ್ರಮಾಣಬದ್ಧವಾದ ನಿರ್ಣಯಗಳನ್ನು ಕೊಟ್ಟಿರುವುದು ಗಮನಾರ್ಹ. ಇದೊಂದು ಸಣ್ಣದಾದರೂ **ಉತ್ತಮವಾದ ಸಂಶೋಧನಾ** ಗ್ರಂಥ. ಮುದ್ರಣ ಮಾತ್ರ ಚೆನ್ನಾಗಿಲ್ಲ. ಮುದ್ರಾರಾಕ್ಷಸನ ಹಾವಳಿ ಹೆಚ್ಚಾಗಿದೆ. ಇದು ನಿವಾರಿಸಬಹುದಾದ ದೋಷ.

ಅದೇ ವಿಶ್ವವಿದ್ಯಾನಿಲಯದ ಉಪನ್ಯಾಸ ಗ್ರಂಥಮಾಲೆಯ ೨೫ನೆಯ ಕಿರುಹೊತ್ತಿಗೆ ಶ್ರೀ ಸಿ. ವೀರಬಸಣ್ಣನವರ '೧೮೫೭ರ ಕ್ರಾಂತಿ'. ಇದರ ಹಿನ್ನೆಲೆಯಾಗಿ ಬ್ರಿಟಿಷರು ಭಾರತವನ್ನು ಆಕ್ರಮಿಸಿದ ಕತೆಯನ್ನು ೧೮೫೭ಕ್ಕೂ ಮೊದಲೇ ಅವರ ವಿರುದ್ಧ ನಡೆದ ಬಂಡಾಯಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ದೋಂಡಿಯಾವಾಘ, ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣರ ವಿಷಯಗಳನ್ನೂ ಸಂಕ್ಷಿಪ್ತವಾಗಿ ಹೇಳಿ. ಮಹಾಕ್ರಾಂತಿಯ ಕಾರಣಗಳು, ಘಟನೆಗಳು ಹಾಗೂ ಫಲಿತಾಂಶಗಳನ್ನು ಲೇಖಕರು ಸ್ಥೂಲವಾಗಿ ನಿರೂಪಿಸಿದ್ದಾರೆ. ಕೊನೆಯಲ್ಲಿ ಇದನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯುವ ಬದಲು ಕ್ರಾಂತಿಯೆಂದು ಕರೆಯುವುದೇ ಉಚಿತವೆಂದಿದ್ದಾರೆ. ಇದು ಎಲ್ಲರೂ ಒಮ್ಮೆ ಓದಬಹುದಾದ ಕಿರುಹೊತ್ತಿಗೆ. ಮಕ್ಕಳಿಗೂ, ಇತಿಹಾಸದ ಪರಿಚಯ ಮಾಡಿಕೊಳ್ಳಬಯಸುವವರಿಗೂ ಇದೊಂದು ಉಪಯುಕ್ತವಾದ ಪುಸ್ತಿಕೆ.

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದಾಗ ಕರ್ನಾಟಕ ಸಹ ಅದರಲ್ಲಿ ಸಂಪೂರ್ಣವಾಗಿ ಭಾಗವಹಿಸಿತು. ಗಾಂಧೀಪ್ರಾಂತವೆಂದು ಹೆಸರಾದ ಕರ್ನಾಟಕದಲ್ಲಿ–ಅದರಲ್ಲೂ ಉತ್ತರ ಕರ್ನಾಟಕದಲ್ಲಿ ೧೯೩೦ರಲ್ಲಿ ಕರಬಂದೀ ಹೂಡಿ ಎಂಬ ಕಾಂಗ್ರೆಸ್ಸಿನ ಕರೆ ಬಂದ ಕ್ಷಣದಿಂದ ಕಾಯದೆ ಭಂಗವನ್ನು ನಿಲ್ಲಿಸಿರಿ ಎಂಬ ಆಜ್ಞೆ ಹೊರಡುವವರೆಗೆ ಶ್ರದ್ಧೆಯಿಂದ ಏಕಪ್ರಕಾರವಾಗಿ ಕಷ್ಟನಷ್ಟಗಳ ಪರಿವೆಯಿಲ್ಲದೆ ಕರನಿರಾಕರಣೆಯನ್ನು ನಡೆಸಿಕೊಂಡು ಹೋದ ವೀರಕಥೆಯನ್ನು ಶ್ರೀ ರಂಗನಾಥ ದಿವಾಕರರು ತಮ್ಮ 'ಕರ ನಿರಾಕರಣೆಯ ವೀರಕಥೆ'ಯಲ್ಲಿ ಹೇಳಿದ್ದಾರೆ (೧೯೫೫). ಬಾರ್ದೋಲಿಯಲ್ಲಿ ದಿವಂಗತ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಇಂತಹ ಆಂದೋಲನ ನಡೆಯಿತಾದರೂ ದೇಶದ ಎಲ್ಲ ಕಡೆಗೂ ಅದರ ವಿವರಗಳು ಶೀಘ್ರವೇ ತಿಳಿದು ಬಂದು ಜನರ ಸಹಾನುಭೂತಿ, ಆರ್ಥಿಕ ಹಾಗೂ ನೈತಿಕ ಬೆಂಬಲಗಳು ದೊರೆತವು. ಆದರೆ ಇಂತಹ ಅನುಕೂಲಗಳನ್ನು ಪಡೆಯದ ಉತ್ತರ ಕನ್ನಡ ಜಿಲ್ಲೆಯ ಮೂಲೆಯಲ್ಲಿ ಶಿರಸಿ, ಸಿದ್ದಾಪುರ, ಅಂಕೋಲ ಮತ್ತು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲೂಕುಗಳಲ್ಲಿ ನಡೆದ ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಲ್ಲಿನ ಜನರು ಭಾಗವಹಿಸಿ ಅನೇಕ ಕಷ್ಟಗಳಿಗೆ ಗುರಿಯಾದರು. ಆದರೂ, ನಾಡಿಗಾಗಿ ಅವುಗಳನ್ನು ಧೈರ್ಯದಿಂದ, ತಾಳ್ಮೆಯಿಂದ ಸಹಿಸಿದರು; ಸರ್ವಸ್ವವನ್ನೂ ತ್ಯಜಿಸಿ ದೇಶಸೇವೆ ಮಾಡಿದರು. ಇದು ಗಾಂಧೀಜೀಯವರ ಸತ್ಯಾಗ್ರಹದ ಪ್ರಯೋಗಗಳಲ್ಲಿ ಯಶಸ್ಸನ್ನು ಪಡೆದ ರೋಮಾಂಚಕ ಘಟನೆ. ಇದರಲ್ಲಿ ಪ್ರತ್ಯಕ್ಷ ಭಾಗವಹಿಸಿದ ಕಾರಣ ಶ್ರೀ ದಿವಾಕರರಿಗೆ ಅಧಿಕಾರಯುತವಾಗಿ ಇದನ್ನು ಹೇಳುವ ಸಾಮರ್ಥ್ಯವಿದೆ. ಇದರ ನಿರೂಪಣೆ ಬಹಳ ರೋಮಾಂಚಕಾರಿಯಾಗಿದೆ. ಆಧುನಿಕ ಇತಿಹಾಸಕ್ಕೆ ಸಂಬಂಧಿಸಿದ ಉತ್ತಮ ಪುಸ್ತಕಗಳಲ್ಲಿ ಇದೂ ಒಂದು.

ಇಂತಹುದೇ ಇನ್ನೊಂದು ಪುಸ್ತಕ ಇದೇ ಲೇಖಕರ 'ಕರ್ನಾಟಕದ ಏಕೀಕರಣದ ವೀರಕಥೆ' (೧೯೬೭) ಸ್ವಾತಂತ್ರ್ಯವನ್ನು ಪಡೆದ ಬಳಿಕ ಭಾರತದ ರಾಜಕೀಯ ನಕ್ಷೆಯಲ್ಲಿ ಅನೇಕ ಬದಲಾವಣೆಗಳಾದವು. ಸಣ್ಣ ಪುಟ್ಟ ರಾಜ್ಯಗಳನ್ನು ಪಾಳೆಯಗಳನ್ನು ಒಂದು ದೊಡ್ಡ ಪ್ರಾಂತ–ರಾಜ್ಯ–ದೊಳಗೆ ಸೇರಿಸಿದ ಕೀರ್ತಿ ವಲ್ಲಭಭಾಯಿ ಪಟೇಲರದಾಗಿದೆ. ಆದರೆ ಇದೇ ಸಮಯದಲ್ಲಿ, ಈ ಪ್ರಾಂತಗಳು ರೂಪುಗೊಳ್ಳುವಾಗ ಅವುಗಳನ್ನು ಭಾಷಾವಾರಾಗಿ ಮಾಡಬೇಕೆಂಬ ಜನರ ಆಸೆಗೆ ಮಣಿದು ರಾಷ್ಟ್ರವನ್ನು ಭಾಷಾವಾರು ಪ್ರಾಂತಗಳಾಗಿ ವಿಂಗಡಿಸಲಾಯಿತು. ಇದರ ಪರಿಣಾಮವಾಗಿ ಚದುರಿಹೋಗಿದ್ದ ಕರ್ನಾಟಕ ೧೯೫೬ರಲ್ಲಿ ಪುನಃ ಒಟ್ಟುಗೂಡಿತು. ಇದರ ಹಿನ್ನೆಲೆಯ ಘಟನೆಗಳನ್ನು ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ. ಈ ಕಥೆಯ ಪಾತ್ರಧಾರಿಗಳಲ್ಲಿ ಅನೇಕರು ಇಂದೂ ರಾಜಕೀಯದಲ್ಲಿ ಪಾತ್ರವಹಿಸುತ್ತಿದ್ದಾರೆ ಇವರ ಪಾತ್ರಗಳನ್ನು ವಿಶ್ಲೇಷಿಸುವುದು ಸುಲಭವಲ್ಲ. ಈ ವಿಶ್ಲೇಷಣೆಯನ್ನು ಮಾಡಿರುವ ದಿವಾಕರರು ಅಭಿನಂದನಾರ್ಹರು.

ಈ ಸಂದರ್ಭದಲ್ಲಿ ಇನ್ನೊಂದು ಪುಸ್ತಕ–ಮೈಸೂರು ಆಗ ಮತ್ತು ಈಗ–ಎಂಬುದನ್ನು ಇಲ್ಲಿ ಗಮನಿಸಬಹುದು. ೧೯೭೭ರಲ್ಲಿ ಮೈಸೂರಿನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯವರು ಪ್ರಕಟಿಸಿದ ಈ ಪುಸ್ತಕದ ಲೇಖಕರು ಶ್ರೀ ಜೆ. ಮಹಮದ್ ಇಮಾಂ. ಮೈಸೂರಿನ ರಾಜಕೀಯದಲ್ಲಿ ಸುಮಾರು ೪೦ ವರ್ಷಗಳ ಕಾಲ ಭಾಗವಹಿಸಿದ್ದ ಇವರು ಮೈಸೂರಿನಲ್ಲಿ ಮಂತ್ರಿಗಳಾಗಿದ್ದರು. ನಂತರ ಲೋಕಸಭೆಯ ಸದಸ್ಯರೂ ಆಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ. ಪ್ರಜಾಸರ್ಕಾರ ಆರಂಭವಾದ ಮೇಲೆ ಅವರ "ಸೂತ್ರಗಳನ್ನು ಹಿಡಿಯಲು ತಮಗೆ ಯೋಗ್ಯತೆ ಇರಲಿ. ಇಲ್ಲದಿರಲಿ ಅನೇಕರು ಮುಂದೆ ಬರುತ್ತಿದ್ದಾರೆ. ಇದರಿಂದ ಅರಿತೋ. ಅರಿಯದೆಯೋ ಅನೇಕ ತಪ್ಪುಗಳಾಗುತ್ತಿವೆ." ಇವುಗಳನ್ನು ಅರಿತು ತಿದ್ದಿಕೊಳ್ಳುವುದು ದೇಶದ ಹಿತಕ್ಕೆ ಅವಶ್ಯಕ. ಸ್ವಾತಂತ್ರ್ಯಪೂರ್ವಕಾಲದಲ್ಲಿ. ಸ್ವಾತಂತ್ರ್ಯಾನಂತರದಲ್ಲಿ ಮೈಸೂರಿನ ರಾಜ್ಯಾಡಳಿತದಲ್ಲಿ ಉಂಟಾಗಿರುವ ಬದಲಾವಣೆಗಳು. ಅಂದಿನ ಹಾಗೂ ಇಂದಿನ ಜನರ ಮನೋಭಾವ ಇತ್ಯಾದಿಗಳ ತುಲನಾತ್ಮಕ ವಿವೇಚನೆ ಈ ಪುಸ್ತಕದಲ್ಲಿದೆ. ಪ್ರಚಲಿತ ರಾಜಕೀಯ ಘಟನೆಗಳನ್ನು ಕುರಿತು ಹೇಳಿರುವ ಇವರ ಮಾತುಗಳನ್ನು ಕೇವಲ ಅಭಿಪ್ರಾಯದ ಮಾತೆಂದು ಸಹ ಕೆಲವರು ಹೇಳುವ ಸಾಧ್ಯತೆಗಳಿವೆ. ಆದರೆ ಇವರು ಮಾಡಿರುವ ಅಧ್ಯಯನ ಜನರನ್ನು ಕೆರಳಿಸುವಂಥದಾಗಿದೆ.

ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಪ್ರಕಟವಾಗಿರುವ ಕೆಲವು ಇಂಗ್ಲಿಷ್ ಭಾಷೆಯ ಪುಸ್ತಕಗಳನ್ನು ಸಹ ಇಲ್ಲಿ ಗಮನಿಸಬಹುದು. ಇವುಗಳಲ್ಲಿ ಕೆಲವನ್ನು ಕುರಿತು ಈ ಮೊದಲೇ ಪ್ರಸ್ತಾಪಮಾಡಲಾಗಿದೆ. ಮೈಸೂರು ಸರಕಾರದವರು ಪ್ರಕಟಿಸಿದ Karnataka Through the Ages ಅವುಗಳಲ್ಲಿ ಒಂದು. ಇದೊಂದು ಲೇಖನ ಮಾಲಿಕೆ ಎಂದು ಈ ಮೊದಲೇ ಹೇಳಿದೆ. ಅನೇಕ ಲೇಖಕರ ಲೇಖನಗಳ ಸಂಗ್ರಹವಿದು.

"Early History of the Deccan" ಎಂಬುದು ಆಂಧ್ರಪ್ರದೇಶ ಸರ್ಕಾರದ ಪ್ರಕಟಣೆ. ದಕ್ಷಿಣ ಪ್ರಸ್ಥಭೂಮಿಯ ಇತಿಹಾಸಕ್ಕೆ ಸಂಬಂಧಿಸಿದ ಈ ಗ್ರಂಥದಲ್ಲಿ ಹತ್ತು ಅಧ್ಯಾಯಗಳಿವೆ. ನಾಡಿನ ಹೆಸರಾಂತ ಆರು ಜನ ಲೇಖಕರು–ಪ್ರೊ. ಹೇಮಚಂದ್ರ ರಾಯಚೌಧುರಿ. ಡಾ. ಎ. ಎಸ್. ಅಲ್ಟೇಕರ್. ಪ್ರೊ. ಕೆ. ಎ. ನೀಲಕಂಠಶಾಸ್ತ್ರಿ. ಡಾ. ಎನ್. ವೆಂಕಟರಮಣಯ್ಯ. ಪ್ರೊ. ಗುತ್ತಿ ವೆಂಕಟರಾವ್ ಮತ್ತು ಡಾ. ಜಿ. ಯಾಜ್ದಾನಿ–ಈ ಅಧ್ಯಾಯಗಳನ್ನು ಬರೆದಿದ್ದಾರೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಶಾತವಾಹನ. ರಾಷ್ಟ್ರಕೂಟ. ಬಾದಾಮಿಯ ಹಾಗೂ ಕಲ್ಯಾಣದ ಚಾಲುಕ್ಯ. ಯಾದವರ ಇತಿಹಾಸ ಇಲ್ಲಿದೆ. ಆದರೆ ಈ ಗ್ರಂಥದಲ್ಲಿಯೂ ಹೊಸದಾಗಿ ಏನನ್ನೂ ಹೇಳಿಲ್ಲವೆಂದೇ ಎನ್ನಬೇಕು. ಇದುವರೆಗೆ ತಿಳಿದ ವಿಷಯಗಳನ್ನು ಹೆಚ್ಚು ಚರ್ಚೆಗಳಿಗೆ. ವಿವಾದಗಳಿಗೆ ಎಡೆಕೊಡದಂತೆ ಇಲ್ಲಿ ಕ್ರೋಢೀಕರಿಸಲಾಗಿದ್ದು. ವಿದ್ಯಾರ್ಥಿಗಳಿಗೂ. ಸಂಶೋಧಕರಿಗೂ ಇದೊಂದು ಆನುಷಂಗಿಕ ಆಧಾರ ಗ್ರಂಥವಾಗಿದೆ.

ಡಾ. ನರಸಿಂಹಮೂರ್ತಿಯವರ 'Sevunas of Devagiri' ಮತ್ತು ಡಾ. ರಮೇಶರ 'History of South Kanara'ಗಳನ್ನು ಈ ಮೊದಲೇ ಉಲ್ಲೇಖಿಸಲಾಗಿದೆ. ಸೇವುಣ ಅಥವಾ ದೇವಗಿರಿಯ ಯಾದವರಿಗೆ ಸಂಬಂಧಿಸಿದ ಇನ್ನೊಂದು ಗ್ರಂಥ ಡಾ. ಶ್ರೀನಿವಾಸ ರಿತ್ತಿಯವರ Seunas. ಇದು ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣೆ. ಇದರ ಮುದ್ರಣ ಮುಗಿದಿದ್ದು ಬಿಡುಗಡೆಗೆ ಸಿದ್ಧವಾಗಿದೆ. ಸೇವುಣರ ಇತಿಹಾಸವನ್ನು ಶ್ರೀ ಎ. ವಿ. ವರ್ಮ ಎಂಬುವರೂ ತಮ್ಮ ಯಾದವರ ಚರಿತ್ರೆ ಎಂಬ ಇಂಗ್ಲಿಷ್ ಗ್ರಂಥದಲ್ಲಿ (೧೯೭೦) ನಿರೂಪಿಸಿದ್ದಾರೆ. ಈ ಲೇಖಕರು ಇತ್ತೀಚೆಗೆ ಲಭ್ಯವಾದ ಅನೇಕ ಶಿಲಾಲೇಖಗಳನ್ನು ಅವಗಾಹನೆಗೆ ತಂದುಕೊಂಡಿಲ್ಲ. ಡಾ. ಮೂರ್ತಿಯವರು ಕೊಟ್ಟಿರುವ ಸೇವುಣರ ವಂಶಾವಳಿ ಇತ್ಯಾದಿಗಳಿಗೆ ಸಂಬಂಧಿಸಿದ ಅನೇಕ ವಿವರಗಳಲ್ಲಿನ ಕುಂದುಕೊರತೆಗಳನ್ನು ಡಾ. ರಿತ್ತಿಯವರು ತುಂಬಿಸಿದ್ದಾರೆ.

ಹೊಯ್ಸಳ ವಂಶಕ್ಕೆ ಸಂಬಂಧಿಸಿದಂತೆಯೂ ಮೂರು ಪುಸ್ತಕಗಳಿವೆ. ಒಂದು ೧೯೫೦ರಲ್ಲಿ ಮುಂಬಯಿಯಲ್ಲಿ ಡಾ. ಹೆರಾಸ್‌ರವರು ಆರಂಭಿಸಿದ ಭಾರತೀಯ ಇತಿಹಾಸ ಸಂಶೋಧನ ಸಂಸ್ಥೆಯವರು ಪ್ರಕಟಿಸಿ ದವಿಲಿಯಂ ಕೊಯೆಲೊ (William Coelho)ರವರ Hoysala Vamsa

ಇನ್ನೊಂದು ಲಂಡನ್ನಿನ ಡಂಕನ್ ಡೆರೆಟ್ (Duncan Derrett)ರವರ Hoysalas ಮೂರನೆಯದು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಇದೀಗ ಪ್ರಕಟಿಸಿರುವ Hoysala Dynasty. ಮೊದಲ ಎರಡೂ ಹೊಯ್ಸಳರ ರಾಜಕೀಯ ಚರಿತ್ರೆಗೆ ಹೆಚ್ಚಿನ ಮಟ್ಟಿಗೆ ಸಂಬಂಧಿಸಿವೆ. ಕೊಯೆಲೊರವರು ಅನೇಕ ಶಾಸನಗಳನ್ನು ನೆರವಿಗೆ ತೆಗೆದುಕೊಂಡಿದ್ದಾರೆ. ಆದರೆ ಹೆಚ್ಚಿನ ಮಟ್ಟಿಗೆ ಮೂಲ ಶಾಸನ ಪಾಠಗಳಿಗಿಂತ ಭಾಷಾಂತರಗಳನ್ನೇ ಅವಲಂಬಿಸಿರುವುದರಿಂದ ಕೆಲವು ತಪ್ಪುಗಳಾಗಿವೆ. ಹಲವು ಕಡೆ ಶಾಸನಗಳನ್ನು ಅರ್ಥೈಸುವುದರಲ್ಲಿ ಭಿನ್ನಾಭಿಪ್ರಾಯಗಳಿಗೆ ಆಸ್ಪದವುಂಟಾಗಿದೆ. ಡೆರೆಟ್ ರವರ ಪುಸ್ತಕ ಇಂತಹುವೇ ಆಧಾರಗಳನ್ನವಲಂಬಿಸಿದ್ದರೂ ದುರದೃಷ್ಟದಿಂದ ಪುಸ್ತಕದಲ್ಲಿ ಆ ಆಧಾರಗಳ ಉಲ್ಲೇಖವೇ ಇಲ್ಲ. ಟಿಪ್ಪಣಿಗಳಿಲ್ಲದಿರುವುದರಿಂದ ಇವರ ಅನೇಕ ಹೇಳಿಕೆಗಳು ಹೆಚ್ಚಾಗಿ ಐತಿಹಾಸಿಕ ಕಾದಂಬರಿಗಳಲ್ಲಿರುವಂತೆ ರಂಜನೀಯವಾದ ಊಹೆಗಳಾಗಿವೆ ಎನಿಸುತ್ತದೆ. ೧೯೭೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದವರು ಹೊಯ್ಸಳ ಇತಿಹಾಸಕ್ಕೆ ಸಂಬಂಧಿಸಿದಂತೆ ಒಂದು ಸಮ್ಮೇಳನವನ್ನು ಏರ್ಪಡಿಸಿದ್ದರು. ಅಲ್ಲಿಗೆ ಬಂದಿದ್ದ ವಿದ್ವಾಂಸರು ಓದಿದ ಲೇಖನಗಳನ್ನು ಇತಿಹಾಸದ ಪ್ರಾಧ್ಯಾಪಕರಾದ ಡಾ. ಬಿ. ಷೇಕ್ ಅಲಿಯವರು ಒಟ್ಟುಗೂಡಿಸಿ Hoysala Dynasty ಗ್ರಂಥವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ರಾಜಕೀಯ ಇತಿಹಾಸದೊಂದಿಗೆ, ಹೊಯ್ಸಳರ ಆಡಳಿತ ಪದ್ಧತಿ' ವಾಸ್ತುಶಿಲ್ಪ. ಸಾಹಿತ್ಯ. ಧಾರ್ಮಿಕ ಜೀವನಗಳನ್ನು ಕುರಿತಾದ ಲೇಖನಗಳೂ ಇವೆ.

ಕನ್ನಡ ಸಂಶೋಧನ ಸಂಸ್ಥೆಯವರು ಪ್ರಕಟಿಸಿರುವ 'A History of Karnataka ವನ್ನು ಕುರಿತು ಇಲ್ಲಿ ಯಾವ ಅಭಿಪ್ರಾಯವನ್ನು ನೀಡುವುದೂ ಉಚಿತವಲ್ಲ. ಏಕೆಂದರೆ ಡಾ. ಪಿ ಬಿ. ದೇಸಾಯಿ ಅವರ ಸಂಪಾದಕತ್ವದಲ್ಲಿ ಪ್ರಕಟವಾದ ಈ ಗ್ರಂಥದ ಲೇಖಕರು ಡಾ. ಪಿ. ಬಿ. ದೇಸಾಯಿ. ಡಾ ಬಿ. ಆರ್. ಗೋಪಾಲ್ ಹಾಗೂ ಡಾ. ಶ್ರೀನಿವಾಸ ರಿತ್ತಿಯವರು. ಕೊನೆಯ ಇಬ್ಬರೂ ಸಂಪಾದಿಸಿರುವ ಡಾ. ಪಿ. ಬಿ. ದೇಸಾಯರ ಅಭಿನಂದನಾ ಗ್ರಂಥ Studies in Indian History and Culture ದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಹಲವಾರು ಉತ್ತಮ ಲೇಖನಗಳಿವೆ. ಈಗಷ್ಟೇ ಡಾ. ರಮೇಶ್. ಡಾ. ಗೋಪಾಲ್. ಡಾ. ಗುರುರಾಜಾರಾವ್. ಶ್ರೀ ಕೆ. ಟಿ. ವೀರಪ್ಪ ಮತ್ತು ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿಗಳು ಕೂಡಿ ಸಂಪಾದಿಸಿದ Śrīkaṇṭhikā ಮೈಸೂರಿನ ಖ್ಯಾತ ವಿದ್ವಾಂಸರೂ. ನಿವೃತ್ತ ಇತಿಹಾಸದ ಪ್ರಾಧ್ಯಾಪಕರೂ ಆದ ಡಾ. ಶ್ರೀಕಂಠಶಾಸ್ತ್ರಿಯವರಿಗೆ ಅವರ ಶಿಷ್ಯರೂ. ಅಭಿಮಾನಿಗಳೂ ಸೇರಿ ಅರ್ಪಿಸಿದ ಇನ್ನೊಂದು ಅಭಿನಂದನಾ ಗ್ರಂಥ. ಇದಂತೂ ಕರ್ನಾಟಕದ ಶಿಲ್ಪಕಲೆ. ಶಾಸನಗಳು. ಇತಿಹಾಸ ಭಾಷೆ ಮತ್ತು ಸಾಹಿತ್ಯ. ಧರ್ಮ ಮತ್ತು ತತ್ವಜ್ಞಾನ. ಸಮಾಜ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ಲೇಖನಗಳಿಗೇ ಮೀಸಲಾದ ಗ್ರಂಥ. ಇದರಲ್ಲೂ ಅನೇಕ ತಜ್ಞರ ಉತ್ತಮ ಲೇಖನಗಳಿವೆ. ವಿಜಯನಗರದ ಪತನಾನಂತರದ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಗ್ರಂಥಗಳೂ ಬಂದಿವೆ. ಡಾ. ಜಿ. ಎಂ. ಮುಜಾಮಿರಿ ಅವರ Mysore Maratha Relations in the 17th Century ಮತ್ತು The Resistance of Mysore to the Maratha Expansion (1726-1761) ಎಂಬ ಎರಡು ಗ್ರಂಥಗಳು ಗಮನಾರ್ಹ. ಮೊದಲಿನ ಗ್ರಂಥದಲ್ಲಿ ಮೈಸೂರಿನ ಅರಸರೊಡನೆ ಷಹಜಿ. ಏಕೋಜಿ. ಶಿವಾಜಿ. ಸಂಭಾಜಿ ಮತ್ತು ರಾಜಾರಾಮರು. (೧೬೩೯ರಿಂದ ೧೭೦೦ರವರೆಗೆ) ಹೊಂದಿದ್ದ ಸಂಬಂಧವನ್ನು ವಿವರಿಸಲಾಗಿದೆ. ಎರಡನೆಯ ಗ್ರಂಥ ಮೊದಲನೆಯದು ಮುಗಿದಲ್ಲಿಂದ ಮುಂದುವರಿದಿದೆ. ೧೭೦೭ರಲ್ಲಿ ಔರಂಗಜೇಬನು ಸತ್ತ ಬಳಿಕ ಮೊಘಲರ ಸಾಮ್ರಾಜ್ಯ ಅವನತಿಹೊಂದಿ ಪಶ್ಚಿಮ ಕರಾವಳಿಯಲ್ಲಿ ಮರಾಠರು. ಮೈಸೂರಿನ ಅರಸರು ಪ್ರಾಬಲ್ಯಕ್ಕೆ ಬಂದರು. ಆ ಸಮಯದಲ್ಲಿ ಈ ಎರಡೂ ಬಣಗಳ ವಿರುದ್ಧ ಘರ್ಷಣೆ ಗಳೇರ್ಪಟ್ಟವು. ಆದರಲ್ಲಿಯೂ ಮುಂದುವರಿಯುತ್ತಿದ್ದ ಮರಾಠರನ್ನು ಮೈಸೂರಿನವರು ತಮ್ಮ ಅಸ್ತಿತ್ವಕ್ಕಾಗಿಯಾದರೂ ತಡೆಯಲೇ ಬೇಕಾಯಿತು. ೧೭೨೬ರಿಂದ ೧೭೬೧ರ ವರೆಗಿನ ಈ ಹೋರಾಟಗಳ ನಿರೂಪಣೆಯನ್ನು ಈ ಪುಸ್ತಕದಲ್ಲಿ ಕಾಣುತ್ತೇವೆ. ಇದಕ್ಕಾಗಿ ಅನೇಕ ಅಪ್ರಕಟಿತ ಹಾಗೂ ಪ್ರಕಟಿತ ಸಾಹಿತ್ಯಕೃತಿಗಳ, ಶಾಸನಗಳ ಉಪಯೋಗವನ್ನು ಲೇಖಕರು ಪಡೆದುಕೊಂಡಿದ್ದಾರೆ

೧೭೫೭ರ ಬಳಿಕ ಮೈಸೂರು ಸಂಸ್ಥಾನ ಪೂರ್ವತೀರದಲ್ಲಿ ವ್ಯಾಪಾರದಲ್ಲಿ ತೊಡಗಿದ್ದ ಫ್ರೆಂಚ್ ಹಾಗೂ ಬ್ರಿಟಿಷ್ ಕಂಪನಿಗಳೊಡನೆ ಸಂಬಂಧ ಹೊಂದಬೇಕಾಯಿತು. ಅವರಿಬ್ಬರೂ ವ್ಯಾಪಾರಕ್ಕೆಂದೇ ಬಂದವರಾದರೂ ಕ್ರಮೇಣ ಇಲ್ಲಿನ ಪ್ರದೇಶಗಳನ್ನು ತಮ್ಮ ವಸಾಹತುಗಳನ್ನಾಗಿ ಮಾಡಿಕೊಳ್ಳಲು ಯತ್ನಿಸಿದರು. ಇಂತಹ ಸಮಯದಲ್ಲಿ ೧೭೬೧ರಲ್ಲಿ ಹೈದರ್‌ಅಲಿಯು ಮೈಸೂರಿನ ಸರ್ವಾಧಿಕಾರಿಯಾದನು. ಬ್ರಿಟಿಷರನ್ನು ಹೊರದೂಡಿಸುವುದು ಇವರ ಧ್ಯೇಯಗಳಲ್ಲೊಂದಾಗಿತ್ತು. ಅದಕ್ಕಾಗಿ ಹೋಗಿದ ಈತನು ಬ್ರಿಟಿಷರೊಡನೆ ಎರಡು ಬಾರಿ ಯುದ್ಧ ಹೂಡಿ, ಸೋತನಾದರೂ ಇತಿಹಾಸದಲ್ಲಿ ಅಮರನಾಗಿದ್ದಾನೆ. ಡಾ. ಬಿ. ಷೇಕ್ ಅಲಿಯವರ British Relations with Hyder Ali ಎಂಬ ಗ್ರಂಥದಲ್ಲಿ ಈ ಇಬ್ಬರು ರಾಜ್ಯಗಳ ಸಂಬಂಧವನ್ನು ಅಧಿಕಾರಪೂರ್ಣವಾಗಿ ವಿವರಿಸಲಾಗಿದೆ. ಲೇಖಕರು ವಿಷಯಗಳ ಸಂಗ್ರಹಣೆ ವಿಶ್ಲೇಷಣೆಗಳಲ್ಲಿ ತೋರಿರುವ ಜಾಣ್ಮೆ, ಅವರ ಶೈಲಿ ಇವುಗಳನ್ನು ವಿಮರ್ಶಕರು ಮೆಚ್ಚಿದ್ದಾರೆ. ಇತ್ತೀಚೆಗೆ ಪ್ರಕಟವಾಗಿರುವ ಆಂಗ್ಲ ಭಾಷೆಯ ಇತಿಹಾಸ ಗ್ರಂಥಗಳಲ್ಲಿ ಇದೊಂದು ಉತ್ತಮ ಗ್ರಂಥ.

ಈ ಸಮೀಕ್ಷೆಯಲ್ಲಿ ಇನ್ನೂ ಹಲವಾರು ಪುಸ್ತಕಗಳನ್ನು ಸೇರಿಸಲಾಗಿಲ್ಲ. ಉದಾಹರಣೆಗೆ ಇಂಡಿಯಾ ಬುಕ್ ಹೌಸ್‌ನವರು, ಕನ್ನಡನಾಡು, ಇತಿಹಾಸ, ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಅನೇಕ ಸಣ್ಣ ಪುಸ್ತಕಗಳನ್ನು ವಿದ್ಯಾರ್ಥಿಗಳ ವಾಚನಾಭಿರುಚಿಯನ್ನು ಹೆಚ್ಚಿಸಲು, ಅವರಿಗೆ ನಮ್ಮ ನಾಡು-ನುಡಿಗಳ ಪರಿಚಯ ಮಾಡಿಕೊಡಲು ಪ್ರಕಟಿಸಿದ್ದಾರೆ. ಇವುಗಳನ್ನು ಇಲ್ಲಿ ಗಮನಕ್ಕೆ ತೆಗೆದುಕೊಂಡಿಲ್ಲ. ಹಾಗೆಯೇ ಇನ್ನೂ ಅನೇಕ ಪುಸ್ತಕಗಳು ನನ್ನ ತಿಳಿದೋ ತಿಳಿಯದೆಯೋ ಇಲ್ಲಿ ಉಲ್ಲೇಖವಾಗಿಲ್ಲ.

ಏನೇ ಇರಲಿ ಈ ಮೇಲಿನ ಸಮೀಕ್ಷೆಯಿಂದ ಒಂದೆರಡು ಅಂಶಗಳನ್ನು ನಮ್ಮ ಅನುಮಾನಗಳಾಗಿ ಹೇಳಬಹುದು. ಮೊದಲನೆಯದಾಗಿ, ಗ್ರಂಥಗಳು ಸಂಖ್ಯೆಯಲ್ಲಿ, ಗಾತ್ರದಲ್ಲಿ ಹಿರಿದಾದರೂ ಅವುಗಳ ಉತ್ಕೃಷ್ಟತೆಯ ದೃಷ್ಟಿಯಿಂದ ಒಳ್ಳೆಯ ಪುಸ್ತಕಗಳ ಅಭಾವ ಇನ್ನೂ ಇದೆ ಎಂದು ಹೇಳಬೇಕು. ಕರ್ನಾಟಕದ ಸಂಪೂರ್ಣ ಇತಿಹಾಸವನ್ನು ಸಾಧಾರವಾಗಿ, ಉತ್ತಮರೀತಿಯಲ್ಲಿ ನಿರೂಪಿಸುವ ಗ್ರಂಥ–ಕನ್ನಡದಲ್ಲಿ–ಇನ್ನೂ ಬಂದಿಲ್ಲ. ಎರಡನೆಯದಾಗಿ ಕರ್ನಾಟಕದ ಅರಸುಮನೆತನಗಳ–ವಿವಿಧ ಭಾಗಗಳ ಇತಿಹಾಸ ನಮಗಿನ್ನೂ ಹೆಚ್ಚಾಗಿ ತಿಳಿದಿಲ್ಲ. ಅಂತಹ ಗ್ರಂಥಗಳ ಕೊರತೆ ಇದೆ. ಈ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸ ಬಹಳವಿದೆ. ವಿದ್ಯಾರ್ಥಿಗಳು, ಲೇಖಕರು, ಸಂಶೋಧಕರು ಇತ್ತ ತಮ್ಮ ಗಮನವನ್ನು ಹರಿಸಬೇಕಾಗಿದೆ.

ಪಿ. ಎನ್. ಶ್ರೀನಿವಾಸಾಚಾರಿ

ತಕ್ಷಶಿಲ ಮಹಾವಿದ್ಯಾಲಯ

ಪ್ರಾಚೀನ ಭಾರತದಲ್ಲಿ ನಿರಂತರ ದೀಕ್ಷಾಬದ್ಧ ಅಧ್ಯಯನದಿಂದ ವಿಶೇಷ ಜ್ಞಾನವನ್ನು ಪಡೆದುಕೊಂಡ ಉದ್ದಾಮ ಪಂಡಿತರು ಜ್ಞಾನಪ್ರಸಾರಕ್ಕಾಗಿ ಅನೇಕ ವಿದ್ಯಾಕೇಂದ್ರಗಳನ್ನು ಸ್ಥಾಪಿಸಿದರು. ಕಾಲಕ್ರಮದಲ್ಲಿ ಬೃಹದಾಕಾರವಾಗಿ ಬೆಳೆದ ಈ ವಿದ್ಯಾಸಂಸ್ಥೆಗಳು ವಿಶ್ವವಿಖ್ಯಾತವಾಗಿ ನಮ್ಮ ಸಂಸ್ಕೃತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣವಾದವು. ಈ ವಿದ್ಯಾಲಯಗಳಲ್ಲಿ ಧಾರ್ಮಿಕಗ್ರಂಥಗಳ ಅಧ್ಯಯನದೊಂದಿಗೆ, ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳಲ್ಲಿಯೂ ಬೋಧನೆ ಮಾಡಲಾಗುತ್ತಿತ್ತು.

ಇಂತಹ ವಿದ್ಯಾಕೇಂದ್ರಗಳಲ್ಲಿ ತಕ್ಷಶಿಲ ಮಹಾವಿದ್ಯಾಲಯವು ವಿಶಿಷ್ಟ ಸ್ಥಾನವನ್ನು ಪಡೆದಿದೆ. ತಕ್ಷಶಿಲ ನಗರ ಪ್ರದೇಶವು ಇಂದಿನ ರಾವಲ್ಪಿಂಡಿಯ ವಾಯುವ್ಯ ದಿಕ್ಕಿಗೆ ೩೦ ಮೈಲಿ ದೂರದಲ್ಲಿತ್ತು.[1] ಸುಮಾರು ಕ್ರಿ.ಪೂ. ೬ನೆಯ ಶತಮಾನದಿಂದ ಕ್ರಿ.ಶ. ೫ನೆಯ ಶತಮಾನದ ಮಧ್ಯಕಾಲದವರೆಗೂ ಭಾರತದ ರಾಜಕೀಯ ಇತಿಹಾಸದ ಪ್ರಮುಖ ಕೇಂದ್ರವಾಗಿದ್ದ ತಕ್ಷಶಿಲ ನಗರವು ಸಾಂಸ್ಕೃತಿಕ ಕೇಂದ್ರವೂ ವಿಶ್ವವಿಖ್ಯಾತವಾದ ವಿದ್ಯಾಕೇಂದ್ರವೂ ಆಗಿತ್ತು. ಪುರಾತತ್ವ ಸಂಶೋಧನೆಗಳಿಂದ ಬೆಳಕಿಗೆ ಬಂದಿರುವ ನಗರದ ಜೀವಂತ ಅವಶೇಷಗಳು ಮತ್ತು ಬೌದ್ಧ ಸ್ತೂಪಗಳು ಪ್ರಾಚೀನ ತಕ್ಷಶಿಲ ನಗರದ ವೈಭವದ ಇತಿಹಾಸಕ್ಕೆ ಜ್ವಲಂತ ನಿದರ್ಶನಗಳಾಗಿವೆ. ಈ ಪ್ರದೇಶದಲ್ಲಿ ನಡೆಸಿರುವ ಪುರಾತತ್ತ್ವ ಸಂಶೋಧನೆಗಳಿಂದ ಬಿರ್‌ಮೌಂಡ್, ಸಿರ್‌ಕಾಪ್ ಮತ್ತು ಸಿರ್‌ಸುಖ್‌ಗಳಲ್ಲಿನ ಅವಶೇಷಗಳು ಮತ್ತು ಅನೇಕ ಬೌದ್ಧಸ್ತೂಪಗಳು ಬೆಳಕಿಗೆ ಬಂದಿವೆ. ಈ ನಗರದ ಅವಶೇಷಗಳು, ಸುಮಾರು ಮೂರು ಮೈಲಿಗಳಷ್ಟು ಉತ್ತರ ದಕ್ಷಿಣವಾಗಿಯೂ ಮತ್ತು ಎರಡು ಮೈಲಿಗಳಷ್ಟು ಪೂರ್ವ ಪಶ್ಚಿಮವಾಗಿಯೂ ಹರಡಿಕೊಂಡಿವೆ.[2] ಅಂತರರಾಷ್ಟ್ರೀಯ ವಾಣಿಜ್ಯಕ್ಕೆ ಸಹಕಾರಿಯಾಗಿದ್ದ ಮೂರು ರಾಜಮಾರ್ಗಗಳ ಸಂಗಮಸ್ಥಾನವಾಗಿದ್ದ ತಕ್ಷಶಿಲ ನಗರವು, ಭರತಖಂಡದ ವಾಯುವ್ಯಗಡಿಯ ದ್ವಾರದಲ್ಲಿದ್ದು ವೈವಿಧ್ಯಪೂರ್ಣವಾದ ಸಂಸ್ಕೃತಿಯ ಬೆಳವಣಿಗೆಗೆ ಅನುಕೂಲಕರವಾಗಿತ್ತು. ಈ ವಾಣಿಜ್ಯದಿಂದ ತಕ್ಷಶಿಲ ನಗರದ ಸಂಪತ್ತು ಮತ್ತು ಖ್ಯಾತಿ ವೈಭವದ ಪರಾಕಾಷ್ಠೆಯನ್ನು ಮುಟ್ಟಿದವಾದರೂ, ಮುಂದೆ ರಾಜಕೀಯಕಾರಣಗಳಿಂದ ವಿದೇಶವಾಣಿಜ್ಯವು ಸ್ಥಗಿತಗೊಂಡಾಗ, ಈ ನಗರದ ಅವನತಿಯೂ ಅನಿವಾರ್ಯವಾಯಿತು.

ತಕ್ಷಶಿಲ ನಗರದ ಪ್ರಾಚೀನ ಇತಿಹಾಸದ ಬಗ್ಗೆ ಬೌದ್ಧಗ್ರಂಥಗಳು ವಿಶೇಷ ಬೆಳಕನ್ನು ಚೆಲ್ಲುತ್ತವೆ. ಅಲೆಕ್ಸಾಂಡರ್‌ನೊಡನೆ ಭಾರತಕ್ಕೆ ಆಗಮಿಸಿದ ಗ್ರೀಕ್ ಇತಿಹಾಸಕಾರರು ತಕ್ಷಶಿಲ ನಗರಪ್ರದೇಶವನ್ನು ಕುರಿತು ಒಮ್ಮತದ ಅಭಿಪ್ರಾಯವನ್ನು ನೀಡಿದ್ದಾರೆ.[3] ಗ್ರೀಕ್ ಇತಿಹಾಸಕಾರ ಅರಿಯನ್ ತಿಳಿಸುವಂತೆ ತಕ್ಷಶಿಲೆಯು ಜನಸಂಪದ್ಯುಕ್ತವಾಗಿದ್ದು ಸಿಂಧೂ ಮತ್ತು ಜೀಲಂ ನದಿಗಳ ನಡುವಣ ಅತಿದೊಡ್ಡ

[1] Sir John Marshall : *A Guide to Taxila*, IV Edition 1960, p.1

[2] Alexander Cunningham : *Ancient Geography of India*. p. 94.

[3] *Ibid.*, p. 89.

ನಗರವಾಗಿತ್ತು. ಈ ಪ್ರದೇಶವು ಫಲವತ್ತಾದ ಭೂಮಿಯಿಂದ ಕೂಡಿತ್ತೆಂದು ಸ್ಟ್ರ್ಯಾಬೋ ಬರೆದಿದ್ದಾನೆ.[4] ಚೀನಾ ಪ್ರವಾಸಿ ಹ್ಯೂಯನ್‌ತ್ಸಾಂಗನು ಇದಕ್ಕೆ ಪೂರಕವಾದ ಮಾಹಿತಿ ನೀಡಿದ್ದಾನೆ.[5] ತಕ್ಷಶಿಲ ನಗರವು ವಿದ್ಯಾಸಂಬಂಧವಾದ ಚರ್ಚೆ ಮತ್ತು ಪಾಠ ಪ್ರವಚನಗಳ ಮಹಾಕೇಂದ್ರವಾಗಿದ್ದಿತೆಂದು ಬೌದ್ಧರ ಜಾತಕ ಕಥೆಗಳಿಂದ ತಿಳಿಯುತ್ತದೆ.

ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ತಕ್ಷಶಿಲ ನಗರವನ್ನು ಕುರಿತು ಮಹಾಕಾವ್ಯಗಳಲ್ಲಿಯೂ ಉಲ್ಲೇಖವಿದೆ. ಶ್ರೀರಾಮನ ತಮ್ಮನಾದ ಭರತನು, ಪುಷ್ಕಲಾವತಿ ಮತ್ತು ತಕ್ಷಶಿಲಗಳನ್ನು ರಾಜಧಾನಿಗಳನ್ನಾಗಿ ಮಾಡಿ, ತನ್ನ ಇಬ್ಬರು ಮಕ್ಕಳನ್ನು ರಾಜರನ್ನಾಗಿ ನೇಮಿಸಿದನೆಂದು ರಾಮಾಯಣದಿಂದ ತಿಳಿಯುತ್ತದೆ. ಮಹಾಭಾರತದಲ್ಲಿ, ಹಸ್ತಿನಾವತಿಯ ರಾಜನಾದ ಜನಮೇಜಯನು ತಕ್ಷಶಿಲವನ್ನು ವಶಪಡಿಸಿಕೊಂಡು, ಅಲ್ಲಿ ಸರ್ಪಯಾಗವನ್ನು ಆಚರಿಸಿದನೆಂದು ಹೇಳಿದೆ.[6] ಜೈನಪುರಾಣಗಳಲ್ಲಿ ಪ್ರಥಮ ತೀರ್ಥಂಕರನಾದ ವೃಷಭದೇವನು ಲಕ್ಷಾಂತರವರ್ಷಗಳಲ್ಲಿ ಪೂರ್ವದ ತಕ್ಷಶಿಲನಗರಕ್ಕೆ ಭೇಟಿ ನೀಡಿದ್ದನೆಂಬ ಕಥೆಯಿದೆ. ಬೌದ್ಧ ಸಾಹಿತ್ಯದಿಂದ, ವಿಶೇಷವಾಗಿ ಜಾತಕ ಕಥೆಗಳಿಂದ ತಿಳಿಯುವಂತೆ ತಕ್ಷಶಿಲವು ಜಗತ್ಪ್ರಸಿದ್ಧ ಅಧ್ಯಾಪಕವೃಂದದಿಂದ ಕೂಡಿದ್ದ ವಿಶ್ವವಿಖ್ಯಾತ ವಿದ್ಯಾಕೇಂದ್ರವಾಗಿದ್ದಿತು. ಆದರೆ ಮೇಲ್ಕಂಡ ಹಲವು ಪೌರಾಣಿಕವಾದ ಹೇಳಿಕೆಗಳನ್ನು ಸಮರ್ಥಿಸುವ ನಿರ್ದಿಷ್ಟ ಸಾಕ್ಷ್ಯಾಧಾರಗಳು ದೊರೆತಿಲ್ಲ. ಪುರಾತತ್ತ್ವ ಸಂಶೋಧನೆಗಳಿಂದ ಬೆಳಕಿಗೆ ಬಂದಿರುವ ಆಧಾರಗಳಿಂದ, ಐತಿಹಾಸಿಕವಾಗಿ ತಕ್ಷಶಿಲವು ಕ್ರಿ.ಪೂ. ೬ನೆಯ ಶತಮಾನದಷ್ಟು ಪ್ರಾಚೀನತೆಯನ್ನು ಪಡೆಯುತ್ತದೆ. ಸುಮಾರು ಕ್ರಿ.ಪೂ. ೪ನೆಯ ಶತಮಾನದಲ್ಲಿ ರಚಿತವಾಗಿರಬಹುದಾದ ಜಾತಕ ಕಥೆಗಳಲ್ಲಿ ಅದಕ್ಕೂ ಹಿಂದಿನ ಕಾಲದ ಸಾಮಾಜಿಕ ಸ್ಥಿತಿಗತಿಗಳನ್ನು ಪ್ರತಿಬಿಂಬಿಸಿರಬಹುದಾದ ಸಾಧ್ಯತೆಯಿದೆ.[7]

ತಕ್ಷಶಿಲವು ಪ್ರಮುಖ ವಿದ್ಯಾಕೇಂದ್ರವಾಗಿದ್ದು ಧಾರ್ಮಿಕ ಶಾಸ್ತ್ರಗಳ ಅಧ್ಯಯನ, ವಿಜ್ಞಾನ, ಕಲಾ ಕೌಶಲ ಮುಂತಾದ ಹದಿನೆಂಟು ವಿದ್ಯೆಗಳ ಅಭ್ಯಾಸಕ್ಕಾಗಿ ಭರತ ಖಂಡದ ನಾನಾ ಕಡೆಗಳಿಂದ ವಿದ್ಯಾರ್ಥಿಗಳು ಇಲ್ಲಿ ಪ್ರವೇಶವನು ಪಡೆಯುತ್ತಿದ್ದರು. ಪ್ರತಿ ವಿಷಯಕ್ಕೂ ಭಿನ್ನ ಭಿನ್ನ ವಿದ್ಯಾಲಯಗಳೂ ಬೇರೆ ಬೇರೆ ಅಧ್ಯಾಪಕರೂ ಇರುತ್ತಿದ್ದರು. ಸುಪ್ರಸಿದ್ಧ ವೈಯಾಕರಣಿಯಾದ ಪಾಣಿನಿಯೂ, ರಾಜನೀತಿ ಕೋವಿದನಾದ ಚಾಣಕ್ಯನೂ ತಮ್ಮ ವಿದ್ಯಾಭ್ಯಾಸವನ್ನು ತಕ್ಷಶಿಲ ವಿದ್ಯಾಲಯದಲ್ಲಿ ಪಡೆದರು. ಮಗಧರಾಜ್ಯದ ದೊರೆ ಬಿಂಬಸಾರನ ರಾಜವೈದ್ಯನೂ, ಬುದ್ಧನ ಪ್ರಿಯಮಿತ್ರನೂ, ಬೌದ್ಧ ಮತಾವಲಂಬಿಯೂ ಆಗಿದ್ದ ಜೀವಕನು ತಕ್ಷಶಿಲದಲ್ಲಿ ಚಿಕಿತ್ಸಾಶಾಸ್ತ್ರದ ಅಧ್ಯಯನ ಮಾಡಿದ.

ತಕ್ಷಶಿಲ ಮಹಾವಿದ್ಯಾಲಯದ ಅಧ್ಯಾಪಕರು ಆಳವಾದ ಪಾಂಡಿತ್ಯದಿಂದಲೂ, ಬಹುಮುಖ ಪ್ರತಿಭೆಯಿಂದಲೂ, ಕ್ರಮಬದ್ಧವಾದ ಶಿಸ್ತು ಸಂಯಮಗಳಿಂದಲೂ ಕೂಡಿದ್ದು ಜ್ಞಾನ ಪ್ರಸಾರ ದೀಕ್ಷೆಯನ್ನು ತೆಗೆದುಕೊಂಡಿದ್ದರು. ಭರತಖಂಡದ ನಾನಾ ಮೂಲೆಗಳಿಂದ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ತಕ್ಷಶಿಲೆಗೆ ಆಗಮಿಸುತ್ತಿದ್ದರು. ವಾರಾಣಸಿ ರಾಜಗೃಹ, ಕೋಸಲ, ಹಾಗೂ ಮಧ್ಯ ಮತ್ತು ಉತ್ತರ ಭಾರತದ ಅನೇಕ ರಾಜ್ಯಗಳಿಂದ ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ತಕ್ಷಶಿಲೆಗೆ ಬರುತ್ತಿದ್ದರೆಂದು ಕಥೆಗಳಿಂದ ತಿಳಿಯುತ್ತವೆ.[8] ತಕ್ಷಶಿಲ ಮಹಾವಿದ್ಯಾಲಯವು ಅನೇಕ ಸಣ್ಣಪುಟ್ಟ ವಿದ್ಯಾಲಯಗಳ ವ್ಯಾಪ್ತಿಯನ್ನು ಪಡೆದಿದ್ದು, ಅದರ ಜ್ಞಾನಪ್ರಭೆಯ ಕಿರಣಗಳು ಭರತಖಂಡದಾದ್ಯಂತ ಹರಡಿ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ರೂಪಿತವಾಗಿತ್ತು.

---

[4] R. C. Majumdar : *The Classical Accounts of India*, p. 257.

[5] Cunningham : *op. cit.*, p. 92-93.

[6] Sir John Marshall *op. cit.*, p. 10.

[7] Stuart Piggott : *Some Ancient Cities of India*, p. 22.

[8] Radha Kumud Mookerji : *Ancient Indian Education*, p.478.

ಈ ಕಾಲದಲ್ಲಿ ತಮ್ಮ ಮಕ್ಕಳ ಭವ್ಯ ಭವಿಷ್ಯದ ಕಡೆ ವಿಶೇಷ ಗಮನ ನೀಡುತ್ತಿದ್ದ ಪೋಷಕರು, ಅವರನ್ನು ವಿದ್ಯಾಭ್ಯಾಸಕ್ಕಾಗಿ ಸಾವಿರಾರು ಮೈಲುಗಳ ದೂರ ಕಳುಹಿಸುವ ಮನೋಭಾವದವರಾಗಿದ್ದರು. ಸಾಮಾನ್ಯವಾಗಿ ವೈದ್ಯಶಾಸ್ತ್ರದ ವಿದ್ಯಾರ್ಥಿಗಳು ತಕ್ಷಶಿಲೆಯಲ್ಲಿ ಹಲವಾರು ವರ್ಷಗಳು ಅಭ್ಯಾಸ ಮಾಡಬೇಕಾಗಿದ್ದಿತು. ಜೀವಕನು ಏಳು ವರ್ಷಗಳ ಕಾಲ ವೈದ್ಯಶಾಸ್ತ್ರವನ್ನು ತಕ್ಷಶಿಲೆಯಲ್ಲಿ ವ್ಯಾಸಂಗ ಮಾಡಿ ಸ್ವಗೃಹಕ್ಕೆ ಬಂದ ವೃತ್ತಾಂತ ಜಾತಕ ಕಥೆಯಲ್ಲಿದೆ.

ತಕ್ಷಶಿಲೆಯಲ್ಲಿ ಅಧ್ಯಯನವನ್ನು ಮಾಡುತ್ತಿದ್ದ ವಿದ್ಯಾರ್ಥಿಗಳು ಸಾಮಾನ್ಯವಾಗಿ ತಮ್ಮ ವ್ಯಾಸಂಗಶುಲ್ಕವನ್ನು ಮುಂಗಡವಾಗಿ ಸಂದಾಯ ಮಾಡುತ್ತಿದ್ದರು. ಈ ವಿದ್ಯಾಲಯದಲ್ಲಿ ಒಂದು ಸಾವಿರ ಚಿನ್ನದ ನಾಣ್ಯಗಳ ನಿರ್ದಿಷ್ಟ ಮೊತ್ತವನ್ನು ವ್ಯಾಸಂಗಶುಲ್ಕವಾಗಿ ನಿಗದಿ ಮಾಡಿದ್ದಂತೆ ತೋರುತ್ತದೆ. ಆದರೆ ಬಡ ವಿದ್ಯಾರ್ಥಿಗಳು ಗುರುಸೇವೆ ಮಾಡುವುದರ ಮೂಲಕ ವಿದ್ಯಾಶುಲ್ಕದ ಋಣಪರಿಹಾರ ಮಾಡಬಹುದಾಗಿತ್ತು. ಹಲವು ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸ ಮುಗಿದ ನಂತರ ಗುರುಕಾಣಿಕೆಯನ್ನು ನೀಡುತ್ತಿದ್ದರು. ಶ್ರೀಮಂತ ಕುಟುಂಬದವರು ಬಡ ವಿದ್ಯಾರ್ಥಿಗಳ ಉಚಿತ ವಿದ್ಯಾಭ್ಯಾಸಕ್ಕಾಗಿ ಉದಾರ ದಾನಧರ್ಮಗಳನ್ನು ಮಾಡುತ್ತಿದ್ದರು. ಪರೋಪಕಾರಿಗಳಾದ ಶ್ರೀಮಂತರು ಅಧ್ಯಾಪಕವರ್ಗವನ್ನೂ ವಿದ್ಯಾರ್ಥಿವೃಂದವನ್ನೂ ಭೋಜನಕೂಟಗಳಿಗೆ ಆಹ್ವಾನಿಸುತ್ತಿದ್ದರು. ಅನೇಕ ವಿದ್ಯಾರ್ಥಿಗಳಿಗೆ. ತಮ್ಮ ತಮ್ಮ ರಾಜ್ಯಗಳಿಂದ ವಿದ್ಯಾರ್ಥಿ ವೇತನವು ದೊರಕುತ್ತಿತ್ತು. ಇಂತಹ ವಿದ್ಯಾರ್ಥಿಗಳಲ್ಲಿ ಬಹುಮಂದಿ ಆಯಾ ರಾಜ್ಯದ ರಾಜಕುಮಾರರ ಸಂಗಾತಿಗಳಾಗಿ ತಕ್ಷಶಿಲೆಗೆ ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದರು. ವಾರಾಣಸಿ, ರಾಜಗೃಹ ಮುಂತಾದ ರಾಜ್ಯಗಳ ರಾಜಕುಮಾರರೊಂದಿಗೆ ಅವರ ಗೆಳೆಯರೂ ತಕ್ಷಶಿಲ ವಿದ್ಯಾಲಯವನ್ನು ಸೇರಿದ್ದರು. ಬಿಲ್ಲುವಿದ್ಯೆಯಲ್ಲಿ ವಿಶೇಷ ಪ್ರಾವೀಣ್ಯವನ್ನು ಸಾಧಿಸಲು ಅನೇಕ ರಾಜ್ಯಗಳಿಂದ ವಿದ್ಯಾರ್ಥಿಗಳು ಈ ವಿದ್ಯಾಲಯಕ್ಕೆ ಕಳುಹಿಸಲ್ಪಡುತ್ತಿದ್ದರು.

ಈ ವಿದ್ಯಾಲಯದ ಗುರುಗಳು ವ್ಯಾಸಂಗ ಶುಲ್ಕವನ್ನು ಸ್ವೀಕರಿಸಿ, ವಿದ್ಯಾಪೀಠದ ಯಜಮಾನ್ಯವನ್ನು ನಡೆಸುವ ವ್ಯಾಪಾರೀ ಮನೋಭಾವದವರಾಗಿರಲಿಲ್ಲ. ಅವರು ವಿದ್ಯಾರ್ಥಿಗಳ ವಸತಿ ಸೌಕರ್ಯಗಳಿಗಾಗಿ ಶುಲ್ಕವನ್ನು ಪಡೆಯುತ್ತಿದ್ದರು. ಎಲ್ಲಾ ವಿದ್ಯಾರ್ಥಿಗಳೂ ಅಧ್ಯಾಪಕರ ಬಳಿ ಉಳಿದು, ಅಧ್ಯಯನ ಮಾಡಬೇಕೆಂಬ ಕಡ್ಡಾಯವಿರಲಿಲ್ಲ. ಕೆಲವು ವಿದ್ಯಾರ್ಥಿಗಳು ತಮ್ಮ ಸ್ವಂತ ವಸತಿಗಳನ್ನು ಏರ್ಪಡಿಸಿಕೊಂಡಿದ್ದರು. ವಾರಾಣಸಿಯ ರಾಜಕುಮಾರ ಜುನಾ ಸ್ವಂತ ವಸತಿ ಏರ್ಪಡಿಸಿಕೊಂಡಿದ್ದು, ಪಾಠಪ್ರವಚನಗಳ ನಂತರ ಮನೆಗೆ ಹಿಂತಿರುಗುತ್ತಿದ್ದ. ಗೃಹಸ್ಥರಾದ ಅನೇಕ ವಿದ್ಯಾರ್ಥಿಗಳು ತಕ್ಷಶಿಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಬ್ರಹ್ಮಚರ್ಯವು ವ್ಯಾಸಂಗಕ್ಕೆ ಕಡ್ಡಾಯವಿದ್ದಂತೆ ತೋರುವುದಿಲ್ಲ. ವೇದಾಧ್ಯಯನ ಮುಗಿಸಿದ್ದ ವಿವಾಹಿತ ಬ್ರಾಹ್ಮಣ ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದ ನಿದರ್ಶನಗಳಿವೆ. ವಿವಾಹಿತ ವಿದ್ಯಾರ್ಥಿಗಳು ಕ್ರಮಬದ್ಧವಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತಿರಲಿಲ್ಲವೆಂದು ಜಾತಕಕಥೆಯಲ್ಲಿ ಬರುವ ಹಲವಾರು ಘಟನೆಗಳಿಂದ ಇದು ತಿಳಿದು ಬರುತ್ತದೆ.

ಪ್ರತಿಯೊಬ್ಬ ಅಧ್ಯಾಪಕರು ಕನಿಷ್ಠ ೫೦೦ ಜನ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದರು. ಸಮಾಜದ ವಿವಿಧ ಜಾತಿ. ವರ್ಗ ಮತ್ತು ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ತಕ್ಷಶಿಲೆ ವಿದ್ಯಾಲಯದಲ್ಲಿ ಪ್ರವೇಶವಿತ್ತು. ಇವರಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರ ಸಂಖ್ಯೆ ಅಧಿಕವಾಗಿತ್ತು. ವೈಶ್ಯ. ಬೆಸ್ತ. ದರ್ಜಿ ಮುಂತಾದ ವರ್ಗದವರೂ ಇಲ್ಲಿ ಓದುತ್ತಿದ್ದರು.[9] ಚಂಡಾಲರಿಗೆ ಈ ವಿದ್ಯಾಲಯದಲ್ಲಿ ಕಡ್ಡಾಯವಾಗಿ ಪ್ರವೇಶವಿರಲಿಲ್ಲ. ಇದಕ್ಕೆ ನಿದರ್ಶನ ಜಾತಕಕಥೆಯಲ್ಲಿ ಕಂಡುಬರುತ್ತದೆ. ಉಜ್ಜಯನಿಯ ಇಬ್ಬರು ಚಂಡಾಲ ಯುವಕರು ತಮ್ಮ ಕುಲಕ್ಕೆ ಸಮಾಜದಲ್ಲಿರುವ ಕೀಳು ಸ್ಥಾನಮಾನಗಳಿಂದ ಜಿಗುಪ್ಸೆಗೊಂಡು, ತಮ್ಮ ಜಾತಿಯನ್ನು ರಹಸ್ಯವಾಗಿಟ್ಟು ತಕ್ಷಶಿಲೆಯಲ್ಲಿ ವಿದ್ಯಾಭ್ಯಾಸಕ್ಕೆ ಸೇರಿಕೊಂಡರು. ಉಳಿದ ಎಲ್ಲಾ

[9] *The Age of Imperial Unity*, Bharatiya Vidya Bhavan's series, Vol II.

ವರ್ಗಗಳ ವಿದ್ಯಾರ್ಥಿಗಳಂತೆ ಅವರೂ ನಿಷ್ಠೆಯಿಂದ ಅಧ್ಯಯನ ಮಾಡುತ್ತಿದ್ದರು. ಆದರೆ ಒಂದು ದಿನ ಊಟದ ಸಮಯದಲ್ಲಿ ಅವರು ಚಂಡಾಲರೆಂಬುದು ಅವರ ಭಾಷೆಯಿಂದ ಬಯಲಾಗಿ ಅವರನ್ನು ವಿದ್ಯಾಲಯದಿಂದ ಬಹಿಷ್ಕರಿಸಲಾಯಿತು.[10]

ವಿವಿಧ ವರ್ಗಗಳಿಂದ ಬಂದ ವಿದ್ಯಾರ್ಥಿಗಳು ತಮ್ಮ ಇಷ್ಟಾನುಸಾರವಾಗಿ ಅಧ್ಯಯನ ವಿಷಯಗಳನ್ನು ಆರಿಸಿಕೊಳ್ಳಬಹುದಾಗಿತ್ತು. ವಿಶೇಷ ಅಧ್ಯಯನಕ್ಕೆ ಆರಿಸಕೊಳ್ಳಬೇಕಾದ ವಿಷಯಗಳಲ್ಲಿ ವಿದ್ಯಾರ್ಥಿಗಳು ಸಂಪೂರ್ಣ ಸ್ವಾತಂತ್ರ್ಯ ಪಡೆದಿದ್ದರು. ಕ್ರಮಬದ್ಧ ಸರಳಜೀವನ, ಶಿಸ್ತು, ಸಂಯಮ ಮತ್ತು ನಿಷ್ಠೆಯಿಂದ ಕೂಡಿದ ಅಧ್ಯಯನ ಉತ್ತಮ ವಿದ್ಯಾರ್ಥಿಗಳ ಲಕ್ಷಣಗಳಾಗಿದ್ದವು. ವಿದ್ಯಾರ್ಥಿಗಳು ಸರಳವಾದ ಆಹಾರವನ್ನು ಸೇವಿಸುತ್ತಿದ್ದರು. ನಗರದ ನಾಗರಿಕ ಕುಟುಂಬದವರು ಆಗಾಗ್ಗೆ ವಿದ್ಯಾರ್ಥಿಗಳನ್ನು ಸ್ವಾಗತಿಸಿ ಕಬ್ಬು, ಮೊಸರು, ಹಾಲು ಮುಂತಾದ ಆಹಾರಗಳನ್ನು ಕೊಟ್ಟು ಸತ್ಕರಿಸುತ್ತಿದ್ದರು. ವಿದ್ಯಾರ್ಥಿಗಳ ಶಿಸ್ತಿನ ಬಗ್ಗೆ ವಿಶೇಷ ಗಮನ ನೀಡಲಾಗಿತ್ತು. ಗುರುಗಳ ಅಪ್ಪಣೆಯಿಲ್ಲದೆ ವಿದ್ಯಾರ್ಥಿಗಳು ನದಿಸ್ನಾನಕ್ಕೂ ಸಹ ಹೋಗಲು ಸಾಧ್ಯವಿರಲಿಲ್ಲ.

ತಕ್ಷಶಿಲ ಮಹಾವಿದ್ಯಾಲಯದಲ್ಲಿ ಎರಡು ಬಗೆಯ ವಿದ್ಯಾಲಯಗಳಿದ್ದಂತೆ ಕಂಡುಬರುತ್ತದೆ. ಕೆಲವು ಎಲ್ಲಾ ವರ್ಗದವರೂ ಪ್ರವೇಶ ಪಡೆಯಬಹುದಾಗಿದ್ದ ಸಾರ್ವಜನಿಕ ವಿದ್ಯಾಲಯಗಳಾಗಿದ್ದು ಮತ್ತೆ ಕೆಲವು ನಿರ್ದಿಷ್ಟ ಜಾತಿಗಳಿಗೆ ಮಾತ್ರ ಸೀಮಿತವಾಗಿದ್ದವು. ಒಬ್ಬ ಉಪಾಧ್ಯಾಯ ೫೦೦ ಜನ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದನೆಂದು ಬೌದ್ಧ ಜಾತಕಗಳಿಂದ ತಿಳಿಯುತ್ತದೆ. ಕ್ಷತ್ರಿಯರಿಗೂ ಪ್ರತ್ಯೇಕ ವಿದ್ಯಾಲಯಗಳು ಇದ್ದಂತೆ ತೋರುತ್ತದೆ. ಅಧಿಕ ಸಂಖ್ಯೆಯಿಂದ ಕೂಡಿದ್ದ ವಿದ್ಯಾರ್ಥಿಗಳಿಗೆ ಒಬ್ಬನೇ ಅಧ್ಯಾಪಕ ಬೋಧನೆ ಮಾಡುವುದು ಕಷ್ಟಸಾಧ್ಯವಾಗುತ್ತಿತ್ತು. ಆತನೊಡನೆ ಬೋಧನಾ ವಿಷಯಗಳಲ್ಲಿ ಸಹಕರಿಸಲು ಸಹೋಪಾಧ್ಯಾಯರು ಇರುತ್ತಿದ್ದರು. ಸಾಮಾನ್ಯವಾಗಿ ಬುದ್ಧಿವಂತರಾದ ಹಿರಿಯ ವಿದ್ಯಾರ್ಥಿಗಳನ್ನೇ ಅಧ್ಯಾಪಕರನ್ನಾಗಿ ನೇಮಿಸುತ್ತಿದ್ದರು. ಗುರುಗಳು ವಿದ್ಯಾಲಯದಿಂದ ದೂರ ಹೋಗುವ ಸಂದರ್ಭ ಒದಗಿದಾಗ, ಹಿರಿಯ ವಿದ್ಯಾರ್ಥಿಗೆ ವಿದ್ಯಾರ್ಥಿ ಸಮುದಾಯದ ಮೇಲ್ವಿಚಾರಣೆ ಮತ್ತು ಬೋಧನೆಯ ಜವಾಬ್ದಾರಿಯನ್ನು ವಹಿಸಲಾಗುತ್ತಿತ್ತು.[11] ಅಧ್ಯಾಪಕರು ಹಗಲು ಮತ್ತು ಇರುಳು ಎರಡು ಅವಧಿಗಳಲ್ಲಿಯೂ ಬೋಧನೆ ಮಾಡುತ್ತಿದ್ದರು.

ವಿದ್ಯಾರ್ಥಿಗಳು ಸೂರ್ಯೋದಯಕ್ಕೆ ಪೂರ್ವದಲ್ಲಿಯೇ ಅಧ್ಯಯನವನ್ನು ಪ್ರಾರಂಭಿಸುತ್ತಿದ್ದರು. ಅವರಿಗೆ ಪ್ರಾತಃಕಾಲಕ್ಕೆ ಮೊದಲೇ ಎಚ್ಚರವಾಗುವಂತೆ ಕೂಗಲು ತಿತ್ತಿರಿ ಎಂಬ ಒಂದು ಜಾತಿಯ ಪಕ್ಷಿಯನ್ನು ಸಾಕಿಕೊಳ್ಳುತ್ತಿದ್ದರು. ಆ ಪಕ್ಷಿಗೆ ವೇದಮಂತ್ರಗಳನ್ನು ಸ್ಪಷ್ಟವಾಗಿ ಪುನರುಚ್ಚರಿಸುವುದನ್ನು ಕಲಿಸುತ್ತಿದ್ದರು.

ತಕ್ಷಶಿಲ ವಿದ್ಯಾಲಯದ ಪಠ್ಯಕ್ರಮದಲ್ಲಿ ಧಾರ್ಮಿಕ ಅಧ್ಯಯನ, ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳ ಬೋಧನೆ ಸೇರಿತ್ತು. ಧಾರ್ಮಿಕಶಾಸ್ತ್ರದ ಅಭ್ಯಾಸದಲ್ಲಿ, ಮೂರು ವೇದಗಳನ್ನು ಮಾತ್ರ ಅಧ್ಯಯನ ಮಾಡುತ್ತಿದ್ದರೆಂದು ಜಾತಕಗಳಿಂದ ತಿಳಿದು ಬರುವುದರಿಂದ ಅಥರ್ವಣವೇದವು ಪಠ್ಯಕ್ರಮದಲ್ಲಿ ಸೇರಿರಲಿಲ್ಲ. ವೇದಗಳನ್ನು ಕಂಠಪಾಠ ಮಾಡುತ್ತಿದ್ದಂತೆ ಕಂಡುಬರುತ್ತದೆ. ಇನ್ನೂ ಅನೇಕ ಬೌದ್ಧ ಮತ್ತು ವೈದಿಕ ಪವಿತ್ರಗ್ರಂಥಗಳ ಅಭ್ಯಾಸವನ್ನು ವಿದ್ಯಾರ್ಥಿಗಳು ಮಾಡುತ್ತಿದ್ದರು. ವೈದ್ಯಶಾಸ್ತ್ರ, ಬೇಟೆ ಆಡುವುದು, ಬಿಲ್ಲುವಿದ್ಯೆ ಮುಂತಾದ ಹದಿನೆಂಟು ವಿಷಯಗಳು ವಿಜ್ಞಾನ ಮತ್ತು ತಾಂತ್ರಿಕ ಅಭ್ಯಾಸದ ಪಠ್ಯಗಳಾಗಿದ್ದವು. ವಿದ್ಯಾರ್ಥಿಗಳು ಅಧಿಕ ಅಭಿರುಚಿಯಿರುವ ವಿಷಯದಲ್ಲಿ ವಿಶೇಷ ಅಭ್ಯಾಸವನ್ನು ಮಾಡಬಹುದಾಗಿತ್ತು.

ತಕ್ಷಶಿಲ ವಿದ್ಯಾಲಯದ ಅಧ್ಯಯನದಲ್ಲಿ ಪ್ರಾಯೋಗಿಕ ಅಭ್ಯಾಸಗಳ ಪದ್ಧತಿ ಇತ್ತು. ವೈದ್ಯಶಾಸ್ತ್ರವನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಗುರುಗಳ ನೇತೃತ್ವದಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು

---

[10] R. K. Mookerji, *op cit.*, p. 482.

[11] Ratilal N. Mehta: *Pre-Buddhist India*, p. 301.

ಮಾಡುತ್ತಿದ್ದರು. ವೈದ್ಯಶಾಸ್ತ್ರದ ಪ್ರಾಯೋಗಿಕ ಪರೀಕ್ಷೆಯಲ್ಲಿ ಎಲ್ಲಾ ಗಿಡಮೂಲಿಕೆಗಳ ಪ್ರಾಥಮಿಕ ಅಧ್ಯಯನ ನಡೆಸಬೇಕಿತ್ತೆಂದು ಜೀವಕನ ವಿದ್ಯಾಭ್ಯಾಸದ ಕ್ರಮದಿಂದ ತಿಳಿಯುತ್ತದೆ. ಉಳಿದ ವಿಷಯಗಳನ್ನು ಅರಿಸಿಕೊಂಡಿರುವ ವಿದ್ಯಾರ್ಥಿಗಳು ವಿದ್ಯಾಲಯದಿಂದ ದೂರವಾದ ಪ್ರದೇಶದಲ್ಲಿ ಪ್ರವಾಸ ಮಾಡಿ ಲೋಕಾನುಭವವನ್ನು ಪಡೆಯುತ್ತಿದ್ದರು. ಬಿಲ್ಲುವಿದ್ಯೆ ಅಭ್ಯಾಸ ಮಾಡಿದ ವಿದ್ಯಾರ್ಥಿಯೊಬ್ಬ ತನ್ನ ವಿದ್ಯೆಯಲ್ಲಿ ಅನುಭವ ಪಡೆಯುವುದಕ್ಕೆ ಆಂಧ್ರ ಪ್ರದೇಶದವರೆಗೂ ಸಂಚಾರ ಮಾಡಿದ. ಇಲ್ಲಿ ವಿದ್ಯಾಭ್ಯಾಸ ಮಾಡಿದ ಮಗಧರಾಜಕುಮಾರನು ಗ್ರಾಮ, ಪಟ್ಟಣ ಮತ್ತು ಅನೇಕ ಪ್ರಾಂತಗಳಲ್ಲಿ ಪ್ರವಾಸ ಮಾಡಿ ಲೋಕಾನುಭವವನ್ನು ಪಡೆದ. ತಾವು ವಿದ್ಯಾಲಯದಲ್ಲಿ ಅಭ್ಯಾಸ ಮಾಡಿದ ವಿಷಯಗಳ ಬಗ್ಗೆ ಪ್ರಾಯೋಗಿಕ ಅನುಭವವನ್ನು ಪಡೆಯಲು ವಿದ್ಯಾರ್ಥಿಗಳು ದೇಶ ಸಂಚಾರ ಮಾಡಿ ವಿಚಾರವಂತಿಕೆಯ ಸೂಕ್ಷ್ಮ ಬುದ್ಧಿಯಿಂದ ವಿಷಯಗಳನ್ನು ಗ್ರಹಿಸುತ್ತಿದ್ದರು. ವಿದ್ಯಾಭ್ಯಾಸದ ಸಂಪೂರ್ಣ ಜ್ಞಾನವನ್ನು ಪಡೆಯಲು ಅವರಿಗೆ ಪ್ರವಾಸವು ಶಿಕ್ಷಣದ ಅವಿಭಾಜ್ಯ ಅಂಗವಾಗಿದ್ದಿತು.

ಸುಮಾರು ೪ ಮತ್ತು ೫ನೆಯ ಶತಮಾನಗಳಲ್ಲುಂಟಾದ, ರಾಜಕೀಯ ಬದಲಾವಣೆಗಳ ಪರಿಣಾಮವಾಗಿ ಶೈಕ್ಷಣಿಕ ಮತ್ತು ವಾಣಿಜ್ಯ ಕೇಂದ್ರವಾಗಿದ್ದ ತಕ್ಷಶಿಲವು ತನ್ನ ವೈಭವವನ್ನು ಕ್ರಮೇಣ ಕಳೆದುಕೊಂಡಿತು. ತಕ್ಷಶಿಲ ನಗರದ ಪ್ರಾಮುಖ್ಯದ ಅಂತ್ಯವು ಹೂಣರ ದಾಳಿಯಿಂದ ಪ್ರಾರಂಭವಾಯಿತು. ನಂತರ ಪ್ರಸಿದ್ಧಿಗೆ ಬಂದ ವಾರಾಣಸಿ ಮಹಾವಿದ್ಯಾಲಯವು ವಿಶೇಷವಾಗಿ ತಕ್ಷಶಿಲ ವಿದ್ಯಾಕೇಂದ್ರದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಂದ ನಿರ್ಮಾಣವಾಯಿತು.

ಪೂರ್ವದ ಮಿಥಿಲಾ ರಾಜ್ಯದ ರಾಜಗೃಹಗಳಂತಹ ದೂರಸ್ಥ ನಗರಗಳಿಂದಲೂ, ದಕ್ಷಿಣದ ಉಜ್ಜಯಿನಿಯಿಂದಲೂ ಬಂದ ವಿದ್ಯಾರ್ಥಿಗಳು ಗಾಂಧಾರ ರಾಜ್ಯದ ರಾಜಧಾನಿಯಾದ ತಕ್ಷಶಿಲೆಯಲ್ಲಿ ಒಂದುಗೂಡುತ್ತಿದ್ದರು ಎಂಬ ಸಂಗತಿ ಜಾತಕ ಕಥೆಗಳಲ್ಲಿ ಕಾಣಸಿಗುತ್ತದೆ.

ತಮ್ಮ ಮಕ್ಕಳು ಅಹಂಕಾರವನ್ನು ಮೆಟ್ಟಿ ನಿಲ್ಲಬಲ್ಲವರೂ, ಚಳಿ, ಮಳೆ, ಗಾಳಿಗಳನ್ನು ಎದುರಿಸಬಲ್ಲವರೂ, ಲೋಕದ ರೀತಿ ನೀತಿಗಳನ್ನು ಅರಿತವರೂ ಆಗಬೇಕೆಂಬ ದೃಷ್ಟಿಯಿಂದ ಹಿಂದಿನ ರಾಜರುಗಳು ವಿದ್ಯಾಭ್ಯಾಸಕ್ಕಾಗಿ ತಮ್ಮ ಮಕ್ಕಳನ್ನು ದೂರದೇಶಗಳಿಗೆ ಕಳುಹಿಸುತ್ತಿದ್ದರೆಂಬ ಅಂಶವೂ ಜಾತಕ ಕಥೆಯೊಂದರಲ್ಲಿ ಕಾಣಬರುತ್ತದೆ. ಬಿಲದಲ್ಲಿ ವಾಸ ಮಾಡುವ ಕ್ರಿಮಿಕೀಟಗಳನ್ನು ಸರ್ಪವು ನುಂಗಿಬಿಡುವಂತೆ ಅಧ್ಯಯನಕ್ಕಾಗಿ ದೂರದ ನಾಡಿಗೆ ಹೋಗದ ಬ್ರಾಹ್ಮಣನನ್ನೂ, ಅಗತ್ಯವಾದಾಗ ಯುದ್ಧಕ್ಷೇತ್ರಕ್ಕೆ ಧಾವಿಸದ ರಾಜನನ್ನು ಭೂಮಿಯೇ ಬಾಯ್ದೆರೆದು ನುಂಗಿಬಿಡುತ್ತದೆ ಎಂಬ ಆಶಯವನ್ನು ಪ್ರಕಟಪಡಿಸುವ ಸಾಮತಿಯನ್ನು ಮಹಾಭಾರತದಲ್ಲಿ ಉದ್ಧರಿಸಲಾಗಿದೆ.

ರಾಜಗೃಹದ ಆಸ್ಥಾನದ ಗಣಿಕೆಯೊಬ್ಬಳ ಪುತ್ರನಾಗಿ ಹುಟ್ಟಿ, ಮಗಧದ ರಾಜಕುಮಾರನಾದ ಅಭಯನಿಂದ ಪೋಷಿಸಲ್ಪಟ್ಟ ಜೀವಕನನ್ನು ವಿಶ್ವವಿಖ್ಯಾತವಾದ ತಕ್ಷಶಿಲೆಯ ಆಚಾರ್ಯನೊಬ್ಬನ ಬಳಿ ವೈದ್ಯಶಾಸ್ತ್ರವನ್ನು ಕಲಿಯಬೇಕೆಂದು ಕಳುಹಿಸಲಾಗಿತ್ತು. ಆತನು ಅಲ್ಲಿ ಏಳು ವರ್ಷಗಳ ಕಾಲ ಅಧ್ಯಯನ ಮಾಡಿದನು. ಔಷಧಿ-ವನಸ್ಪತಿ ವಿಜ್ಞಾನದ ಅತ್ಯಂತ ಕಠಿಣವಾದ ಪ್ರಾಯೋಗಿಕ ಪರೀಕ್ಷೆಯೊಂದರಲ್ಲಿ ಉತ್ತೀರ್ಣನಾಗುವುದರ ಮೂಲಕ ಆತನು ತನ್ನ ಶಿಕ್ಷಣವನ್ನು ಸಫಲವಾಗಿ ಮುಗಿಸಿದನು

ಸಂಗ್ರಹ : ಯುಗಯಾತ್ರೀ ಭಾರತೀಯ ಸಂಸ್ಕೃತಿ
ಸಂಪುಟ ೨, 'ಪ್ರಾಚೀನ ಭಾರತದಲ್ಲಿ ಶಿಕ್ಷಣ'ದಿಂದ

ಕೆ. ಎಸ್. ಸದಾಶಿವಯ್ಯ

ಶೈಕ್ಷಣಿಕ ಉತ್ಕೃಷ್ಟತೆ

ಶಿಕ್ಷಕರ ಚಟುವಟಿಕೆಗಳಲ್ಲಿ ಕೆಲವು ಶೈಕ್ಷಣಿಕವಾದ ಉತ್ಕೃಷ್ಟತೆಗೆ ಕಾರಣವಾಗುತ್ತವೆ. ಇವುಗಳಲ್ಲಿ ಮುಖ್ಯವಾದವೆಂದರೆ ಜ್ಞಾನದ ಸಾಗಣೆ ಹಾಗೂ ಜ್ಞಾನದ ಸೃಷ್ಟನೆ. ಮೊದಲನೆಯದು ಬೋಧನೆ ಮತ್ತು ಉಪನ್ಯಾಸಗಳ ಮೂಲಕ ಸಾಧ್ಯವಾಗುತ್ತದೆ. ಎರಡನೆಯದು ಶಿಕ್ಷಕರು ಸಂಶೋಧನಾ ಯೋಜನೆಗಳಲ್ಲಿ ಭಾಗವಹಿಸುವ ಮೂಲಕ ಸಾಧಿತವಾಗುತ್ತದೆ. ಮೊದಲನೆಯದು ಸ್ಥಿರೀಕರಣಕ್ಕೆ ಪ್ರಯತ್ನಿಸುತ್ತದೆ. ಎರಡನೆಯದು ಸಾಹಸಮಯವಾದ ಸಂಶೋಧನೆಯಲ್ಲಿ ತೊಡಗುತ್ತದೆ. ಈ ಶೈಕ್ಷಣಿಕ ಉತ್ಕೃಷ್ಟತೆಯನ್ನು ಅರ್ಥವಿಸಿಕೊಳ್ಳಲು ಇಂದಿನ ಶಾಲಾ ಕಾಲೇಜುಗಳಲ್ಲಿ ಈ ಎರಡು ಕಾರ್ಯಗಳು ಅದೆಂತು ನಡೆಯುತ್ತವೆ ಎಂಬುದನು ಪರಿಶೀಲಿಸಬೇಕಾಗುತ್ತದೆ.

ಬೋಧನೆ:

"ಸಸಿಯನು ಬೆಳೆಸಲು ಹೇಗೆ ಸಾಧ್ಯವಿಲ್ಲವೋ ಅಂತೆಯೇ ಮಕ್ಕಳಿಗೆ ಬೋಧಿಸಲೂ ಸಾಧ್ಯವಿಲ್ಲ. ಸಸಿಯು ತನ್ನ ಪ್ರಕೃತಿಗೆ ಸ್ವಭಾವಕ್ಕೆ ಅನುಸಾರವಾಗಿ ಬೆಳೆಯತೊಡಗುತ್ತದೆ. ಮಗುವು ಕೂಡ ಸ್ವಯಂ ಬೋಧನೆಯಲ್ಲಿ ತೊಡಗುತ್ತದೆ. ಮಗುವು ತನಗನುಗುಣವಾದ ರೀತಿಯಲ್ಲಿ ಬೆಳೆದು ಮುಂಬರಿಯಲಿಕ್ಕೆ ನಾವು ಸಹಾಯವನ್ನೆಸಗಬಹುದು. ಕಲಿಕೆಗೆ ಇರುವ ಅಡೆತಡೆಗಳನ್ನು ತೆಗೆದುಹಾಕಿದರೆ ಜ್ಞಾನವು ಪ್ರಕೃತಿ ಸಹಜವಾಗಿಯೇ ಹೊಮ್ಮುತ್ತದೆ. ನೇರವಾದ ಸಹಾಯವನ್ನು ಒದಗಿಸದೆ ಪರೋಕ್ಷವಾಗಿ ನೆರವನ್ನು ಒದಗಿಸಬಹುದು. ಸಸಿಯ ಸುತ್ತಲೂ ಇರುವ ಮಣ್ಣನ್ನು ಹುಡಿಗೈದು ಹದಗೊಳಿಸಿದರೆ ತಾನಾಗಿ ಮೊಳೆಯುತ್ತದೆ. ಅದರ ಸುತ್ತಲೂ ಬೇಲಿ ಹಾಕಿ ಅದು ನಾಶವಾಗದಂತೆ ನೋಡಿಕೊಳ್ಳಬೇಕು. ಅದರ ಬೆಳವಣಿಗೆಗೆ ಯುಕ್ತವಾದ ಗೊಬ್ಬರ, ನೀರು, ಗಾಳಿ ಮೊದಲಾದವನ್ನು ಒದಗಿಸುವುದು ನಿನ್ನ ಕೆಲಸ. ಇಲ್ಲಿಗೆ ನಿನ್ನ ಕೆಲಸ ಕೊನೆಗೊಳ್ಳುತ್ತದೆ. ಅದು ತನಗೆ ಬೇಕಾದುದನ್ನು ಪ್ರಕೃತಿಯಿಂದ ಪಡೆಯುತ್ತದೆ. ಇದೇ ತತ್ವ ಮಗುವಿನ ಶಿಕ್ಷಣಕ್ಕೂ ಅನ್ವಯಿಸುತ್ತದೆ. ಮಗುವು ತನ್ನಷ್ಟಕ್ಕೆ ತಾನೇ ಶಿಕ್ಷಣ ಪಡೆಯುತ್ತದೆ. ಶಿಕ್ಷಕನು ಬೋಧಿಸಲು ಉದ್ಯೋಗಿಸಿದರೆ ಮಗುವಿನ ಸರ್ವನಾಶಕ್ಕೂ ಕಾರಣವಾಗುತ್ತಾನೆ. ಸರ್ವ ಜ್ಞಾನವು ಮನುಷ್ಯನಲ್ಲಿಯೇ ಅಡಕವಾಗಿರುತ್ತದೆ. ಅವನನ್ನು ಎಚ್ಚರಿಸಬೇಕಷ್ಟೆ. ಶಿಕ್ಷಕನದು ಇಷ್ಟೇ ಕೆಲಸ."[1]

ಈ ಮೇಲಿನ ಸ್ವಾಮಿ ವಿವೇಕಾನಂದರ ಶೈಕ್ಷಣಿಕ ಅಭಿಪ್ರಾಯಗಳು. ಶಾಲಾ ತರಗತಿಯಲ್ಲಿ ಶಿಕ್ಷಕನು ಗೈಯಬೇಕಾದ ಕಾರ್ಯವನ್ನು ಸೂಚಿಸುತ್ತವೆ. ಬೋಧನೆಯಲ್ಲಿ ಶಿಕ್ಷಕನ ಪಾತ್ರ ಪರಿಮಿತ ವಾದುದು. ತನ್ನ ಹೆಚ್ಚಿನ ಸಮಯವನ್ನು ಅವರ ಸ್ವಭಾವಗಳನ್ನು ಅರ್ಥವಿಸಿಕೊಳ್ಳುವಲ್ಲಿ ವ್ಯಯಿಸಿ ಅವರಿಗೆ ಸೂಕ್ತವಾದ ಮಾರ್ಗದರ್ಶನವನ್ನು ಒದಗಿಸಿ ಬೆಳವಣಿಗೆಗೆ ಕಾರಣವಾಗಬೇಕು. ಆದರೆ ಪ್ರಸ್ತುತ

---

[1] Swamivi Vivekananda, *Education*, Ramakrishna Vidyalaya, (Coimbatore : 1957), pp. 3–4

ಶಿಕ್ಷಣ ಕ್ರಮವು ಶಿಕ್ಷಕರಿಂದ ಪೂರ್ಣ ನಾಶವಾಗಿದೆ. ಶಾಲಾಂತರಗತಿಯ ಚಟುವಟಿಕೆಗಳಲ್ಲಿ ಇವನದೇ ಅಮೋಘ ಪಾತ್ರ. ಶಾಲೆಯಲ್ಲಿ ಮಕ್ಕಳ ಗಮನಕ್ಕೆ ಬರುವ ವ್ಯಕ್ತಿ ಎಂದರೆ ಶಿಕ್ಷಕನೆ.

"ಬೋಧನೆಯ ಪ್ರಥಮ ತತ್ವವೆಂದರೆ ಏನನ್ನೂ ಬೋಧಿಸದಿರುವುದು. ಶಿಕ್ಷಕನು ಬೋಧಕನಲ್ಲ ಇಲ್ಲವೆ ದುಡಿಸುವ ಧಣಿಯಲ್ಲ. ಇವನು ಸಹಾಯಕ. ಮಾರ್ಗದರ್ಶಕ. ಇವನ ವ್ಯವಹಾರ ಸಹಿಸುವುದೇ ಹೊರತು ತನ್ನ ಭಾವಗಳನ್ನು ಮಕ್ಕಳ ಮೇಲೆ ಹೇರುವುದಲ್ಲ. ಇವನ ಕೆಲಸ ಮಕ್ಕಳ ಮನಸ್ಸನ್ನು ತರಬೇತಿಸುವುದಲ್ಲ. ಅವರೆ ಜ್ಞಾನವನ್ನು ಅರ್ಜಿಸುವ ಸಾಧನಗಳನ್ನು ಶುದ್ಧಿಗೊಳಿಸಿ ಜ್ಞಾನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಹಾಯ ಮಾಡುವುದು ಹಾಗೂ ಪ್ರೋತ್ಸಾಹಿಸುವುದು. ಸ್ವಂತವಾಗಿ ಜ್ಞಾನವನ್ನು ಹೇಗೆ ಪಡೆಯಬೇಕೆಂಬುದನ್ನು ಅರುಹುತ್ತಾನೆ."

"ಬೋಧನೆಯ ಎರಡನೆಯ ತತ್ವವೆಂದರೆ ಮಗುವಿನ ಮನೋಗತಿಗೆ ಅನುಗುಣವಾಗಿ ಅವನ ಬೆಳವಣಿಗೆ ನಡೆಯುವಂತೆ ಮಾಡುವುದು. ಪೋಷಕರು ಮತ್ತು ಶಿಕ್ಷಕರು ತಮಗೆ ತೋಚಿದಂತೆ ಮಕ್ಕಳಿಗೆ ಒಂದು ರೂಪ ಕೊಡಲೆತ್ನಿಸುವುದು ಮೂರ್ಖತನದ ಪರಮಾವಧಿಗೆ ಸಮವೆನಿಸುತ್ತದೆ. ಮಗುವಿಗೆ ತನ್ನ ಪ್ರಕೃತಿಗೆ ಸ್ವಭಾವಕ್ಕೆ ಅನುಸಾರವಾಗಿ ಬೆಳೆಯಲಿಕ್ಕೆ ಅವಕಾಶವನ್ನೂ ಪ್ರಚೋದನೆಯನ್ನೂ ಒದಗಿಸಬೇಕು. ಇಷ್ಟಲ್ಲದೆ, ತನ್ನ ಮಗನು ಕೆಲವು ಪೂರ್ವಭಾವಿಯಾಗಿ ನಿರ್ಧರಿತ ಗುಣಗಳನ್ನು, ಸಾಮರ್ಥ್ಯಗಳನ್ನು, ಭಾವಗಳನ್ನು ಬೆಳೆಸಿಕೊಳ್ಳಬೇಕೆಂದು ಬಯಸಿದಲ್ಲಿ ಇಲ್ಲವೆ, ಮುಂದೆ ನಿರ್ದಿಷ್ಟ ಉದ್ಯೋಗವನ್ನು ಕೈಗೊಳ್ಳಬೇಕೆಂದು ವ್ಯವಸ್ಥಿಸತೊಡಗಿದರೆ ಇದಕ್ಕಿಂತ ಘೋರವಾದ ಕೃತ್ಯ ಮತ್ತೊಂದಿಲ್ಲವೆನ್ನಬಹುದು. ಮಗುವಿನ ಸ್ವಭಾವವನ್ನು ಸ್ವಧರ್ಮವನ್ನು ಬಲವಂತದಿಂದ ಹಾಕುವ ಪ್ರಯತ್ನ ಮಾಡಿದಲ್ಲಿ ಶಾಶ್ವತ ಹಾನಿಯನ್ನು ಮಾಡಿದಂತಾಗುತ್ತದೆ. ಅವರ ಬೆಳವಣಿಗೆಯನ್ನು ವಕ್ರಗೊಳಿಸಿದಂತಾಗುತ್ತದೆ. ಅವರ ಪಾವಿತ್ರ್ಯತೆಯನ್ನು ವಿಕೃತಗೊಳಿಸಿದಂತಾಗುತ್ತದೆ. ಬೆಳೆವ ಮಗುವಿನ ಮೇಲೆ ಹಿರಿಯರ ಸ್ವಾರ್ಥಮೂಲವಾದ ದೌರ್ಜನ್ಯ ಸರ್ವದಾ ದಾಳಿಮಾಡುತ್ತಿರುತ್ತದೆ. ಇದು ರಾಷ್ಟ್ರಘಾತಕ ಕೆಲಸ. ಇದರಿಂದ ರಾಷ್ಟ್ರಕ್ಕೆ ಆಗುವ ನಷ್ಟ ಅಪಾರ. ಈ ಕೃತ್ಯದಿಂದಾಗಿ ಮಹಾ ಮಹಾ ವಿಭೂತಿಪುರುಷರ ಬದಲಾಗಿ ಅಸಮರ್ಪಕವಾದ, ಅಪಕ್ವವಾದ, ದ್ವಿತೀಯ ವರ್ಗದ, ಅಲ್ಪಕಾಲಿಕವಾದ ಮತ್ತು ಸಾಮಾನ್ಯವಾದ ವ್ಯಕ್ತಿಗಳಿಂದಲೇ ತೃಪ್ತಿತಳೆಯಬೇಕಾಗುತ್ತದೆ."

"ಮೂರನೆಯ ಶೈಕ್ಷಣಿಕ ತತ್ವವೆಂದರೆ, ಪರಿಚಿತವಾದುದರಿಂದ ಅಪರಿಚಿತವಾದುದರತ್ತ. (ಇಂದಿನದರಿಂದ ಮುಂದಿನದರತ್ತ) ನಡೆಯಲು ಪ್ರಯತ್ನಿಸುವುದೆ. ಇಂದಿನ ಮನುಜನ ಸ್ವಭಾವಗಳು, ಹಿಂದಿನ ಜನ್ಮದ ಕರ್ಮಗಳ ಫಲ. ಅವನ ಅನುವಂಶೀಯತೆ, ಅವರ ಪರಿಸರ, ದೇಶ, ರಾಷ್ಟ್ರೀಯತೆ, ಭುಜಿಸುವ ಆಹಾರ, ಸೇವಿಸುವ ಗಾಳಿ, ಕುಡಿಯುವ ನೀರು, ನೋಡುವ ದೃಶ್ಯ, ಕೇಳುವ ಕತೆ, ಬೆಳೆಸಿಕೊಂಡಿರುವ ಹವ್ಯಾಸಗಳು ಅವನ ಸಂಸ್ಕಾರವನ್ನು ನಿರ್ಣಯಿಸುತ್ತವೆ. ಇಷ್ಟಲ್ಲದೆ ಹೊರಗಣಿಂದ ಹೊಸದನ್ನು ತಂದಲ್ಲಿ, ಅವನ್ನು ಅವನ ಅವಗಾಹನೆಗೆ ತರಬೇಕೇ ಹೊರತು ಬಲಾತ್ಕಾರಪೂರ್ವಕವಾಗಿ ಹೇರಬಾರದು."[2]

ಮೇಲಿನವು ಅರವಿಂದರ ಶ್ರೇಷ್ಠ ಶೈಕ್ಷಣಿಕ ಚಿಂತನೆಗಳು. ಅರವಿಂದರ ಅಭಿಮತದ ಮೇರೆಗೆ ಶಿಕ್ಷಕನು ಬೋಧಕನಲ್ಲ. ನಿರ್ಜೀವ ವಸ್ತುವಿಷಯಗಳನ್ನು ಸಾಗಿಸುವವನಲ್ಲ, ಅಥವಾ ದುಡಿಯಿಸುವ ಧಣಿಯೂ ಅಲ್ಲ. ಅವರೆ ಸಹಾಯಕ ಮಾರ್ಗದರ್ಶಕ. ಮೇಲಾಗಿ ಶಿಕ್ಷಕನ ಮುಖ್ಯವಾದ ಕೆಲಸವೆಂದರೆ ಮಕ್ಕಳನ್ನು ಸ್ವಯಂ ಕಲಿಕೆಯಲ್ಲಿ ತೊಡಗಿಸುವುದು. ಅವನ ಅಂತರ್ಗತವಾದ ಶಕ್ತಿಗಳನ್ನು ವಿಕಸಿಸುವುದು ಹಾಗೂ ಜ್ಞಾನವನ್ನು ಸ್ವಪ್ರಯತ್ನದಿಂದ ಪಡೆಯುವಂತೆ ಮಾಡುವುದು.

ವಿದ್ಯಾರ್ಥಿಯು ತನ್ನ ಬೆಳವಣಿಗೆಯ ಮತ್ತು ಪ್ರಗತಿಯ ದಿವ್ಯಶಿಲ್ಪಿ. ಪೋಷಕರಾಗಲಿ, ಶಿಕ್ಷಕರಾಗಲಿ ಮಕ್ಕಳನ್ನು ಅವರ ಸ್ವಭಾವಕ್ಕೆ ಒಗ್ಗದ ಉದ್ಯೋಗಗಳಿಗೆ ತರಬೇತಿಸುವುದು ಸಲ್ಲದು. ಮಗನು ತಂದೆಗಿಂತ ಅನೇಕ ವಿಷಯಗಳಲ್ಲಿ ಭಿನ್ನನಾಗಿರುತ್ತಾನೆ. ಅವನ ಕ್ರಿಯಾಶಕ್ತಿಗಳಿಗೆ ಅಭಿರುಚಿಗೆ ತಕ್ಕ

---

[2] Aurobindo: *The Method of Teaching*, Calcutta: Sri Aurobindo Mandir Annual, No. 23, Aug 1964, pp. 260–61

ಉದ್ಯೋಗವನ್ನು ಕಂಡುಕೊಳ್ಳಲು ಸರ್ವತ್ರ ಸ್ವತಂತ್ರವಿರಬೇಕು. ಮಕ್ಕಳನ್ನು ನಮ್ಮಂತೆಯೇ ಮಾಡಲೆಣಿಸಿದರೆ ಅವರನ್ನು ದುರ್ಮಾರ್ಗಕ್ಕೆ ಕೊಂಡೊಯ್ದಂತೆಯೆ. ನಮ್ಮ ಸರ್ವಾಧಿಕಾರ ಪ್ರವೃತ್ತಿಯಿಂದಲೊ ಏನೊ ನಮಗಿಂದು ಕಾಣಸಿಗುತ್ತಿರುವುದು ಒಬ್ಬ ಕುವೆಂಪು, ಒಬ್ಬ ಬೇಂದ್ರೆ, ಬೆರಳೆಣಿಸುವಷ್ಟು ವಿಜ್ಞಾನಿಗಳು. ಮಕ್ಕಳನ್ನು ಅವರ ಮನೋಧರ್ಮದಂತೆ ಬೆಳೆಯಲು ಉತ್ತೇಜಿಸಿದರೆ ಅಧಿಕ ಸಂಖ್ಯೆಯಲ್ಲಿ ವಿಜ್ಞಾನಿಗಳನ್ನು, ಕಲೋಪಾಸಕರನ್ನು, ಕವಿಗಳನ್ನು ಕಾಣುವುದು ಸಾಧ್ಯವಿದೆ.

ಮುಂದುವರೆದು ಮಹರ್ಷಿ ಅರವಿಂದರು ಮಕ್ಕಳಿಗೆ ಪರಿಚಿತವಾದ, ಅವರ ಜೀವನಕ್ಕೆ ಸಹಾಯಕವಾಗುವ ವಸ್ತುವಿಷಯಗಳನ್ನೇ ಒದಗಿಸಬೇಕೆಂದು ಅಭಿಪ್ರಾಯಿಸುತ್ತಾರೆ. ಆದರೆ ಪ್ರಸ್ತುತ ಶಿಕ್ಷಣವು ಮಕ್ಕಳಿಗೆ ಪರಿಚಿತವಿಲ್ಲದ, ತಿಳಿಯದ, ಅವರ ಅನುಭವಕ್ಕೆ ಹೊರತಾದ ವಿಷಯಗಳನ್ನು ಒದಗಿಸಿ ಅವರ ಶ್ರದ್ಧೆ, ಆಸಕ್ತಿ, ಕುತೂಹಲಗಳನ್ನು ನಾಶಗೊಳಿಸುತ್ತಿದೆ. ಇನ್ನು ಮುಂದೆ ಪ್ರಸ್ತುತ ಶಾಲೆಗಳಲ್ಲಿ ನಮ್ಮ ಮಕ್ಕಳಿಗೆ ಒದಗಿಸಲಾಗುತ್ತಿರುವ ಬೋಧನದ ಗತಿ ಗಮನವನ್ನು ವಿಶ್ಲೇಷಿಸುವ ಪ್ರಯತ್ನ ಮಾಡಬಹುದು.

ನಮ್ಮ ದೇಶದ ಬಹು ಪ್ರಸಿದ್ಧ ಶಾಲೆಗಳಲ್ಲಿಯೂ ಬೋಧನ ನಡೆಯುವುದು ಮಾತು ಮತ್ತು ಸೀಮೆಸುಣ್ಣದ ಮೂಲಕವೆ. ವಿವಿಧ ವಿಷಯಗಳಿಗೆ ಸಂಬಂಧಿಸಿದ ಉಪಾಧ್ಯಾಯರು ಶಾಲಾತರಗತಿಯೊಳಗೆ ಹೆಚ್ಚು ಸಮಯವನ್ನು, ಸಮಾಚಾರವನ್ನು, ನಿರ್ದಿಷ್ಟ ವಿಷಯವನ್ನು ಮಕ್ಕಳತ್ತ ಸಾಗಿಸುವುದರಲ್ಲಿಯೇ ಕಳೆಯುತ್ತಾರೆ. ಉದಾಹರಣೆಗೆ, ಇತಿಹಾಸದ ಶಿಕ್ಷಕನು ತರಗತಿಗೆ ಪ್ರವೇಶಿಸಿ ನಲವತ್ತೈದು ನಿಮಿಷಗಳ ಕಾಲ ಅಕ್ಬರನದೋ ಔರಂಗಜೇಬನದೋ ವಿಷಯವನ್ನು ಕಥನಿಸುತ್ತಾನೆ. ಈ ಅವಧಿಯಲ್ಲಿ ಆಗೊಮ್ಮೆ ಈಗೊಮ್ಮೆ ಪ್ರಶ್ನೆಗಳನ್ನು ಕೇಳಿ ಕೆಲವು ತುಂಟ ಮಕ್ಕಳ ಮನಸ್ಸನ್ನು ಅಂದಿನ ಪಾಠದತ್ತ ಸೆಳೆಯಲು ಪ್ರಯತ್ನಿಸುತ್ತಾನೆ. ಕೆಲವೊಮ್ಮೆ ಮಕ್ಕಳ ಪ್ರಯೋಜನಾರ್ಥವಾಗಿ ಕೆಲವು ಅಂಶಗಳನ್ನು ಬರೆಸಬಹುದು. ಮತ್ತೆ ಕೆಲವು ಶಿಕ್ಷಕರು ವಿದ್ಯಾರ್ಥಿಗಳಿಂದ ಪಠ್ಯಪುಸ್ತಕಗಳನ್ನು ಓದಿಸಿ, ಕೆಲವು ಪ್ರಶ್ನೆಗಳನ್ನು ಹಾಕಿ, ಇಲ್ಲವೆ ವ್ಯಾಖ್ಯಾನಿಸಿ ಕಾಲಹರಣ ಮಾಡಬಹುದು. ಬರೆಹ ಕೆಲಸಕ್ಕೆ ಸಂಬಂಧಿಸಿದಂತೆ ಪುಸ್ತಕಗಳಲ್ಲಿರುವ ಗುಪ್ತಸಾಮ್ರಾಜ್ಯದ ವಿಸ್ತಾರವನ್ನು ಸೂಚಿಸುವ ನಕ್ಷೆಯನ್ನು ಕಾಪಿ ಮಾಡುವಂತೆ, ಇಲ್ಲವೆ ಟಿಪ್ಪಣಿ ಕಪ್ಪಿಗಳನ್ನು ಬರೆಯುವಂತೆ ಮಕ್ಕಳಿಗೆ ಆಜ್ಞಿಸಬಹುದು. ಈ ಬರೆಹ ಕೆಲಸವನ್ನು ಮಕ್ಕಳಿಂದ ಮಾಡಿಸುವುದು ಶಿಕ್ಷಣ ಇಲಾಖೆಯ ತನಿಖಾಧಿಕಾರಿಗಳನ್ನು ತಣಿಸಲೆಂದೆ. ಈ ಬೋಧನ ಕ್ರಮದ ಉದ್ದೇಶ ಮಕ್ಕಳ ಮನಸ್ಸನ್ನು ವಿವಿಧ ವಿಷಯಾವಳಿಗಳಿಂದ ತುಂಬಿಸಿ, ವರ್ಷಾಂತ್ಯದ ಪರೀಕ್ಷೆಯಲ್ಲಿ ಚೆಲ್ಲುವರಿಯುವಂತೆ ಮಾಡುವುದು. ಈ ಶಾಲಾ ದಿವಸಗಳಲ್ಲಿ ಸಂಗ್ರಹಿಸಿದ ವಿಷಯಗಳು ಶಾಲಾನಂತರದ ಜೀವನಕ್ಕೆ ಯಾವ ರೀತಿಯಲ್ಲೂ ಉಪಯೋಗಕ್ಕೆ ಬರುವುದಿಲ್ಲ. ಯಾವ ತಜ್ಞನೂ ಇದನ್ನು ಶಿಕ್ಷಣದ ಉದ್ದೇಶವೆಂದು ಬಗೆಯುವುದಿಲ್ಲ. ಶಾಲಾ ವಿಷಯವು ಜ್ಞಾನಕ್ಕೆ ಸಮಾನವಲ್ಲ. ಬೋಧನೆಯ ಗುರಿಯೂ ಇದಲ್ಲ.

ಈ ಸಂಪ್ರದಾಯ ಶಿಕ್ಷಣದ ಮತ್ತೊಂದು ಲಕ್ಷಣವೆಂದರೆ, ಶಿಕ್ಷಕನು ಮುಕ್ಕಾಲುಘಂಟೆ ಕಾಲ ಮಾತಿನಲ್ಲಿ ಕಂಠಶೋಷಣೆಯಲ್ಲಿ ನಿರತನಾಗಿರುತ್ತಾನೆ. ವಿದ್ಯಾರ್ಥಿಗಳು ಮೂಕಸ್ಮರರಾಗಿ ಕೇಳುವಿಕೆಯಲ್ಲಿ ತೊಡಗಿರುತ್ತಾರೆ. ಮಕ್ಕಳ ಈ ಮೂಕ ಪ್ರವೃತ್ತಿಗೆ ಭಂಗಬರುವುದು ಅವರು ಆಟಪಾಟಗಳಲ್ಲಿ ಹಾಗೂ ಪ್ರಯೋಗಶಾಲೆಯಲ್ಲಿ ನಿರತರಾದಾಗ ಮಾತ್ರ. ಇಂತಹ ಸನ್ನಿವೇಶದಲ್ಲಿ ಮಕ್ಕಳು ಕಲಿಕೆ ಎಂದರೆ ಕೇಳಿಸಿಕೊಳ್ಳುವುದು, ಬೋಧನೆ ಎಂದರೆ ಶಿಕ್ಷಕ ನಿರಂತರ ಮಾತಿನಲ್ಲಿ ತೊಡಗುವುದು ಎಂಬ ನಿರ್ಧಾರಕ್ಕೆ ಬರುತ್ತಾರೆ. ಅನೇಕ ವೇಳೆ ಪೋಷಕರು, ಶಿಕ್ಷಕರು ತರಗತಿಯಲ್ಲಿ ಯಾವ ಬೋಧನವನ್ನು ಕೈಗೊಳ್ಳದೆ, ಮಕ್ಕಳಿಂದಲೇ ಎಲ್ಲವನ್ನು ನಿರೀಕ್ಷಿಸುತ್ತಾರೆ ಎಂಬ ಆರೋಪಗಳನ್ನು ಮಾಡುವುದು ಕಂಡುಬರುತ್ತದೆ. ಇಂತಹ ಶಿಕ್ಷಣದಿಂದ ವಿದ್ಯಾರ್ಥಿಗಳಿಂದ ನಾವು ಏನನ್ನು ನಿರೀಕ್ಷಿಸಬಹುದು? ಮಕ್ಕಳು ದುರ್ಬಲರೂ ತುಂಟರೂ ಆಗಿ ಉಪಾಧ್ಯಾಯರು ಹೇಳಿದ್ದನ್ನೇ ಕೇಳುವ ಕೂಚಂಭಟ್ಟರಾಗಬಹುದು. ಪ್ರೊ. ಕೊಠಾರಿ ಅವರು ನಡೆಸಿದ ಸಂಶೋಧನೆಯ ಪ್ರಕಾರ ಭಾರತೀಯ ಮಕ್ಕಳು ಚರ್ಚಾವಿಧಾನದಿಂದ ಪೂರ್ಣ ಪ್ರಯೋಜನ ಪಡೆಯಲು ಇಷ್ಟಪಡುವವರಾಗಿಲ್ಲ. ಯಾವುದು ಒಳ್ಳೆಯದು–ಕೆಟ್ಟದ್ದು, ಸರಿ–ತಪ್ಪು ಎಂಬುದನ್ನು ಚರ್ಚಿಸದೆ ಕೇಳಿಸಿಕೊಳ್ಳುವುದನ್ನು ಮಾತ್ರ ಬಯಸುತ್ತಾರೆ. ಅಂದರೆ ಅವರು ಉತ್ತಮ

ಆಲೋಚಕರಾಗಲು ಇಷ್ಟಪಡುವುದಿಲ್ಲ, ಕುರುಡು ಅನುಯಾಯಿಗಳಾಗಲು ಇಚ್ಛಿಸುತ್ತಾರೆ.[3] ಇದೇ ನಮ್ಮ ಶಿಕ್ಷಣದ ಉದ್ದೇಶವೇನು? ಇಂದಿನ ಸಂಪ್ರದಾಯ ಶಾಲೆಗಳಲ್ಲಿ ಅಧಿಕಾರಾತ್ಮಕ ಬೋಧನೆಯ ಪ್ರಭಾವದಿಂದಾಗಿ ಮಕ್ಕಳ ವೈಯಕ್ತಿಕತೆ ನಾಶವಾಗಿ ಅವರ ಚಿಂತನಾತ್ಮಕ ಶಕ್ತಿ ಉಡುಗಿಹೋಗಿದೆ. ಸ್ವತಂತ್ರವಾಗಿ ಆಲೋಚಿಸಲು, ಚರ್ಚಿಸಲು, ತಮಗೆ ಉಚಿತವೆನಿಸಿದುದನ್ನು ಮಾಡಲು ಅವಕಾಶಗಳೇ ಇಲ್ಲವಾಗಿವೆ. ಶಿಕ್ಷಕರ ನಿಲುವಿಗೆ ಪ್ರತಿಯಾಗಿ ವಿದ್ಯಾರ್ಥಿಗಳು ತಮ್ಮದೇ ಆದ ನಿಲುವನ್ನು ತಳೆದಲ್ಲಿ ಪರಿಸ್ಥಿತಿ ಬಿಗಡಾಯಿಸುತ್ತದೆ.

ಇಂದು ಶಾಲೆಯಲ್ಲಿ ತರಗತಿಗಳಲ್ಲಿ ಒದಗಿಸುತ್ತಿರುವ ಬೋಧನವು ಯಾಂತ್ರಿಕವೂ ಮಾಂತ್ರಿಕವೂ ಮಾಮೂಲಿಯದೂ ಆಗಿರುವುದರಿಂದ ಮಕ್ಕಳು ಕಲಿಕೆಯಲ್ಲಿ ಯಾವ ಸಂತೋಷವನ್ನು ಪಡೆಯದವರಾಗಿದ್ದಾರೆ. ಇಂತಹ ನಿಷ್ಕ್ರಿಯಾತ್ಮಕ ಬೋಧನೆಯಿಂದ ಹುಡುಗರು ಸಂತಸದಿಂದ ಕುಣಿಯುವುದಿಲ್ಲ, ಯಾವ ಸಾಧನೆಯ ಹೆಮ್ಮೆಯೂ ಅವರನ್ನು ಕಾಂತಿಯುಕ್ತಗೊಳಿಸುವುದಿಲ್ಲ. ಕಲಿಕೆಯೆಂದರೆ ಇಷ್ಟವಿಲ್ಲದೆ ಇನ್ನೊಬ್ಬರ ಒತ್ತಾಯಕ್ಕೆ ತೊಡಗುವ ಕಾರ್ಯ. ರುಚಿಸದ, ವೈವಿಧ್ಯವಿಲ್ಲದ ವಿಷಯವನ್ನು ಹೀರುವುದೇ ಮಕ್ಕಳ ಮುಖ್ಯ ಕೆಲಸ, ಮಸಿ ಹೀರುವ ಒತ್ತುಕಾಗದದಂತೆ. ಮಕ್ಕಳು ತಮ್ಮ ಜೀವನದ ಬಹುಮುಖ್ಯವಾದ ಭಾಗವನ್ನು ಅಧಿಕಾರಾತ್ಮಕ ಸಂಸ್ಥೆಗಳಲ್ಲಿ ಪ್ರಭುತ್ವ ಮನೋಭಾವವುಳ್ಳ ಶಿಕ್ಷಕರ ಪದತಲದಲ್ಲಿ ಕಳೆಯಬೇಕಾಗುತ್ತದೆ. ಅಂತಹ ಬಿಗಿ ವಾತಾವರಣದಲ್ಲಿ ಬೆಳೆದ ಮಕ್ಕಳಿಗೆ ಕೊಂಚ ಸ್ವಾತಂತ್ರ್ಯ ದೊರೆತರೆ ಅದನ್ನು ಪೂರ್ಣ ದುರುಪಯೋಗ ಮಾಡಿಕೊಳ್ಳುವುದು ಕಂಡುಬರುತ್ತದೆ. ಆದಕಾರಣ ಮಕ್ಕಳಿಗೆ ಮುಕ್ತವಾತಾವರಣವನ್ನು ಕಲ್ಪಿಸಿ, ಅವರ ಶಕ್ತಿ ಸಾಮರ್ಥ್ಯಗಳು ಯುಕ್ತರೀತಿಯಲ್ಲಿ ಬಳಸುವಂತಾಗಬೇಕು. ಶಾಲೆಯಿಂದ ಮಕ್ಕಳು ತಮ್ಮ ಮನೆಗಳಿಗೆ ಮರಳುವಾಗ ಶಾಲೆಯಲ್ಲಿ ಏನೋ ಸಾಧಿಸಿದೆವೆಂಬ ತೃಪ್ತಿ ಅವರ ಮುಖಗಳಲ್ಲಿ ಹೊಮ್ಮುವಂತಾಗಬೇಕು.

ಆಂಗ್ಲ ಶಿಕ್ಷಣ ಪದ್ಧತಿ ಭಾರತದಲ್ಲಿ ಜಾರಿಗೆ ಬಂದಾಗಿನಿಂದಲೂ ಮಕ್ಕಳ ಮಿದುಳಿಗೆ ಅರ್ಥವಿಲ್ಲದ ವಿಷಯಗಳನ್ನು ತುರುಕುವ ವಿಧಾನವನ್ನು ಅನುಸರಿಸಲಾಗುತ್ತಿದೆ. ಈ ನೀರಸ ವಿಧಾನವನ್ನು ಇಲ್ಲಗೈಯಲು ಅನೇಕ ಬಾರಿ ಪ್ರಯತ್ನಿಸಿದರೂ ಅದು ಗಟ್ಟಿಯಾಗಿ ನಿತ್ತರಿಸಲೆತ್ನಿಸುತ್ತಿದೆ. ಮಕ್ಕಳ ಅಂತರ್ಗತವಾದ ಶಕ್ತಿಗಳನ್ನು ಪ್ರತಿಭೆಗಳನ್ನು ವಿವೇಚನಾತ್ಮಕವೂ ವೈಜ್ಞಾನಿಕವೂ ಆದ ಮಾರ್ಗಗಳಿಂದ ಬಯಲುಗೈದು ಸತ್ವಯುತಗೊಳಿಸಬೇಕು. ಉಚ್ಚಶಿಕ್ಷಣ ಸಂಸ್ಥೆಗಳಲ್ಲಿ ಬೋಧನಕ್ರಮವನ್ನು ಮಾರ್ಪಡಿಸಬೇಕೆಂದು ರಾಧಾಕೃಷ್ಣನ್ ಆಯೋಗವು ಸೂಚಿಸಿದೆ. ಸೆಕೆಂಡರಿ ಶಿಕ್ಷಣ ಮಟ್ಟದಲ್ಲಿ ಬೋಧನಕ್ರಮವನ್ನು ಸಂಚಲನಾತ್ಮಕಗೊಳಿಸಬೇಕೆಂದು ಶಿಫಾರಸು ಮಾಡಿದರೂ ಯಾವ ಬದಲಾವಣೆ ಈ ವರೆಗೆ ಕಾರ್ಯಗತವಾಗಿಲ್ಲ. ಓಬೀರಾಯನ ಕಾಲದ ಬೋಧನ ಕ್ರಮಗಳೇ ಜಾರಿಯಲ್ಲಿದ್ದು ರಾಷ್ಟ್ರೀಯ ನಿಧಿಗಳ ಅಪವ್ಯಯಕ್ಕೆ ಕಾರಣಗಳಾಗಿವೆ. ಮಾನವಿಕ ಸಂಪನ್ಮೂಲಗಳನ್ನು ಸತ್ವಯುತಗೊಳಿಸಲು ವಿಫಲವಾಗಿವೆ.

ಪಾಶ್ಚಾತ್ಯ ಮುಂದುವರಿದ ರಾಷ್ಟ್ರಗಳು ವಿದ್ಯಾರ್ಥಿಗಳ ಬೌದ್ಧಿಕ ಶಕ್ತಿಗಳನ್ನು ವಿಕಸಿಸಲು ಸೂಕ್ತ ಕ್ರಮಗಳನ್ನು ಕೈಗೊಂಡು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನು ಇಡುತ್ತಿರುವಾಗ, ನಾವು ಕೈಕಟ್ಟಿ ಕುಳಿತುಕೊಳ್ಳುವುದು ಸಲ್ಲದು. ಈ ದಿಶೆಯಲ್ಲಿ ಶಿಕ್ಷಕರು, ಮುಖ್ಯೋಪಾಧ್ಯಾಯರು, ಆಡಳಿತ ವರ್ಗದವರು ಮತ್ತು ಶಿಕ್ಷಣವೇತ್ತರು ಬೋಧನವನ್ನು ಪರಿಣಾಮಕಾರಕ ಹಾಗೂ ಸಂಚಲನಾತ್ಮಕಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

ಸಂಚಲನಾತ್ಮಕ ಬೋಧನಕ್ರಮ

ಸಂಚಲನಾತ್ಮಕ ಬೋಧನಕ್ರಮದ ಮೂಲಭೂತ ಧೋರಣೆ ಎಂದರೆ, ಬೋಧನೆಯಲ್ಲಿ ಮಕ್ಕಳ ಅನುಭವಗಳಿಗೆ ಆದ್ಯತೆ ಕೊಡುವುದು. ಬೋಧನದ ಉದ್ದೇಶ ಕೇವಲ ವಿಷಯಗಳನ್ನು ರವಾನಿಸುವುದು ಮಾತ್ರವಲ್ಲ,

[3] Prof. Kothurkar quoted by C. S. Bennur: *What is Dynamic Teaching*, in Towards Effective Teaching (Karnatak University, Dharwar : 1966), p. 2

ಕಲಿಕೆಯಲ್ಲಿ ಮಕ್ಕಳನ್ನು ಬೌದ್ಧಿಕವಾಗಿ ಮಾನಸಿಕವಾಗಿ ಪಾಲುಗೊಳ್ಳುವಂತೆ ಮಾಡಿ, ಕಲಿಕಾನುಭವವನ್ನು ಪಡೆಯುವಂತೆ ಮಾಡಬೇಕು. ಬಹುತೇಕ ಶಿಕ್ಷಕರು, ಜ್ಞಾನವನ್ನು ಒದಗಿಸುವುದೇ ಬೋಧನೆಯ ಗುರಿ ಯೆಂದು ತಿಳಿದಿದ್ದಾರೆ. ಜ್ಞಾನಕ್ಕೂ ವಿಷಯಕ್ಕೂ ಇರುವ ಅರ್ಥವ್ಯತ್ಯಾಸ ನಮ್ಮ ಶಿಕ್ಷಕರಿಗೆ ತಿಳಿದಂತೆ ಕಾಣುವುದಿಲ್ಲ. ಜ್ಞಾನವು, ಕೆಲವು ಮನೋವಿಜ್ಞಾನಿಗಳ ಪ್ರಕಾರ, ಒಂದು ವಿಧವಾದ ಮಾನಸಿಕವಾದ ಶಕ್ತಿ ಇಲ್ಲವೆ ಪ್ರತಿಭೆ. ಇದು ಅನುಭವಜನ್ಯವಾದುದು. ನಾಯಿಯೊಂದನ್ನು ಕುರಿತ ಅನುಭವವು ಇನ್ನೊಬ್ಬನ ಅನುಭವಕ್ಕಿಂತ ಭಿನ್ನವಾಗಿರುತ್ತದೆ. ಈ ಅನುಭವವೇ ನಾಯಿಯೊಡನೆ ಹೇಗೆ ವ್ಯವಹರಿಸ ಬೇಕೆಂಬುದನ್ನು ನಿರ್ಧರಿಸುತ್ತದೆ. ಅಂತೆಯೇ ಒಬ್ಬ ಮನುಷ್ಯನೊಡನೆ ವ್ಯವಹರಿಸಲು ಅವನ ನುಡಿ, ನಡೆ, ವರ್ತನೆ–ಮೊದಲಾದವುಗಳ ಪೂರ್ವಜ್ಞಾನ ಆವಶ್ಯಕ. ಜ್ಞಾನ ವರ್ಧಿಸಬೇಕಾದರೆ, ಪೂರ್ವಾನುಭವವು ಅನ್ಯರೊಡನೆ ಇನ್ನೂ ಉತ್ತಮವಾಗಿ ವ್ಯವಹರಿಸಲು, ವರ್ತಿಸಲು ಸಹಾಯಕವಾಗಬೇಕು. ಈ ಅನುಭವದ ಸಹಾಯದಿಂದಲೆ ಜ್ಞಾನಿಗಳು ಏನೆಲ್ಲ ಸಂದರ್ಭಗಳಲ್ಲಿಯೂ ಏನೆಂಥ ವ್ಯಕ್ತಿಗಳೊಡನೆಯೂ ಜಾಣತನ ದಿಂದಲೆ ವರ್ತಿಸುತಾರೆ. ನಾವು ಶಾಲೆಗಳಲ್ಲಿ ಮಕ್ಕಳಿಗೆ ಜ್ಞಾನವನ್ನು ಒದಗಿಸುವಲ್ಲಿ ಮಕ್ಕಳ ವರ್ತನೆಯ ಮೇಲೆ ಅತುಲವಾದ ಪ್ರಭಾವವನ್ನು ಬೀರಬೇಕು. ಅವರ ವರ್ತನೆಯನ್ನು ಮಾರ್ಪಡಿಸಬೇಕು. ಈ ಜ್ಞಾನವು ಏನೆಂಥ ಜೀವನದ ಜಟಿಲತೆಗಳಿಗೂ ಸಮರ್ಪಕವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವಂತೆ ಮಕ್ಕಳನ್ನು ತಯಾರಿಸಬೇಕು.

ಮಕ್ಕಳ ಸಂಸ್ಕಾರಗಳನ್ನು ಹೆಚ್ಚಿಸಲು ಶಿಕ್ಷಕರು ಕಲಿಕೆಯ ಅನುಭವ ಮಕ್ಕಳಿಗೆ ಆಗುವಂತೆ ಮಾಡು ವುದಲ್ಲದೆ ಈ ಅನುಭವ ವಿಸ್ತೃತವೂ ಶ್ರೀಮಂತವೂ ಆಗುವಂತೆ ಮಾಡಬೇಕು. ವಸ್ತುವಿಷಯಗಳನ್ನು ಕುರಿತ ಪರಿಕಲ್ಪನೆಗಳು ರಚನೆಗೊಳ್ಳುವುದು ಈ ಅನಭವಗಳ ಆಧಾರವಾಗಿಯೆ. ಉನ್ನತ ಮಟ್ಟದಲ್ಲಿ ಸಮಸ್ಯೆಯನ್ನು ಕುರಿತು ಆಲೋಚಿಸುವ, ಅರ್ಥವಿಸಿಕೊಳು ವ, ಒಳಭೇದಗಳನ್ನು ಗುರುತಿಸುವ, ತುಲನೆ ಮಾಡಿ ನೋಡುವ, ವರ್ಗೀಕರಿಸುವ ಮತ್ತು ನಿರ್ಣಯ ಕೈಗೊಳ್ಳುವ ವಿಷಯಗಳಲ್ಲಿ ಮಕ್ಕಳಿಗೆ ಅಗತ್ಯವಾದ ಸಹಾಯವನ್ನು ಒದಗಿಸಬೇಕು. ಇನ್ನೂ ಉನ್ನತ ಮಟ್ಟದಲ್ಲಿ ಊಹಾಪರಿಹಾರಗಳನ್ನು (Hypothesis) ನಿರ್ಮಿಸಿಕೊಂಡು ಅವನ್ನು ಪರೀಕ್ಷಿಸುವಲ್ಲಿ ತರಬೇತಿಯನ್ನು ಒದಗಿಸಬೇಕು. ಅಂದರೆ ಸಂಚಲನಾತ್ಮಕ ಬೋಧನೆಯ ಉದ್ದೇಶವೆಂದರೆ, ಅಂಕಿಅಂಶಗಳನ್ನು ಕಲೆಹಾಕುವುದು, ಅವನ್ನು ವರ್ಗೀಕರಿಸುವುದು, ವ್ಯವಸ್ಥಿಸುವುದು ಮತ್ತು ಅವುಗಳಲ್ಲಿನ ಸಂಬಂಧವನ್ನು ವಿಶ್ಲೇಷಿಸುವುದು. ಜ್ಞಾನ ಸಂಗ್ರಹಣೆಯು ಅನುಭವದೂರವಾದಲ್ಲಿ ಅದು ಅರ್ಥಹೀನವಾದ ಭಾರವಾಗಬಹುದು.

ಸಂಚಲನಾತ್ಮಕ ಬೋಧನೆಯು ಮತ್ತೊಂದು ಲಕ್ಷಣವನ್ನು ಹೊಂದಿರುತ್ತದೆ. ಅದೆಂದರೆ ಕ್ರಿಯಾತ್ಮಕವಾಗಿರುವುದು. ಮಕ್ಕಳು ಇನ್ನೂ ಸ್ಪಷ್ಟವಾಗಿ ಕಲಿಯಲು ಸಾಧ್ಯವಾಗುವುದು ಅವರನ್ನು ಅರ್ಥಪೂರ್ಣವಾದ ಚಟುವಟಿಕೆಗಳಲ್ಲಿ ನಿರತರನ್ನಾಗಿಸಿದಾಗ. ಮಾಡುವಿಕೆಯ ಮೂಲಕ ಕಲಿಸುವುದು ಸಂಚಲನಾತ್ಮಕ ಬೋಧನೆಯ ಮತ್ತೊಂದು ಮುಖ್ಯ ಲಕ್ಷಣ. ಪ್ರತಿಯೊಂದು ಪಠ್ಯವಿಷಯವನ್ನೂ ಉದ್ದೇಶಪೂರ್ವಕ ಮತ್ತು ನಿಯೋಜಿತ ಚಟುವಟಿಕೆಗಳ ಮೂಲಕ ಬೋಧಿಸಬೇಕು. ಶೈಕ್ಷಣಿಕ ಚಟುವಟಿಕೆ ಗಳಲ್ಲಿ ಭಾಗವಹಿಸಲು ಸಾಧ್ಯವಿದ್ದಷ್ಟು ಅವಕಾಶಗಳನ್ನು ಕಲ್ಪಿಸಬೇಕು. ಈ ಚಟುವಟಿಕೆಗಳಿಂದಾಗಿ, ವಸ್ತುವಿಷಯಗಳನ್ನು ನೆನಪಿನ ಸೆರೆಯಲ್ಲಿ ಬಂಧಿಸುವ ಪ್ರಯತ್ನ ಮಾಡದೆ, ಅವುಗಳ ಅಂತರ್ದೃಷ್ಟಿಯನ್ನು ಪಡೆಯುತ್ತಾನೆ. ವಸ್ತುವಿಷಯಗಳೆಂದರೇನು? ಮಾನವಕುಲದ ಗಮನಾರ್ಹವಾದ ಅನುಭವಗಳ ವ್ಯವಸ್ಥಿತ ರೂಪವೇ ವಸ್ತುವಿಷಯವಾಗಿರುತ್ತದೆ. ಆದ ಕಾರಣವೆ ಸಂಚಲನಾತ್ಮಕ ಬೋಧನೆಯಲ್ಲಿ ಚಟುವಟಿಕೆಯು ಕೇಂದ್ರಸ್ಥಾನವನ್ನು ಪಡೆದಿರುತ್ತದೆ. ಕ್ರಿಯಾರೂಪಿಯಾದ ಬೋಧನವು ಕಲಿಕೆಯನ್ನು ಜೀವಂತಗೊಳಿಸುತ್ತದೆ. ಬೋಧನೆಯು ಚಟುವಟಿಕೆಗಳ ಮೂಲಕ ನಡೆದರೆ, ಕಲಿಕೆಯು ಪರಿಣಾಮಕಾರಿ ಯಾಗುವುದಲ್ಲದೆ ಮಕ್ಕಳು ಉತ್ಸುಕತೆಯಿಂದ ತೃಪ್ತಿಯಿಂದ ಬೀಗಬಹುದು.

ಸಂಪ್ರದಾಯ ಶಿಕ್ಷಣದ ಪ್ರಕಾರ ಕಲಿಕೆ ಎಂದರೆ ಒಂದು ಮಾನಸಿಕವಾದ ಶಿಸ್ತಿಗೆ ಸಮ. ಪಠ್ಯ ವಿಷಯ ಮಕ್ಕಳಿಗೆ ಹಿಡಿಸದಿದ್ದರೂ ಅವನ್ನು ತಮ್ಮ ಇಚ್ಛೆಗೆ ವಿರುದ್ಧವಾಗಿ ಕಲಿಯಲೇಬೇಕು. ಸಂಪ್ರದಾಯ ಶಿಕ್ಷಣ ಕ್ರಮವು ಕೆಲವೊಮ್ಮೆ ಮಕ್ಕಳಲ್ಲಿ ಕಣ್ಣೀರನ್ನು ಸುರಿಸುವಂತೆ ಮಾಡುತ ದೆ. ಕಲಿಕೆಯು ಸಂಕಟಕರವಾದ

ಅನುಭವಕ್ಕೆ ಕಾರಣವಾದಲ್ಲಿ ಮಕ್ಕಳು ಶಾಲೆಯಿಂದ ನಿರ್ಗಮಿಸಬಹುದು. ಆದಕಾರಣ ಕಲಿಕೆಯು ಸಂತೋಷದಾಯಕ ಅನುಭವಕ್ಕೆ ಕಾರಣವಾಗಬೇಕು. ಕಲಿಕೆಯ ಪ್ರಕ್ರಿಯೆಯೆಲ್ಲವೂ ಹರ್ಷದಾಯಕವಾಗಿದ್ದು ಕೊನೆಗೆ ಕಾರ್ಯಸಾಧನೆಯ ಪ್ರಯುಕ್ತ ಮಕ್ಕಳ ಮುಖಗಳಲ್ಲಿ ಸಂತೋಷೋತ್ಸಾಹಗಳು ಚೆಲ್ಲುವರಿಯಬೇಕು. ಬೋಧನ ಮತ್ತು ಕಲಿಕೆಗಳು ಸಂತಸದ ಚಟುವಟಿಕೆಗಳಾಗಬೇಕು. ಶಾಲಾ ತರಗತಿಗಳು ಮಕ್ಕಳನ್ನೂ ಶಿಕ್ಷಕರನ್ನೂ ಆಕರ್ಷಿಸಿ ಅವರನ್ನು ಈ ಸಹಕಾರಿ ಸಾಹಸೋದ್ಯಮದಲ್ಲಿ ತೊಡಗಿಸಬೇಕು. ಸಂತಸದಿಂದ ತುಂಬಿದ ಆವರಣದಲ್ಲಿ ಬೋಧನೆಯು ಕುತೂಹಲಕಾರಿಯಾಗುವುದಲ್ಲದೆ ಜ್ಞಾನೋತ್ಕರ್ಷಣೆಗೆ ಕಾರಣವಾಗುತ್ತದೆ. ಇಂತಹ ಜ್ಞಾನ ಪ್ರಚೋದನೆಗೆ ಕಾರಣವಾಗುವ ಪರಿಸರದಲ್ಲಿ ಮಕ್ಕಳು ಕ್ರಿಯೋನ್ಮುಖರಾದರೆ ಮುಂದೆ ತಮ್ಮಷ್ಟಕ್ಕೆ ತಾವೇ ಜ್ಞಾನಾನ್ವೇಷಣೆಯಲ್ಲಿ ನಿರತವಾಗುವುದು ನಿಶ್ಚಿತ.

ಅನೇಕರು ಈ ಕೋಮಲ ಕಷ್ಟದೂರವಾದ ಶಿಕ್ಷಣವನ್ನು ಆಕ್ಷೇಪಿಸುವುದುಂಟು. ಮಕ್ಕಳು ಜೀವನವನ್ನು ಕುಸುಮ ಕೋಮಲವಾದ ಹಾಸಿಗೆಯೆಂದು ಪರಿಭಾವಿಸಬಾರದು. ಅವರಿಗೆ ಅತಿ ಕಠಿಣವಾದ ತರಬೇತಿಯನ್ನು ಶಾಲಾ ದಿನಗಳಲ್ಲಿ ಒದಗಿಸಬೇಕು. ಕಠೋರವಾದ ಮಾನಸಿಕ ಹಾಗೂ ಬೌದ್ಧಿಕವಾದ ಶಿಸ್ತಿಗೆ ಒಳಪಡಿಸಬೇಕು. ಶಿಕ್ಷಣದ ಮೂಲಕ ಜೀವನ ಅದೆಷ್ಟು ಘೋರವಾದುದು. ಜಟಿಲವಾದುದು. ಭಯಾನಕವಾದುದು ಎಂಬುದನ್ನು ಮಕ್ಕಳ ಅವಗಾಹನೆಗೆ ತರಬೇಕು. ಇದು ಸಂಪ್ರದಾಯಿಗಳ ವಾದ. ಮಕ್ಕಳಿಗೆ ಅವರ ಎಳವೆಯಲ್ಲಿಯೇ ಜೀವನದ ಕುರುಕ್ಷೇತ್ರವನ್ನು ಪರಿಚಯಿಸುವುದು ಸಲ್ಲದ . ಮಕ್ಕಳ ಸುಕುಮಾರ ಜೀವನವನ್ನು ಭಯೋತ್ಪಾದಕ ಘಟನೆಗಳಿಂದ ಸಿಂಪಡಿಸಲು ಶಿಕ್ಷಕರಿಗೆ ಯಾವ ಅಧಿಕಾರವಿದೆ? ಅವರು ಇಂದೂ ಎಂದೆಂದಿಗೂ ಸಂತೋಷವಾಗಿಯೇ ಇರಬೇಕು. ಪ್ರಗತಿಪರವಾದ ಶಿಕ್ಷಣದ ಮೂಲೋದ್ದೇಶ ಮಕ್ಕಳಿಗೆ ಸುಖ ಸಂತೋಷಗಳನ್ನು ಒದಗಿಸುವುದೆ. ಶಿಕ್ಷಣವು ಒದಗಿಸುವ ವಸ್ತು ವಿಷಯ. ಬೋಧನ ವಿಧಾನ. ಮಾರ್ಗದೃಷ್ಟಿಗಳು ಮಕ್ಕಳ ಆಸಕ್ತಿಗಳು. ಅಭಿರುಚಿ. ಅಪೇಕ್ಷೆಗಳಿಗೆ ಅನುಗುಣವಾಗಿರಬೇಕು.

೧೯೫೨–೫೩ರ ಸೆಕೆಂಡರಿ ಶಿಕ್ಷಣ ಆಯೋಗವು ಸಂಚಲನಾತ್ಮಕ ಬೋಧನ ಪದ್ಧತಿಯ ಗುಣಲಕ್ಷಣಗಳನ್ನು ಇಂತು ಚಿತ್ರಿಸುತ್ತದೆ:[4]

೧ ಸಂಚಲನಾತ್ಮಕ ಬೋಧನ ಕ್ರಮವು ಜ್ಞಾನ ಒದಗಣೆಯಲ್ಲಿ ಸಮರ್ಥವಾಗಿ ತೊಡಗುವುದಲ್ಲದೆ ವಿದ್ಯಾರ್ಥಿಗಳು ಉತ್ತಮವಾದ ಮೌಲ್ಯಗಳನ್ನೂ ವರ್ತನೆಗಳನ್ನೂ ಹವ್ಯಾಸಗಳನ್ನೂ ಬೆಳಸಿಕೊಳ್ಳಲು ಕಾರಣವಾಗುತ್ತದೆ.

೨ ಕೆಲಸದಲ್ಲಿ ನಿಷ್ಠವಾದ ಆಸಕ್ತಿಯನ್ನೂ ತನ್ಮಯತೆಯನ್ನೂ ಬೆಳಸಿ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಸಮರ್ಥವಾಗಿಯೂ ಸಮರ್ಪಕವಾಗಿಯೂ ಚೊಕ್ಕಟವಾಗಿಯೂ ಮಾಡುವಂತೆ ಪ್ರೇರೇಪಿಸುತ್ತದೆ.

೩ ಸಂಚಲನಾತ್ಮಕ ಬೋಧನೆಯಲ್ಲಿ ಬೋಧನೆಗಿಂತಲೂ ವಿಶೇಷವಾಗಿ ಕಲಿಕೆಯ ಸನ್ನಿವೇಶಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗುತ್ತದೆ. ಈ ಉದ್ದೇಶ ಸಾಧಿತವಾಗುವುದು ಶಾಲೆಗಳಲ್ಲಿ ಚಟುವಟಿಕೆಗಳಿಗೆ ಯೋಜನಾ ವಿಧಾನಗಳಿಗೆ ಪ್ರಾಧಾನ್ಯತೆಯನು ಕೊಟ್ಟಾಗ.

೪ ಈ ಕ್ರಮವು ಕಲಿಕೆಯನು ಚಟುವಟಿಕೆಗಳ ಮೂಲಕ ಸಾಧ್ಯವಾಗಿಸುವುದಲ್ಲದೆ. ತರಗತಿಯಲ್ಲಿ ಕಲಿತುದನ್ನು ಜೀವನದಲ್ಲಿ ಅನ್ವಯಿಸಲು ಪ್ರೇರೇಪಿಸುತ್ತದೆ. ಅಂದರೆ ಶಾಲೆಗಳಲ್ಲಿ ಮಕ್ಕಳಿಗೆ ಅಭಿವ್ಯಕ್ತಿಸಲು ಅನುಕೂಲವಾದ ಕಾರ್ಯಕ್ರಮಗಳನ್ನೇ ಒದಗಿಸಬೇಕು.

---

[4] Report of the Secondary Education Commission, (New Delhi : Ministry of Education, 1952) pp. 96–97

೫ ಸಂಚಲನಾತ್ಮಕ ಮಾರ್ಗದೃಷ್ಟಿಯುಳ್ಳ ಬೋಧನೆಯು ಸ್ಪಷ್ಟವಾದ ಆಲೋಚನೆಗೆ, ಅಭಿವ್ಯಕ್ತಿಗೆ (ಮಾತು ಮತ್ತು ಬರಹ) ವಿಶೇಷವಾದ ಸ್ಥಾನ ಕಲ್ಪಿಸುತ್ತದೆ.

೬ ಈ ಬೋಧನ ಕ್ರಮವು ಸ್ವಯಂ ನಿರ್ದೇಶಿತ ಅಧ್ಯಯನಕ್ಕೆ, ಸ್ವಪ್ರಯತ್ನದಿಂದ ವಿಷಯ ಸಂಗ್ರಹಣೆಗೆ ಉಚಿತವಾದ ತರಬೇತಿಯನ್ನು ಒದಗಿಸುತ್ತದೆ.

೭ ಸಂಚಲನಾತ್ಮಕ ಮಾರ್ಗದೃಷ್ಟಿಯುಳ್ಳ ಬೋಧನವು ಮಕ್ಕಳಿಗೆ ಅಭಿರುಚಿಯುಳ್ಳ ವಸ್ತುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತದೆ. ಈ ಮಾರ್ಗಾವಲಂಬನೆಯಿಂದ ಪ್ರತಿಭಾವಂತರು, ಸಾಮಾನ್ಯರು, ಮಂದಮತಿಗಳು ತಮ್ಮ ಶಕ್ತಿಗೆ ಅನುಸಾರವಾಗಿ ಪ್ರಗತಿಯನ್ನು ಸಾಧಿಸಬಹುದು. ಮಕ್ಕಳಿಗೆ ಸಮೂಹದಲ್ಲಿ ಕೂಡಿ ಕಲಿಯುವ ಅವಕಾಶವನ್ನು ಕಲ್ಪಿಸಲಾಗುತ್ತದೆ. ಇದರಿಂದ ಜೀವನಕ್ಕೆ ಆವಶ್ಯಕವಾದ ಸಹಕಾರದ ಮಹತ್ವವನ್ನು ಅರಿತು ಕಲಿಯಬಹುದು.

೮ ಸಂಚಲನಾತ್ಮಕ ಬೋಧನೆಯು ಮಕ್ಕಳ ಕಲಿಕೆಗೆ ನೈಜತೆಯನ್ನೂ ಮೂರ್ತ ಸ್ವರೂಪವನ್ನೂ ದೊರಕಿಸಿ ಕಲಿಕೆಗೂ–ಜೀವನಕ್ಕೂ, ಶಾಲೆಗೂ–ಸಮುದಾಯಕ್ಕೂ ಇರುವ ಅಂತರವನ್ನು ಕರಗಿಸುತ್ತದೆ.

ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆ ಸಂಶೋಧನೆ

ಉಚ್ಚ ಸಂಸ್ಥೆಗಳಲ್ಲಿಯೂ ಬೋಧನೆ ಮತ್ತು ಕಲಿಕೆಗಳು ಸಮರ್ಪಕವಾಗಿ ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬುದು ಜನಜನಿತವಾಗಿದೆ. ಬೋಧನೆಯು ತನ್ನ ಪ್ರಖರತೆಯನ್ನೂ ಪರಿಣಾಮಕತೆಯನ್ನೂ ಕಳೆದುಕೊಂಡಿದೆ ಅದು ಪರೀಕ್ಷೆಗಳತ್ತ ಮುಖ ಮಾಡಿರುವುದರಿಂದ. ಅಧ್ಯಾಪಕರು ಪಠ್ಯ ವಿಷಯವನ್ನು ಮುಗಿಸುವತ್ತ ತಮ್ಮ ವಿಶೇಷ ಗಮನವನ್ನು ಕೊಡುತ್ತಿರುವುದು ಕಂಡುಬರುತ್ತಿದೆ. ಶಿಕ್ಷಕರ ವ್ಯವಹಾರ ವಾರವೊಂದರಲ್ಲಿ ನಿರ್ದಿಷ್ಟ ಸಂಖ್ಯೆಯ ಉಪನ್ಯಾಸಗಳನ್ನು ಕೊಡುವುದನ್ನು ಕುರಿತಿರುತ್ತದೆ. ವಿದ್ಯಾರ್ಥಿಗಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿಯೂ ಒಳಗಾಗಿಸುವ ಪ್ರಯತ್ನ ಎಲ್ಲೂ ನಡೆಯುತ್ತಿರುವುದು ಕಂಡುಬರುತ್ತಿಲ್ಲ. ಉಪನ್ಯಾಸದ ಉದ್ದೇಶ ವರುಷವೊಂದರಲ್ಲಿ ನೇಮಿತ ಪಠ್ಯ ಪುಸ್ತಕದಲ್ಲಿರುವ ವಿಷಯವನ್ನು ವಿದ್ಯಾರ್ಥಿಗಳಿಗೆ ರವಾನಿಸುವುದಾಗಿರುತ್ತದೆ. ಕೆಲವು ಶಿಕ್ಷಕರು ಒಂದು ಘಂಟೆ ಪೂರ್ಣ ನೋಟ್ಸ್ ಬರೆಸುವುದರಲ್ಲೇ ತೊಡಗಿರುವುದು ಕಂಡುಬರುತ್ತದೆ. ಭಾರತದಲ್ಲಿ ಶಿಕ್ಷಣವು ಏಮ್ಮುಖವಾದುದೇ ಹೊರತು ಇಮ್ಮುಖವಾದುದಲ್ಲ. ಪ್ರಶ್ನೋತ್ತರಗಳಿಗೆ, ಚರ್ಚೆಗಳಿಗೆ, ಸಂಶಯಗಳನ್ನು ಪರಿಹರಿಸಿಕೊಳ್ಳಲಿಕ್ಕೆ ಅವಕಾಶವಿರುವುದಿಲ್ಲ.

• ಪ್ರಚಲಿತದಲ್ಲಿರುವ ಉಚ್ಚ ಶಿಕ್ಷಣದ ನಿಷ್ಕೃಷ್ಟ ಸ್ವರೂಪವನ್ನು ಇಂತು ವಿವರಿಸಲಾಗಿದೆ: ಶಿಕ್ಷಣವು ಒಂದು ನಿಗೂಢ ಪ್ರಕ್ರಿಯೆ. ಇದು ಪ್ರಾಧ್ಯಾಪಕನ ಮುಖ್ಯಾಂಶಗಳ ಟಿಪ್ಪಣಿಯಿಂದ (notes) ವಿದ್ಯಾರ್ಥಿಯ ಬರಹದ ಪುಸ್ತಕಕ್ಕೆ ಅವನ ಲೇಖನಿಯ ಮೂಲಕ ರವಾನಿತವಾಗುತ್ತದೆ. ಈರ್ವರೂ ಈ ವಿಷಯಾಂಶಗಳನ್ನು ಅರ್ಥವಿಸಿಕೊಂಡಿರುವುದಿಲ್ಲ. ಪ್ರಾಧ್ಯಾಪಕನೆಂದರೆ ವಿದ್ಯಾರ್ಥಿಗಳು ನಿದ್ರಾವಸ್ಥೆಯಲ್ಲಿರುವಾಗ ಮಾತನಾಡುವವನು. ನೋಟ್ಸ್‌ನಲ್ಲಿ ಕಂಡು ಬರುವ ವಿಷಯವನ್ನು ಈ ಈರ್ವರು ಅದೇಕೆ ಗ್ರಹಿಸುವುದಿಲ್ಲ? ಇದಕ್ಕೆ ಬಹುಮುಖ್ಯ ಕಾರಣವೆಂದರೆ ಪ್ರಾಧ್ಯಾಪಕನು ಹೇಳುವ ವಿಷಯ ವಿದ್ಯಾರ್ಥಿಗಳು ಕೇಳುವ ವಿಷಯಗಳು ಈರ್ವರಿಗೂ ಸಂಬಂಧಿಸಿರುವುದಿಲ್ಲ. ಅವರ ಅನುಭವಕ್ಕೆ ಹೊರತಾಗಿರುತ್ತದೆ. ಯಾರೋ ಆಗಲೇ ನಿರ್ಮಿಸಿದ ಸೃಷ್ಟಿಸಿದ ವಿಷಯಗಳನ್ನು ಅಂದರೆ ಗ್ರಂಥಸ್ತವಾದ ವಿಷಯಗಳನ್ನು ಪ್ರಾಧ್ಯಾಪಕನು ಕಲೆಹಾಕಿ, ಅವನ್ನು ಕುರಿತು ಚಿಂತಿಸದೆ. ಆಲೋಚಿಸದೆ ಹಾಗೆ ಹಾಗೆಯೇ ವಿದ್ಯಾರ್ಥಿಗಳಿಗೆ ರವಾನಿಸುತ್ತಾನೆ. ವಿದ್ಯಾರ್ಥಿಗಳು ಕೂಡ ಪ್ರಶ್ನಿಸಿ ತಮ್ಮ ಸಂಶಯಗಳನ್ನು ಪರಿಹರಿಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಸಾಮಾನ್ಯವಾಗಿ ಪ್ರಾಧ್ಯಾಪಕನು ಉತ್ತಮ ವಿದ್ವಾಂಸನಾಗಿರುತ್ತಾನೆ, ಉತ್ತಮ ಆಲೋಚಕನಾಗಿರುವುದಿಲ್ಲ. ಈತನು ಸಮರ್ಥವಾಗಿ ಪಠ್ಯ ಪುಸ್ತಕವನ್ನು ಕುರಿತು ವ್ಯಾಖ್ಯಾನಿಸುತ್ತಾನೆ. ಈ ವ್ಯಾಖ್ಯಾನವನ್ನು ಕುರಿತು ಪ್ರಶ್ನೆ ಮಳೆಗರೆವ, ಸವಾಲನ್ನು ಹಾಕುವ ಪಂಡಿತಮತಿಗಳು ಧೀರಮತಿಗಳು ವಿದ್ಯಾರ್ಥಿವೃಂದದಲ್ಲಿ ಕಾಣಸುವುದು ಅಪೂರ್ವವೆ.

ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಉಪನ್ಯಾಸ ಪದ್ಧತಿ ಬಹುಕಾಲದಿಂದ ಬಳಕೆಯಲ್ಲಿರುವುದು ಕಂಡು ಬರುತ್ತದೆ. ಇದು ಮಕ್ಕಳಿಗೆ ಸವಾಲನ್ನು ಹಾಕುವ ಕ್ರಮವಾಗಿ ಪರಿಗಣಿತವಾಗಿಲ್ಲ. ಅಧ್ಯಾಪಕನು ತನ್ನ ತಾರುಣ್ಯದಲ್ಲಿ ಉತ್ಸಾಹದಿಂದ ಕೂಡಿದ ದಿನಗಳಲ್ಲಿ ವಿಷಯಗಳನ್ನು ಸಂಗ್ರಹಿಸಿ ಇದನು ತಾನು ನಿವೃತ್ತನಾಗುವವರೆವಿಗೂ ಉಪಯೋಗಿಸಬಹುದು. ವಿದ್ಯಾರ್ಥಿಗಳನ್ನು ನಾಲ್ಕು ಗೋಡೆಗಳ ಮಧ್ಯೆ ಸೆರೆ ಹಾಕಿ ಈ ನೀರಸವಾದ ಸಂಗ್ರಹಿತ ವಿಷಯವನ್ನು ಅವರ ಮೇಲೆ ಒತ್ತಾಯಪೂರ್ವಕವಾಗಿ ಪ್ರಯೋಗಿಸುವುದು ಎಲ್ಲೂ ಕಂಡುಬರುತ್ತದೆ. ಕಡ್ಡಾಯವಾದ ಹಾಜರಿಯನ್ನು ತೆಗೆದು ಹಾಕಿ, ವಿದ್ಯಾರ್ಥಿಗಳಿಗೆ ಉತ್ತಮ ಪಠ್ಯ ಹಾಗೂ ಇತರ ಗ್ರಂಥಗಳನ್ನು ಒದಗಿಸಿ, ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆಗಳಲ್ಲಿ ಉತ್ತರಿಸಲು ಅವಕಾಶ ಕಲ್ಪಿಸಿದಲ್ಲಿ ಶೇಕಡ ಐವತ್ತರಿಂದ ಅರವತ್ತು ವಿದ್ಯಾರ್ಥಿಗಳು ಉಪನ್ಯಾಸ ತರಗತಿಗಳಿಗೆ ಚಕ್ಕರ್ ಹಾಕುವುದು ದಿಟ. ಉಪನ್ಯಾಸದ ಮತ್ತೊಂದು ನ್ಯೂನತೆ ಎಂದರೆ, ಅನ್ಯ ವಿಷಯಗಳನ್ನು ಪ್ರಸ್ತಾಪಿಸುವುದು. ಸಂಬಂಧವಿಲ್ಲದ ಉದಾಹರಣೆಗಳನ್ನು, ಕತೆಗಳನ್ನು ಉಪಕತೆಗಳನ್ನು ಹೇಳುವುದರಿಂದ ನಿರ್ದಿಷ್ಟ ಪಾಠವನ್ನು ಮುಗಿಸದೆ ಇರುವುದು. ಮೇಲಾಗಿ ವಸ್ತು ವಿಷಯಗಳು ಪಠ್ಯ ಪುಸ್ತಕಗಳಲ್ಲಿ ತುಂಬಿತುಳುಕುತ್ತಿರುವಾಗ ಪುನಃ ಅವನ್ನೇ ಸಂಕಲಿಸಿ ಉಪನ್ಯಾಸ ಬಿಗಿಯಲೆತ್ನಿಸುವುದು ಅತ್ಯಕ್ರಮಣವಾದುದು. ಇದೆ ವಿಷಯವನು ಪಠ್ಯ ಪುಸ್ತಕಗಳಿಂದ, ಆಧಾರ ಗ್ರಂಥಗಳಿಂದ, ನಿಯತ ಕಾಲಿಕೆಗಳಿಂದ ಸಂಗ್ರಹಿಸಲು ವಿದ್ಯಾರ್ಥಿಗಳನ್ನು ಪ್ರಚೋದಿಸುವುದು ಉತ್ತಮ. ವಿಶ್ವದ ವಿದ್ಯಾರ್ಥಿಗಳ ಅಭಿಪ್ರಾಯ ಪಡೆಯಲು ಸಮೀಕ್ಷೆ ನಡೆಸಿದಾಗ, ಉಪನ್ಯಾಸ ಕ್ರಮವು ಅತ್ಯಂತ ಟೀಕೆಗೆ ಒಳಗಾಗಿದ್ದು, ಸಮ್ಮೇಳನ ಮತ್ತು ಪುಟ್ಟ ವಿಚಾರಗೋಷ್ಠಿ ಕ್ರಮಗಳಿಗೆ ಹೆಚ್ಚಿನ ಬೇಡಿಕೆ ಇದ್ದುದು ಕಂಡುಬಂತು.[5] ಉಪನ್ಯಾಸ ಕ್ರಮವನ್ನು, ಹೊಸದಾಗಿ ಸಂಶೋಧಿತ ವಿಷಯಗಳನ್ನು ಪ್ರಚಾರಿಸಲು, ನವ್ಯವೂ ಸ್ವಂತವೂ ಆದ ವೈಜ್ಞಾನಿಕ ತತ್ತ್ವಗಳನು ಆವಿಷ್ಕರಿಸಿದಾಗ ಅಥವಾ ಸಾಹಿತ್ಯವನ್ನು ಕಲೆಯನು ನವ್ಯದೃಷ್ಟಿಯಿಂದ ವ್ಯಾಖ್ಯಾನಿಸುವಾಗ ಬಳಸುವುದುಚಿತ.

ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಬೋಧನಕ್ರಮದ ಪ್ರಖರತೆಯನ್ನು ತತ್ತ್ವವನ್ನು ಹೆಚ್ಚಿಸಲು ಕೊಠಾರಿ ಶಿಕ್ಷಣ ಆಯೋಗವು ಈ ಕೆಳಗಿನ ಸಲಹೆಗಳನ್ನು ಮಾಡಿದೆ.[6]

೧. ಒದಗಿಸುವ ಪಠ್ಯವಿಷಯಗಳು ಸ್ಥಾಯಿಯಾಗಿರಬಾರದು, ಬದಲಿಸಿಕೊಳ್ಳಲು ಅವಕಾಶ ವಿರಬೇಕು. ತಮಗೆ ಇಷ್ಟವೆನಿಸಿದ ವಿಷಯಗಳನ್ನು ಆಯ್ದುಕೊಳ್ಳಲು ವಿದ್ಯಾರ್ಥಿಗಳಿಗೆ ಪೂರ್ಣ ಸ್ವಾತಂತ್ರ್ಯವಿರಬೇಕು.

೨ ಯಾಂತ್ರಿಕವಾದ ಔಪಚಾರಿಕವಾದ ಉಪನ್ಯಾಸಕ್ರಮದ ಪ್ರಮಾಣವನ್ನು ಕಡಿಮೆ ಮಾಡಿ, ವಿಚಾರಗೋಷ್ಠಿ, ಚರ್ಚಾವಿಧಾನ, ಸಮ್ಮೇಳನವಿಧಾನ, ಸ್ವಯಂನಿರ್ದೇಶಿತ ಅಧ್ಯಯನ ಮೊದಲಾದವುಗಳನು ಚಲಾವಣೆಗೆ ತರುವುದು.

೩ ಬೋಧನ ವಿಧಾನವು ವಿದ್ಯಾರ್ಥಿಗಳಲ್ಲಿ ಉರುಹಾಕುವ ಪರಿಪಾಠವನ್ನು ತಪ್ಪಿಸಿ, ಅವರ ಕುತೂಹಲವನ್ನೂ ಸಮಸ್ಯೆಗಳನ್ನು ಪರಿಹರಿಸುವ ಶಕ್ತಿಯನ್ನೂ ಮತ್ತು ಸ್ವಂತಿಕೆಯನ್ನೂ ಹೆಚ್ಚಿಸುವಂತಿರಬೇಕು.

ಉಚ್ಚಶಿಕ್ಷಣ ಸಂಸ್ಥೆಗಳಲ್ಲಿ ಬೋಧನವನ್ನು ಶಕ್ತಿಯುತಗೊಳಿಸಲು ಈ ಮೇಲಿನ ಸಲಹೆಗಳು ಉಪಯುಕ್ತವಾಗುವುದರಲ್ಲಿ ಸಂಶಯವಿಲ್ಲ. ಆದರೆ ಶಿಕ್ಷಣದ ಅತ್ಯುನ್ನತ ಸಂಸ್ಥೆಗಳಲ್ಲಿ, ಮುಖ್ಯವಾಗಿ ಸ್ನಾತಕೋತ್ತರ ವಿಭಾಗಗಳಲ್ಲಿ ಅತ್ಯುನ್ನತ ಪದವಿಗಾಗಿ ಅಭ್ಯಾಸ ನಿರತರಾದವರಿಗೆ ನಿತ್ಯ ಬೋಧನೆ

---

[5] Swamy Ranganathananda: *India's Educational Vision*, The Ramakrishna Mission, (Calcutta : 1966), p. 39

[6] Report of the Education Commission, 1964–66. (New Delhi : Govt of India, Ministry of Education, 1966), pp. 86–87

ಅವಶ್ಯಕವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸುಮಾರು ಹದಿನೈದು ವರ್ಷಗಳ ಕಾಲ ನಿರಂತರವಾಗಿ ವಿವಿಧ ಹಂತಗಳಲ್ಲಿ ಬೋಧನೆಯನ್ನು ಹೊಂದಿ ಒಂದು ಪದವಿಯನ್ನು ಪಡೆದು ವಿಶ್ವವಿದ್ಯಾಲಯಗಳ ಮೈದಾನಕ್ಕೆ ಹೆಜ್ಜೆಯಿರಿಸುವ ಇಪ್ಪತ್ತು ಸಂವತ್ಸರಗಳನ್ನು ದಾಟಿದ ಹರೆಯದ ವಿದ್ಯಾರ್ಥಿಗಳಿಗೆ ಬೋಧನೆ ಬೇಕೆ? ನಾವು ಈ ಹಿಂದೆ ವಿವರಿಸಿದಂತೆ ಉಪನ್ಯಾಸಕರಿಗೂ ವಿದ್ಯಾರ್ಥಿಗಳಿಗೂ ಅಂತಹ ಮಹತ್ತರವಾದ ಬೌದ್ಧಿಕವಾದ ಅಂತರವಿರುವುದಿಲ್ಲ. ಅಧ್ಯಾಪಕರು ಹಿರಿಯ ವಿದ್ವಾಂಸರು ವಿದ್ಯಾರ್ಥಿಗಳು ಕಿರಿಯ ವಿದ್ವಾಂಸರು ಎಂಬ ಕೊಠಾರಿ ಶಿಕ್ಷಣ ಆಯೋಗದ ವರದಿಯ ಅಭಿಪ್ರಾಯ ಸತ್ಯಸಮೀಪವಾದುದು.

ಈ ಹಿಂದೆಯೇ ವಿವರಿಸಿದಂತೆ ಅಧ್ಯಾಪಕರ ಉಪನ್ಯಾಸಗಳು ಪುಸ್ತಕಗಳ, ನಿಯತ ಕಾಲಿಕೆಗಳ ಆಧಾರಿತವಾಗಿರುತ್ತವೆ. ಇವರು ಸೃಷ್ಟಿಸುವುದು ಏನೂ ಇರುವುದಿಲ್ಲ. ಜ್ಞಾನ ಸಮೃದ್ಧವಾಗಿ ಆಗಲೆ ಬೆಳದಿರುತ್ತದೆ. ಅದನ್ನೇ ಸಂಗ್ರಹಿಸಿ ಹಿರಿಯ ವಿದ್ವಾಂಸರು ಕಿರಿಯರಿಗೆ ಸಾಗಿಸುತ್ತಾರೆ. ದಿನನಿತ್ಯ ತರಗತಿಗಳ ಬೋಧನೆಯಲ್ಲಿ ಅಧ್ಯಾಪಕರು ಯಾವ ಹವಾದವನ್ನೂ ಮೆರೆಯುವುದಿಲ್ಲ. ಅದ್ಭುತವಾದ ಅಮೋಘವಾದ ಸಂಶೋಧಿತ ವಿಷಯಗಳನ್ನು ಬಯಲುಗೊಳಿಸುವುದಿಲ್ಲ. ನಿರ್ದಿಷ್ಟ ವಿಷಯವೊಂದರಲ್ಲಿ ಅತುಲವಾದ ಆಸಕ್ತಿಯನ್ನೂ ಕುತೂಹಲವನ್ನೂ ಹುಟ್ಟಿಸುವುದಿಲ್ಲ ಇವರ ಬೋಧನೆ. ಅಂದಮೇಲೆ ದಿನನಿತ್ಯವೂ ವಿದ್ಯಾರ್ಥಿಗಳು ಮೂರು-ನಾಲ್ಕು ಘಂಟೆಗಳನ್ನು ಶರಪಂಜರದಲ್ಲಿ ವ್ಯಯಿಸುವುದು ಸಾಧುವೆ? ಈ ಬೋಧನದಿಂದ ಪೂರ್ಣಪ್ರಯೋಜನ ಪಡೆಯುವವನು ಹಿರಿಯ ವಿದ್ವಾಂಸನೆ, ತರಗತಿಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವುದರಿಂದ. ತರಗತಿಯಲ್ಲಿ ನಿಶ್ಚಲನೂ ನಿಷ್ಕ್ರಿಯನೂ ಆದ ವಿದ್ಯಾರ್ಥಿಯು ಮಾಮೂಲಿನ ಶಿಕ್ಷಕನ ನೋಟ್ಸಿನಿಂದ ಹಳತಾದ ದ್ವಿತೀಯ ಇಲ್ಲವೆ ತೃತೀಯ ವರ್ಗದ ವಿಷಯವನ್ನು ಪಡೆಯುತ್ತಾನೆ. ಹೀಗೆ ಪ್ರತಿದಿನವೂ ಉಪನ್ಯಾಸಗಳಿಗೆ ಹಾಜರಾಗುವುದರಿಂದ ವಿದ್ಯಾರ್ಥಿಗಳ ಅಮೂಲ್ಯವಾದ ವೇಳೆ ವಿನಾಕಾರಣವಾಗಿ ಪೋಲಾಗುವುದಿಲ್ಲವೆ? ಪ್ರತಿನಿತ್ಯವೂ ಮೇಷ್ಟರಿಂದ ಹೊಸತನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ. ನಮ್ಮ ಪ್ರಾಧ್ಯಾಪಕರ ಉಪನ್ಯಾಸಗಳನ್ನು ರಾಜಕೀಯ ಧುರೀಣರ ಭಾಷಣಗಳಿಗೆ ಹೋಲಿಸಬಹುದು. ಇವರು ಒಮ್ಮೆ ಭಾಷಣಮಾಡಿದ ಸ್ಥಳದಲ್ಲೇ ಮತ್ತೆ ಭಾಷಣಿಸುವ ಅವಕಾಶವಿರುವುದಿಲ್ಲ, ಮುಂದಿನೂರಿನಲ್ಲಿ ಹಿಂದಿನೂರಿನ ಭಾಷಣದ ವಿಷಯವನ್ನೇ ಪುನರುಚ್ಚರಿಸುತ್ತಾರೆ. ಶ್ರೋತೃಗಳು ಬೇರೆಯಾಗುವುದರಿಂದ, ಈ ಪುಢಾರಿಗಳು ಬಚಾವಾಗುತ್ತಾರೆ.

ನಮ್ಮಲ್ಲಿಯಂತೆ ನಿರಂತರವಾಗಿ ಭೋರ್ಗರೆವ ಬೋರ್ ಹಿಡಿಸುವ ಬೋಧನ ವಿಧಾನ ಇಂಗ್ಲೆಂಡಿನಲ್ಲಿ ಈಗ ಪ್ರಚಲಿತದಲ್ಲಿರುವುದು ಕಂಡುಬರುವುದಿಲ್ಲ. ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ಮತ್ತು ಇನ್ನಿತರ ವಿಶ್ವವಿದ್ಯಾನಿಲಯಗಳಲ್ಲಿ ಸಮ್ಮೇಳನ ವಿಧಾನ, ಚರ್ಚಾಗೋಷ್ಠಿ, ಟ್ಯುಟೋರಿಯಲ್ ಪದ್ಧತಿಗಳು ಜಾರಿಯಲ್ಲಿರುವುದು ಕಂಡುಬರುತ್ತದೆ. ಒಮ್ಮೆ ಭಾರತೀಯ ವಿದ್ಯಾರ್ಥಿಯು ಬರ್ಮಿಂಗ್‌ಹಾಮ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ನಿರತನಾಗಿ ವರ್ಷವೊಂದು ಕಳೆಯುತ್ತಾ ಬಂದರೂ ಸ್ನಾತಕೋತ್ತರ ಶಿಕ್ಷಣ ವಿಭಾಗದ ಮುಖ್ಯಸ್ಥ ಪ್ರಾಧ್ಯಾಪಕನು ಒಂದು ಸಲವೂ ಉಪನ್ಯಾಸ ಕೊಡುವಲ್ಲಿ ಚರ್ಚೆಗಳಲ್ಲಿ ಭಾಗವಹಿಸಲೇ ಇಲ್ಲ. ಪ್ರಾಧ್ಯಾಪಕನ ಮೌನದಿಂದ ನಿರಾಶನಾದ ವಿದ್ಯಾರ್ಥಿಯು ಅವರನ್ನು ಭೇಟಿ ಮಾಡಿ ನಾವು ಸಾವಿರಾರು ಮೈಲಿಗಳ ದೂರವಿರುವ ಭಾರತದಿಂದ ಬಂದಿದ್ದೇವೆ, ನಿಮ್ಮ ಬೋಧನದಿಂದ ನಮ್ಮನ್ನು ಪುನೀತರಾಗಿಸಬೇಕೆಂದು ಕೋರಿದನು. ಮಂದಸ್ಮಿತನಾದ ಪ್ರಾಧ್ಯಾಪಕನು ಸೌಮ್ಯವಾಗಿ ಉತ್ತರಿಸಿದನು: "ನಾನು ಉಪನ್ಯಾಸ ಕೊಡಲಿಕ್ಕೆ, ಚರ್ಚೆಗಳಲ್ಲಿ ಭಾಗವಹಿಸುವುದಕ್ಕೆ ಹೊಸವಾಗಿ ಸಂಶೋಧಿತ, ಆವಿಷ್ಕೃತ ವಿಷಯಗಳು ಏನೂ ಇಲ್ಲ. ನಾನು ಹೇಳಬೇಕೆಂದಿರುವ ವಿಷಯಗಳೆಲ್ಲ ನನ್ನ ಗ್ರಂಥಗಳಲ್ಲಿ ಕಾಣಸಿಗುತ್ತವೆ. ದಯವಿಟ್ಟು ನನ್ನ ಗ್ರಂಥಗಳತ್ತ ನಿಮ್ಮ ದೃಷ್ಟಿ ಹರಿಸಿ" ನಮ್ಮ ಪ್ರಾಧ್ಯಾಪಕರಿಗೂ ಇಂಗ್ಲೆಂಡಿನ ಪ್ರಾಧ್ಯಾಪಕರಿಗೂ ಎಷ್ಟೊಂದು ವ್ಯತ್ಯಾಸ! ನಮ್ಮ ಪ್ರಾಧ್ಯಾಪಕರು ಮೂವತ್ತು ವರ್ಷಗಳ ಹಿಂದೆ ತಯಾರಿಸಿದ ನೋಟ್ಸನ್ನೇ ಆಧರಿಸಿ ಬೋಧನ ಜಗಿವಂತಹ ಪ್ರತಿಭಾವಂತರು. ಈ ಶುಷ್ಕ, ನಿರುಪಯೋಜಕ, ಕಾಲೋಚಿತವಲ್ಲದ ವಿಷಯಗಳಿಗೆ ಕಿವಿಗೊಡಲು ತಮ್ಮ ತರುಣರು ತರಗತಿಗಳಿಗೆ ಕಾಲಿಡಬೇಕೆ? ಜರ್ಮನ್ ವಿಶ್ವವಿದ್ಯಾನಿಲಯಗಳಲ್ಲಿ ಉಪನ್ಯಾಸಕ್ರಮ ಇನ್ನೂ ವಿಚಿತ್ರ. ಉಪನ್ಯಾಸಗಳಿಗೆ ವ್ಯವಸ್ಥೆ ಮಾಡುವುದು ಆಗೊಮ್ಮೆ ಈಗೊಮ್ಮೆ. ಉಪನ್ಯಾಸಕೊಡುವವರು ಸಂಶೋಧಕರು.

ಇವರ ಉಪನ್ಯಾಸಗಳು ಸಂಶೋಧನೆಗಳಿಂದ ಆಧರಿತವಾಗಿರುತ್ತವೆ. ಈ ಉಪನ್ಯಾಸಗಳನ್ನು ಕೇಳಲು ಶುಲ್ಕವನ್ನು ಕೊಟ್ಟು ಸಭಾಮಂದಿರಗಳನ್ನು ಪ್ರವೇಶಿಸಬೇಕು. ಇಂತಹ ಉದಾತ್ತ ಉಪನ್ಯಾಸಗಳನ್ನು ಒದಗಿಸುವ ಪ್ರಾಧ್ಯಾಪಕ ಶ್ರೇಷ್ಠರು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕಾಣಸಿಗುವರೆ?

ಈ ಮೇಲಿನ ಕಾರಣಗಳಿಂದ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಮಾಮೂಲಿ ಬೋಧನಕ್ರಮ, ಶುಷ್ಕ ಉಪನ್ಯಾಸಕ್ರಮ ಕೊನೆಗೊಂಡು ವಿದ್ಯಾರ್ಥಿಗಳಿಗೆ ಪ್ರಾಮುಖ್ಯವನ್ನು ಕೊಡುವ ಕ್ರಮಗಳಾದ ಸೆಮಿನಾರ್, ಟ್ಯುಟೋರಿಯಲ್, ಸ್ವಯಂ ನಿರ್ದೇಶಿತ ಅಧ್ಯಯನ–ಮೊದಲಾದವುಗಳು ಜಾರಿಗೆ ಬರಬೇಕು. ಈ ಕ್ರಮಗಳನ್ನು ತಕ್ಷಣವೇ ಕಾರ್ಯಗತಿಸಲು ಸಾಧ್ಯವಿಲ್ಲ. ಇದಕ್ಕೆ ಪೂರ್ವಭಾವಿ ಸಿದ್ಧತೆ ತಯಾರಿಕೆಗಳು ಅಗತ್ಯ. ಈ ಕೆಳಗಣ ಸಲಹೆಗಳು ವಿಶ್ವವಿದ್ಯಾಲಯಗಳ ಬೋಧನಕ್ರಮದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ಸಹಾಯಕವಾಗಬಹುದು:

೧ ಭಾಷಾ ಮಾಧ್ಯಮ ಆಂಗ್ಲಭಾಷೆಗೆ ಬದಲು ಪ್ರಾದೇಶಿಕ ಭಾಷೆಗಳಿಗೆ ಪರಿವರ್ತಿತವಾಗಬೇಕು.

೨ ಪಠ್ಯಪುಸ್ತಕಗಳು, ಆಕರ ಗ್ರಂಥಗಳು, ನಿಯತಕಾಲಿಕೆಗಳು, ವಾರ್ಷಿಕೆಗಳು, ವಿಶ್ವಕೋಶಗಳು, ನಿಘಂಟುಗಳು ಮತ್ತು ಇನ್ನಿತರ ಶಿಕ್ಷಣ ಸಂಪನ್ಮೂಲಗಳು ಕೂಡಲೇ ಪ್ರಾದೇಶಿಕ ಭಾಷೆಗಳಲ್ಲಿ ಸಿದ್ಧವಾಗಬೇಕು.

೩ ವಿಶ್ವವಿದ್ಯಾಲಯದ ಅಧ್ಯಾಪಕರು ಪ್ರಾಧ್ಯಾಪಕರು ತಮ್ಮ ವಿಭಾಗಗಳಿಗೆ ಶಾಸ್ತ್ರಗಳಿಗೆ ಸಂಬಂಧಿಸಿದ ಕೃತಿ ರಚನೆಯಲ್ಲಿ ತೊಡಗಬೇಕು. ಕನಿಷ್ಠ ಪಕ್ಷ ವರ್ಷಕ್ಕೊಂದು ಕೃತಿಯನ್ನಾದರೂ ಹೊರತರುವಂತೆ ಕಡ್ಡಾಯಿಸಬೇಕು. 'ಪ್ರಕಟಿಸು ಇಲ್ಲವೆ ತೊಲಗು' ಎಂಬ ಧೋರಣೆಯನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.

೪ ವಿಶ್ವವಿದ್ಯಾಲಯದ ಪರಿಧಿಯ ಹೊರಗಿರುವ ಲೇಖಕರಿಂದ ವಿಶ್ವವಿದ್ಯಾಲಯಕ್ಕೆ ಸಹಾಯಕವಾಗುವ ಕೃತಿಗಳನು ರಚಿಸಲು ಪ್ರಚೋದನೆಯನ್ನೂ ಪ್ರೋತ್ಸಾಹವನ್ನೂ ಒದಗಿಸಬೇಕು.

೫ ಪ್ರಸ್ತುತದಲ್ಲಿ ಪ್ರಚಲಿತವಿರುವ ಉಪನ್ಯಾಸ ಕ್ರಮವನ್ನು ಕೊನೆಗೊಳಿಸಿ ವಿದ್ಯಾರ್ಥಿ ಪ್ರಧಾನ ಕ್ರಮಗಳಿಗೆ ಪ್ರಾಶಸ್ತ್ಯ ಒದಗಿಸಬೇಕು. ವಾರಕ್ಕೆ ಎರಡೋ ಅಥವಾ ಮೂರೋ ಬಾರಿ ವಿವಿಧ ವಿಷಯಗಳನ್ನು ಕುರಿತ ಸೆಮಿನಾರ್, ಟ್ಯುಟೋರಿಯಲ್ ಅಥವಾ ಚರ್ಚಾಗೋಷ್ಠಿಗಳು ನಡೆಯಬೇಕು. ಇವು ಪ್ರಾದೇಶಿಕ ಭಾಷೆಗಳಲ್ಲಿಯೇ ನಡೆಯಬೇಕು.

೬ ಅಧ್ಯಾಪಕರು ತಮಗೆ ಸಂಬಂಧಿಸಿದ ವಿಷಯ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಉಚಿತವೂ ನಿರ್ದಿಷ್ಟವೂ ಆದ ಕೃತಿಗಳನ್ನು, ನಿಯತಕಾಲಿಕೆಗಳನ್ನು, ಆಕರ ಗ್ರಂಥಗಳನ್ನು ಅಧ್ಯಯನಿಸಲಿಕ್ಕೆ ಸಹಾಯಕವಾದ ಒಂದು ಪಟ್ಟಿಯನ್ನು ಮಾಡಿ ಒದಗಿಸಬೇಕು.

೭ ವಿಶ್ವವಿದ್ಯಾಲಯದ ಸಂಶೋಧನಾರ್ಥಿಗಳು ಸಂಶೋಧನಾ ಪ್ರಬಂಧಗಳನ್ನು ಆಯಾ ಪ್ರಾಂತೀಯ ಭಾಷೆಗಳಲ್ಲೇ ರಚಿಸಬೇಕು.

೮ ವಿಶ್ವವಿದ್ಯಾಲಯದ ಗ್ರಂಥ ಭಂಡಾರ ವ್ಯಾಪಕವಾದ ವ್ಯವಸ್ಥೆಯಿಂದ ಕೂಡಿರಬೇಕು. ಇದು ಉಷಃಕಾಲದಿಂದ ರಾತ್ರಿ ಹತ್ತು ಘಂಟೆಯವರೆಗೂ ಕಾರ್ಯನಿರತವಾಗಬೇಕು. ವಿವಿಧ ವಿಷಯಗಳ ಅಧ್ಯಯನದಲ್ಲಿ ನಿರತರಾಗಿರುವ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಮಾರ್ಗದರ್ಶನ ಒದಗಿಸುವಷ್ಟು ಚತುರರಾಗಿರಬೇಕು ಗ್ರಂಥ ಭಂಡಾರಿಗಳು. ಯಾವ ಕೃತಿ ಉತ್ಕೃಷ್ಟವಾದುದು, ಯಾವುದು ನಿಕೃಷ್ಟವಾದುದು, ಕೃತಿಯಲ್ಲಿ ಯಾವ ಅಧ್ಯಾಯ ಹೆಚ್ಚು ಉಪಯುಕ್ತವಾದುದು ಯಾವುದು ಅನುಪಯುಕ್ತವಾದ್ದು ಎಂಬುದನ್ನು ವಿವರಿಸುವಷ್ಟು ಜಾಣರಾಗಿರಬೇಕು. ವಿದ್ಯಾರ್ಥಿಯು ಅಪೇಕ್ಷಿಸಿದ ಕೃತಿ

ಯನ್ನೋ ಇಲ್ಲವೆ ನಿಯತಕಾಲಿಕೆಯನ್ನೋ ಕ್ಷಣಮಾತ್ರದಲ್ಲಿ ಒದಗಿಸುವ ಚಾಣಾಕ್ಷರಾಗಿರಬೇಕು. ಕೇಂದ್ರ ಸರಕಾರ, ರಾಜ್ಯ ಸರಕಾರಗಳು, ಸಂಶೋಧನ ಸಂಸ್ಥೆಗಳು ಪ್ರಯೋಗಾಲಯಗಳು, ಇತರೆ ಖಾಸಗಿ ಪ್ರಕಾಶಕರು ಪ್ರಕಟಿಸುವ ಕೃತಿಗಳು, ಹೊತ್ತಗೆಗಳು, ನಿಯತಕಾಲಿಕೆಗಳು ಅವು ಪ್ರಕಾಶಿತವಾದ ಹಲವು ದಿನಗಳಲ್ಲಿಯೇ ಗ್ರಂಥಾಲಯದಲ್ಲಿ ಕಾಣಸಿಗಬೇಕು.

೯ ಹೀಗೆ ವ್ಯವಸ್ಥಿತವಾದ ಪುಸ್ತಕಾಲಯದಲ್ಲಿ ಪ್ರಾಧ್ಯಾಪಕರು ಅಧ್ಯಾಪಕರು ವಿದ್ಯಾರ್ಥಿಗಳು ದಿನಪ್ರತಿದಿನ ಕಡೆಯ ಪಕ್ಷ ಎಂಟರಿಂದ ಹತ್ತು ಘಂಟೆಗಳವರೆಗೆ ತಮ್ಮ ವೇಳೆಯನ್ನು ಜ್ಞಾನಾನ್ವೇಷಣೆಗಾಗಿ ಕಳೆಯಬೇಕು.

ಸಂಶೋಧನೆ

ಬೋಧನೆ ಮತ್ತು ಸಂಶೋಧನೆಗಳು ಪರಸ್ಪರ ವಿರೋಧಿಗಳು ಎಂದು ಕೆಲವರು ಅಭಿಪ್ರಾಯಿಸುವುದುಂಟು. ಈ ಎರಡು ಕಾರ್ಯಗಳನ್ನೂ ಒಬ್ಬನೇ ಮಾಡುವುದು ಅಸಾಧ್ಯವೆಂದು ಬಗೆಯುವುದುಂಟು. ಈ ಕಾರಣದಿಂದಲೋ ಏನೋ ವಿಶ್ವವಿದ್ಯಾಲಯಗಳಲ್ಲಿ ಬೋಧನವು ತಾನೇತಾನಾಗಿ ವಿಜೃಂಭಿಸುತ್ತಿದೆ. ಈ ವಿವಾದವನ್ನು ಲಾರ್ಡ್‌ರಾಬಿನ್ಸ್ ಇಂತು ಬಗೆಹರಿಸಲು ಪ್ರಯತ್ನಿಸುತ್ತಾರೆ: "ಬೋಧನ ಮತ್ತು ಸಂಶೋಧನಗಳ ಮಧ್ಯೆ ಯಾವ ಗಡಿ ರೇಖೆಯೂ ನಿರ್ಮಿತವಾಗಿಲ್ಲ. ಇವು ಪರಸ್ಪರ ಪೂರಕ ಪೋಷಕವಾದವುಗಳು. ಇಲ್ಲಿನ ಚಟುವಟಿಕೆಗಳು ಅಲ್ಲಿ, ಅಲ್ಲಿನವು ಇಲ್ಲಿ ಕಾಣಸಿಗುತ್ತವೆ."[7] ಬೋಧನೆಯು ಸಂಶೋಧನೆಯಿಂದ ಪೋಷಿತವಾಗದಿದ್ದಲ್ಲಿ ಅದು ಬರಡಾಗುತ್ತದೆ, ನೀರಸವಾಗುತ್ತದೆ. ಸಂಶೋಧನೆಯು ಬೋಧನೆಯ ಪ್ರಚಾರದ ಮೂಲಕ ಜನತೆಯ ಅವಗಾಹನೆಗೆ ಬಾರದಿದ್ದಲ್ಲಿ ಸಂಶೋಧಕನ ಅಪಾರವಾದ ಶ್ರಮ ನಿರರ್ಥಕವಾಗುತ್ತದೆ.

ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ವಿಭಾಗಗಳ ಮುಖ್ಯೋದ್ದೇಶ ವಿಶೇಷವೂ ಗಹನವೂ ಆದ ಜ್ಞಾನವನ್ನು ಅರ್ಜಿಸುವುದು. ಈ ವಿಭಾಗಗಳು ಸಮರ್ಥರಾದ ಮೇಧಾವಿಗಳಾದ ವಿದ್ವಾಂಸರನ್ನೂ ವಿಜ್ಞಾನಿಗಳನ್ನೂ ನಿರ್ಮಿಸಿ, ವಿಶ್ವವಿದ್ಯಾಲಯಗಳ, ಸಂಶೋಧನ ಪ್ರಯೋಗಾಲಯಗಳ, ಇನ್ನಿತರ ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯವನ್ನು ನಿರ್ವಹಿಸುವಂತೆ ಮಾಡಬೇಕು. ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಲ್ಲಿ ವಸ್ತುವಿಷಯವನ್ನು ಸ್ಪಷ್ಟವಾಗಿ ಅರ್ಥವಿಸಿಕೊಳ್ಳುವುದನ್ನು, ವಿಮರ್ಶಾತ್ಮಕವಾಗಿ ಆಲೋಚಿಸುವುದನ್ನು, ಸ್ವತಂತ್ರವಾಗಿ ತೀರ್ಮಾನಿಸುವುದನ್ನು, ಬೌದ್ಧಿಕವಾಗಿ ಜಾಗ್ರತವಾಗಿರುವುದನ್ನು ಕಲಿಸಿದಲ್ಲಿ ಸಂಶೋಧನೆಗೆ ಭದ್ರ ಅಡಿಪಾಯ ಹಾಕಿದಂತಾಗುತ್ತದೆ. ಈ ವಿಭಾಗಗಳ ಪ್ರಥಮೋತ್ತಮ ಉದ್ದೇಶ ಸಂಶೋಧನಾರ್ಥಿಗಳನ್ನು ಉತ್ಪಾದಿಸುವುದೆ. ಮಾಮೂಲಿ ಕೆಲಸವನ್ನು ಮಾತ್ರ ನಿರ್ವಹಿಸಲು ಶಕ್ತರಾಗಿರುವ ಅಧ್ಯಾಪಕ ವರ್ಗದಿಂದ ವಿಶ್ವವಿದ್ಯಾಲಯಗಳು ತುಂಬಿರುವಾಗ ಈ ಉದ್ದೇಶವನ್ನು ಎಂತು ಸಾಧಿಸುವುದು?

ಆದರೆ ಕೆಲವು ಅಧ್ಯಾಪಕರು ಅದ್ಭುತವಾಗಿ ಸಂಶೋಧನೆ ನಡೆಸಿ ತಮ್ಮ ಕೊಡುಗೆಯಿಂದ ರಾಷ್ಟ್ರೀಯ, ಅಂತರ್‍ರಾಷ್ಟ್ರೀಯ ಗೌರವ ಕೀರ್ತಿಗಳನ್ನು ಸಂಪಾದಿಸಿದ್ದಾರೆ. ಮತ್ತೆ ಕೆಲವರ ಸಂಶೋಧನ ಲೇಖನಗಳು ಬರಹಗಳು ಅಂತರ್‍ರಾಷ್ಟ್ರೀಯ ಖ್ಯಾತಿ ಪಡೆದ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಅಧಿಕ ಪ್ರಮಾಣದಲ್ಲಿ ಅಧ್ಯಾಪಕರು ಸಂಶೋಧನೆಯ ಮೌಲ್ಯವನ್ನು ಗುರುತಿಸದೆ ನಿರ್ಲಕ್ಷ್ಯ ಭಾವವನ್ನು ತಳೆದಿದ್ದಾರೆ. ವಿಶ್ವದ ಜ್ಞಾನ ಸಂವರ್ಧನೆಗೆ ಭಾರತದ ಕೊಡುಗೆ ಶೇಕಡ ಒಂದಕ್ಕಿಂತ ಕಡಮೆ. ಸಂಶೋಧನೆಗೆ ಎಂತಹ ಪರಿಸರ ಕಾಣ ದೊರೆಯುತ್ತದೆ ಎಂಬುದನ್ನು ಈ ಹಿಂದಿನ ಪುಟಗಳಲ್ಲಿ ಆಗಲೆ ವಿವರಿಸಿದ್ದೇವೆ. ಭಾರತದ ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಅಲ್ಲಿನ ವಿವಿಧ ವಿಭಾಗಗಳ ರಚನೆ ಗೋಪುರೋಪಮವಾಗಿರುವುದು ಸುಸ್ಪಷ್ಟವಾಗಿದೆ. ಇವುಗಳ ಸನ್ನಿವೇಶ

---

[7] Robins, Lord, *Higher Education*, (London : Her Majesty's Stationary Office, 1965), p. 182

ಅಧಿಕಾರೀ ಪ್ರಭುತ್ವದಿಂದ ಶಾಸಿತವಾಗಿದೆ. ಈ ಸಂಸ್ಥೆಗಳಲ್ಲಿ ಅಧಿಕಾರ ಒಂದೆಡೆ ಕೇಂದ್ರೀಕೃತವಾಗಿದ್ದರೂ ಇವು ಅಂತಃಕಲಹಗಳ, ಪಿತೂರಿಗಳ, ಕೋಲಾಹಲಗಳ, ವೈಷಮ್ಯಗಳ, ಗುಂಪುಗುಳಿತನಗಳ ರಣಕಣವಾಗಿರುತ್ತವೆ. ಈ ಸಂಸ್ಥೆಗಳು ಆಸ್ಫೋಟನಾ ಸ್ಥಿತಿಯಲ್ಲಿವೆ.[8]

ಉನ್ನತ ಸಂಸ್ಥೆಗಳಲ್ಲಿ ಸಂಶೋಧನೆಯು ಸ್ಥಿರಗತಿಗೆ ತುತ್ತಾಗುವುದು ಹಣದ ಅಭಾವದಿಂದ ಮಾತ್ರವಲ್ಲದೆ ಅಶಿಸ್ತಿನ ವಾತಾವರಣವು ವ್ಯಕ್ತಿಪರವಾದ ಅಸೂಯೆಯಿಂದ, ವೃದ್ಧ ಪ್ರಭುತ್ವದಿಂದ, ಸಂಶಯದಿಂದ, ಮಿತಿಮೀರಿದ ಸಂಪ್ರದಾಯ ಶರಣತೆಯಿಂದ, ಉದ್ಯೋಗದ ಅಭದ್ರತೆಯಿಂದ, ಸ್ವಪಕ್ಷಪಾತ–ಸ್ವಜಾತಿಯ ನೀತಿಗಳಿಂದ ವಿಮುಕ್ತವಾಗದಿರುವುದರಿಂದ. ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು ಪಿಎಚ್.ಡಿ. ಪದವಿ ದಕ್ಕಿದ ನಂತರ ಸಂಶೋಧನೆಯನ್ನು ಕೈಗೊಳ್ಳುವುದು ಅಪೂರ್ವವೆ. ಎಲ್ಲೋ ಬೆರಳೆಣಿಕೆಯಷ್ಟು ಜನ ಮಾತ್ರ ಪಿಎಚ್.ಡಿ. ಪದವಿಯೋತ್ತರ ಸಂಶೋಧನೆಯನ್ನು ಕೈಗೊಂಡು ಡಿ.ಲಿಟ್. ಇಲ್ಲವೆ ಡಿ.ಎಸ್‌ಸಿ. ಪದವಿಗಳಿಗೆ ಪ್ರಬಂಧಗಳನ್ನು ರಚಿಸುವುದುಂಟು. ಈ ಸಂಶೋಧನೆಯಿಂದ ಪೂರ್ಣ ಪ್ರಯೋಜನ ಪಡೆಯುವವರಾರು? ಸಂಶೋಧನಾರ್ಥಿಗಳೆ. ಇವರು ಪದವಿಯನ್ನು ಪಡೆಯುವರಲ್ಲದೆ, ಉದ್ಯೋಗವನ್ನೂ ಪಡೆಯುತ್ತಾರೆ. ಸಂಶೋಧನೆಯನ್ನು ನಡೆಸುವುದು ವ್ಯಷ್ಟಿ ದೃಷ್ಟಿಯಿಂದ ಮಾತ್ರವಲ್ಲದೆ ಸಮಷ್ಟಿ ದೃಷ್ಟಿಯಿಂದಲೂ ಕೈಗೊಳ್ಳಬೇಕು. ಸಮಾಜದ, ರಾಜ್ಯದ ಮತ್ತು ರಾಷ್ಟ್ರದ ಸಮಸ್ಯೆಗಳನ್ನು ಪರಿಹರಿಸುವುದೇ ಸಂಶೋಧನೆಯ ಮೊದಲ ಗುರಿ. ಈ ಗುರಿ ಸಾಧಿತವಾಗದಿದ್ದರೆ ಅದು ಸಂಶೋಧನೆ ಎನ್ನಿಸಿಕೊಳ್ಳಲು ಅನರ್ಹ.

೧೯೫೦–೫೧ರಿಂದ ೧೯೬೦–೬೧ರ ದಶಕದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಒಟ್ಟು ೫೦೬೬ ಪಿಎಚ್.ಡಿ. ಪ್ರಬಂಧಗಳು ಅಂಗೀಕೃತವಾಗಿವೆ. ಇವುಗಳಲ್ಲಿ ಬಹುತೇಕ ಪ್ರಬಂಧಗಳು ಮುದ್ರಣಗೊಂಡು ದಿನದ ಬೆಳಕಿಗೆ, ಜನತೆಯ ಅವಗಾಹನೆಗೆ ಬಂದೇ ಇಲ್ಲ.[9] ಸಂಶೋಧನೆಗಳು ಪ್ರಕಟಿತಗೊಂಡು ಪರಿಣತರ, ಸಂಶೋಧಕರ, ಸಾಮಾನ್ಯ ಜನತೆಯ ಅವಗಾಹನೆಗೆ ಬಾರದಿದ್ದರೆ ಸಂಶೋಧನೆಯ ಮುಖ್ಯೋದ್ದೇಶವೇ ವಿಫಲವಾದಂತೆ. ಸಂಶೋಧನಾ ಪ್ರಬಂಧಗಳು ಪ್ರಕಟಗೊಳ್ಳದಿರುವುದೇ ಅವು ಎಷ್ಟು ನಿಕೃಷ್ಟ ಜಾತಿಗೆ ಸೇರಿದವು ಎಂಬುದನ್ನು ನಿರ್ಣಯಿಸುತ್ತದೆ. ಪ್ರೊ. ಫ್ರಾಂಕ್ ಡೋಬ್ಬಿ ಎಂಬುವರು ನಮ್ಮಲ್ಲಿ ನಡೆಯುತ್ತಿರುವ ಸಂಶೋಧನೆಯ ಗುಟ್ಟನ್ನು ರಟ್ಟು ಮಾಡಿದ್ದಾರೆ. "ಸಂಶೋಧನೆ ಎಂದರೆ ಎಲುಬುಗಳನ್ನು ಒಂದು ಸ್ಮಶಾನದಿಂದ ಮತ್ತೊಂದು ಸ್ಮಶಾನಕ್ಕೆ ಸಾಗಣೆ ಮಾಡುವುದೆ."[10] ಇದನ್ನು ಇನ್ನೂ ಸ್ಪಷ್ಟೀಕರಿಸುವುದಾದರೆ, ಸಂಶೋಧನಾ ಪ್ರಬಂಧಗಳು ಅನ್ಯ ಕೃತಿಗಳಿಂದ ವಸ್ತು ವಿಷಯಗಳನ್ನು ಆಯ್ದು ವ್ಯವಸ್ಥಿತ ರೂಪದಲ್ಲಿರುತ್ತವೆಯೇ ಹೊರತು, ಸ್ವಂತಿಕೆಯಿಂದ, ಹೊಸದಾಗಿ ಸಂಶೋಧಿತ ವಿಷಯಗಳಿಂದ, ವಿನೂತನ ವಿಶ್ಲೇಷಣೆಯಿಂದ, ನವ್ಯದೃಷ್ಟಿಯ ವ್ಯಾಖ್ಯಾನದಿಂದ ಕೂಡಿರುವುದಿಲ್ಲ. ಈ ಕಾರಣದಿಂದಲೋ ಏನೋ ಸಂಶೋಧನಾ ಮಹಾ ಪ್ರಬಂಧಗಳು ಲಘು ಪ್ರಬಂಧಗಳು ಪ್ರಕಟಗೊಳ್ಳುವುದೇ ಇಲ್ಲ.

ಈ ವರೆವಿಗೂ ಶಿಕ್ಷಣದ ವಿವಿಧ ಹಂತಗಳಲ್ಲಿ ಬೋಧನೆ ಸಂಶೋಧನೆಗಳು ಎಂತು ನಡೆಯುತ್ತವೆ ಎಂಬುದನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಈ ಶೈಕ್ಷಣಿಕವಾದ ಅಧೋಗತಿಗೆ ಯಾರು ಕಾರಣ? ಶಿಕ್ಷಕರೆ? ಸಮಾಜವೆ? ಆಡಳಿತ ವರ್ಗದವರೆ? ಯಾರು? ಈ ಎಲ್ಲ ಪ್ರಶ್ನೆಗಳಿಗೆ ಸಮುತ್ತರ ಪಡೆಯಲು

---

[8] Edward Shills: *Indian Students : Sadhus rather than Philistines* in Higher Education in India (Ed, A. B. Shah) Lalvani Publishing Houre, Bambay : 1967), p. 197

[9] **Report on Standards of University Education**, (University Grants Commission, New Delhi 1965), p. 14

[10] John. V. V, *University and Research in Higher Education in India* (Ed. A. B. Shah) p. 163

ನಮ್ಮ ಶಿಕ್ಷಣಕ್ಷೇತ್ರದಲ್ಲಿ ಸುದೀರ್ಘಕಾಲ ಸಕ್ರಿಯಾತ್ಮಕವಾಗಿ ಪಾತ್ರವಹಿಸಿ ಅಲ್ಲಿನ ಕನಿಷ್ಟತೆಗಳನ್ನು ಅನಿಷ್ಟತೆಗಳನ್ನು ಕಣ್ಣಾರೆ ಕಂಡು ಮನಸಾರೆ ಅನುಭವಿಸಿ, ಈ ಕುರಿತು ಸ್ಪಷ್ಟವಾಗಿ ಆಲೋಚಿಸಿ, ಸಂಮಥಿಸಿ ಬಹಿರ್ ಲೋಕಕ್ಕೆ ಪ್ರಕಟಿಸಿರುವ ಕರ್ನಾಟಕದ ಮಹತ್ವದ ಕವಿಗಳೂ ಮಹದಾಲೋಚಕರೂ ಆದ ಶ್ರೀ ಗೋಪಾಲಕೃಷ್ಣ ಅಡಿಗ ಅವರ ಶೈಕ್ಷಣಿಕ ಚಿಂತನೆಯ ಭೋರ್ಗರೆತವನ್ನು ಆಲಿಸಿ.[11]

ಈಗ ಶಾಲೆ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಶೇಕಡಾ ತೊಂಬತ್ತರಷ್ಟು ಅಧ್ಯಾಪಕರು ಆ ಸ್ಥಾನಗಳಿಗೆ ಅಗತ್ಯವಾದ ಗುಣಗಳನ್ನು ಹೊಂದಿದವರಲ್ಲ ಎಂದರೆ ಯಾರಿಗೂ ಆಶ್ಚರ್ಯವಾಗಬಾರದು.

ವಿದ್ಯೆಯಲ್ಲಿ ತಾನು ಬೋಧಿಸುವ ವಿಷಯದಲ್ಲಿ ಆಳವಾದ, ತೀವ್ರವಾದ, ಜೀವಾವಧಿ ಚಲಿಸುತ್ತಿರುವ ಆಸಕ್ತಿ–ಇದು ನಾವು ಅಧ್ಯಾಪಕರಲ್ಲಿ ಎಲ್ಲಕ್ಕಿಂತ ಮೊದಲು ಬಯಸಬೇಕಾದ ಗುಣ. ತಾನು ಕಲಿಸಬೇಕಾದ ವಿಷಯದ ಬಗ್ಗೆ ಏನೇನು ಓದಿಕೊಳ್ಳಬೇಕೋ ಅದನ್ನು ನಿರಂತರವಾಗಿ ಓದುತ್ತಾ, ಸಂಗ್ರಹಿಸುತ್ತಾ, ಓದಿದ್ದನ್ನು ಚಿಂತಿಸುತ್ತಾ, ತಕ್ಕ ಅಭಿವ್ಯಕ್ತಿಯನ್ನು ಹುಡುಕುತ್ತ ತನ್ನ ಸುತ್ತಲೂ ಗ್ರಂಥಗಳು. ತನ್ನ ಮನಸ್ಸಿನ ತುಂಬ ವಿಚಾರಗಳು, ತನ್ನ ಗೆಳೆಯರಲ್ಲಿ ಚರ್ಚೆ, ವಿಚಾರ ವಿನಿಮಯ–ಹೀಗೆ ನಿಜವಾದ ಅಧ್ಯಾಪಕರ ಕಾಲ ಸಮೆಯಬೇಕು. ಇಂಥವರು ನಮ್ಮಲ್ಲಿ ಎಷ್ಟು ಜನ ಇದ್ದಾರೆ? ಪರೀಕ್ಷೆಯೊಂದನ್ನು ಹೇಗಾದರೂ ಪಾಸು ಮಾಡಿ ಅಧ್ಯಾಪಕ ವೃತ್ತಿಗೆ ಸೇರಿದ ಕೂಡಲೆ ತಾನು ಸರ್ವಜ್ಞನೆಂದು ತಿಳಿಯುವ ದುರಹಂಕಾರಿ ಅಧ್ಯಾಪಕರ ಸಂಖ್ಯೆಯನ್ನು ನೆನಸಿಕೊಂಡರೆ ಯಾರ ಎದೆಯಾದರೂ ತತ್ತರಿಸಬೇಕು. ಸರಕಾರ ನಡೆಸುವ ಅನೇಕ ವಿದ್ಯಾಸಂಸ್ಥೆಗಳಲ್ಲಿ ಪಾಠಗಳು ಸರಿಯಾಗಿ ನಡೆಯದೇ ಇರುವುದಕ್ಕೆ ಅಧ್ಯಾಪಕರಲ್ಲೇ ಶಿಕ್ಷಣದ ಬಗ್ಗೆ, ವಿದ್ಯೆಯ ಬಗ್ಗೆ ಇರುವ ಅನಾದರವೇ ಕಾರಣ. ಈ ಅಧ್ಯಾಪಕರುಗಳಲ್ಲಿ ಯಾವ ಆಸಕ್ತಿಯೂ ಇಲ್ಲ ಎಂದು ಅಲ್ಲ. ಆದರೆ ಅಂಥ ಆಸಕ್ತಿಗಳೇ ಬೇರೆಯವು. ಅಧಿಕಾರದಲ್ಲಿ ಸುಖಭೋಗದಲ್ಲಿ, ಕ್ಷುದ್ರ ರಾಜಕೀಯದಲ್ಲಿ, ಜಾತಿ ಕುಲದಲ್ಲಿ, ಮುಖ್ಯವಾಗಿ ಹಣದಲ್ಲಿ. ಅವರು ಒಟ್ಟು ಸೇರಿದಾಗ ಕೇಳುವ ಮಾತು ಸಂಬಳವನ್ನು ಕುರಿತು, ಬಡ್ತಿಯನ್ನು ಕುರಿತು ಮನೆ ಪಾಠವನ್ನು ಕುರಿತು, ಇಂಥವರಲ್ಲಿ ಬೌದ್ಧಿಕ ವಿಕಾಸವನ್ನು ಬಯಸುವುದು ಹೇಗೆ? ಇಂಥವರನ್ನು ನಮ್ಮ ಮಕ್ಕಳು ಪೂಜಿಸಬೇಕು, ಗೌರವಿಸಬೇಕು ಎಂದು ನಾವು ಬಯಸುವುದಾದರೂ ಹೇಗೆ? ಇಂಥವರು ಅಧ್ಯಾಪಕ ವೃತ್ತಿಗೆ ದಾರಿತಪ್ಪಿ ಬಂದವರು ಎನ್ನಬೇಕಾಗುತ್ತದೆ.

ಒಳ್ಳೆಯ ಗುರುವಾಗಿ, ಅತಿ ಶ್ರೇಷ್ಠ ಮೌಲ್ಯಗಳ ಜೀವಂತ ಉದಾಹರಣೆಯಾಗಿರುವ ಅಧ್ಯಾಪಕರಿಗೂ ಸಮಾಜ ಗೌರವವನ್ನು ತೋರಿಸುವುದಿಲ್ಲ. ಅಂಥವರನ್ನು ಕೂಡ ಸಂಬಳದ ಆಳುಗಳಂತೆ ನಡೆಸಿಕೊಳ್ಳುವ ಮಹಾಮಹಿಮರೇ ಖಾಸಗೀ ಸಂಸ್ಥೆಗಳ ಆಡಳಿತವರ್ಗಗಳಲ್ಲಿ ತುಂಬಿಕೊಂಡಿದ್ದಾರೆ. ಎಲ್ಲವನ್ನೂ ಹಣದ ಮೂಲಕ ಅಳೆಯುವ ಈ ಯಜಮಾನರ ಕೈಕೆಳಗೆ ಆತ್ಮಗೌರವವುಳ್ಳ ನಿಜವಾದ ಅಧ್ಯಾಪಕ ಕೆಲಸ ಮಾಡಬೇಕಾಗಿ ಬಂದರೆ ಅವನ ಗತಿ ಏನು? ಅಯೋಗ್ಯರಿಗೆ ಸಲಾಮು ಹೊಡೆಯಬೇಕಾಗಿ ಬಂದ ಅಧ್ಯಾಪಕನಿಂದ ವಿದ್ಯಾರ್ಥಿಗಳು ಯಾವ ನೈತಿಕ ಧೈರ್ಯವನ್ನೂ, ಗಾಂಭೀರ್ಯವನ್ನೂ, ಆತ್ಮಗೌರವವನ್ನೂ ಕಲಿತಾರು? ಇಂಥ ಪರಿಸ್ಥಿತಿಯಲ್ಲಿ ಉತ್ತಮ ಅಧ್ಯಾಪಕನು ಕೂಡ ಕ್ರಮೇಣ ತನ್ನತನವನ್ನು ಕಳೆದುಕೊಂಡು ಜೀತದಾಳಾಗಿ ವಿದ್ಯಾರ್ಥಿಗಳಿಗೆ ಯಾವ ಮೇಲ್ಪಂಕ್ತಿಯನ್ನು ಹಾಕಲೂ ಅಸಮರ್ಥನಾಗುತ್ತಾನೆ. ಹೀಗಾಗಿ ಹೇಳಿದ ಹಾಗೆ ಕೇಳಿ ಬಿದ್ದುಕೊಂಡಿರಬಲ್ಲ ಮುಖಸ್ತುತಿ ಪ್ರವೀಣರಾದ, ಕೆಲಸ ಮಾಡುವ ಹಾಗೆ ನಟಿಸುವ, ಸಮಯ ಸಾಧಕರೇ ಅಧ್ಯಾಪಕ ವೃತ್ತಿಯಲ್ಲಿ ತುಂಬಿಕೊಂಡರೆ ಆಶ್ಚರ್ಯವೇನು? ...ಸಂಸ್ಕಾರದಲ್ಲಿ ತನಗಿಂತ ಮೂರು ಪಾಲು ಕೀಳಾದವನನ್ನೇ ನೀನೇ ಇಂದ್ರ, ನೀನೇ ಚಂದ್ರ ಎಂದು ಸ್ತುತಿಸುವ ತುರುತಿನಲ್ಲಿ ಅಧ್ಯಾಪಕನ ಆತ್ಮನಾಶ ಖಂಡಿತ. ಇಂಥ ಇಕ್ಕಟ್ಟಿನಲ್ಲಿ ಬದುಕುವ ಅಧ್ಯಾಪಕರ ಬಗ್ಗೆ ಯಾರು ಯೋಚಿಸುತ್ತಾರೆ? ಭಯದ ವಾತಾವರಣದಲ್ಲಿ ಉತ್ತಮ ಅಧ್ಯಾಪಕ ನಿರ್ವೀರ್ಯನೂ ನಿಸ್ತೇಜನೂ ಆಗುತ್ತಾನೆ. ಅಷ್ಟು ಉತ್ತಮನಲ್ಲದೆ ಅಧ್ಯಾಪಕ ಬಾಲಬಡುಕನೂ

11 ಗೋಪಾಲಕೃಷ್ಣ ಅಡಿಗ, ಎಂ.: ನಮ್ಮ ಶಿಕ್ಷಣಕ್ಷೇತ್ರ, (ಅಕ್ಷರಪ್ರಕಾಶನ, ಸಾಗರ: 1972), ಪು. 42-51

ಭಟ್ಟಂಗಿಯೂ ಬೆನ್ನುಮೂಳೆಯೇ ಇಲ್ಲದ ಷಂಡನೂ ಆದರೆ ಆಶ್ಚರ್ಯವಿಲ್ಲ. ಇಂಥವರಿಂದ ನಮ್ಮ ಮಕ್ಕಳಿಗೆ ಎಂಥ ವಿದ್ಯೆ ಸಿಕ್ಕೀತು ಎಂಬುದಕ್ಕೆ ನಮ್ಮ ಇಂದಿನ ವಿದ್ಯಾರ್ಥಿಗಳೇ ಸಾಕ್ಷಿ.

ಯಾವ ದೇಶದಲ್ಲೇ ಆಗಲಿ, ಯಾವ ಕಾಲದಲ್ಲೇ ಆಗಲಿ, ಯಾವ ರಾಜಕೀಯ ವಾದದ ನೆಳಲಲ್ಲೇ ಆಗಲಿ ಶಿಕ್ಷಣ ಕ್ಷೇತ್ರದ ಕೇಂದ್ರಸ್ಥಾನದಲ್ಲಿ ಇರಬೇಕಾದವನು ಅಧ್ಯಾಪಕ. ಅವನು ತಾನು ಬೋಧಿಸಬೇಕಾದ ವಿಷಯವನ್ನು ಚೆನ್ನಾಗಿ ಅರಗಿಸಿಕೊಂಡವನು ಮಾತ್ರವಲ್ಲ ಉತ್ತಮ ಮಾನವ ಮೌಲ್ಯಗಳಾದ ಸೌಜನ್ಯ. ನಿಷ್ಪಕ್ಷಪಾತ ವೃತ್ತಿ. ನ್ಯಾಯನಿಷ್ಠೆ. ಅಹಿಂಸೆ. ವಿನಯಸಹಿತವಾದ ಆತ್ಮಗೌರವ ಇವುಗಳಿಗೆ ಜೀವಂತ ಉದಾಹರಣೆಯೂ ಆಗಿರುವುದು ಅಗತ್ಯ. ವಿದ್ಯಾರ್ಥಿ ಪಾಠಗಳನ್ನು ಕೇಳಿ ಕಲಿಯುವುದಲ್ಲದೆ, ತನ್ನ ಅಧ್ಯಾಪಕರನ್ನು ಕಂಡು ಅವರ ನಡವಳಿಕೆಯನ್ನು ಗಮನಿಸಿ ಉತ್ತಮ ಜೀವನದ ರೀತಿಗಳನ್ನು ಕಲಿಯುತ್ತಾನೆ. ಆದ ಕಾರಣ ನಮ್ಮ ಮಕ್ಕಳ ಭವಿಷ್ಯ ದೃಷ್ಟಿಯಿಂದಲೇ ನಾವು ಅಧ್ಯಾಪಕರನ್ನು ಜಾಗರೂಕತೆಯಿಂದ ಆರಿಸಿ ಅವರಿಗೆ ತಕ್ಕ ತರಬೇತಿಯನ್ನು ಕೊಟ್ಟು ಆಧುನಿಕ ಕಾಲದಲ್ಲಿಯೂ ಮರ್ಯಾದೆಯಿಂದ ಜೀವಿಸಲು ತಕ್ಕಷ್ಟು ಸಂಭಾವನೆಯನ್ನು ಸಲ್ಲಿಸಿ, ಅವರನ್ನು ಗೌರವದಿಂದ ನೋಡಿಕೊಳ್ಳದೆ ಹೋದರೆ ನಾವು ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೈಗೊಳ್ಳುವ ಎಲ್ಲ ಯೋಜನೆಗಳೂ ವ್ಯರ್ಥವಾಗುತ್ತವೆ. ಉತ್ತಮ ವರ್ಗದ ಮನುಷ್ಯರಿಲ್ಲದೆ ಯಾವ ದೇಶವೂ ಅಭಿವೃದ್ಧಿ ಹೊಂದುವುದಿಲ್ಲ.

ಡಿ. ಎಸ್. ಜಯಪ್ಪಗೌಡ

ಕರ್ನಾಟಕ ಮತ್ತು ಮೊಗಲ್ ಸಾಮ್ರಾಜ್ಯ

ಮೌರ್ಯರನಂತರ, ಬ್ರಿಟಿಷರಿಗೆ ಪೂರ್ವದಲ್ಲಿ ಭರತಖಂಡದಲ್ಲಿ ಅತ್ಯಂತ ಬೃಹತ್ ಸಾಮ್ರಾಜ್ಯವನ್ನು ಕಟ್ಟಿದವರು ಮೊಗಲರು. ಕರ್ನಾಟಕದವರೆಗೂ ವಿಸ್ತರಿಸುವ ಹೊತ್ತಿಗೆ ಮೊಗಲ್ ಸಾಮ್ರಾಜ್ಯ ಅವನತಿಯತ್ತ ಸಾಗಿತ್ತು. ವಾಸ್ತವವಾಗಿ, ಅವರು ಕರ್ನಾಟಕದಲ್ಲಿ ಸುಮಾರು ಅರ್ಧ ಶತಮಾನ ಕಾಲ ಆಳಿದರೂ ದೃಢವಾದ ರಾಜ್ಯಾಡಳಿತವನ್ನೇನೂ ಸ್ಥಾಪಿಸಲಿಲ್ಲ. ದಕ್ಷಿಣ ಭಾರತದ ದಾಳಿಗಳಲ್ಲಿ ಕರ್ನಾಟಕದಲ್ಲಿ ಅವರು ಎದುರಿಸಿದಷ್ಟು ಪ್ರತಿಭಟನೆ ಮತ್ತೊಂದು ಪ್ರದೇಶದಿಂದ ಬರಲಿಲ್ಲ. ಕರ್ನಾಟಕದ ಸುಲ್ತಾನರು ಮತ್ತು ರಾಜರು ತೋರಿಸಿದ ಧೈರ್ಯ ಸಾಹಸಗಳು, ಮುತ್ಸದ್ದಿತನ, ಹಾಗೂ ಮರಾಠರು ಮೊಗಲರ ವಿರುದ್ಧ ಕರ್ನಾಟಕದಲ್ಲಿ ನಡೆಸಿದ ಹೋರಾಟಗಳು ಇದಕ್ಕೆ ಹೇತು. ಆದರೂ ಮೊಗಲರು ಕರ್ನಾಟಕದ ರಾಜಕೀಯ ಭೂಪಟವನ್ನು ಬದಲಿಸಿದರು; ಮೌರ್ಯರ ತರುವಾಯ ಮೊದಲಬಾರಿಗೆ ಉತ್ತರ ಭಾರತ ಮತ್ತು ಕರ್ನಾಟಕಗಳೊಂದಿಗೆ ಸಮಗ್ರ ಸಂಪರ್ಕ ಸಾಧಿಸಿದರು; ಕರ್ನಾಟಕದ ಮುಂದಿನ ಇತಿಹಾಸದ ಮೇಲೆ ಗಾಢ ಪ್ರಭಾವ ಬೀರಿದರು.

ಬಾಬರನು ಭಾರತಕ್ಕೆ ಬಂದಾಗ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಬಹಮನಿ ರಾಜ್ಯ ಛಿದ್ರವಾಗಿ ಅವನತಿಯ ಹಾದಿಯಲ್ಲಿತ್ತು. ಬಹಮನಿಯ ಸುಲ್ತಾನ ಬಾಬರನ ನೆರವು ಕೋರಿದ್ದುಂಟು. ೧೫೨೬ರಲ್ಲಿ ಮೊಗಲ್ ಸಾಮ್ರಾಜ್ಯ ದೆಹಲಿಯಲ್ಲಿ ಸ್ಥಾಪನೆಯಾಯಿತು. ಆದರೆ ಉತ್ತರ ಭಾರತದ ರಾಜಕೀಯ ಪರಿಸ್ಥಿತಿಯಿಂದಾಗಿ ಅಕ್ಬರನ ಕಾಲದವರೆಗೂ (೧೫೫೬) ಮೊಗಲ್ ಸಾಮ್ರಾಜ್ಯ ಡೋಲಾಯಮಾನ ಸ್ಥಿತಿಯಲ್ಲಿತ್ತು. ಅಕ್ಬರನು ಉತ್ತರ ಭಾರತದಲ್ಲಿ ತನ್ನ ಸಾಮ್ರಾಜ್ಯವನ್ನು ಭದ್ರಗೊಳಿಸಿಕೊಂಡು ೧೫೭೦ರ ದಶಕದಲ್ಲಿ ದಖ್ಖನ್‌ನತ್ತ ತನ್ನ ಗಮನಹರಿಸಿದನು. ೧೫೯೧ರಲ್ಲಿ ದಖ್ಖನ್ನಿನ ನಾಲ್ಕು ರಾಜ್ಯಗಳಿಗೆ ರಾಯಭಾರಿಗಳನ್ನು ಕಳುಹಿಸಿ ಯುದ್ಧವಿಲ್ಲದೆ ತನ್ನ ಪರಮಾಧಿಕಾರ ಒಪ್ಪಿಕೊಳ್ಳಬೇಕೆಂದು ತಿಳಿಸಿದನು. ಆಗ ಖಾನ್‌ದೇಶ ಒಂದನ್ನು ಬಿಟ್ಟರೆ ಉಳಿದ ರಾಜ್ಯಗಳು ಅಕ್ಬರನ ಪರಮಾಧಿಕಾರವನ್ನು ಒಪ್ಪಿಕೊಳ್ಳಲಿಲ್ಲ. ಎಂತಲೇ ಮೊಗಲರು ದಖ್ಖನ್ನಿನ ಬಗ್ಗೆ ಬಲಪ್ರಯೋಗ ನೀತಿ ಅನುಸರಿಸಲು ತೊಡಗಿದರು.

ಅಕ್ಬರನು ೧೫೯೫ರಲ್ಲಿ ಅಹಮದ್‌ನಗರದ ಮೇಲೆ ದಂಡಯಾತ್ರೆ ಕೈಗೊಂಡನು. ಆದರೆ ಅದು ಫಲಕಾರಿಯಾಗಲಿಲ್ಲ. ೧೫೯೯ರಲ್ಲಿ ಅಕ್ಬರನೇ ಸ್ವತಃ ಸೈನ್ಯ ನಡೆಸಿ ಅಹಮದ್‌ನಗರವನ್ನು ಮುತ್ತಿ ಅದನ್ನು ವಶಪಡಿಸಿಕೊಂಡನು. ೧೬೦೧ರಲ್ಲಿ ಖಾನ್‌ದೇಶ ಮೊಗಲರ ಸಾಮ್ರಾಜ್ಯಕ್ಕೆ ಸೇರಿತು. ೧೬೧೦ರಲ್ಲಿ ಅಹಮದ್‌ನಗರ ಪುನಃ ಮೊಗಲರ ಕೈತಪ್ಪಿ ಹೋಯಿತು. ಬಿಜಾಪುರ, ಗೋಲ್ಕೊಂಡ. ಬೀರಾರ್ ಮೊದಲಾದ ರಾಜ್ಯಗಳು ಅಹಮದ್‌ನಗರಕ್ಕೆ ಮೊಗಲರ ವಿರುದ್ಧ ಸಹಾಯ ನೀಡಿದವು. ಅಕ್ಬರನ ನಿಧನದ ಹೊತ್ತಿಗೆ ಮೊಗಲರ ವಿಸ್ತರಣಾ ನೀತಿ ಸ್ಪಷ್ಟವಾಗಿತ್ತು. ಅವರು ಹಿಂದಿನ ದೆಹಲಿ ಸುಲ್ತಾನರ ಧರ್ಮಪ್ರಧಾನ ನೀತಿಯನ್ನು ತೊರೆದು ಸರ್ವಧರ್ಮ ಸಮನ್ವಯ ನೀತಿಯನ್ನು ಅನುಸರಿಸುತ್ತಿದ್ದರು. ಇನ್ನೊಂದು ಕಡೆ ತಮ್ಮ ನೆರೆಯ ಸ್ವತಂತ್ರ ರಾಜ್ಯ, ಅದು ಮಹಮ್ಮದೀಯ ರಾಜ್ಯವಾಗಿರಲಿ, ಹಿಂದೂ ರಾಜ್ಯವಾಗಿರಲಿ ಮೊಗಲ್ ಸಾಮ್ರಾಜ್ಯದ ಭಾಗವಾಗಬೇಕೆಂಬ ನಿಲುವನ್ನು ತಾಳಿದ್ದರು. ಹಿಂದೂ–

ಮುಸ್ಲಿಮರಿದ್ದರೂ ಮೊಗಲ್ ಸಾಮ್ರಾಜ್ಯವನ್ನು ಬೆಂಬಲಿಸುತ್ತಿದ್ದುದರಿಂದ ಒಂದಿನ ಯಾವ ದೆಹಲಿ ಸುಲ್ತಾನರಿಗೂ ಇಲ್ಲದಷ್ಟು ಶಕ್ತಿ, ಸಂಪನ್ಮೂಲಗಳು ಇವರಿಗೆ ಲಭ್ಯವಾದವು. ದಕ್ಷಿಣದ ರಾಜ್ಯಗಳು ಮೊಗಲ್ ಸಾಮ್ರಾಜ್ಯಶಾಹಿಯನ್ನು ಅಷ್ಟೇ ದೃಢ ನಿಶ್ಚಯದಿಂದ ಎದುರಿಸತೊಡಗಿದವು. ದಕ್ಷಿಣದ ರಾಜ್ಯಗಳು ಮೊಗಲ್ ಸಾಮ್ರಾಜ್ಯಶಾಹಿ ನೀತಿಯನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದವೆಂಬುದಕ್ಕೆ ವಿಜಯನಗರದ ವೆಂಕಟಪತಿಯು ಅಕ್ಬರನ ಸ್ನೇಹಹಸ್ತವನ್ನು ನಿರಾಕರಿಸಿದ್ದೇ ಸಾಕ್ಷಿಯಾಗಿದೆ.

ಜಹಾಂಗೀರ್ ಚಕ್ರವರ್ತಿಯ ಆಳ್ವಿಕೆಯಲ್ಲಿ ದಖ್ಖನಿನೊಡನೆ ಹಲವು ಯುದ್ಧಗಳು ನಡೆದವು. ಆದರೆ ಅಹಮದ್‌ನಗರದ ಮಲ್ಲಿಕ್ ಅಂಬರ್ ಮೊಗಲರ ದಾಳಿಗಳನ್ನೆಲ್ಲ ಒಮ್ಮೆಟ್ಟಿಸಿದನು. ಕೊನೆಗೆ ರಾಜಕುಮಾರ ಷಹಜಹಾನನೇ ಮಲ್ಲಿಕ್ ಅಂಬರನ ಸ್ನೇಹ ಬೆಳಸುವಂತಾಯಿತು. ೧೬೨೮ರಲ್ಲಿ ಷಹಜಹಾನನು ಸಾಮ್ರಾಟನಾದ ಮೇಲೂ ಮೊಗಲರ ವಿಸ್ತರಣಾ ನೀತಿ ಮುಂದುವರಿಯಿತು. ಆಗ ಮೊಗಲ್ ಸಾಮ್ರಾಜ್ಯ ತನ್ನ ಉತ್ತುಂಗ ಸ್ಥಿತಿಯನ್ನು ಮುಟ್ಟಿತ್ತು. ಸಾಮ್ರಾಜ್ಯದ ವೈಭವೋಪೇತ ಜೀವನಕ್ಕೆ ಹೊಸ ಪ್ರದೇಶಗಳಿಂದ ಹಣ ತರಬೇಕಾದ ಅಗತ್ಯ ಹಾಗೂ ಅಫ್ಘಾನಿಸ್ತಾನ ಮತ್ತಿತರ ವಾಯುವ್ಯ ಪ್ರಾಂತಗಳು ಒನೇ ಒನೇ ಸಾಮ್ರಾಜ್ಯದ ಕೈ ಬಿಟ್ಟು ಹೋಗತೊಡಗಿದ್ದು ಅಲ್ಲಿ ನಷ್ಟವಾದ ಪ್ರತಿಷ್ಠೆಯನ್ನು ದಕ್ಷಿಣದಲ್ಲಿ ಕೂಡಿಕೊಳ್ಳುವುದು ಮೊಗಲರು ದಕ್ಷಿಣ ಭಾರತದಲ್ಲಿ ವಿಸ್ತರಣಾ ನೀತಿಯನ್ನು ಮುಂದುವರಿಸಲು ಮುಖ್ಯ ಕಾರಣಗಳು. ೧೬೩೦ರಿಂದ ೧೬೩೬ರ ವರೆಗೆ ಮೊಗಲರು ದಕ್ಷಿಣದ ರಾಜ್ಯಗಳ ಮೇಲೆ ತೀವ್ರ ಕಾರ್ಯಾಚರಣೆ ಕೈಗೊಂಡರು. ೧೬೩೧ರಲ್ಲಿ ಬಿಜಾಪುರವನ್ನು ಆಕ್ರಮಿಸಿ ಅದನ್ನು ಗೆಲ್ಲಲಾರದೆ ಹಿಂದಿರುಗಿದರು. ೧೬೩೬ರಲ್ಲಿ ಮತ್ತೊಮ್ಮೆ ಬಿಜಾಪುರದ ಮೇಲೆ ತೀವ್ರ ದಾಳಿ ನಡೆಸಿದಾಗ ಬಿಜಾಪುರದ ಸುಲ್ತಾನನು ವಾರ್ಷಿಕ ಕಪ್ಪ ಕೊಡಲು ಒಪ್ಪಿದನು. ಅದೇ ವರ್ಷ ಅಹಮದ್‌ನಗರವೂ ಮೊಗಲ್ ಸಾಮ್ರಾಜ್ಯಕ್ಕೆ ಸೇರಿದ್ದರಿಂದ ಕರ್ನಾಟಕದೊಡನೆ ಮೊಗಲರ ನೇರ ಸಂಪರ್ಕ ಪ್ರಾರಂಭವಾಯಿತು. ಗೋಲ್ಕೊಂಡವೂ ಮೊಗಲರ ಪರಮಾಧಿಕಾರ ಒಪ್ಪಿಕೊಂಡಿತು.

೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧದ ತರುವಾಯ ಕರ್ನಾಟಕದಲ್ಲಿ ರಾಜಕೀಯ ಪರಿಸ್ಥಿತಿ ಹದಗೆಟ್ಟಿತ್ತು. ವಿಜಯನಗರ ಸಾಮ್ರಾಜ್ಯದ ಅಳಿವಿಗೆ ಕಾರಣರಾದ ಷಾಹಿ ಸುಲ್ತಾನರು ಆ ಸಾಮ್ರಾಜ್ಯದ ಭಾಗಗಳ ಮೇಲೆ ಸಂಪೂರ್ಣ ಆಧಿಪತ್ಯ ಸ್ಥಾಪಿಸುವಷ್ಟು ಸಾಮರ್ಥ್ಯವನ್ನಾಗಲೀ, ಐಕಮತ್ಯವನ್ನಾಗಲೀ ಹೊಂದಿರಲಿಲ್ಲ. ಅಳಿದುಳಿದ ವಿಜಯನಗರ ಸಾಮ್ರಾಜ್ಯ ಅರವೀಡು ವಂಶದವರ ಕೈಯಲ್ಲಿ ೧೬೧೦ರ ವರೆಗೂ ಸಾಕಷ್ಟು ಪ್ರಬಲವಾಗಿಯೇ ಇತ್ತು. ಸಾಮ್ರಾಜ್ಯದ ಬಹುತೇಕ ಸಾಮಂತರು ಪೆನುಗೊಂಡೆಯಿಂದ ಆಳುತ್ತಿದ್ದ ಸಾಮ್ರಾಟರಿಗೆ ನಿಷ್ಠೆಯಿಂದಲೇ ಇದ್ದರು. ಬಿಜಾಪುರ ಮತ್ತು ಗೋಲ್ಕೊಂಡದ ಸುಲ್ತಾನರು ಹಳೆಯ ವಿಜಯನಗರದ ಭಾಗವಾಗಿದ್ದ ಕರ್ನಾಟಕದ ಕೆಲವು ಪ್ರದೇಶಗಳನ್ನು ತಮ್ಮ ರಾಜ್ಯಗಳಿಗೆ ಸೇರಿಸಿಕೊಂಡರೂ, ತುಂಗಭದ್ರಾ ನದಿಯ ದಕ್ಷಿಣಕ್ಕೆ ಬಿದನೂರು ನಾಯಕರು, ಮೈಸೂರು ಒಡೆಯರು, ಯಲಹಂಕದ ಪ್ರಭುಗಳು ಮೊದಲಾದವರು ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಸ್ವತಂತ್ರವಾಗಿ ಆಳುತ್ತಿದ್ದರು. ೧೬೩೬ರ ವರೆಗೂ ಸುಮಾರು ಮುಕ್ಕಾಲು ಶತಮಾನದ ಕಾಲಾವಧಿಯಲ್ಲಿ ಕರ್ನಾಟಕದಲ್ಲಿ ಯಾವುದೇ ಪ್ರಬಲವಾದ ರಾಜ್ಯ ತಲೆ ಎತ್ತಲಿಲ್ಲ. ಇದು ಮೊಗಲರು ಕರ್ನಾಟಕವನ್ನು ಕಬಳಿಸುವ ಪ್ರಯತ್ನಕ್ಕೆ ಉತ್ತೇಜಕಾರಿಯಾಗಿತ್ತು. ಅರವೀಡಿನ ನಾಲ್ಕನೆಯ ಶ್ರೀರಂಗನು ಸುಲ್ತಾನರ ವಿರುದ್ಧ ಮೊಗಲರ ಸಹಾಯ ಯಾಚಿಸುತ್ತಿದ್ದುದ್ದು ಮೊಗಲರಿಗೆ ಒಂದು ಒಳ್ಳೆಯ ನೆಪ ದೊರೆತಂತಾಗಿತ್ತು.

ಬಿಜಾಪುರ ಮತ್ತು ಗೋಲ್ಕೊಂಡದ ಸುಲ್ತಾನರಿಗೆ ಮೊಗಲರು ದಕ್ಷಿಣ ಭಾರತದ ರಾಜಕೀಯದಲ್ಲಿ ಪ್ರವೇಶಿಸುವುದು ಇಷ್ಟವಿರಲಿಲ್ಲ. ಷಾಹಿ ಸುಲ್ತಾನರು ಸ್ವತಂತ್ರ ಪ್ರಿಯರಾಗಿದ್ದರು. ಮೊಗಲರು ಒಂದಲ್ಲೊಂದು ದಿನ ನಮ್ಮೆಲ್ಲರನ್ನು ನಿರ್ಮೂಲ ಮಾಡುತ್ತಾರೆಂಬ ಭಯ ಅವರಿಗಿದ್ದಿತು. ಬಿಜಾಪುರದ ಸುಲ್ತಾನನು ಸಾಮಭೇದೋಪಾಯಗಳಿಂದ ಮೊಗಲರ ಆಕ್ರಮಣವನ್ನು ತಡೆಯುತ್ತಿದ್ದನು. ಆಗ ತಾನೆ ಸಂಘಟಿತ ಶಕ್ತಿಯಾಗಿ ಬೆಳೆಯುತ್ತಿದ್ದ ಮರಾಠ ಯೋಧರನ್ನೂ ಸೇನಾನಿಗಳನ್ನೂ ಸೈನ್ಯದಲ್ಲಿ ಸೇರಿಸಿಕೊಳ್ಳುತ್ತಿದ್ದನು. ಶಿವಾಜಿಯ ತಂದೆ ಷಹಜಿ ಬಿಜಾಪುರ ಸೈನ್ಯದ ಪ್ರಮುಖ ಸೇನಾನಿಗಳಲ್ಲೊಬ್ಬನಾಗಿದ್ದನು. ೧೬೩೬ ಹೊತ್ತಿಗೆ ಉತ್ತರದಿಂದ ಮೊಗಲರ ಒತ್ತಡ ಹೆಚ್ಚಿದಂತೆಲ್ಲ ಬಿಜಾಪುರದ ಮಹಮ್ಮದ್

ಆದಿಲ್ ಷಹನು ದಕ್ಷಿಣದತ್ತ ತನ್ನ ರಾಜ್ಯವನ್ನು ವಿಸ್ತರಿಸಲು ವಿಶ್ವಪ್ರಯತ್ನ ಮಾಡಿದನು. ಅವನು ಹಲವಾರು ಬಾರಿ ದಂಡಯಾತ್ರೆಗಳನ್ನು ಕೈಗೊಂಡು ಬಿದನೂರು, ಮೈಸೂರು, ಮದುರಾ ಮೊದಲಾದ ಸ್ಥಳಗಳ ಪ್ರಬಲ ರಾಜರನ್ನು ಸೋಲಿಸಿದನು. ೧೬೩೮ರಲ್ಲಿ ಬೆಂಗಳೂರನ್ನು ಕೆಂಪೇಗೌಡನಿಂದ ವಶಪಡಿಸಿಕೊಂಡು ಷಹಜಿಗೆ ಜಹಗೀರಿಯಾಗಿ ನೀಡಿದನು. ಕೆಂಪೇಗೌಡನಿಗೆ ಮಾಗಡಿಯನ್ನು ಬಿಟ್ಟನು. ಮೈಸೂರು ಪ್ರಬಲವಾಗಿ ಬಿಜಾಪುರದ ಸೈನ್ಯವನ್ನು ಎದುರಿಸಿ ಕೆಲವು ಬಾರಿ ಸೋಲಿಸಿತು. ಆದರೂ ಸುಲ್ತಾನನು ೧೬೩೯ರಲ್ಲಿ ಕಂಠೀರವನಿಂದ ಪೊಗದಿ ವಸೂಲು ಮಾಡಿದನು. ಬಿಜಾಪುರದ ಸೈನ್ಯ ತಮಿಳುನಾಡಿನ ಜಿಂಜಿಯನ್ನೂ ವಶಪಡಿಸಿಕೊಂಡಿತು. ಆದರೆ ಬಿಜಾಪುರದ ತಲೆಯ ಮೇಲೆ ಮೊಗಲರ ಕತ್ತಿ ತೂಗುತ್ತಿತ್ತು. ಸುಲ್ತಾನನು ದಕ್ಷಿಣದಲ್ಲಿ ಗೆದ್ದ ಪ್ರದೇಶಗಳನ್ನು ಸ್ಥಿರಪಡಿಸುವುದರಲ್ಲೂ ಯಶಸ್ವಿಯಾಗಲಿಲ್ಲ. ಇದರಿಂದ ಕರ್ನಾಟಕದಲ್ಲಿ ಮೊಗಲರ ವಿರುದ್ಧ ಪ್ರಬಲ ರಾಜ್ಯ ಕಟ್ಟುವ ಕೊನೆಯ ಪ್ರಯತ್ನವೂ ವಿಫಲವಾಯಿತು. ೧೬೫೬ರಲ್ಲಿ ಮಹಮ್ಮದ್ ಆದಿಲ್ ಷಹನು ನಿಧನನಾದನು. ಗೋಲ್ಕೊಂಡದ ಮೀರ್‌ಜುಮ್ಲಾನನ್ನು ಮುಂದಿಟ್ಟುಕೊಂಡು ೧೬೫೭ರಲ್ಲಿ ಮೊಗಲರು ಔರಂಗಜೇಬನ ನೇತೃತ್ವದಲ್ಲಿ ಬಿಜಾಪುರವನ್ನು ಮುತ್ತಿ ಅದನ್ನು ಸೋಲಿನ ಅಂಚಿಗೆ ಎಳೆದಿದ್ದರು. ಅಷ್ಟರಲ್ಲಿ ಉತ್ತರಾಧಿಕಾರಕ್ಕಾಗಿ ದೆಹಲಿಯಲ್ಲಿ ಉಂಟಾದ ಒಳಜಗಳಗಳು ಕರ್ನಾಟಕವನ್ನು ಮೊಗಲರ ಆಕ್ರಮಣದಿಂದ ತಾತ್ಕಾಲಿಕವಾಗಿ ಪಾರುಮಾಡಿದುವು.

ಔರಂಗಜೇಬನು ೧೬೫೮ರಲ್ಲಿ ಮೊಗಲ್ ಸಾಮ್ರಾಟನಾದನು. ಆದರೆ ೧೬೮೦ರವರೆಗೂ ಮೊಗಲರಿಂದ ಕರ್ನಾಟಕ್ಕೆ ತೀವ್ರ ಅಪಾಯ ಒದಗಲಿಲ್ಲ. ೧೬೮೩ರಲ್ಲಿ ಮರಾಠರನ್ನು ಮತ್ತು ದಖನ್ನಿನ ಸುಲ್ತಾನರನ್ನು ನಿರ್ಮೂಲ ಮಾಡಬೇಕೆಂಬ ಉದ್ದೇಶದಿಂದ ಔರಂಗಜೇಬನು ಸ್ವತಃ ದಖನ್ನಿಗೆ ಬಂದನು. ಈ ಹೊತ್ತಿಗೆ ದಕ್ಷಿಣ ಭಾರತದ ಅತ್ಯಂತ ಪ್ರಬಲ ರಾಜ್ಯವೆನಿಸಿದ್ದ ಬಿಜಾಪುರ ಕ್ಷೀಣಗತಿಗಿಳಿದಿತ್ತು. ಮೊಗಲರ ದಾಳಿಗಳು ಬಿಜಾಪುರವನ್ನು ಹಣ್ಣು ಮಾಡಿದ್ದವು. ಶಿವಾಜಿ ಬಿಜಾಪುರದ ಕೆಲವು ಪ್ರದೇಶಗಳನ್ನು ಮರಾಠ ರಾಜ್ಯಕ್ಕೆ ಸೇರಿಸಿದ್ದಲ್ಲದೆ, ತೀರ ದಕ್ಷಿಣದ ಜಿಂಜಿಯನ್ನು ಮರಾಠರ ನೆಲೆಯಾಗಿ ಪರಿವರ್ತಿಸಿದ್ದನು. ಕಂಗೆಟ್ಟ ಬಿಜಾಪುರವು ೧೬೮೬ರಲ್ಲಿ ಮೊಗಲರಿಗೆ ಹೆಚ್ಚು ಹೋರಾಟವಿಲ್ಲದೆ ವಶವಾಯಿತು. ದಕ್ಷಿಣ ಕರ್ನಾಟಕದಲ್ಲಿ ಆಳುತ್ತಿದ್ದ ಬಿದನೂರು ನಾಯಕರು. ಮೈಸೂರು ಒಡೆಯರು ಮತ್ತಿತರ ಪಾಳೆಯಗಾರರು ಪರಸ್ಪರ ಐಕಮತ್ಯವಿಲ್ಲದೆ ಹೋರಾಡಿ ದಣಿದಿದ್ದರು. ಮೊಗಲರ ಅಪಾಯವನ್ನು ಮುಂಗಂಡ ಮೈಸೂರಿನ ಚಿಕ್ಕದೇವರಾಯನು ಅವರು ಬಿಜಾಪುರ ಮತ್ತು ಗೋಲ್ಕೊಂಡಗಳನ್ನು ವಶಪಡಿಸಿಕೊಳ್ಳುವಾಗ ಅವರಿಗೆ ನೆರವಾಗಿದ್ದನು. ಔರಂಗಜೇಬನೊಂದಿಗೆ ಸೌಹಾರ್ದದಿಂದಲೇ ವರ್ತಿಸುತ್ತಿದ್ದ ಚಿಕ್ಕದೇವರಾಯನ ದೂರದೃಷ್ಟಿ. ಮುತ್ಸದ್ದಿತನಗಳಿಂದ ಮೈಸೂರು ಮೊಗಲರ ದಾಳಿಗೊಳಗಾಗದೆ ಉಳಿಯಿತು.

ಬಿದನೂರು ರಾಜ್ಯ ಆಗ ಚಿಕ್ಕದಾಗಿದ್ದರೂ ಅಲ್ಲಿನ ರಾಣಿ ಚನ್ನಮ್ಮಾಜಿ ಶೌರ್ಯ ಧೈರ್ಯಗಳಿಗೆ ಹೆಸರಾಗಿದ್ದಳು. ಮೊಗಲ್ ಸೈನ್ಯದ ಬೇಟೆಯ ಮೃಗವಾಗಿದ್ದ ರಾಜಾರಾಮನಿಗೆ ಆಶ್ರಯ ಕೊಡಲು ಮುಂದೆ ಬರುವುದೆಂದರೆ. ಮೃತ್ಯುವನ್ನೇ ಆಹ್ವಾನಿಸಿದಂತಿತ್ತು. ಅಂತಹ ಸವಾಲನ್ನು ಅಂಗೀಕರಿಸಿ ಚನ್ನಮ್ಮಾಜಿ ರಾಜಾರಾಮನು ಜಿಂಜಿಗೆ ತಪ್ಪಿಸಿಕೊಂಡು ಹೋಗಲು ನೆರವಾದಳು. ಇದರಿಂದ ಸಹಜವಾಗಿಯೇ ಬಿದನೂರು ಔರಂಗಜೇಬನ ಕೋಪಕ್ಕೆ ಒಳಗಾಯಿತು. ಮೊಗಲ್ ಸೈನ್ಯ ಬಿದನೂರನ್ನು ಮುತ್ತಿತು. ಆದರೆ ಸಮಯಕ್ಕೆ ಸರಿಯಾಗಿ ಮರಾಠ ಸೇನಾನಿಗಳು ಚನ್ನಮ್ಮಾಜಿಯ ನೆರವಿಗೆ ಬಂದುದರಿಂದ ಮತ್ತು ಚನ್ನಮ್ಮಾಜಿಯ ರಾಜತಂತ್ರ ಕುಶಲತೆಯಿಂದ ಈ ಪ್ರಕರಣ ಶಾಂತಿ ಒಪ್ಪಂದದಲ್ಲಿ ಪರ್ಯವಸಾನವಾಯಿತು.

೧೬೯೦ರಲ್ಲಿ ಮೊಗಲ್ ಸೈನ್ಯ ಜುಲ್‌ಫಿಕರ್ ಖಾನನ ನೇತೃತ್ವದಲ್ಲಿ ರಾಯಚೂರು, ಕರ್ನೂಲ್, ಕಡಪ, ಬಿದನೂರು, ಚನ್ನಪಟ್ಟಣ ಮತ್ತು ಮೈಸೂರಿನ ಮಾರ್ಗವಾಗಿ ಇಡೀ ಕರ್ನಾಟಕವನ್ನೇ ಅಲ್ಲೋಲ ಕಲ್ಲೋಲಗೊಳಿಸುತ್ತ ತಮಿಳುನಾಡಿನ ಜಿಂಜಿಯತ್ತ ತೆರಳಿತು. ಆದರೆ ಜಿಂಜಿ ಮೊಗಲರ ವಶವಾದದ್ದು ೧೬೯೮ರಲ್ಲಿ.

ಈ ನಡುವಿನ ಒಂದು ದಶಕದ ಕಾಲ ಮೊಗಲರ ಮತ್ತು ಕರ್ನಾಟಕದ ಬಾಂಧವ್ಯದಲ್ಲಿ ಬಹು ಮುಖ್ಯವಾದ ಘಟ್ಟವಾಗಿದೆ. ಬಿಜಾಪುರದ ಪತನದಿಂದ ಮೊಗಲರಿಗೆ ಕರ್ನಾಟಕದ ಹೆಬ್ಬಾಗಿಲು

ತೆರೆದಂತಾಗಿತ್ತು. ಔರಂಗಜೇಬನು ಮನಸ್ಸು ಮಾಡಿದ್ದರೆ ಇಡೀ ಕರ್ನಾಟಕದಲ್ಲಿ ಮೊಗಲ್ ಆಡಳಿತ ಸ್ಥಾಪಿಸಬಹುದಾಗಿತ್ತು. ಆದರೆ ಅವನು ಉತ್ತರ ಭಾರತದಲ್ಲಿ ಎದ್ದಿದ್ದ ಅಶಾಂತಿ ಮತ್ತು ದಂಗೆಗಳಿಂದ, ಸಾಮ್ರಾಜ್ಯದ ದುಂದು ವೆಚ್ಚದಿಂದ ಉಂಟಾದ ಆರ್ಥಿಕ ದುಸ್ಥಿತಿಯಿಂದ ಎದೆಗುಂದಿದ್ದನು. ದಕ್ಷಿಣದಲ್ಲಿ ಮರಾಠರನ್ನು ಅಡಗಿಸಿದರೆ ತನಗೆ ಸಿಂಹಸ್ವಪ್ನರೆನಿಸಿದ್ದ ಶತ್ರುಗಳನ್ನು ನಿರ್ಮೂಲ ಮಾಡಿದಂತಾಗುವುದಲ್ಲದೆ ಸಾಮ್ರಾಜ್ಯ ವಿಸ್ತರಿಸುವುದರ ಮೂಲಕ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ತನ್ನ ಪ್ರತಿಷ್ಠೆಯನ್ನು ಪುನಃಸ್ಥಾಪಿಸಿದಂತಾಗುವುದೆಂಬ ಮಹದಾಸೆಗಳಿಂದ ಕೂಡಿದವನಾಗಿದ್ದನು. ಅವನ ಉದ್ವಿಗ್ನ ಮನಸ್ಸು ಮರಾಠರನ್ನು ನಿರ್ಮೂಲ ಮಾಡಬೇಕೆಂಬತ್ತಲೇ ಹರಿಯಿತಲ್ಲದೆ ತನ್ನ ವಶದಲ್ಲಿದ್ದ ಪ್ರದೇಶಗಳಲ್ಲಿ ದೃಢ ಆಡಳಿತ ವ್ಯವಸ್ಥೆ ಮಾಡುವತ್ತ ಹರಿಯಲಿಲ್ಲ. ಬೆಂಗಳೂರನ್ನು ಮರಾಠರಿಂದ ವಶಪಡಿಸಿಕೊಂಡು ಚಿಕ್ಕದೇವರಾಯನಿಗೆ ಹಸ್ತಾಂತರ ಮಾಡಿದ್ದೇ ಇದಕ್ಕೆ ಸಾಕ್ಷಿ.

ಮೊಗಲರು ಜಿಂಜಿಯನ್ನು ಆಕ್ರಮಿಸುವ ಕಾಲದಲ್ಲಿ ಕರ್ನಾಟಕ ಮೊಗಲ್–ಮರಾಠರ ರಣರಂಗವಾಗಿ ಪರಿಣಮಿಸಿತು. ಮೊಗಲ್ ಸೈನ್ಯವಾಗಲಿ. ಮರಾಠರ ಸೈನ್ಯವಾಗಲಿ ಕರ್ನಾಟಕದ ಮೂಲಕವೇ ಜಿಂಜಿಗೆ ಹೋಗಬೇಕಾಗಿತ್ತು. ಕರ್ನಾಟಕದಲ್ಲಿ ಮೊಗಲರು ಮರಾಠರ ಮೇಲೂ ಮರಾಠರು ಮೊಗಲರ ಮೇಲೂ ಬಿದ್ದು ಜಿಂಜಿಯ ಕಡೆ ಹೋಗುವ ಸೈನ್ಯದ ತುಕಡಿಗಳನ್ನು ತಡೆಯುತ್ತಿದ್ದರು. ಮರಾಠರ ಸೇನಾನಿ ಸಂತಾಜಿ ಕರ್ನಾಟಕದಲ್ಲಿ ಮೊಗಲರ ನೆಲೆಗಳ ಮೇಲೆ ಎರಗಿ ಅಪ್ರತಿಮ ಸಾಹಸದಿಂದ ಹೋರಾಡಿದನು. ೧೬೯೬ರಲ್ಲಿ ದೊಡ್ಡೇರಿಯನ್ನು ಮುತ್ತಿದ್ದ ಖಾಸಿಂಖಾನನನ್ನು ಕೊಂದನು. ಅದೇ ವರ್ಷ ಬಸವಾಪಟ್ಟಣದಲ್ಲಿದ್ದ ಮೊಗಲ್ ಸೈನ್ಯದ ಮೇಲೆ ಬಿದ್ದು ಅದನ್ನು ಸೋಲಿಸಿ ಮೊಗಲ್ ದಂಡನಾಯಕ ಹಿಮ್ಮತ್‌ಖಾನನನ್ನು ಕೊಂದನು. ಸಂತಾಜಿ ನಡೆಸಿದ ಹಲವಾರು ಯುದ್ಧಗಳಲ್ಲಿ ಚಿತ್ರದುರ್ಗದ ನಾಯಕರು ಮತ್ತು ಬಿದನೂರು ನಾಯಕರು ಅವನಿಗೆ ನೆರವು ನೀಡಿದರು. ಮೈಸೂರಿನ ಚಿಕ್ಕದೇವರಾಯನು ಮರಾಠರು ಮತ್ತು ಮೊಗಲರಿಬ್ಬರಿಂದಲೂ ತನಗೆ ಅಪಾಯವಿರುವುದನ್ನು ಮನಗಂಡಿದ್ದನು. ಅವನು ಮೊಗಲರೊಂದಿಗೆ ಘರ್ಷಣೆಗೆ ಅವಕಾಶಕೊಡದಂತೆ ಮುತ್ಸದ್ದಿತನದ ನೀತಿಯನ್ನು ಅನುಸರಿಸಿದನು. ಔರಂಗಜೇಬನು ಚಿಕ್ಕದೇವರಾಯನಿಗೆ "ರಾಜಾ ಜಗದೇವ್" ಎಂಬ ಬಿರುದು ಕೊಟ್ಟನು.

೧೬೯೮ರಲ್ಲಿ ಮೊಗಲ್ ಸೈನ್ಯ ಜಿಂಜಿಕೋಟೆಯನ್ನು ಹಿಡಿದರೂ ರಾಜಾರಾಮನನ್ನು ಹಿಡಿಯಲಾಗಲಿಲ್ಲ. ಅವನು ಪುನಃ ಮಹಾರಾಷ್ಟ್ರಕ್ಕೆ ಹೋಗಿ ಸೇರಿಕೊಂಡನು. ಇದರಿಂದ ಔರಂಗಜೇಬನ ಸೈನ್ಯದ ದೌರ್ಬಲ್ಯ ಜಗಜ್ಜಾಹೀರವಾಯಿತು. ಕರ್ನಾಟಕದ ಹಲವು ಕಡೆ ಮೊಗಲ್ ಸೈನ್ಯ ಅನುಭವಿಸಿದ ಸೋಲಿನಿಂದಾಗಿ ಕರ್ನಾಟಕದಲ್ಲಿ ಮೊಗಲ್ ಸಾಮ್ರಾಜ್ಯದ ಅಸ್ತಿಭಾರವೂ ದೃಢವಾಗಿ ನಿಲ್ಲಲಿಲ್ಲ. ಸಿರಾ. ಬಿಜಾಪುರ. ಸವಣೂರು ಮೊದಲಾದವು ಮೊಗಲರ ಆಡಳಿತ ಕೇಂದ್ರಗಳಾಗಿ ಸ್ಥಾಪನೆಯಾದುದ್ದೇನೊ ಸರಿ. ಆದರೆ ಪ್ರಾಥಮಿಕ ಆಡಳಿತವೆಲ್ಲ ಸ್ಥಳೀಯ ವಂಶಾನುಗತ ಹಿಂದೂ ಅಧಿಕಾರಿಗಳ ಕೈಯಲ್ಲೇ ಉಳಿದುಕೊಂಡಿತ್ತು. ದಿನದಿನಕ್ಕೂ ವೃದ್ಧಿಸುತ್ತಿದ್ದ ಮರಾಠರ ಪ್ರಾಬಲ್ಯವನ್ನು ಅಡಗಿಸುವ ಗೀಳಿನಲ್ಲಿ ಸ್ವತಃ ಸೈನ್ಯದ ನೇತೃತ್ವವಹಿಸಿದ್ದ ವಯೋವೃದ್ಧ ಮೊಗಲ್ ಸಾಮ್ರಾಟನ ಶಿಬಿರದ ಸಮೀಪದವರೆಗೂ ಮರಾಠರು ಬಂದು ಮಿಂಚಿನ ದಾಳಿ ಮಾಡಿ ಹೋಗುತ್ತಿದ್ದರು. ಕೊನೆಗೆ ೧೭೦೬ರಲ್ಲಿ ಔರಂಗಜೇಬನು ಭಗ್ನ ಹೃದಯನಾಗಿ ಅಹಮದ್‌ನಗರಕ್ಕೆ ತೆರಳಿದನು. ಮರುವರ್ಷ ಮರಣ ಹೊಂದಿದನು.

ಔರಂಗಜೇಬನ ಕಾರ್ಯಾಚರಣೆಯಿಂದಾಗಿ ಕರ್ನಾಟಕದಲ್ಲಿ ಬಿಜಾಪುರದ ಷಾಹಿ ರಾಜ್ಯ ನಿರ್ಮೂಲವಾಯಿತು. ಬಿಜಾಪುರದ ಪತನದಿಂದ ಉತ್ತರ ಕರ್ನಾಟಕದ ಬಹುಭಾಗ ಅರಾಜಕತೆಗೀಡಾಯಿತು. ಮೈಸೂರಿನ ಅರಸರು ಮೊಗಲರ ದಾಳಿಯಿಂದ ಉದ್ಭವಿಸಿದ ಗೊಂದಲದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿದರು. ಬಿದನೂರು ರಾಜ್ಯ ದುರ್ಬಲವಾಯಿತು. ಕೆಲವು ಸಣ್ಣ ಪುಟ್ಟ ಪಾಳೆಯಪಟ್ಟುಗಳು ಅಳಿದುಹೋದವು. ಕರ್ನಾಟಕದಲ್ಲಿ ಮೊಗಲ್ ಆಡಳಿತ ಕೇಂದ್ರಗಳಾಗಿದ್ದ ಸಿರಾ ಮತ್ತು ಸವಣೂರುಗಳು ಅರ್ಕಾಟಿನ ನವಾಬನ ಅಧೀನದಲ್ಲಿದ್ದವು. ಅರ್ಕಾಟಿನ ನವಾಬನನ್ನು ದಖ್ಖನಿನ ಮೊಗಲ್ ಗವರ್ನರ್ ನೇಮಿಸುತ್ತಿದ್ದನು. ಆದರೆ ೧೭೧೪ರಿಂದ ದಖ್ಖನಿನ ಗವರ್ನರ್ ಆಗಿ ಬಂದ ನಿಜಾಮ್ ಉಲ್ ಮುಲ್ಕನು

ದೆಹಲಿಯ ಮೊಗಲ್ ಚಕ್ರವರ್ತಿಯೊಡನೆ ವಾಸ್ತವವಾಗಿ ಸ್ವತಂತ್ರನಾಗಿ ವ್ಯವಹರಿಸುತ್ತಿದ್ದನು. ಮುಂದೆ ಇವನ ವಂಶವೇ ಹೈದರಾಬಾದ್ 'ನಿಜಾಮ ಶಾಹಿ'ಯೆಂದು ಇತಿಹಾಸದಲ್ಲಿ ಪ್ರಖ್ಯಾತಗೊಂಡಿತು.

ಮೊಗಲ್ ಗವರ್ನರನು ಕೃಷ್ಣಾನದಿಯಿಂದ ದಕ್ಷಿಣಕ್ಕಿರುವ ಭಾಗವೆಲ್ಲ ತನ್ನ ಅಧೀನ ಪ್ರದೇಶವೆಂದು ಭಾವಿಸಿದ್ದನು. ಅವನು ಕರ್ನಾಟಕದಲ್ಲಿ ಮೈಸೂರು, ಬಿದನೂರು, ಮತ್ತು ಚಿತ್ರದುರ್ಗ. ಮೊದಲಾದ ಸ್ಥಳಗಳ ರಾಜರುಗಳಿಂದ ಕಪ್ಪ ವಸೂಲು ಮಾಡುವ ಹಕ್ಕು ತನಗಿದೆಯೆಂದು ತಿಳಿದಿದ್ದನು. ಆದರೆ ಮರಾಠರು ಮೊಗಲರ ಪ್ರಾಬಲ್ಯವನ್ನು ಉತ್ತರ--ದಕ್ಷಿಣ ಭಾರತಗಳೆರಡು ಕಡೆಯಿಂದಲೂ ಕುಗ್ಗಿಸುತ್ತಿದ್ದರು. ಇವರಿಬ್ಬರ ಹೋರಾಟದ ನಡುವೆ ಸಿಕ್ಕಿ ಕರ್ನಾಟಕದ ರಾಜರು ಮತ್ತು ಜನತೆ ನರಳುವಂತಾಯಿತು.

ಮೊಗಲರ ಆಡಳಿತ ವ್ಯವಸ್ಥೆ ಮಂಜಿನಂತೆ ಕರಗಿ ಹೋಗುತ್ತಿತ್ತು. ಮೊಗಲ್ ಸೇನಾನಿಗಳು ಮತ್ತು ನವಾಬರು ಗವರ್ನರನ ನಿಯಂತ್ರಣವನ್ನು ಮೀರಿ ವರ್ತಿಸುತ್ತಿದರು. ಆರ್ಕಾಟಿನ ನವಾಬನ ದರ್ಪವನ್ನು ಮುರಿಯಲು ೧೭೪೦ರಲ್ಲಿ ಸ್ವತಃ ನಿಜಾಮನೇ ಮರಾಠರ ಸಹಕಾರ ಬಯಸುವಂತಾಯಿತು. ೧೭೫೬ರಲ್ಲಿ ಬಾಗಲಕೋಟೆ, ಬಾದಾಮಿ ಮೊದಲಾದ ಪ್ರದೇಶಗಳನ್ನು ಒಪ್ಪಂದದ ಪ್ರಕಾರ ನಿಜಾಮನು ಪೇಷ್ವೆಗಳಿಗೆ ಒಪ್ಪಿಸಿದನು. ೧೭೪೮ರಲ್ಲಿ ಮೊಗಲ್ ಚಕ್ರವರ್ತಿ ಮಹಮ್ಮದ್ ಷಾ ನಿಧನನಾದನು. ಅದೇ ವರ್ಷ ಹೈದರಾಬಾದಿನ ನಿಜಾಮನೂ ನಿಧನನಾದನು. ನಿಜಾಮನ ಉತ್ತರಾಧಿಕಾರಿಗಳು ದುರ್ಬಲರಾದುದರಿಂದ ಸವಣೂರು ಮತ್ತು ಸಿರಾಗಳ ಸೇನಾನಿಗಳು ನವಾಬರೆಂದು ಕರೆದುಕೊಂಡು ಸ್ವತಂತ್ರವಾಗಿ ವರ್ತಿಸತೊಡಗಿದರು. ೧೭೫೭ರಲ್ಲಿ ಸಿರಾ ಮರಾಠರ ವಶವಾಯಿತು. ೧೭೬೦ರಲ್ಲಿ ಉದ್ಗೀರ್‌ನಲ್ಲಿ ಮರಾಠರು ನಿಜಾಮನನ್ನು ಸೋಲಿಸಿದ ಬಳಿಕ ಕರ್ನಾಟಕದಲ್ಲಿ ಮೊಗಲರ ಪ್ರಭಾವ ಬಹುತೇಕವಾಗಿ ಕುಗ್ಗಿತು. ಸವಣೂರಿನ ನವಾಬನನ್ನು ಹೈದರಾಲಿ ಸದೆಬಡಿದನು. ತರುವಾಯ ಅದು ಸುಮಾರು ಇಪ್ಪತ್ತೈದು ಹಳ್ಳಿಗಳ ಸಂಸ್ಥಾನವಾಗಿ ೧೯೪೮ರ ವರೆಗೂ ಉಳಿದುಕೊಂಡುಬಂತು.

ಕರ್ನಾಟಕ ಮೊಗಲ್ ಸಾಮ್ರಾಜ್ಯದ ಭಾಗವಾಗಿದ್ದ ಅಲ್ಪಕಾಲದಲ್ಲಿ ಅಲ್ಲಿ ಸುಭದ್ರ ಆಡಳಿತ ಸ್ಥಾಪನೆಯಾಗುವ ಬದಲು ಅರಾಜಕತೆ. ಅವ್ಯವಸ್ಥೆಗಳುಂಟಾಗಿದ್ದವು. ಇದಕ್ಕೆ ಆಗ ಮೊಗಲ್ ಸಾಮ್ರಾಜ್ಯದ ಕೇಂದ್ರ ಶಕ್ತಿ ಶಿಥಿಲಗೊಂಡಿದ್ದುದೇ ಕಾರಣ. ಮೊಗಲ್-ಮರಾಠರ ಹೋರಾಟಗಳಿಂದಾಗಿ ಕರ್ನಾಟಕದಲ್ಲಿ ಉಭಯತ್ರರೂ ದೃಢವಾಗಿ ನೆಲೆಯೂರಲಾಗದಿದ್ದುದು ಗಮನಾರ್ಹ. ಮೊಗಲ್ ಸಾಮ್ರಾಜ್ಯ ಅಳಿದರೂ ಹೈದರಾಬಾದ್ ನಿಜಾಮ ಶಾಹಿ ಉಳಿಯಿತು. ಬ್ರಿಟಿಷರೊಂದಿಗೆ ಸಹಕರಿಸಿ ಮೈಸೂರು ರಾಜ್ಯದ ಶೀಘ್ರ ಪತನಕ್ಕೂ ಸ್ವಲ್ಪಮಟ್ಟಿಗೆ ಕಾರಣವಾಯಿತು. ೧೭೯೯ರಲ್ಲಿ ಕರ್ನಾಟಕದ ಕೆಲವು ಭಾಗಗಳನ್ನು ದಕ್ಕಿಸಿಕೊಂಡಿತು. ಒಟ್ಟಿನಲ್ಲಿ ಮೊಗಲರು ಕರ್ನಾಟಕದ ಇತಿಹಾಸದಲ್ಲಿ ಬಿರುಗಾಳಿಯಂತೆ ಬಂದುಹೋದರು. ಆದರೆ ಅವರು ಅದರಲ್ಲಿ ತೆರೆದ ಅಧ್ಯಾಯ ಮರೆಯಲಾಗದ್ದು.

ಜಹಾಂಗೀರನ ತರುವಾಯ ಪ್ರಭುತ್ವಕ್ಕೆ ಬಂದ ಷಾ ಜಹಾನನು ದಕ್ಷಿಣದ ನೀತಿಯನ್ನು ಹೆಚ್ಚು ಉತ್ಸಾಹದಿಂದ ಮುಂದುವರಿಸಿದನು. ಜಹಾಂಗೀರನ ಕಾಲದಲ್ಲಿ ಮಲ್ಲಿಕ್ ಅಂಬರ್‌ನ ಧೈರ್ಯ ಮತ್ತು ವಿವೇಕಗಳಿಂದ ಪ್ರೇರಿತರಾದ ದಕ್ಷಿಣದ ಸುಲ್ತಾನ್ ಶಾಹಿಗಳು ಮೊಗಲರ ವಿರುದ್ಧ ಸಂಘಟಿತರಾಗಿದ್ದರು. ಕ್ರಿ.ಶ. ೧೬೩೩ರಲ್ಲಿ ದಕ್ಷಿಣದ ದಂಡಯಾತ್ರೆಯನ್ನು ಆರಂಭಿಸಿದ ಷಾ ಜಹಾನನು ದೌಲತಾಬಾದನ್ನು ವಶಪಡಿಸಿಕೊಂಡನು. ಅಲ್ಲಿನ ಮನೆತನದ ಕೊನೆಯ ರಾಜ ಹುಸೇನ್ ಷಾನನ್ನು ಸೆರೆ ಹಿಡಿದನು. ಬಿಜಾಪುರ ಮತ್ತು ಗೋಲ್ಕೊಂಡಗಳ ಸುಲ್ತಾನರು ಮಾತ್ರ ವಶರಾಗದೆ ಇದ್ದರು. ಸಾಮ್ರಾಟನೇ ಸ್ವತಃ ದಕ್ಷಿಣದ ಮೇಲೆ ದಂಡೆತ್ತಿ ಹೋಗಿ, ಎರಡು ಸುಲ್ತಾನ್ ಶಾಹಿಗಳ ಮೇಲೂ ಏಕ ಕಾಲದಲ್ಲಿ ದಾಳಿ ನಡೆಸಿದನು. ಗೋಲ್ಕೊಂಡದ ಸುಲ್ತಾನನು ಮೊಗಲರ ಪರಮಾಧಿಕಾರವನ್ನು ಅಂಗೀಕರಿಸಿದನು. ಆದರೆ ಬಿಜಾಪುರದ ಆದಿಲ್‌ಶಾಹಿ ರಾಜರು ಪ್ರತಿಭಟಿಸಿದರೂ ಕಡೆಗೆ ಸೋಲನ್ನು ಒಪ್ಪಿಕೊಂಡರು. ತಾತ್ಕಾಲಿಕವಾಗಿ, ಮೊಗಲರ ಪರಮಾಧಿಕಾರ ಸ್ಥಾಪನೆಯಿಂದ ಷಾ ಜಹಾನನು ತೃಪ್ತಿಪಡಬೇಕಾಯಿತು.

ಸಂಗ್ರಹ: ಕೆ. ಎಂ. ಪಣಿಕ್ಕರ್‌ರವರ
'ಭಾರತೀಯ ಇತಿಹಾಸ ಸಮೀಕ್ಷೆ'ಯಿಂದ



ಶ್ರೀ ಎಂ. ವೀರಪ್ಪ



ಮಲೆಮಹದೇಶ್ವರನ ಯಾತ್ರಿಕರು (ಜಲವರ್ಣಚಿತ್ರ)



ಪ್ರಾರ್ಥನಾಸಭೆಯಲ್ಲಿ ಗಾಂಧೀಜಿ (ಜಲವರ್ಣಚಿತ್ರ)



ರಾಜಘಾಟದಲ್ಲಿ ನೆಹರೂ (ಜಲವರ್ಣಚಿತ್ರ)

ಪಿ. ಆರ್. ತಿಪ್ಪೇಸ್ವಾಮಿ

ಆದರ್ಶ ವರ್ಣಶಿಲ್ಪಿ—ಎಂ. ವೀರಪ್ಪ

"ಕಲೆ ಜೀವನದ ಕಾವುನೋವುಗಳಿಂದ ಮೂಡಿಬಂದ ವಸ್ತು. ಮೂಡಿದಲ್ಲಿಯೇ ರೂಢಿಯಾಗುವ ಶಿಸ್ತು ಅದಕ್ಕಿದೆ. ಅದರ ಸಹಜತೆ ಬೆಲೆಗೆ ಬಾರದು, ಎರವಿಗೂ ಬಾರದು. ಇಂಥ ಸಹಜತೆ ಎಲ್ಲರಿಗೂ ದೊರಕದು." ಆದರೆ ಮೈಸೂರಿನ ಒಂಟಿಕೊಪ್ಪಲಿನ ಪ್ರಶಾಂತ ವಾತಾವರಣದಲ್ಲಿ ಬಾಳಿದ ದಿ. ವೀರಪ್ಪನವರಲ್ಲಿ ದಾಂಗುಡಿಯಿಟ್ಟು ಹಬ್ಬಿ ಹರಡಿದ ಕಲಾಲತೆಯನ್ನು ನಾವು ಕಾಣುತ್ತಿದ್ದೇವೆ. ಕಲೆ ಸಾಹಿತ್ಯಗಳ ಸಹಜತೆಯನ್ನು ಶ್ರೀ ಕುವೆಂಪು ಅವರ 'ಉದಯರವಿ', ವೀರಪ್ಪನವರ 'ಚಿತ್ರಾಲಯ' ಇವುಗಳಲ್ಲಿ ಸಂದರ್ಶಿಸಬಹುದು. ಈ ಆಲಯಗಳಲ್ಲಿ ಸದಾ ಕುಶಲ ಕಲಾಜ್ಯೋತಿ ಬೆಳಗುತ್ತದೆ. "ಎಲ್ಲಿ ಅನುಭವ ಮತ್ತು ದರ್ಶನ ಭಾಗಕ್ಕಿಂತ ಕರ್ಮಕುಶಲತೆ ಹೆಚ್ಚೋ ಅಲ್ಲಿ ಕಲೆಯ ಅಂತಸ್ತು ಅದ್ವಿತೀಯವಾದದ್ದು." ಇದನ್ನು ಎಂದ ವೀರಪ್ಪನವರ 'ಚಿತ್ರಾಲಯ'ದಲ್ಲಿ ಕಾಣಬಹುದಾಗಿದೆ.

ಚಿತ್ರಾಲಯ' ಸಹಜವಾಗಿಯೂ ಒಂದು ಪುಟ್ಟ ಜಗನ್ಮೋಹನ ಬಂಗಲೆಯೇ ಆಗಿದೆ. ನಾಲ್ಕು ಗೋಡೆಗಳಲ್ಲೂ, ನಾನಾ ರೀತಿಯ ವರ್ಣರಂಜಿತ ಚಿತ್ರಪಟಗಳು ಕಾಣುತ್ತವೆ. ಒಂದೆಡೆ ಭಕ್ತಿ ಭಂಡಾರಿ ಬಸವಣ್ಣನವರ "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ" ಎಂದು ಸಾರುವ ತೈಲಚಿತ್ರ ರಂಜಿಸುತ್ತಿದೆ. ಬಸವಣ್ಣನವರು ರಚಿಸಿದ ವಚನಗಳಿಗೆ ಅನುಸಾರವಾಗಿ ಚಿತ್ರಿತವಾಗಿರುವ ಅನೇಕ ಚಿತ್ರಗಳು ಮತ್ತೊಂದೆಡೆ ಶೋಭಿಸುತ್ತಿವೆ. ಅಜಂತದಲ್ಲಿ ಕಾಣುವ 'ತಾಯಿ ಮಗು'ವಿನ ಕರುಣಾಜನಕ ಚಿತ್ರ ಮಗದೊಂದು ಕಡೆ ಇದೆ. ಪ್ರಕೃತಿಯ ಪ್ರತಿರೂಪಾದ ಗೇರುಸೊಪ್ಪೆ ಜಲಪಾತ, ಚಾಮುಂಡಿಬೆಟ್ಟದ ದೃಶ್ಯ ಇತ್ಯಾದಿ ಮೈಸೂರಿನ ಕಿರೀಟಪ್ರಾಯವಾದ ನೋಟಗಳು ಅಲ್ಲಲ್ಲಿ ರಾರಾಜಿಸುತ್ತಿವೆ. ಭಾರತೀಯ ಜನಜೀವನದ ಯಾತ್ರಿಕರ ಚಿತ್ರವನ್ನು ಪಾಶ್ಚಿಮಾತ್ಯ ರೀತಿಯಲ್ಲಿ ಚಿತ್ರಿಸಿರುವುದು—ಪೌರ್ವಾತ್ಯ ಪಾಶ್ಚಿಮಾತ್ಯ ಚಿತ್ರಕಲಾ ಸಂಯೋಜನೆಯನ್ನು ಪ್ರದರ್ಶಿಸಿ ನಮ್ಮನ್ನು ಕಲಾಯಾತ್ರೆಗೆ ಕರೆಯುವಂತಿದೆ. ಇಂಥವುಗಳಿಂದ ಅಲಂಕೃತವಾದ ಈ ಆಲಯಕ್ಕೆ ನಿಜವಾಗಿಯೂ 'ಚಿತ್ರಾಲಯ' ಹೆಸರು ಒಪ್ಪಬೇಕಾದ್ದೆ. ವೀರಪ್ಪನವರ ನೆನಪಾದಾಗಲೆಲ್ಲ ಚಿತ್ರಾಲಯದ ಕಡೆ ಮನಸ್ಸು ಹೋಗದೇ ಇರದು. ಮತ್ತೆ ಮತ್ತೆ ಸಂದರ್ಶಿಸಿ, ಕೊಂಚವೇಳೆಯಾದರೂ ತಂಗಿಬಂದರೆ ಮನಸ್ಸಿನ ಬೇವನ್ನು ಮರೆಯಬಹುದಾಗಿದೆ.

ನಿಷ್ಠೆಯಿಂದಲೂ, ಸ್ವಚ್ಛತೆಯಿಂದಲೂ ಕಲಾಮಾತೆಯನ್ನು ಆರಾಧಿಸಿದಲ್ಲಿ, ಕಷ್ಟಕಾರ್ಪಣ್ಯಗಳು ದೂರವಾಗಿ ಸುಖ ಸಂತೋಷ ಸಿಗಬಲ್ಲುದು ಎಂಬುದನ್ನು ವೀರಪ್ಪನವರು ತೋರಿಸಿಕೊಟ್ಟಿದ್ದಾರೆ. ಇವರು ಕೇವಲ ಚಿಕ್ಕವರಾಗಿದ್ದಾಗಲೇ ಚಿತ್ರಬರೆಯುವುದರಲ್ಲಿ ಹೆಚ್ಚು ಆಸಕ್ತಿ ತೋರುತ್ತಾ ಬಂದರು. ಸೇಲಂ ಜಿಲ್ಲೆಯ ಡೆಂಕಣಿಕೋಟೆಯಲ್ಲಿ ತಮ್ಮ ಬಾಲ್ಯವನ್ನು ಕಳೆದರು. ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದ ಇವರನ್ನು ಹುಟ್ಟುಗುಣವಾದ ಚಿತ್ರಕಲೆ ಕೆಣಕದೆ ಬಿಡಲಿಲ್ಲ. ಇದರ ಫಲವಾಗಿ ಹೈಸ್ಕೂಲಿಗೇ ಇವರ ವಿದ್ಯಾಭ್ಯಾಸ ಮುಕ್ತಾಯಗೊಳ್ಳಬೇಕಾಯಿತು.

೧೯೧೮ರಲ್ಲಿ ವೀರಪ್ಪನವರು ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಕಲಾಶಾಲೆಗೆ ಸೇರಿದರು. ಡಿ. ಕೃಷ್ಣಯ್ಯನವರು ಆಗ ಕಲಾತರಗತಿಯ ಅಧ್ಯಾಪಕರಾಗಿದ್ದರು. ಶಾಲೆಗೆ ಸೇರಿದ ಕೊಂಚ ಕಾಲದಲ್ಲಿಯೇ ವೀರಪ್ಪನವರಿಗಿದ್ದ ಕಲಾಮಹಿಮೆಯಿಂದ ಘನ ಸರ್ಕಾರದವರು ಕೊಡುತ್ತಿದ್ದ ವಿದ್ಯಾರ್ಥಿ

ವೇತನ ದೊರೆತು ವೀರಪ್ಪನವರು ಬೊಂಬಾಯಿಯ ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಕಲಾಶಾಲೆಯನ್ನು ಸೇರಿದರು. ಇವರ ಕೈ ಪಳಗಿದ್ದುದರಿಂದ ಒಮ್ಮೆಗೇ ಮೂರನೆ ತರಗತಿಯಿಂದ ಕಲಾಭ್ಯಾಸ ಮಾಡಲು ಅವಕಾಶ ದೊರಕಿತು. ಏಳು ವರ್ಷಗಳು ವೇತನ ಪಡೆದು ಅವಿಶ್ರಾಂತವಾಗಿ ದುಡಿದರು. ಆಗ ಶಾಲೆಯ ಪ್ರಿನ್ಸಿಪಾಲರು ಗ್ಲಾಡ್‌ಸ್ಟೋನ್ ಸಾಲೋಮನ್. ಕಲಾವಿದ ಎಂ. ವಿ. ಧುರಂಧರ್ ಕಲಾಧ್ಯಾಪಕರು. ವೀರಪ್ಪನವರು ಶ್ರದ್ಧೆ ಮತ್ತು ಸಾಧನೆಯಿಂದ ಪ್ರತಿವರ್ಷವೂ ತರಗತಿಗೆ ಪ್ರಥಮರಾಗಿಯೇ ಉತ್ತೀರ್ಣರಾಗುತ್ತಾ ಬಂದರು. ಅಂದಿನಿಂದ ತಮ್ಮ ಅಧ್ಯಾಪಕರುಗಳಿಗೆ ಮೆಚ್ಚಿನ ಶಿಷ್ಯರಾದರು, ಪ್ರಾಧ್ಯಾಪಕರ ಪ್ರೀತಿಗೆ ಪಾತ್ರರಾದರು. ಪ್ರತಿವರ್ಷವೂ ಕೊನೆಯ ತರಗತಿಯ ವಿದ್ಯಾರ್ಥಿಗಳನ್ನು ಮಾತ್ರ ಪ್ರವಾಸಗಳಿಗೆ ಕರೆದುಕೊಂಡು ಹೋಗಿಬರುವುದು ವಾಡಿಕೆಯಾಗಿದ್ದಿತು. ಇಂಥ ಸದವಕಾಶ ವೀರಪ್ಪನವರಿಗೆ ಕೇವಲ ಮೂರನೆಯ ಕಲಾತರಗತಿಯಲ್ಲಿ ಇದ್ದಾಗಲೇ ದೊರೆತುದು ಅವರು ಕಲಾಭ್ಯಾಸದಲ್ಲಿ ತೋರಿದ ಜಾಣ್ಮೆಯ ಫಲ ಎಂದೇ ತೋರುತ್ತದೆ.

೧೯೧೯ರಿಂದ ೧೯೨೭ರ ವರೆಗೆ ಬೊಂಬಾಯಿಯ ಯಾಂತ್ರಿಕ ಜೀವನವನ್ನು ಸಹಿಸಿದವರಾದರೂ ಅವರಿಗೆ ಕಲಾಸಂಸ್ಕಾರದಿಂದ ಸರ್ಕಾರದ ವೇತನ ದೊರೆತು ಕಲಾರಾಧನೆಯಲ್ಲಿ ಆವಾವುದನ್ನೂ ಲೆಕ್ಕಿಸದೆ ಅವರು ತಮ್ಮ ಸಾಧನೆಯನ್ನು ಮುಂದುವರಿಸಿಕೊಂಡು ಪ್ರವರ್ಧಮಾನಕ್ಕೆ ಬಂದರು. ಆದರ್ಶ ವಿದ್ಯಾರ್ಥಿ ಎನ್ನಿಸಿಕೊಂಡರು.

ಒಮ್ಮೆ ಅಜಂತಕ್ಕೆ ಹೋದಾಗ ವೀರಪ್ಪನವರು ಮನಸ್ಸಿಟ್ಟು ಚಿತ್ರಿಸಿದ 'ತಾಯಿಮಗು' ಮತ್ತು 'ಅಜಂತದ ಭಿತ್ತಿಚಿತ್ರ'ಪಟಗಳು ಅಸಾಧಾರಣವಾಗಿದ್ದವು. ಇವುಗಳಲ್ಲಿನ ಕಲಾನೈಪುಣ್ಯತೆಯನ್ನು ಕಂಡು ಎಲ್ಲರೂ ಬೆರಗಾದರು. ತಕ್ಷಣ ಅಜಂತದ ಭಿತ್ತಿಚಿತ್ರದ ಪ್ರತಿಚಿತ್ರ ಶ್ರೀಮಂತರೊಬ್ಬರ ಭವ್ಯಾಲಯವನ್ನು ಸೇರಿತು. ಅಜಂತ ಸಂದರ್ಶನ ಇವರನ್ನು ಪರಿವರ್ತನೆಮಾಡಿತು. ಭಾರತೀಯ ಕಲೆಯಲ್ಲಿ ಹೆಚ್ಚು ಪರಿಶ್ರಮಹೊಂದಲು ಅಜಂತದ ಚಿತ್ರಗಳೆಲ್ಲಾ ಪ್ರೇರೇಪಿಸಿದುದರ ಪರಿಣಾಮದಿಂದಲೋ ಏನೋ ಅಂದಿನಿಂದ ಅವರು ಭಾರತೀಯ ಕಲೆಯಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾ ಬಂದರು. ಎಲ್ಲಿ ನಿಂತರೂ ಭಾರತ, ಎಲ್ಲಿ ಕುಳಿತರೂ ಭಾರತ ಎಂಬ ಧ್ವನಿ ಮಿಡಿದಿರಬೇಕು.

ವೀರಪ್ಪನವರ ಕಲಾಸ್ಫೂರ್ತಿಗೆ ಸಾಕ್ಷಿಯಂತಿದ್ದ ಶುಭ್ರಧವಳವಾದ ಉಡುಪು. ಅರವತ್ತರ ಗಡಿ ದಾಟಿದ್ದರೂ ದೃಢವಾದ ಕಾಯದಿಂದಾಗಿ ಎಂಥವರನ್ನೂ ಮಿತ್ರರನ್ನಾಗಿ ಮಾಡಿಕೊಳ್ಳುವ ನಗುಮುಖ ಅವರದಾಗಿತ್ತು. ಸತ್ಯಸಾಧನೆಯೊಂದನ್ನೇ ತಮ್ಮ ಜೀವನದ ಗುರಿಯನ್ನಾಗಿಟ್ಟುಕೊಂಡಿದ್ದ ವೀರಪ್ಪನವರು "ಕಲೆಯು ಬದುಕಿನ ಪ್ರತಿಬಿಂಬದಂತಿರಬೇಕು. ಜನರಿಂದ ಕೆಲಸ ಮಾಡಿಸುವಂಥದಾಗಬೇಕು ಮನಸ್ಸನ್ನೂ ಜೀವನವನ್ನೂ ಹಗುರಗೊಳಿಸುವಂತಹುದಾಗಬೇಕು" ಎಂಬ ಧೋರಣೆಯೊಡನೆ ಬೊಂಬಾಯಿನಿಂದ ಮೈಸೂರಿಗೆ ಬಂದರು. ಹಾಗೆ ಬಂದವರೇ ೧೯೨೭ರಲ್ಲಿ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಕಲಾಶಾಲೆಯಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದರು. ಕೇವಲ ಕೆಲವೇ ತಿಂಗಳಲ್ಲಿ ಆಗಿನ ಅಧಿಕಾರ ದರ್ಪದಿಂದಲೋ ಏನೋ ಆ ಕಲಾಶಾಲೆಯಿಂದ ಹೊರಬರುವ ಕಹಿ ಪ್ರಸಂಗ ಬಂದುದು ಶಾಲೆಯ ದುರದೃಷ್ಟವೇ ಸರಿ. ಇಂಥ ನೂರಾರು ಕಷ್ಟಗಳನ್ನು ಲೆಕ್ಕಿಸದೆ ಸತ್ಯಪ್ರತಿಪಾದನೆಯಲ್ಲಿ ದಿಟ್ಟತನದಿಂದ ಮುಂದೆ ಬಂದ ವೀರಪ್ಪನವರಿಗೆ ಜೀವನ ಮಾರ್ಗಕ್ಕೆ ದಾರಿಮಾಡಿಕೊಳ್ಳುವುದೇನೂ ಕಷ್ಟವಾಗಿರಲಿಲ್ಲ. ಅದೇ ವರ್ಷ 'ಬೊಂಬಾಯಿ ಆರ್ಟ್ಸ್ ಸ್ಟುಡಿಯೋ' ಎಂಬುದನ್ನು ಮೈಸೂರು ನಗರದಲ್ಲಿ ಸ್ಥಾಪಿಸಿ ಚಿತ್ರಕಲೆ ಮತ್ತು ಛಾಯಾಚಿತ್ರಕಲೆಯಲ್ಲಿ ನಿರತರಾದರು. ತಮ್ಮ ಸೋದರರ ಸಹಕಾರದಿಂದ ಇವರಲ್ಲಿ ವೀರಪ್ಪನವರು ಜಯಗಳಿಸಿ ತಮ್ಮ ವೃತ್ತಿಯನ್ನು ವಿಸ್ತರಿಸಿ "ಮೈಸೂರು ಟಾಯ್ಸ್ ಕೊ" ಎಂಬ ಮಕ್ಕಳ ಆಟದ ಸಾಮಾನಿನ ಕಾರ್ಖಾನೆಯನ್ನು ೧೯೩೭ರಲ್ಲಿ ತೆರೆದರು. ಇಲ್ಲಿ ತಯಾರು ಮಾಡಿದ ಆಟದ ಸಾಮಾನುಗಳು ಮಕ್ಕಳ ಜ್ಞಾನ ವಿಕಾಸಕ್ಕೆ ಶ್ರೇಷ್ಠ ಸಾಧನವಾಗಿರುವುದರಿಂದ, ಈ ಉದ್ಯಮಕ್ಕೆ ಎಲ್ಲೆಲ್ಲೂ ಪುರಸ್ಕಾರ ದೊರೆಯುತ್ತಾ ಬಂದಿತು. ಪಾಶ್ಚಿಮಾತ್ಯ ದೇಶಗಳಲ್ಲೂ ಈ ಕಲಾಕೃತಿಗಳು ಪ್ರಸರಿಸಿ ಮೈಸೂರಿನ ಕಲಾಕೀರ್ತಿಯನ್ನು ಕೊಂಡಾಡುವಂತಾಯಿತು. ಈಗ ಇದನ್ನು ಸ್ಥಾಪಿಸಿದ ವೀರಪ್ಪನವರು ಇಲ್ಲ. ಆದರೆ ಇವರು ಸ್ಥಾಪಿಸಿದ ಈ ಸಂಸ್ಥೆ ಭಾರತದಲ್ಲಿ ಏಕೆ ವಿದೇಶಗಳಲ್ಲೂ ಹೆಸರು

ಪಡೆಯುವಂತಾಗಿದೆ. ಈ ಕೀರ್ತಿಗೆ ಇವರ ಸೋದರರೂ ವೀರಪ್ಪನವರ ಪುತ್ರರೂ ಕಾರಣ ಎಂದರೆ ತಪ್ಪಾಗದು. ಇವರೆಲ್ಲರ ಅವಿಶ್ರಾಂತ ದುಡಿಮೆಯಿಂದಾಗಿ ಮೈಸೂರು ನಗರದ ಒಂಟಿಕೊಪ್ಪಲಿನಲ್ಲಿ ಇವರ ಮಾತೃಸ್ಥಾನ ಅಗಾಧವಾಗಿ ತಲೆಎತ್ತಿ ನಿಂತಿದೆ. ಮಕ್ಕಳ ಆಟದ ಸಾಮಾನುಗಳ ತಯಾರಿಕಾ ಕಾರ್ಖಾನೆಯಂತೆ ಕಲಾಗಾರದಂತೆ ಸತತ ಕೆಲಸದಲ್ಲಿ ತೊಡಗಿ ಮೈಸೂರು ನಗರಕ್ಕೆ ಕೀರ್ತಿ ತಂದಿದೆ.

ಮಕ್ಕಳಿಗಾಗಿಯೇ ಬರೆದು ಅಚ್ಚು ಹಾಕಿಸಿದ ವೀರಪ್ಪನವರ 'ವಿಮಲ ಡ್ರಾಯಿಂಗ್ ಬುಕ್' ಮಕ್ಕಳಿಗೂ ಇಂಜನಿಯರಿಂಗ್ ವಿದ್ಯಾರ್ಥಿಗಳಿಗೂ ಸಹಾಯಕವಾಗಿದೆ.

"ಕಲಾವಿದ ತನ್ನ ಕಾಲಿನ ಮೇಲೆ ಹೇಗೆ ನಿಲ್ಲಬಲ್ಲ" ಎಂಬುದಕ್ಕೆ ವೀರಪ್ಪನವರು ನಿದರ್ಶನರಾಗಿದ್ದರು. ಈ ಕಲೆಯನ್ನು ವೃತ್ತಿಯಂತೆ ಅಳವಡಿಸಿ ಸುಗಮವಾದ ಜೀವನವನ್ನು ಹೇಗೆ ಸಾಧಿಸಬಹುದು ಎಂಬುದನ್ನೂ ತೋರಿಸಿದ ಪರಿಣಾಮವಾಗಿಯೇ ಏನೋ, ಅಂದಿನ ಪ್ರಜಾಸರ್ಕಾರದವರ ದೃಷ್ಟಿ ವೀರಪ್ಪನವರ ಮೇಲೆ ಬೀಳದೆ ಇರಲಿಲ್ಲ. ಮೈಸೂರಿನ ಕೈಗಾರಿಕಾ ಉದ್ಯಮಕ್ಕೆ ಹೆಚ್ಚು ನೆರವನ್ನು ತೆಗೆದುಕೊಳ್ಳಲೋಸುಗ ವೀರಪ್ಪನವರಿಗೆ ೧೯೪೭ರಲ್ಲಿ ಚಾಮರಾಜೇಂದ್ರ ಶಾಲೆಗೆ ಕಲಾಪ್ರಾಧ್ಯಾಪಕರಾಗಿ ಕರೆ ಬಂದಿತು.

ಚಾಮರಾಜೇಂದ್ರ ಕಲಾಶಾಲೆಗೆ ಒಂದು ವಿಶೇಷ ಕಳೆ ಬಂದಿತು. ಕಲಾತರಗತಿಗಳಿಗೂ ನವಚೇತನ ಮೂಡಿತು. ಬಡವರಾದ ಕಲಾವಿದ್ಯಾರ್ಥಿಗಳ ಮೇಲೆ ಇವರ ಕರುಣಾಮಯ ದೃಷ್ಟಿ ಬಿದ್ದಿತು. ಕಲಾ ತರಗತಿಗಳನ್ನು ಹೇಗಾದರೂ ಮಾಡಿ ಮಾರ್ಪಡಿಸಬೇಕೆಂದಿದ್ದ ಬಹುದಿನದ ಇವರ ಬಯಕೆಗೆ ಪುಟ ಕೊಟ್ಟಂತಾಯಿತು. ನಾನಾ ತೊಂದರೆಗಳಿದ್ದರೂ ಕೂಡ ಕೂಲಂಕಷವಾಗಿ ಬಿಡಿಸಿ ಶಾಲೆಯಲ್ಲಿದ್ದ ಲೋಪದೋಷಗಳನ್ನು ಹೋಗಲಾಡಿಸುವಂತಾದುದು ವೀರಪ್ಪನವರ ಒಂದು ವಿಶೇಷ ಗುಣದಿಂದಲೇ. ಸಮಾಜದಲ್ಲಿ ಬೆರೆತು, ನಾನಾ ತರದ ವಿಚಾರ ವಿನಿಮಯಗಳಲ್ಲಿ ಗೆದ್ದುಬಂದ ಈ ನಿಪುಣರಿಗೆ ಈ ಕೆಲಸ ವೇನೂ ಕಷ್ಟವಾಗಲಿಲ್ಲ.

ಕ್ರಮೇಣ ವೀರಪ್ಪನವರ ಸೇವಾದೃಷ್ಟಿ ಎಲ್ಲೆಡೆಯಲ್ಲೂ ಬೆಳಗಿ ೧೯೫೦ರಲ್ಲಿ ಅದೇ ಶಾಲೆಯ ಕಲಾವಿಭಾಗದ ಉನ್ನತ ಹುದ್ದೆಗೇರಿದರು. "ಬಾಡುವ ಬಳ್ಳಿಗೆ ನವಚೇತನ ಮೂಡಿದಂತೆ" ಬಳಲಿದ ಶಾಲೆಯು ಕ್ರಮೇಣ ಚೇತರಿಸಿಕೊಳ್ಳಲು ವೀರಪ್ಪನವರ ಅವಿಶ್ರಾಂತ ದುಡಿಮೆಯೇ ಕಾರಣವಾಯಿತು. ಇವರ ಪಾಲಿಗೆ ಬಂದ ಚಿತ್ರಕಲೆ, ಲೋಹ, ದಂತ ಮತ್ತು ಗಂಧದ ಕೆತ್ತನೆ, ಎನಾಮಿಲ್, ಇನ್‌ಲೆ, ಮಾಡಲಿಂಗ್ ಮುಂತಾದ ತರಗತಿಗಳ ಮೇಲ್ವಿಚಾರಣೆಯ ಜವಾಬ್ದಾರಿ ಇವರ ಹೊಣೆಯಾಯಿತು. ಶಾಲೆಯಲ್ಲಿ ಅನೇಕ ಬದಲಾವಣೆಗಳಾದುವು. ಹೆಚ್ಚು ಜನರಿಗೆ ಕೆಲಸ ಸಿಗುವಂತೆಮಾಡಿದ್ದರಿಂದ ಕೆಲಸಗಾರರ ಸಂಖ್ಯೆಯೂ ಹೆಚ್ಚಿತು. ತಯಾರಾದ ವಸ್ತುಗಳು ಬೇಗ ಮಾರಾಟವಾದುವು. ನಿಂತು ಹೋಗಿದ್ದ ಜ್ಞಾನಾರ್ಜನಾ ಪ್ರವಾಸದ ವ್ಯವಸ್ಥೆ ಮತ್ತೆ ಪ್ರಾರಂಭವಾಯಿತು. ವಿಶ್ವವಿದ್ಯಾನಿಲಯದ ಮತ್ತು ಇತರ ವಿದ್ಯಾರ್ಥಿಗಳಿಗಾಗಿ ಒಪ್ಪೊತ್ತಿನ ಕಲಾತರಗತಿಗಳು ಬೇರೆ ಆರಂಭವಾದುವು. ಸರ್ಕಾರದ ಮತ್ತು ಕೈಗಾರಿಕಾ ಡೈರೆಕ್ಟರವರ ಬೆಂಬಲ ಪ್ರೋತ್ಸಾಹವೇ ವೀರಪ್ಪನವರ ಉತ್ಸಾಹದ ಸೇವೆಗೆ ಕಾರಣವಾಗಿತ್ತು. ಕಲಾವಿದ್ಯಾರ್ಥಿಗಳು ವೀರಪ್ಪನವರ ಸರಳ ಸೌಜನ್ಯದ ಹೃದಯಕ್ಕೆ ಮಾರುಹೋಗಿದ್ದರು. ವಿದ್ಯಾರ್ಥಿಗಳನ್ನು ರಜಾದಿನಗಳಲ್ಲಿ ವೀರಪ್ಪನವರು ಜೊತೆಯಲ್ಲೆ ಕರೆದುಕೊಂಡು ಚಾಮುಂಡಿಬೆಟ್ಟದ ತಪ್ಪಲಲ್ಲೋ ಶ್ರೀರಂಗಪಟ್ಟಣದ ಕಾವೇರಿ ಮಾತೆಯ ತಟದಲ್ಲೋ ಕೂರಿಸಿ ನೈಜ ಚಿತ್ರಣ ರಚನೆಗೆ ಮಾರ್ಗದರ್ಶನ ನೀಡುತ್ತಿದ್ದರು. ಬಡವಿದ್ಯಾರ್ಥಿಗಳಿಗೆ ಎಷ್ಟೋ ಸಾರಿ ಕೈ ಖರ್ಚಿಗೆಂದು ಹಣಕೊಟ್ಟು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದ ಹಿರಿಯುದಾದ ಗುಣ ಈ ಕಲಾಗುರುವಿನಲ್ಲಿತ್ತು. ಇವರ ಮನೆಗೆ ಯಾರೇ ಸಂದರ್ಶಿಸಲಿ. ಏನಾದರೂ ತಿನಿಸು ಅಲ್ಲಿ ಕಾದಿರುತ್ತಿತ್ತು. ತಿಂದು ಬಾಯಿ ಚಪ್ಪರಿಸದೆ ಬರುತ್ತಿರಲಿಲ್ಲ. ಇವರ ಅತಿಥಿ ಸತ್ಕಾರ ಅತಿ ದೊಡ್ಡದು. ಜೀವನ ಪರ್ಯಂತರ ನೆನಪಿನಲ್ಲಿಡುವಂತಹದು. ಬೇಡಿದವರಿಗೆ ಇವರದು ಕೊಡುಗೈ. ಯಾರನ್ನೂ ಸೌಜನ್ಯವಾಗಿ ಕಂಡು ಕಳುಹಿಸುತ್ತಿದ್ದರು. ವೀರಪ್ಪನವರ ನಡೆ ನುಡಿ ಎಲ್ಲವೂ ಇವರ ಪುತ್ರರಲ್ಲಿ ಇವರ ಸೋದರರಲ್ಲಿ ಕಾಣಬಹುದಾಗಿದೆ. 'ಕಾಯಕವೇ ಕೈಲಾಸ' ಎಂದು ಶ್ರಮದಿಂದ ದುಡಿದು ಬಾಳುವ ಮಾರ್ಗ ತೋರಿದ ವೀರಪ್ಪನವರದು ಆದರ್ಶ ಸಂಸಾರವಾಗಿದೆ.

ಮೈಸೂರಿನ ಧವಳಕೀರ್ತಿ ಬೆಳಗುವಂತೆ ದೆಹಲಿಯ ರಾಷ್ಟ್ರಪತಿಭವನದಲ್ಲಿ ಮೈಸೂರಿನ ಕಲಾಕೃತಿಗಳನ್ನು ಜೋಡಿಸಲು ಒಮ್ಮೆ ವೀರಪ್ಪನವರನ್ನು ಮೈಸೂರು ಸರ್ಕಾರದ ಪರವಾಗಿ ದೆಹಲಿಗೆ ಕಳುಹಿಸಲಾಗಿತ್ತು. ಅಲ್ಲಿ ಇದ್ದ ಕೆಲವೇ ದಿನಗಳಲ್ಲಿ ಬಿಡುವು ಮಾಡಿಕೊಂಡು ಅವರು 'ಬಿರ್ಲಾ ದೇಗುಲ', 'ಕೆಂಪುಕೋಟೆ'. ಮುಂತಾದ ಸುಂದರ ಜಲವರ್ಣ ನಿಸರ್ಗ ಚಿತ್ರಗಳನ್ನೂ ರಚಿಸಿಕೊಂಡು ಬಂದರು. ವೀರಪ್ಪನವರು ಸರ್ಕಾರಿ ಹುದ್ದೆಯಲ್ಲಿದ್ದಾಗಲೂ ಕಾಲಾವಕಾಶ ಇಲ್ಲದಿದ್ದರೂ ಕಲಾರಾಧನೆಗಾಗಿ ಬಿಡುವುಮಾಡಿಕೊಂಡು ಅನೇಕ ಚಿತ್ರಗಳನ್ನು ರಚಿಸುತ್ತಾ ಬಂದಿದ್ದರು. ಗಣಪತಿ ಉತ್ಸವದ ದೊಡ್ಡ ತೈಲಚಿತ್ರವನ್ನೂ. ಹಂಪೆಯ ವಿರೂಪಾಕ್ಷ ದೇವಾಲಯದ ಅಪೂರ್ವ ಚಿತ್ರವನ್ನು ರಚಿಸಿದ್ದು ಯಾರಾದರೂ ಮೆಚ್ಚುವಂತಹದು. ಅವರ ಕೊನೆಯ ದಿನಗಳಲ್ಲಿ ಬಸವಣ್ಣನವರ ವಚನಕ್ಕೆ ತಕ್ಕಂತೆ ಅನೇಕ ಜಲವರ್ಣ ಚಿತ್ರಗಳನ್ನು ರಚಿಸಿದ್ದು ಆಶ್ಚರ್ಯವೇ ಸರಿ. ಅವುಗಳ ರಚನೆಯಿಂದ ಅವರ ಜೀವನದ ಸಾರ್ಥಕತೆಯನ್ನು ಕಂಡುಕೊಂಡರು. ಕಲೆ ಬೇರೂರಿದರೆ ಕಾಲ. ವಯಸ್ಸು. ಅಧಿಕಾರ ಯಾವುದನ್ನೂ ಲಕ್ಷಿಸುವುದಿಲ್ಲ ವೆನ್ನುವುದಕ್ಕೆ ಇದೊಂದು ನಿದರ್ಶನ.

ರಷ್ಯಾ. ಚೀನಾ. ಮುಂತಾದ ಕಡೆಗಳಲ್ಲಿ ಅಲ್ಲಲ್ಲಿನ ರಾಷ್ಟ್ರಭಕ್ತರ ಉನ್ನತ ಕಲಾಕೃತಿಗಳನ್ನು ರಚಿಸಿದಂತೆ. ಭಾರತೀಯ ರಾಷ್ಟ್ರನಾಯಕರ ಚಿತ್ರರಚನೆಗೆ ತೊಡಗಿದವರು ನಮ್ಮ ಕಲಾವಿದರಲ್ಲಿ ತೀರಾ ವಿರಳ. ವೀರಪ್ಪನವರು ರಾಷ್ಟ್ರಘಟನೆಗಳಿಗೆ ಸಂಬಂಧಪಟ್ಟ ಅನೇಕ ಕಲಾಕೃತಿಗಳನ್ನು ನಿರ್ಮಿಸಿರುವುದು ತುಂಬಾ ಹೆಮ್ಮೆಯ ವಿಷಯ. ಅವುಗಳಲ್ಲಿ ಅತಿ ಮುಖ್ಯವೆನಿಸಬಹುದಾದುವು ಎರಡು–"ಗಾಂಧೀಜಿ ಅಟ್ ಪ್ರೇಯರ್" ಮತ್ತು "ಬಾಪೂವಿನ ಮಹಾಯಾತ್ರೆ". ಒಂದರಲ್ಲಿ ಬಾಪೂಜಿಯು ವಿಶಾಲವಾದ ಮರದ ನೆರಳಿನ ಅಡಿಯಲ್ಲಿ ತಮ್ಮ ಸುತ್ತಲೂ ನವಭಾರತ ನಿರ್ಮಾಣದಲ್ಲಿ ತೊಡಗಿರುವ ದೇಶಭಕ್ತರೊಂದಿಗೆ ಎತ್ತರವಾದ ವೇದಿಕೆಯ ಮೇಲೆ ಕುಳಿತು ಪ್ರಾರ್ಥನೆಗೈಯುವ ಚಿತ್ರಣ. ಇಲ್ಲಿ ನಮ್ಮ ಮೈಸೂರಿನ ರಾಜಕಾರಣಿಗಳನ್ನು ಗುರುತಿಸಬಹುದು. ಇಲ್ಲಿ ಬಳಸಿರುವ ಬಣ್ಣ. ರೇಖಾವಿನ್ಯಾಸ ನಿಜಕ್ಕೂ ಸ್ವಾಭಾವಿಕವಾಗಿದೆ. ಮತ್ತೊಂದು ಚಿತ್ರ ಬಾಪುವಿನ ಪ್ರಾಣಪಕ್ಷಿ ಹಾರಿ ಹೋದ ದಿನದ ಚಿತ್ರಣವಾಗಿದೆ. ನಮ್ಮ ರಾಷ್ಟ್ರಭಕ್ತರು ಬಾಪುವಿನ ದೇಹದ ಸುತ್ತಲೂ ಸುತ್ತುಗಟ್ಟಿಕೊಂಡು ಚಿಂತಾಜನಕ ರಾಗಿರುವ ಚಿತ್ರಣ. ಆತನ ಪ್ರಾಣಪಕ್ಷಿ ತಿಳಿಯಾದ ಆಕಾಶದಲ್ಲಿ ಸ್ವರ್ಗಕ್ಕೆ ತೆರಳುತ್ತಿರುವ ಅಪೂರ್ವ ಚಿತ್ರಣ ಇದು. ಇಲ್ಲಿನ ಕಲ್ಪನೆ. ಸನ್ನಿವೇಶ. ವರ್ಣಗಳ ಬಳಕೆ. ಹೊಂದಾಣಿಕೆ. ವಾತಾವರಣ ಸಹಜವಾಗಿಯೂ ಸ್ಪಷ್ಟವಾಗಿಯೂ ಮೂಡಿ ಬಂದಿವೆ. ಇವು ನಮ್ಮವರಿಗೆ ಅತ್ಯಂತ ಪ್ರಿಯವಾದುವುಗಳೆಂದು ಹೇಳಬಹುದು. ಈ ಎರಡು ಚಿತ್ರಗಳೂ ತ್ರಿವರ್ಣಗಳಲ್ಲಿ ದೊಡ್ಡ ಆಕಾರದಲ್ಲಿ ಮುದ್ರಣವಾಗಿವೆ. ಅನೇಕ ಸಂಘ ಸಂಸ್ಥೆಗಳಲ್ಲೂ ಶಾಲಾಕಟ್ಟಡಗಳಲ್ಲೂ ಶೋಭಿಸುವಂತಾದುದು ಕನ್ನಡಿಗರ ಪುಣ್ಯವಿಶೇಷ.

ವೀರಪ್ಪನವರು ಜಪಾನ್ ದೇಶಕ್ಕೆ ಪ್ರವಾಸವನ್ನು ಕೈಕೊಂಡು. ಅದನ್ನು ಮುಗಿಸಿಕೊಂಡು ಬಂದ ಮೇಲೆ ತಮ್ಮ ಸರ್ಕಾರೀ ಅಧಿಕಾರದಿಂದ ಬಿಡುಗಡೆ ಹೊಂದಿದರೂ ವಿಶ್ರಾಂತಿ ಪಡೆಯದೆ ಜಪಾನ್ ಮಾದರಿಯ ಬೊಂಬೆಯ ಕಲೆಯ ಕುಶಲ ಕೈಗಾರಿಕೆಯ ಉದ್ಯಮದಲ್ಲಿ ತೊಡಗಿದ್ದು ವೀರಪ್ಪನವರ ವಿಶೇಷ ಗುಣವೇ ಸರಿ. ತಯಾರಿಸಿದ ಕಲಾವಸ್ತುಗಳನ್ನು ಹೊರಗಡೆಗೆ ಸಾಗಿಸಲು ಅವುಗಳ ರಕ್ಷಣೆಗಾಗಿಯೇ 'ಪ್ಯಾಕಿಂಗ್ ಸೆಂಟರ್' ಒಂದನ್ನು ಭಾರತ ಸರ್ಕಾರ ವೀರಪ್ಪನವರು ವಾಸವಾಗಿದ್ದ ಮನೆಯ ಬಳಿಯೇ ತೆರೆಯಿತಲ್ಲದೆ ಆ ವಿಷಯದಲ್ಲಿ ತರಬೇತಿ ಹೊಂದಿದ ವೀರಪ್ಪನವರನ್ನು ಮೇಲ್ವಿಚಾರಣಾ ಅಧಿಕಾರಿಗಳನ್ನಾಗಿ ನೇಮಿಸಿತು. ಇದರಿಂದಾಗಿ ಕನ್ನಡ ನಾಡಿನಲ್ಲಿ ಏಕೆ ಭಾರತದಲ್ಲೆಲ್ಲ ವಸ್ತುಗಳನ್ನು ಪ್ಯಾಕು ಮಾಡುವ ಕಲೆಯು ಬೆಳೆದು ಬರಲು ಕಾರಣವಾಯಿತು.

ವೀರಪ್ಪನವರ ದ್ವಿತೀಯ ಪುತ್ರ ಶ್ರೀ ಎಂ. ವಿ. ಶಿವಣ್ಣನವರೂ ಚಿತ್ರಕಾರರೇ. ಇವರು ಚಾಮ ರಾಜೇಂದ್ರ ಚಿತ್ರಶಾಲೆಯಲ್ಲಿ ಕಲಾಭ್ಯಾಸ ಮಾಡಿ. ಬೊಂಬಾಯಿಯ ಜೆ. ಜೆ. ಕಲಾಶಾಲೆಯಲ್ಲಿ ಉದ್ಯಮ ಕಲಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಕಲಾವಿದರು. ವೀರಪ್ಪನವರು ಸ್ಥಾಪಿಸಿದ "ಮೈಸೂರು ಟಾಯ್ಸ್ ಕೊ"–ವಿಭಾಗದಲ್ಲಿ ಇವರ ಪುತ್ರರಾದ ಪ್ರಫುಲ್ಲ ಚಂದ್ರ ಹಾಗೂ ಶಿವಣ್ಣ. ಗೌರೀಶಂಕರ್. ಸುಬ್ರಹ್ಮಣ್ಯ ಮತ್ತು ಓಂಪ್ರಕಾಶ್‌ರವರ ಪಾತ್ರ ಹಿರಿದಾದುದು. ವೀರಪ್ಪನವರ ಮನೆತನ ತುಂಬಿದ ಹೂಬಳ್ಳಿಯಂತೆ. ಕರ್ಣಾಟಕದ ಎಲ್ಲೆಡೆಯಲ್ಲೂ ಆ ಬಳ್ಳಿ ತನ್ನ ಸುವಾಸನೆಯೊಡನೆ ಘಮಘಮಿಸಿ ಪಸರಿಸುವಂತಾಗಲಿ.

ಪುಸ್ತಕಲೋಕ

ಶ್ರಮಜೀವಿಗಳ ಕಲ್ಯಾಣ: ಲೇ: ಎಂ. ಸಿ. ಹಿಪ್ಪರಗಿ;

ಕಾರ್ಮಿಕರ ಸಮಸ್ಯೆಗಳು: ಲೇ: ಎಸ್. ಜಿ. ಕರಭಂಟನಾಳ. ಇವೆರಡರ ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೭೫).

ಎಂ. ಸಿ. ಹಿಪ್ಪರಗಿಯವರು ಉಪನ್ಯಾಸಕ್ಕೆ ಬಳಸಿದ ವಿಷಯವನ್ನು ಗ್ರಂಥರೂಪದಲ್ಲಿ ತಂದ 'ಶ್ರಮಜೀವಿಗಳ ಕಲ್ಯಾಣ' ಎಂಬ ಕಿರುಹೊತ್ತಿಗೆಯು ಒಂದು ಅಚ್ಚುಕಟ್ಟಾದ ಗ್ರಂಥವಾಗಿದೆ. ಅದರ ಕರ್ತೃವು ವಿಷಯಗಳ ಸಂಕಲನವನ್ನೂ ಸಂಬಂಧಿಸಿದ ಕಾನೂನು ಕಟ್ಟಳೆಗಳನ್ನೂ ವಿವರವಾಗಿ ನಿರೂಪಿಸಿದ್ದಾರೆ. ಬಹುಮಟ್ಟಿಗೆ ನಗರೀಕೃತ ಶ್ರಮಜೀವಿಗಳ ಬಗ್ಗೆಯೇ ಹೆಚ್ಚು ವಿವರಗಳನ್ನು ಕೊಟ್ಟಿದ್ದಾರೆ. ಅವರು ಹಳ್ಳಿಗಾಡಿನ ವ್ಯವಸಾಯಾವಲಂಬಿತ ಶ್ರಮ ಜೀವಿಗಳ ಬಗ್ಗೆಯೂ ವ್ಯಾಖ್ಯಾನವನ್ನು ಮಾಡಿದ್ದರೆ ಈ ಹೊತ್ತಿಗೆ ಉತ್ತಮವಾಗುತ್ತಿತ್ತು. ನಮ್ಮ ದೇಶದ ಶೇಕಡ ೮೦ರಷ್ಟು ಜನಸಂಖ್ಯೆ ಅವಲಂಬಿಸಿರುವ ಈ ಉದ್ಯಮದ ಬಗ್ಗೆ ಸ್ವಲ್ಪ ಆಳವಾಗಿ ಪರಿಶೀಲಿಸಿದರೆ ಈ ಕಿರುಹೊತ್ತಿಗೆಯು ಅಮೂಲ್ಯವಾದ ಗ್ರಂಥವಾಗುವುದರಲ್ಲಿ ಸಂದೇಹವಿರುತ್ತಿರಲಿಲ್ಲ. ಕಾನೂನು ಕಟ್ಟಳೆಗಳ ಕ್ರೋಢೀಕರಣ ಮೆಚ್ಚುವಂತಹದು. ಆದರೆ ಸಮಾಜದಲ್ಲಿ ಕಾರ್ಮಿಕನಿಗೆ ಇರಬೇಕಾದ ಸ್ಥಾನಮಾನ, ಮಾಲೀಕನು ಕಾರ್ಮಿಕನನ್ನು ಕಾರ್ಯಕ್ಷೇತ್ರದ ಹೊರಗೆ ಕಾಣುವ ರೀತಿ, ಕಾಣಬೇಕಾದ ರೀತಿ, ಇಂತಹ ಮಾನವ ಸಂಬಂಧಗಳು ಕಾರ್ಮಿಕನ ದಕ್ಷತೆಯನ್ನು ಎಷ್ಟರಮಟ್ಟಿಗೆ ಹೆಚ್ಚಿಸಬಲ್ಲುವು ಎಂಬ ಅಂಶಗಳನ್ನು ನಿರೂಪಿಸಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಅವರು ಅಲ್ಲಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಉದಾಹರಣೆಗಳನ್ನು ಕೊಡುವುದರ ಜೊತೆಗೆ ಸಮಾಜವಾದೀ ರಾಷ್ಟ್ರಗಳಲ್ಲಿರುವ ಕಲ್ಯಾಣ ಕಾರ್ಯಗಳ ಬಗ್ಗೆಯೂ ಸ್ವಲ್ಪ ವಿವರಣೆಗಳನ್ನು ನೀಡಿದ್ದರೆ ಸಮಂಜಸವಾಗುತ್ತಿತ್ತು. ಇತ್ತೀಚಿನ ಬೆಳವಣಿಗೆ ಎಂದರೆ ಶ್ರಮಜೀವಿಗೆ ಉದ್ಯಮದಲ್ಲಿ ಪಾಲುಗಾರಿಕೆ ನೀಡುವುದು, ಈ ವಿಷಯವನ್ನು ಗ್ರಂಥಕರ್ತರು ಸ್ವಲ್ಪ ಸ್ಪಷ್ಟವಾಗಿ ಹೇಳಬಹುದಿತ್ತು. ಪ್ರಾಯಶಃ, ಅವರಿಗಿದ್ದ ಕಾಲಮಿತಿ ಹಾಗೂ ಅಗತ್ಯಗಳನ್ನು ಅನುಸರಿಸಿ ಲೇಖಕರು ವಿಷಯಗಳನ್ನು ಸಂಗ್ರಹವಾಗಿ ತಿಳಿಸಿದ್ದಾರೆಂಬುದು ನನ್ನ ಅಭಿಪ್ರಾಯ. ಒಟ್ಟಿನಲ್ಲಿ ಹೇಳುವುದಾದರೆ, ಚಿಕ್ಕದಾದರೂ ಚೊಕ್ಕವಾಗಿ, ನಿರೂಪಿಸಿರುವ ಈ ಗ್ರಂಥದ ವಿಷಯಗಳು ಅರ್ಥಗರ್ಭಿತವಾಗಿವೆ.

ಎಸ್. ಜಿ. ಕರಭಂಟನಾಳರು ಉಪನ್ಯಾಸಕ್ಕೆ ಆರಿಸಿಕೊಂಡ ವಿಷಯ ಕಾರ್ಮಿಕರ 'ಸಮಸ್ಯೆಗಳು ಪುಸ್ತಕರೂಪವನ್ನು ತಾಳಿದೆ. ಕಾರ್ಮಿಕರ ಜೀವನದ ಬಗ್ಗೆ ಹಾಗೂ ಅವರ ಸಮಸ್ಯೆಗಳ ಅರಿವು ಸರ್ವರಿಗೂ ಆಗುವಂತೆ ಸರಳ ಶೈಲಿಯಲ್ಲಿ, ಸುಲಭವಾಗಿ ಮನಮುಟ್ಟುವಂತೆ ರಚಿಸಿದ್ದಾರೆ. ಕೃಷಿ ಪ್ರಧಾನವಾದ ನಮ್ಮ ದೇಶದ ಕಾರ್ಮಿಕನಿಗೇ ಮೀಸಲಾದ ಕೆಲವು ಸಾಮಾಜಿಕ ಕುಂದುಕೊರತೆಗಳಿವೆ. ಜಾತಿ, ಗುಂಪುಗುಳಿತನ, ಪ್ರಾಂತೀಯತೆ ಮುಂತಾದುವು ಕಾರ್ಮಿಕ ಸಂಘಸಂಸ್ಥೆಗಳಲ್ಲಿ ಹಾಸುಹೊಕ್ಕಾಗಿ ಸಂಘಟನೆಯ ಸ್ವರೂಪವನ್ನೇ ಬದಲಾಯಿಸುತ್ತಿವೆ. ನಮ್ಮ ದೇಶದಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಆಗಿಂದಾಗ್ಗೆ ಕಾನೂನುಗಳು ರಚಿತವಾಗಿವೆ. ಆದರೂ ಅದರಿಂದ ಅಷ್ಟಾಗಿ ಪ್ರಯೋಜನ ಕಂಡುಬಂದಿಲ್ಲವೆಂಬ ಕೂಗು ಕೇಳಿಬರುತ್ತಿದೆ. ಕಾರ್ಮಿಕನಿಗೆ ಸಮಾಜದಲ್ಲಿ ಒಳ್ಳೆಯ ಪರಿಸರ ಕಲ್ಪಿಸುವ ಭರದಲ್ಲಿ ಆತನ ಗಮನ ವಿಶೇಷವಾಗಿ ಕಡಿಮೆಯಾಗುವಂತೆ ಕಾನೂನುಗಳು ನಿರ್ಮಿತವಾಗಿವೆ. ಇದರ ಬಗ್ಗೆ ಗ್ರಂಥಕರ್ತರು ಸ್ವಲ್ಪ ಗಮನ ಹರಿಸಿದ್ದರೆ ಚೆನ್ನಾಗಿರುತ್ತಿತ್ತು. ಅಂತೆಯೇ ಕಾರ್ಮಿಕರ ಬಹುತೇಕ ಸಮಸ್ಯೆಗಳಿಗೆ ಅಜ್ಞಾನ, ಅವಿದ್ಯೆಯೇ ಕಾರಣವಾಗಿದೆ. ಕಾರ್ಮಿಕರು ಕರ್ತವ್ಯನಿರತರಾಗಿರುವಾಗ ಮೇಲಿನ ಅಧಿಕಾರಿ ಆತನ ಕೈಕೆಳಗೆ ಕೆಲಸ ಮಾಡುವ ಕಾರ್ಮಿಕ ಎಂಬ ಬೇಧಭಾವನೆ ಇರುವುದಲ್ಲದೆ,

ಇತರ ಸಮಯ ಸಂದರ್ಭಗಳಲ್ಲಿ ಮಾಲೀಕ ಕೂಲಿ ಎಲ್ಲರೂ ಒಂದೇ ಎಂಬ ಭಾವನೆ ಮೂಡುವಂತೆ ತರಬೇತಿ ಕೊಡುವುದರ ಜೊತೆಗೆ ಸಮಾಜದಲ್ಲಿ ಅಭಿಪ್ರಾಯ ಬದಲಾವಣೆಯಾಗುವುದು ಅತ್ಯವಶ್ಯಕ ಈ ದೃಷ್ಟಿಯಿಂದ ಗ್ರಂಥಕರ್ತರು ಕೆಲವು ಮಾರ್ಪಾಡುಗಳನ್ನು ಸೂಚಿಸಿದ್ದರೆ ಅವರ ಕೃತಿ ಅರ್ಥ ಪೂರ್ಣ ಗ್ರಂಥವಾಗುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಉಪನ್ಯಾಸಕ್ಕಾಗಿ ಆರಿಸಿಕೊಂಡ ವಿಷಯವು ಗ್ರಂಥರೂಪ ತಾಳಿ. ವಿಷಯ ನಿರೂಪಣೆ. ವಿವರವಾದ ಅಂಕೀಅಂಶಗಳು. ಸವಿಸ್ತಾರವಾದ ವಿಷಯ ಸಂಗ್ರಹಣೆ ಮೆಚ್ಚುವಂತಹವು.

—ಎಂ. ನಂಜಮ್ಮಣ್ಣಿ

ಮಾನವ ಮತ್ತು ಶಾಕಾಹಾರ, ಲೇ: ಎ.ಎಸ್. ಧರಣೇಂದ್ರಯ್ಯ. ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೭೬)

'ಮಾನವ ಮತ್ತು ಶಾಕಾಹಾರ' ಎಂಬ ಶೀರ್ಷಿಕೆಯಿಂದ ಪ್ರಕಟವಾಗಿರುವ ಈ ಉಪನ್ಯಾಸ ಶಾಕಾಹಾರದ ಬಗ್ಗೆ ಓದುಗರ ಆಸಕ್ತಿಯನ್ನು ಹೆಚ್ಚಿಸುತ್ತದೆ. ಲೇಖಕರ ಶಿಕ್ಷಣವು ಮನೋವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ್ದರೂ ಶಾಕಾಹಾರದ ಕ್ಷೇತ್ರದಲ್ಲಿಯೂ ಇವರಿಗೆ ಅಭಿರುಚಿ ಇದೆ ಎನ್ನುವುದಕ್ಕೆ ಈ ಬರವಣಿಗೆಯು ಸಾಕ್ಷಿಯಾಗಿದೆ. ನಮ್ಮಲ್ಲಿ ಅನೇಕರು ಮಾಂಸಾಹಾರದಿಂದಲೇ ದೇಹವನ್ನು ಬೆಳೆಸ ಬಹುದೆಂಬ ನಂಬಿಕೆಯನ್ನಿಟ್ಟುಕೊಂಡಿದ್ದಾರೆ. ಇದೊಂದು ಮೂಢನಂಬಿಕೆ ಎನ್ನುವ ಅಂಶ ಈ ಕಿರು ಹೊತ್ತಿಗೆಯಲ್ಲಿ ಅಡಕವಾಗಿರುವ ವಿಮರ್ಶೆಯಿಂದ ವ್ಯಕ್ತವಾಗುತ್ತದೆ. ಲೇಖಕರು ಪ್ರಾಚೀನ ಕಾಲ ದಿಂದಲೂ ನಾವು ತೆಗೆದುಕೊಳ್ಳುವ ಆಹಾರದ ವಿಚಾರವಾಗಿ ಬೆಳೆದು ಬಂದಿರುವ ಅಭಿಪ್ರಾಯಗಳನ್ನು ಪುಷ್ಟೀಕರಿಸಿದ್ದಾರೆ. ಆಧುನಿಕ ಪ್ರಯೋಗಗಳ ಹಿನ್ನೆಲೆಯಲ್ಲಿ ವಿವಿಧ ಶಾಕಾಹಾರಗಳ ಪೌಷ್ಟಿಕಾಂಶಗಳ ಪಟ್ಟಿಗಳನ್ನೇ ಕೊಟ್ಟಿದ್ದಾರೆ. ಮನೋವಿಜ್ಞಾನದ ಕ್ಷೇತ್ರದಲ್ಲಿಯೂ ಶಾಕಾಹಾರಕ್ಕೂ ಮತ್ತು ಮನೋ ವೈಜ್ಞಾನಿಕ ಅಂಶಗಳಿಗೂ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳು ನಡೆದಿವೆ. ಇವುಗಳ ಫಲಿತಾಂಶ ವನ್ನು ಲೇಖಕರು ಈ ಕಿರುಹೊತ್ತಿಗೆಯಲ್ಲಿ ಸೂಚಿಸಬಹುದಾಗಿತ್ತು. ಪ್ರಪಂಚದ ಅನೇಕ ಭಾಗಗಳಲ್ಲಿ ಇಂಥ ಸಂಶೋಧನೆಗಳು ನಡೆದಿವೆ. ಮನೋವಿಜ್ಞಾನ ಕ್ಷೇತ್ರದಲ್ಲಿ ಕೆಲಸವನ್ನು ಮಾಡುತ್ತಿರುವ ವಿದ್ವಾಂಸರು ಆಹಾರದ ವಿಚಾರವಾಗಿ ಉಪನ್ಯಾಸಗಳನ್ನು ಮಾಡುವ ಕಾಲದಲ್ಲಿ ಈ ಸಂಶೋಧನೆಗಳನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ಅವರ ವಿಮರ್ಶೆ ಅಪೂರ್ಣವಾಗಿಯೇ ಉಳಿಯಬಹುದು. ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಶಾಕಾಹಾರ ಅತ್ಯಾವಶ್ಯಕವೆಂದು ಲೇಖಕರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ಅಭಿಪ್ರಾಯಕ್ಕೆ ಅನೇಕರ ಬೆಂಬಲವಿದೆ. ಮಾಂಸಾಹಾರವನ್ನೇ ಮುಖ್ಯವಾದದ್ದನ್ನಾಗಿ ಪರಿಗಣಿಸುತ್ತಿದ್ದ ಪಾಶ್ಚಾತ್ಯರಲ್ಲಿ ಕೂಡ ಕೆಲವರು ಶಾಕಾಹಾರಿಗಳಾಗಿ ಪರಿವರ್ತನೆಯನ್ನು ಹೊಂದು ತ್ತಿರುವುದು ಇಂಥ ಸನ್ನಿವೇಶಕ್ಕೆ ಒಂದು ಉದಾಹರಣೆ. ದೈಹಿಕ ಮತ್ತು ಮಾನಸಿಕ ಆರೋಗ್ಯದ ಜೊತೆಗೆ ಐಹಿಕಾಮುಷ್ಮಿಕ ಸಾಧನೆಗಳಿಗೆ ಶಾಕಾಹಾರವು ಅತ್ಯಾವಶ್ಯಕವೆನ್ನುವುದು ನಿರ್ವಿವಾದದ ಅಂಶ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಗೃಹವಿಜ್ಞಾನದ ಪ್ರಾಧ್ಯಾಪಕರಾದ ಡಾಕ್ಟರ್ ಕೆ. ಪದ್ಮಾ ಉಮಾಪತಿ ಯವರೂ ಶಾಕಾಹಾರದ ಶ್ರೇಷ್ಠತೆಯನ್ನು ಕೊಂಡಾಡಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಧರಣೇಂದ್ರಯ್ಯ ನವರ ಅಭಿಪ್ರಾಯಕ್ಕೆ ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಬೆಂಬಲವಿರುವ ಅಂಶ ವ್ಯಕ್ತವಾಗುತ್ತದೆ.

—ಟಿ. ರಾಘವೇಂದ್ರರಾವ್

ಭಾರತದ ಆರ್ಥಿಕ ಬೆಳವಣಿಗೆಯ ಗುಣದೋಷಗಳು, ಲೇ: ಡಿ. ಎ. ಹೆಗಡೆ. ಎಂ.ಎ.. ಎಲ್‌ಎಲ್.ಬಿ. ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾನಿಲಯ (೧೯೭೫)

ಇದು ಕರ್ನಾಟಕ ವಿಶ್ವವಿದ್ಯಾನಿಲಯದ ಉಪನ್ಯಾಸ ಗ್ರಂಥಮಾಲೆಯ ೨೧೪ನೆಯ ಕೈಹೊತ್ತಿಗೆ. ಲೇಖಕರು ಪುಸ್ತಕವನ್ನು ನಾಲ್ಕು ಪ್ರಮುಖ ಶೀರ್ಷಿಕೆಗಳಾಗಿ ವಿಂಗಡಿಸಿಕೊಂಡು ನಮ್ಮ ದೇಶದ ಆರ್ಥಿಕ ಬೆಳವಣಿಗೆಯ ಗುಣದೋಷಗಳನ್ನು ವಿಮರ್ಶಿಸಿದ್ದಾರೆ. 'ರಾಜಕೀಯ ಸ್ವಾತಂತ್ರ್ಯದ ಗುರಿ' ಮೊದಲನೆಯ ಶೀರ್ಷಿಕೆ. ಇದರಲ್ಲಿ ಲೇಖಕರು ಸಂಕ್ಷಿಪ್ತವಾಗಿ ನಮ್ಮ ದೇಶದ ಆರ್ಥಿಕ ಗುರಿ ಯಾವು

ದಾಗಿರಬೇಕೆಂಬುದನ್ನು ಚರ್ಚಿಸಿದ್ದಾರೆ. ಇವರ ಪ್ರಕಾರ ನಮ್ಮ ರಾಷ್ಟ್ರದ ಆರ್ಥಿಕ ಬೆಳವಣಿಗೆಯ ಅಂತಿಮ ಉದ್ದೇಶ ಜನತೆಯ ಜೀವನ ಮಟ್ಟವನ್ನು ಸುಧಾರಿಸಿ, ಉಪಭೋಗ್ಯತೆಯ ದರ್ಜೆಯನ್ನು ಹೆಚ್ಚಿಸುವುದು." ಇವರ ಪ್ರಕಾರ "ಆರ್ಥಿಕ ನ್ಯಾಯ ಹಾಗೂ ಸಮಾನಾವಕಾಶಗಳನು ಕಲ್ಪಿಸಿಕೊಡುವ ಮಹದುದ್ದೇಶಗಳನ್ನು ಸಾಧಿಸುವುದು ರಾಜಕೀಯ ಸ್ವಾತಂತ್ರ್ಯದ ಗುರಿ.

ಎರಡನೆಯ ಶೀರ್ಷಿಕೆ "ಆರ್ಥಿಕ ಬೆಳವಣಿಗೆ ಎಂದರೇನು" ಇದರಿದ್ದಿಲ್ಲಿ ಲೇಖಕರು ಪ್ರಸಿದ್ಧ ಅರ್ಥ ವಿಜ್ಞಾನಿಗಳು ಆರ್ಥಿಕ ಬೆಳವಣಿಗೆಯ ಬಗೆ ನೀಡಿರುವ ವ್ಯಾಖ್ಯೆಗಳನ್ನು ಪರಿಚಯ ಮಾಡಿ ಕೊಡುತ್ತಾರೆ; ಇದರಲ್ಲಿ ಅವರು ಇತರ ರಾಷ್ಟ್ರಗಳಿಗೆ ಹೋಲಿಸಿದಂತೆ ಭಾರತ ಹೇಗೆ ಹಿಂದುಳಿದಿದೆ, ಎಂಬುದನು ಸಹ ಅಂಕಿ-ಅಂಶಗಳ ಸಹಾಯದಿಂದ ನಿರೂಪಿಸುತ್ತಾರೆ.

ಮೂರನೆಯ ಶೀರ್ಷಿಕೆ "ಭಾರತದಲ್ಲಿ ಆರ್ಥಿಕ ಬೆಳವಣಿಗೆಯ ಪ್ರಯತ್ನ". ಯೋಜನೆ ಪ್ರಾರಂಭ ವಾದಾಗಿನಿಂದ ೧೯೭೧ರ ವರೆಗೆ ನಮ್ಮ ದೇಶದಲ್ಲಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ಯಾವ ಪ್ರಯತ್ನಗಳನ್ನು ನಡೆಸಲಾಗಿದೆ ಎಂಬುದನ್ನು ಈ ವಿಭಾಗದಲ್ಲಿ ಚರ್ಚಿಸಲಾಗಿದೆ: ಈ ಯೋಜನೆಗಳ ಅವಧಿಯಲ್ಲಿ ರಾಷ್ಟ್ರ ಎದುರಿಸಬೇಕಾದ ಸಂಕಷ್ಟಗಳನ್ನು ಸಹ ಸಂಕ್ಷಿಪ್ತವಾಗಿ ಸಮೀಕ್ಷಿಸಲಾಗಿದೆ.

ನಾಲ್ಕನೆಯ ಶೀರ್ಷಿಕೆ 'ಗುಣದೋಷಗಳು' ಈ ಪುಸ್ತಕದ ಅತ್ಯಂತ ಮುಖ್ಯವಾದ ಭಾಗ. ಇದರಲ್ಲಿ ರಾಷ್ಟ್ರ ಎದುರಿಸುತ್ತಿರುವ ಬೃಹತ್ ಸಮಸ್ಯೆಗಳನ್ನು ವಿವೇಚಿಸಲಾಗಿದೆ. ಅವುಗಳೆಂದರೆ, (೧) ಅತಿಪ್ರಸರಣ (೨) ಅಸಮರ್ಥ ಆಡಳಿತ (೩) ಸಾಮಾಜಿಕ ಪ್ರಜ್ಞೆಯ ಅಭಾವ (೪) ಏರಿದ ಜನಸಂಖ್ಯಾ ಪ್ರಮಾಣ (೫) ನಿರುದ್ಯೋಗ ಸಮಸ್ಯೆ

ಎಲ್ಲಾ ಭಾಗಗಳಿಗಿಂತ ಈ ಭಾಗವನ್ನು ಲೇಖಕರು ಸಮರ್ಥವಾಗಿ ನಿರೂಪಿಸಿದ್ದಾರೆ. ಉಪಸಂಹಾರ ದಲ್ಲಿ ರಾಷ್ಟ್ರ ಈಗ ಜಾಗ್ರತವಾಗಿ ಯಾವ ಕರ್ತವ್ಯಗಳನ್ನು ಕೈಗೊಳ್ಳಬೇಕೆಂಬುದನು ಲೇಖಕರು ವಿಮರ್ಶಿಸುತ್ತಾರೆ. ಅವರ ಕಳಕಳಿಯ ಈ ಮಾತುಗಳನು ನೋಡಿ "ಇಂದಿನ ವೈಜ್ಞಾನಿಕ ಯುಗದಲ್ಲಿ ವ್ಯಕ್ತಿ ಹಿತ ಅಥವಾ ಕುಟುಂಬದ ಹಿತ ದೇಶದ ಹಿತದಿಂದ ಬೇರ್ಪಡಿಸಲಾರದಷ್ಟು ಒಂದಾಗಿವೆ ಎಂಬುದನ್ನು ಅರಿತುಕೊಂಡು ದೇಶದ ಹಿತಕ್ಕೆ ಪೋಷಕವಾಗುವ ಯಾವುದೇ ಕಾರ್ಯಕ್ರಮಗಳನ್ನು ಪೂರೈಸಬೇಕು.... ......ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ತಜ್ಞರನೇಕರು ವೈಜ್ಞಾನಿಕ ವಿಷಯಗಳಲ್ಲಿ ಅಂತರ ರಾಷ್ಟ್ರೀಯ ಪ್ರಜ್ಞೆಯನ್ನು ಪ್ರದರ್ಶಿಸುತ್ತಿರುವಾಗ ನಮ್ಮಲ್ಲಿ ರಾಷ್ಟ್ರೀಯ ಪ್ರಜ್ಞೆಯೂ ಬೆಳೆಯದಿದ್ದರೆ ನಾವು ಅವಹೇಳನೆಗೀಡಾಗುವುದರಲ್ಲಿ ಸಂಶಯವಿಲ್ಲ." ಆರ್ಥಿಕ ಬೆಳವಣಿಗೆಯನ್ನು ಸಾಧಿಸದಿದ್ದರೆ ಲೇಖಕರ ಭವಿಷ್ಯ ವಾಣಿ ಹೀಗಿದೆ: "ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ತೀವ್ರವಾಗಿ ಆರ್ಥಿಕ ಬೆಳವಣಿಗೆ ಯನ್ನು ಸಾಧಿಸಲು ವಿಫಲವಾದರೆ ನಮ್ಮ ರಾಜಕೀಯ ವ್ಯವಸ್ಥೆಯೇ ಗಂಡಾಂತರವನ್ನೆದುರಿಸುವ ಸಾಧ್ಯತೆಯಿದೆ. ವಿವಿಧ ದೇಶಗಳ ಆರ್ಥಿಕ ಬೆಳವಣಿಗೆಯ ಇತಿಹಾಸವನ್ನು ಅಭ್ಯಸಿಸುವುದರಿಂದ ಇದು ಮನವರಿಕೆಯಾಗುವುದು."

ಒಟ್ಟಿನಲ್ಲಿ ಈ ಪುಸ್ತಕ ಒಂದು ಉತ್ತಮ ಕೈಹೊತ್ತಿಗೆ. ಲೇಖಕರ ನಿರೂಪಣಾ ಸಾಮರ್ಥ್ಯ ಶ್ಲಾಘ್ಯ. ಅಂಕಿಅಂಶಗಳನ್ನು ಕನಿಷ್ಠ ಮಟ್ಟದಲ್ಲಿಟ್ಟಿರುವುದರಿಂದ ಸಾಮಾನ್ಯ ಓದುಗನಿಗೂ ಪುಸ್ತಕ ಆಕರ್ಷಕ ವಾಗಿದೆ. ಅಲ್ಲಲ್ಲಿ ಮುದ್ರಣ ದೋಷಗಳಿವೆ. ಪುಟ. ೫ ಸ್ಥಿರ ಪರಿಸ್ಥಿತಿಯಲ್ಲಿರುವ (static)? ಪುಟ ೨೯ ಅಸಮರ್ಥ ಆಡಳಿತೆ(?) ಇತ್ಯಾದಿ. ನಮ್ಮ ದೇಶದ ಆರ್ಥಿಕ ಬೆಳವಣಿಗೆಯ ಗುಣದೋಷ ಗಳನ್ನು ಪರಿಚಯ ಮಾಡಿಕೊಡಲು ಇದು ಒಂದು ಸಂಕ್ಷಿಪ್ತ ಕೈಹೊತ್ತಿಗೆಯಾಗಿದೆಯೆಂದು ಸಂಶಯ ವಿಲ್ಲದೆ ಹೇಳಬಹುದು.

ನಮ್ಮ ದೇಶದಲ್ಲಿ ಬಡತನ ಹಾಗೂ ಅದರ ನಿವಾರಣೆ : ಲೇ: ಶ್ರೀ ಎಂ. ಸಿ. ಕೂಡ್ಲಿ ಪ್ರಕಾಶಕರು: 'ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೭೫)

ಇದು ಕರ್ನಾಟಕ ವಿಶ್ವವಿದ್ಯಾನಿಲಯದ ೨೨೧ನೆಯ ಕೈಹೊತ್ತಿಗೆ. ಲೇಖಕರು ಈ ಕೈಹೊತ್ತಿಗೆಯಲ್ಲಿ ನಮ್ಮ ದೇಶದ ಬಡತನ ಹಾಗೂ ಅದರ ನಿವಾರಣೆ'ಯನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಲು ಯತ್ನಿಸಿದ್ದಾರೆ.

ನಮ್ಮ ದೇಶದಲ್ಲಿಯ ಬಡತನದ ಐತಿಹಾಸಿಕ ಹಿನ್ನೆಲೆಯೊಂದಿಗೆ ಈ ಹೊತ್ತಿಗೆ ಪ್ರಾರಂಭವಾಗುತ್ತ ದೆ. ಬಡತನವೆಂದರೇನು? ಬೇಸಾಯವನ್ನವಲಂಬಿಸಿ ಜೀವಿಸುವವರ ಸಂಖ್ಯೆ ಮತ್ತು ಬಡತನ, ಸಮಾನ ಹಂಚುವಿಕೆಯ ಯೋಜನೆಗಳು, ಶ್ರಮ ತೀಕ್ಷ್ಣ ತಾಂತ್ರಿಕತೆ, ನಿವಾರಣೋಪಾಯಗಳು ಎಂಬ ಶೀರ್ಷಿಕೆಗಳ ಕೆಳಗೆ ವಿಷಯ ಪ್ರಸ್ತಾವನೆ ನಡೆಯುತ್ತದೆ.

ಮೊದಲನೆಯ ಶೀರ್ಷಿಕೆಯನ್ನು ಮುಗಿಸಿ ಎರಡನೆಯದನ್ನು ಪ್ರಾರಂಭಿಸಿದಾಗ, ಇವೆರಡಕ್ಕೂ ಸಂಬಂಧವಿಲ್ಲದ ಭಾವನೆ ಓದುಗರಿಗೆ ಬರುತ್ತದೆ. ಪುಸ್ತಕದ ಉದ್ದಕ್ಕೂ ಹೀಗೆಯೇ ಆಗುತ್ತಾ ಹೋಗುತ್ತದೆ. ತುಂಬಾ ದೊಡ್ಡದಾಗಿರುವ ವಿಷಯವನ್ನು ಸಂಕ್ಷಿಪ್ತಗೊಳಿಸಲು ಹೋಗಿ, ಹಾಗೆ ಮಾಡಲಾಗದೇ ಲೇಖಕರು ಕಷ್ಟಪಡುತ್ತಾರೆನ್ನುವುದು ತುಂಬಾ ಸ ಷ್ಟವಾಗಿ ತಿಳಿದುಬರುತ್ತದೆ.

ಐದು ಮತ್ತು ಆರನೆಯ ಶೀರ್ಷಿಕೆಗಳಲ್ಲಿ, ಲೇಖಕರು ಪ್ರೊ. ದಾಂಡೇಕರ್ ಮತ್ತು ರಥ್‌ರವರ ತೀರ್ಮಾನಗಳನ್ನನುಸರಿಸಿ ಬಡತನಕ್ಕೆ ನಿವಾರಣೋಪಾಯಗಳನ್ನು ಸೂಚಿಸುತ್ತಾರೆ. ಆದರೆ ಲೇಖಕರು ದಾಂಡೇಕರ್‌ರವರ ಅಭಿಪ್ರಾಯಗಳನ್ನು ಸಮರ್ಥಿಸುತ್ತಾರೆಯೇ ಇಲ್ಲವೇ ತಿಳಿಯುವುದಿಲ್ಲ.

ಲೇಖಕರು ಉಪಸಂಹಾರದಲ್ಲಿ ಹೇಳುವ ಮಾತುಗಳು ಇವು: "ಪ್ರೊ. ದಾಂಡೇಕರ ಮತ್ತು ರಥರವರು ನಮ್ಮ ದೇಶದಲ್ಲಿಯ ಗ್ರಾಮೀಣ ಪ್ರದೇಶದಲ್ಲಿಯ ಮತ್ತು ಪಟ್ಟಣಗಳಲ್ಲಿಯ ಅತೀ ಶ್ರೀಮಂತರ ಉತ್ಪನ್ನದಲ್ಲಿ ಶೇಕಡಾ ೫ ರಿಂದ ೧೦ರಷ್ಟು ನಾವು ತೆಗೆದುಕೊಂಡರೆ, ಈ ಕಾರ್ಯಕ್ರಮ ಗಳಿಗೆ ಬೇಕಾಗುವ ಹಣ ಸಿಗುತ್ತದೆಯೆಂದು ಅಭಿಪ್ರಾಯಪಡುತ್ತಾರೆ. ಹೀಗೆ ಅತೀ ಶ್ರೀಮಂತರು ಸ್ವಲ್ಪ ತ್ಯಾಗ ಮಾಡಿದರೆ ಬಡವರ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಾಗುತ್ತದೆ. ಹೀಗೆ ಬಡ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿ ದೇಶದಲ್ಲಿ ಸಾಮಾಜಿಕ ಬಂಡವಾಳ ನಿರ್ಮಿಸಲು ಸಾಧ್ಯವಾಗುತ್ತದೆ. ಈ ರೀತಿ ನಾವು ಎಲ್ಲರಿಗೂ ಉದ್ಯೋಗ ಅವಕಾಶ ಕಲ್ಪಿಸಿಕೊಟ್ಟಲ್ಲಿ ನಮ್ಮ ದೇಶದಲ್ಲಿ ಬಡತನವು ನಿರ್ಮೂಲವಾಗುವುದರಲ್ಲಿ ಸಂಶಯವಿಲ್ಲ."

ಲೇಖಕರು ಬಡತನದ ಸಮಸ್ಯೆಯ ಜಟಿಲವಾದ ನಾನಾ ಮುಖಗಳನ್ನು ಸಂಕ್ಷಿಪ್ತವಾಗಿಯಾದರೂ ಪರಿಚಯ ಮಾಡದಿರುವುದು ದುರದೃಷ್ಟಕರ. ಪುಸ್ತಕವನ್ನು ಓದಿ ಮುಗಿಸಿದಾಗ, ಪುಸ್ತಕ ಸಹ ವಿಷಯದ ದೃಷ್ಟಿಯಿಂದ ತುಂಬಾ ಬಡವಾಗಿರುವಂತೆ ತೋರುತ್ತದೆ.

—ಸಿ. ಕೆ. ರೇಣುಕಾರ್ಯ

wo 16527—MUPM—1025 copies—22-1-77

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು–೫೭೦೦೦೬